ಗುರುವಾರ, ಅಕ್ಟೋಬರ್ 14, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ತಬ್ಧಚಿತ್ರಗಳ ತಯಾರಿ
ಮೈಸೂರಿನ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಸ್ತಬ್ಧಚಿತ್ರಗಳ ತಯಾರಿಕೆ ಕಾರ್ಯ ಬುಧವಾರ ಭರದಿಂದ ನಡೆಯಿತು



www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಯುಧಪೂಜೆ, ವಿಜಯದಶಮಿ ಶುಭಾಶಯಗಳು



ಸ್ಪರ್ಧಾ ವಾಣಿ
ಗ್ರೂಪ್ 'ಸಿ' ವೃಂದದ ತಾಂತ್ರಿಕೇತರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ಭೂ ಸುಧಾರಣೆ ಕುರಿತಾದ ಬಹುಆಯ್ಕೆ ಮಾದರಿ ಪ್ರಶ್ನೋತ್ತರಗಳು

ಬಿಡುವು

ಆಯುಧಪೂಜೆ ಪ್ರಯುಕ್ತ ಇಂದು (ಅ.14) ನಮ್ಮ ಕಚೇರಿಗೆ ಬಿಡುವು. ಹೀಗಾಗಿ 'ಪ್ರಜಾವಾಣಿ'ಯ ಶುಕ್ರವಾರದ ಸಂಚಿಕೆ ಪ್ರಕಟವಾಗುವುದಿಲ್ಲ. – ಸಂ.

ತಾಜಾ ಸುದ್ದಿ ಅಪ್‌ಡೇಟ್‌ಗಾಗಿ www.prajavani.net ನೋಡಿ

ಕಸಾಪ ಚುನಾವಣೆ ನವೆಂಬರ್ 21ಕ್ಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕದ ಅಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ನ. 21ರಂದು ಚುನಾವಣೆ ನಡೆಯಲಿದೆ. 6

ಪ್ರಿಯಾಂಕಾ ಚಾತುರ್ಯ: ವಿಪಕ್ಷ ತಳಮಳ 11

ಚಿನಕುರಳಿ


ಪ್ರಕಾಶ್ ಶೆಟ್ಟಿ



ಮತೀಯ ಗೂಂಡಾಗಿರಿ ಬೊಮ್ಮಾಯಿ ಸಮರ್ಥನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತೀಯ ಗೂಂಡಾಗಿರಿ ಕುರಿತು 'ಕ್ರಿಯೆ-ಪ್ರತಿಕ್ರಿಯೆಗಳು ಇದ್ದೇ ಇರುತ್ತವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿರುವ ಹೇಳಿಕೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಮುಖ್ಯಮಂತ್ರಿ ಕ್ಷಮೆ ಯಾಚಿಸಬೇಕು ಎಂದು ಹಲವರು ಆಗ್ರಹಿಸಿದ್ದಾರೆ.



ಬೊಮ್ಮಾಯಿ ಅವರು ಮಂಗಳೂರಿನಲ್ಲಿ ಬುಧವಾರ ನೀಡಿರುವ ಹೇಳಿಕೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಟ್ವಿಟರ್‌ನಲ್ಲಿ #BommaiStopMoralPolicing ಎಂಬ ಶೀರ್ಷಿಕೆಯಡಿ ದೊಡ್ಡ ಅಭಿಯಾನವೇ ಆರಂಭವಾಗಿದೆ.

'ಮತೀಯ ಗೂಂಡಾಗಿರಿ ನಡೆಸುತ್ತಿರುವ ಜನರನ್ನು ಬೆಂಬಲಿಸಿ ಮುಖ್ಯಮಂತ್ರಿಯವರೇ ಹೇಳಿಕೆ ನೀಡಿದ್ದಾರೆ. ಇದು ಅಪಾಯಕಾರಿ ಬೆಳವಣಿಗೆ. ಮುಖ್ಯಮಂತ್ರಿಯವರ ಬೆಂಬಲವಿದೆ ಎಂದು ಇನ್ನೂ ದೊಡ್ಡ ಸಂಖ್ಯೆಯಲ್ಲಿ ಅಂತಹ ಕೃತ್ಯಗಳು ನಡೆಯುವ ಅಪಾಯವಿದೆ' ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಆತಂಕ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ವಕ್ತಾರೆ ಲಾವಣ್ಯಾ ಬಲ್ಲಾಳ್, 'ರಾಜ್ಯದ ಮುಖ್ಯಮಂತ್ರಿಯೇ ಮತೀಯ ಗೂಂಡಾಗಿರಿಯನ್ನು ಬೆಂಬಲಿಸಿದ್ದಾರೆ. ಉಳಿದವರಿಂದ ಇನ್ನು ಏನನ್ನು ನಿರೀಕ್ಷಿಸಬಹುದು? ರಾಜ್ಯದ ಜನರೇ ದಯವಿಟ್ಟು ಸುರಕ್ಷಿತವಾಗಿರಿ. ಸರ್ಕಾರ ನಿಮ್ಮನ್ನು ರಕ್ಷಿಸುತ್ತದೆ ಎಂದು ಬಯಸಬೇಡಿ' ಎಂದು ಹೇಳಿದ್ದಾರೆ.

7ನೇ ಪುಟ ನೋಡಿ

'ಹಿಂಸೆಗೆ ಪ್ರಚೋದನೆ ಖಂಡನೀಯ'

'ನೈತಿಕತೆಯ ಹೆಸರಿನಲ್ಲಿ ಹಿಂಸೆಗೆ ಪ್ರಚೋದನೆ ನೀಡುವಂತಹ ಹೇಳಿಕೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿದ್ದಾರೆ' ಎಂದು ಚಿಂತಕರು, ಹೋರಾಟಗಾರರ ಮತ್ತು ಜನಪರ ಸಂಘಟನೆಗಳ ಪ್ರಮುಖರು ಜಂಟಿ ಹೇಳಿಕೆಯಲ್ಲಿ ದೂರಿದ್ದಾರೆ.

'ಅನೈತಿಕ ಪೊಲೀಸ್ ಗಿರಿ ಹೆಸರಿನಲ್ಲಿ ನಡೆಯುವ ಹಿಂಸೆಯನ್ನು ಮುಖ್ಯಮಂತ್ರಿ ಗಟ್ಟಿ ಧ್ವನಿಯಲ್ಲಿ ಖಂಡಿಸುತ್ತಾರೆ ಎಂದು ನಿರೀಕ್ಷಿಸಿದ್ದೆವು. ಬೆಂಗಳೂರಿನ ಬಿಟಿಎಂ ಬಡಾವಣೆಯಲ್ಲಿ ನಡೆದಿದ್ದ ಪ್ರಕರಣದಲ್ಲಿ ಕೈಗೊಂಡಂತೆ ಬಿಗಿನಿಲುವಿನ ನಿರೀಕ್ಷೆಯೂ ಇತ್ತು. ಆದರೆ, ಮುಖ್ಯಮಂತ್ರಿಯೇ ಈಗ ದುಷ್ಕೃತ್ಯವನ್ನು ಬೆಂಬಲಿಸಿದ್ದಾರೆ. ಅವರೊಳಗಿನ ಆಷಾಢಭೂತಿತನ ಬಯಲಾಗಿದೆ. ಈ ಹೇಳಿಕೆಯನ್ನು ಖಂಡಿಸುತ್ತೇವೆ' ಎಂದು ಹೇಳಿದ್ದಾರೆ.

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಇವುಗಳೆಲ್ಲವನ್ನು ಒಳಗೊಂಡಿರುವ ಸಾಂವಿಧಾನಿಕ ನೈತಿಕತೆಯನ್ನು ಎತ್ತಿ ಹಿಡಿಯುವುದು ಮುಖ್ಯಮಂತ್ರಿಯವರ ಜವಾಬ್ದಾರಿ. ಬಸವಣ್ಣನ ನಾಡನ್ನು ದ್ವೇಷದ ನೆಲವಾಗಿ ಪರಿವರ್ತಿಸಲು ಬಿಡುವುದಿಲ್ಲ ಎಂದು ತಿಳಿಸಿದ್ದಾರೆ.

7ನೇ ಪುಟ ನೋಡಿ

ಮುಖ್ಯಮಂತ್ರಿ ಹೇಳಿದ್ದೇನು?

ಮಂಗಳೂರು: 'ಸಮಾಜದಲ್ಲಿ ಜನರ ಭಾವನೆಗಳಿಗೆ ಧಕ್ಕೆ ಬರದಂತೆ ನಡೆದುಕೊಳ್ಳಬೇಕಾಗುತ್ತದೆ. ಪರಸ್ಪರರ ಭಾವನೆಗಳಿಗೆ ಧಕ್ಕೆ ಉಂಟಾದಾಗ ಸಹಜವಾಗಿ ಕ್ರಿಯೆ-ಪ್ರತಿಕ್ರಿಯೆಗಳು ಇದ್ದೇ ಇರುತ್ತವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅನೈತಿಕ ಪೊಲೀಸ್‌ಗಿರಿ ಘಟನೆಗಳ ಕುರಿತು ಇಲ್ಲಿನ ವಿಮಾನ ನಿಲ್ದಾಣದಲ್ಲಿ ಪ್ರತಿಕ್ರಿಯಿಸಿದ ಅವರು, 'ಸಾಮಾಜಿಕ ಸಾಮರಸ್ಯ ಕಾಪಾಡಲು ನಾವೆಲ್ಲರೂ ಪ್ರಯತ್ನ ಪಡಬೇಕು. ನೈತಿಕತೆ ಇಲ್ಲದೆ ನಾವು ಬದುಕಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಪ್ರತಿಯೊಬ್ಬರ ಹೊಣೆಗಾರಿಕೆಯೂ ಇದೆ' ಎಂದರು.

7ನೇ ಪುಟ ನೋಡಿ

ಮೂಲಸೌಕರ್ಯ 'ಗತಿ' ಬದಲಿಸುವ ಯೋಜನೆ

ನವದೆಹಲಿ (ಪಿಟಿಐ): ಬಹು ಮಾದರಿ ಸಂಪರ್ಕ ಏರ್ಪಡಿಸುವ ₹100 ಲಕ್ಷ ಕೋಟಿ ಮೌಲ್ಯದ 'ಪಿಎಂ ಗತಿ ಶಕ್ತಿ' ರಾಷ್ಟ್ರೀಯ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಚಾಲನೆ ಕೊಟ್ಟರು. ಸಾಗಣೆ ವೆಚ್ಚ ಕಡಿಮೆ ಮಾಡಿ, ಆರ್ಥಿಕತೆ ಉತ್ತೇಜಿಸುವ ಹಾಗೂ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಗುರಿಯನ್ನು ಇದು ಹೊಂದಿದೆ. 11

'ಡಿಕೆಶಿ ಪರ್ಸಂಟೇಜ್' ಸದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೀರಾವರಿ ಇಲಾಖೆಯಲ್ಲಿ ಶೇ 6ರಿಂದ 8ರಷ್ಟಿದ್ದ 'ಪರ್ಸಂಟೇಜ್' ಡಿ.ಕೆ. ಶಿವಕುಮಾರ್ ಸಚಿವರಾಗಿದ್ದ ಅವಧಿಯಲ್ಲಿ ಶೇ 10ರಿಂದ 12ಕ್ಕೆ ಏರಿದ್ದು, ಅಡ್ಜಸ್ಟ್‌ಮೆಂಟ್ ಡಿಕೆದ್ದೂ ಇದೆ' ಎಂದು ಕಾಂಗ್ರೆಸ್‌ನ ಮಾಧ್ಯಮ ಸಮನ್ವಯಕಾರ ಎಂ.ಎ. ಸಲೀಂ, ಮತ್ತೊಬ್ಬ ಮುಖಂಡ ವಿ.ಎಸ್. ಉಗ್ರಪ್ಪ ಜೊತೆ ಆಡಿದ ಮಾತುಕತೆಯ ತುಣುಕು ರಾಜ್ಯ ರಾಜಕೀಯದಲ್ಲಿ ದೊಡ್ಡ ಸದ್ದು ಮಾಡಿದೆ.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಗೂ ಮೊದಲು ವೇದಿಕೆಯಲ್ಲಿದ್ದ ಸಲೀಂ ಮತ್ತು ಉಗ್ರಪ್ಪ ಮೆಲುದನಿಯಲ್ಲಿ ಆಡಿಕೊಂಡ ಮಾತುಕತೆಯನ್ನು ಸುದ್ದಿವಾಹಿನಿಗಳ ಕ್ಯಾಮೆರಾಗಳು ದಾಖಲಿಸಿಕೊಂಡಿದ್ದವು. ಸಂಭಾಷಣೆಯ ವಿಡಿಯೊ ತುಣುಕು ಬುಧವಾರ ಬಿತ್ತರಗೊಂಡಿತು. ಈ ಬೆನ್ನಲ್ಲೇ, ಆರೋಪ –ಸಮರ್ಥನೆಗಳು ಶುರುವಾಗಿವೆ. 'ಪರ್ಸಂಟೇಜ್' ವಿಷಯ ರಾಜಕೀಯ ಪಕ್ಷಗಳ ನಾಯಕರ ಮಧ್ಯೆ ಕೆಸರೆರಚಾಟಕ್ಕೆ ಕಾರಣವಾಗಿದೆ.

6ನೇ ಪುಟ ನೋಡಿ

ಅಡುಗೆ ಎಣ್ಣೆ: ಕಸ್ಟಮ್ಸ್ ಸುಂಕ ರದ್ದು, ಕೃಷಿ ಸೆಸ್ ಇಳಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕಚ್ಚಾ ತಾಳೆ ಎಣ್ಣೆ, ಕಚ್ಚಾ ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಮಾರ್ಚ್ 31ರವರೆಗೆ ರದ್ದುಗೊಳಿಸಿದೆ. ಜೊತೆಗೆ ಕೃಷಿ ಸೆಸ್ ಪ್ರಮಾಣವನ್ನು ಕಡಿಮೆ ಮಾಡಿದೆ.

ಪರಿಷ್ಕೃತ ದರಗಳು ಗುರುವಾರದಿಂದ ಜಾರಿಗೆ ಬರಲಿವೆ ಎಂದು ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ. 12

ಕನ್ನಡ ಕಡೆಗಣನೆಗೆ ಕರವೇ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಯಾವುದೇ ಸಂಸ್ಥೆಗಳಲ್ಲಿ ನಡೆಯುವ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕನ್ನಡ ಕಡೆಗಣಿಸಿದರೆ, ಮುಂದಿನ ಪರಿಣಾಮಗಳಿಗೆ ಆಯೋಜಕ ಸಂಸ್ಥೆಗಳೇ ನೇರ ಹೊಣೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ಎಚ್ಚರಿಸಿದೆ.

ಎಸ್‌ಡಿಎಸ್ ಕ್ಷಯರೋಗ ಸಂಶೋಧನಾ ಕೇಂದ್ರ, ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ ಹಾಗೂ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಗಳಲ್ಲಿ (ನಿಮ್ಹಾನ್ಸ್) ಅ.10ರಂದು ಆಯೋಜಿಸಿದ್ದ ವಿವಿಧ ಕಾರ್ಯಕ್ರಮಗಳಲ್ಲಿ ಕನ್ನಡವನ್ನು ಕಡೆಗಣಿಸಲಾಗಿದೆ ಎಂದು ಖಂಡಿಸಿ, ಸಂಸ್ಥೆಗಳ ಮುಖ್ಯಸ್ಥರನ್ನು ಕರ್ನಾಟಕ ರಕ್ಷಣಾ ವೇದಿಕೆಯ ನಿಯೋಗ ಬುಧವಾರ ಭೇಟಿ ಮಾಡಿತು. ವೇದಿಕೆಯ ಟಿ.ಎ.ನಾರಾಯಣಗೌಡ ಬರೆದಿರುವ ಖಂಡನಾ ಪತ್ರವನ್ನು ನಿಮ್ಹಾನ್ಸ್ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ ಹಾಗೂ ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಯ ನಿರ್ದೇಶಕ ಸಿ.ನಾಗರಾಜ್ ಅವರಿಗೆ ನೀಡಲಾಯಿತು. 'ಈ ರೀತಿಯ ಘಟನೆಗಳು ಮತ್ತೆ ಮರುಕಳಿಸದಂತೆ ಎಚ್ಚರ ವಹಿಸಬೇಕು' ಎಂದೂ ಮನವರಿಕೆ ಮಾಡಿದರು.

ನಿಯೋಗದಲ್ಲಿ ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಸಣ್ಣೀರಪ್ಪ, ರಾಜ್ಯ ಉಪಾಧ್ಯಕ್ಷ ಬಿ.ಎಚ್.ಸತೀಶ್ ಗೌಡ, ಸಾಮಾಜಿಕ ಜಾಲತಾಣ ಮುಖ್ಯಸ್ಥ ದಿನೇಶ್ ಕುಮಾರ್, ಯುವ ಘಟಕದ ಅಧ್ಯಕ್ಷ ಟಿ.ಎ.ಧರ್ಮರಾಜ್ ಗೌಡ, ನಿತೀಶ್ ಮನುಗೌಡ, ಬಾಲು, ಕಾರ್ತಿಕ್ ಹಾಗೂ ಇತರರು ಇದ್ದರು.

ನಿಧನ ವಾರ್ತೆ

ಉದ್ಯಮಿ ಸಿ.ಆಂಜನಪ್ಪ

ಬೆಂಗಳೂರು: ಉದ್ಯಮಿ ಸಿ. ಆಂಜನಪ್ಪ ಬುಧವಾರ ನಿಧನರಾದರು.



ಅವರಿಗೆ ಪತ್ನಿ ಬೈಲಮ್ಮ, ಪುತ್ರಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ನರನಹಳ್ಳಿಯಲ್ಲಿರುವ ಆಂಜನಪ್ಪ ಎಸ್ಟೇಟ್‌ನಲ್ಲಿ ಗುರುವಾರ ಮಧ್ಯಾಹ್ನ 3.15ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಅ.20 ವಾಲ್ಮೀಕಿ ಜಯಂತಿ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಮಟ್ಟದ ವಾಲ್ಮೀಕಿ ಜಯಂತಿ ಮತ್ತು ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭ ಇದೇ 20 ರಂದು ನಡೆಯಲಿದೆ ಎಂದು ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ವಿಧಾನಸೌಧದಲ್ಲಿ ಬುಧವಾರ ನಡೆದ ವಾಲ್ಮೀಕಿ ಜಯಂತಿಯ ಪೂರ್ವಭಾವಿ ಸಭೆಯ ಅಧ್ಯಕ್ಷವಹಿಸಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10.30 ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸಿ ಪ್ರಶಸ್ತಿ ಪ್ರದಾನ ಮಾಡುವರು ಎಂದು ಹೇಳಿದರು.

ಈ ವರ್ಷ ಐವರು ಸಾಧಕರಿಗೆ ಮತ್ತು ಕಳೆದ ಸಾಲಿಗೆ ಐವರು ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಪ್ರಶಸ್ತಿ ಆಯ್ಕೆಗೆ ಸಮಿತಿ ರಚಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಭಾಗವಹಿಸಲಿದ್ದಾರೆ. ರಾಜ್ಯಾದ್ಯಂತ ಜಯಂತಿಯನ್ನು ಆಚರಿಸಲಾಗುವುದು ಎಂದರು.

ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ: ಲಕ್ಷ್ಮೀನಾರಾಯಣ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ರಚಿಸಿದ್ದು, ನಿವೃತ್ತ ಐಎಎಸ್ ಅಧಿಕಾರಿ ಎಂ.ಲಕ್ಷ್ಮೀನಾರಾಯಣ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ವಾರ್ಡ್‌ಗಳ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಮಾಡಲು 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಮಸೂದೆ 2021'ಕ್ಕೆ ವಿಧಾನಮಂಡಲದಲ್ಲಿ ಒಪ್ಪಿಗೆ ಪಡೆಯಲಾಗಿತ್ತು. ಇದೀಗ ಆಯೋಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ.

ಆಯೋಗಕ್ಕೆ ಗ್ರಾಮೀಣಾಭಿವೃದ್ಧಿ, ವಿಕೇಂದ್ರೀಕರಣ ಮತ್ತು ಪಂಚಾಯತ್ ವಿಷಯಗಳಲ್ಲಿ ಅನುಭವ ಹೊಂದಿರುವ ಸರ್ಕಾರದ ನಿವೃತ್ತ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಲಯದ ಒಬ್ಬ ತಜ್ಞರನ್ನು ಸದಸ್ಯರನ್ನಾಗಿ ನೇಮಿಸಲಾಗುವುದು. ಪಂಚಾಯತ್ ರಾಜ್ ಇಲಾಖೆ ಆಯುಕ್ತರು ಪದ ನಿಮಿತ್ತ ಸದಸ್ಯರಾಗಿಯೂ ಮತ್ತು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ವಿಷಯದಲ್ಲಿ ವ್ಯವಹರಿಸುತ್ತಿರುವ ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಯನ್ನು ಪದ ನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿ ನೇಮಿಸಲಾಗುವುದು.

ಆಯೋಗದ ಕಾರ್ಯವ್ಯಾಪ್ತಿ: ವಾರ್ಡ್‌ಗಳು ಮತ್ತು ಕ್ಷೇತ್ರಗಳ ಪುನರ್‌ವಿಂಗಡಣೆ. ಮೀಸಲಾತಿ, ಹಿಂದಿನ ಜನಗಣತಿಯನ್ನು ಆಧರಿಸಿ ಪಂಚಾಯಿತಿಗಳಿಗೆ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಮಾಡುವುದು. ಎಲ್ಲ ಕ್ಷೇತ್ರಗಳು ಮತ್ತು ವಾರ್ಡ್‌ಗಳಲ್ಲಿ ಜನಸಂಖ್ಯೆ ಸಮಾನವಾಗಿರುವಂತೆ ನೋಡಿಕೊಳ್ಳುವುದು. ಪ್ರತಿಯೊಂದು ಪ್ರಾದೇಶಿಕ ವಾರ್ಡ್‌ಗಳು ಅಥವಾ ಚುನಾವಣಾ ಕ್ಷೇತ್ರಗಳು ಕಾರ್ಯ ಸಾಧುವಾಗುವಷ್ಟರ ಮಟ್ಟಿಗೆ ಭೌಗೋಳಿಕ ನಿಬಿಡತೆ ಪ್ರದೇಶವನ್ನು ನಿಗದಿ ಮಾಡುವುದಕ್ಕೆ ಸಂಬಂಧಿಸಿದಂತೆ ಆಯೋಗವು ಸರ್ಕಾರಕ್ಕೆ ಶಿಫಾರಸು ಮಾಡಬೇಕು.

ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆಗೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಇದಕ್ಕೆ ಪ್ರತಿಕ್ರಿಯಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆಗೆ ಸರಿಯಾಗಿಲ್ಲ ಎಂಬ ಕಾರಣಕ್ಕೆ ಎರಡು ಸಾವಿರಕ್ಕೂ ಹೆಚ್ಚು ಪ್ರಕರಣಗಳು ಹೈಕೋರ್ಟ್‌ನಲ್ಲಿ ದಾಖಲಾಗಿವೆ. ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮವನ್ನು ಹೈಕೋರ್ಟ್‌ಗೆ ಸಲ್ಲಿಸಬೇಕಾಗಿದೆ ಎಂದಿದ್ದರು.

ಉದುಗೆ ಬಂಡೆಯಿಂದ ಜಾರಿ ಮರಿಯಾನೆ ಶ್ರೀರಾಮುಲು ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಐದು ವರ್ಷದ ಮರಿಯಾನೆ ಶ್ರೀರಾಮುಲು ಉದ್ಯಾನ ಸಮೀಪದ ಉದುಗೆ ಬಂಡೆಯಿಂದ ಜಾರಿ ಕೆಳಗೆ ಬಿದ್ದು ಮೃತಪಟ್ಟಿದೆ.

ಇತ್ತೀಚೆಗಷ್ಟೇ ಜಿರಾಫೆ ಯದುನಂದನ ಆಹಾರ ತಿನ್ನಲು ಕುತ್ತಿಗೆಯನ್ನು ಹೊರಚಾಚಿದಾಗ ಉದ್ಯಾನದಲ್ಲಿನ ಆವರಣದ ಆಂಗಲ್‌ಗೆ ಸಿಲುಕಿ ಸಾವನ್ನಪ್ಪಿತ್ತು. ಈ ಘಟನೆ ಮರೆಯುವ ಮುನ್ನವೇ ಮರಿಯಾನೆಯ ಸಾವಿನ ಸುದ್ದಿಯು ಪ್ರಾಣಿಪ್ರಿಯರಲ್ಲಿ ಆತಂಕ ತಂದಿದೆ.

ಈ ಮರಿಯಾನೆ ಕಳೆದ ಭಾನುವಾರ ಆನೆ ಹಿಂಡಿನಿಂದ ಕಣ್ಮರೆಯಾಗಿತ್ತು. ರಾತ್ರಿವೇಳೆ ಕಾಡಿಗೆ ಹೋಗುವ ಉದ್ಯಾನದ ಆನೆಗಳ ಹಿಂಡು ಮರಳಿ ಬೆಳಿಗ್ಗೆ ಉದ್ಯಾನದತ್ತ ಬರುವುದು ಪ್ರತಿನಿತ್ಯದ ವಾಡಿಕೆ. ಭಾನುವಾರ ಹೋದ ಆನೆ ಶ್ರೀರಾಮುಲು ಸೋಮವಾರ ಕಾಣಲಿಲ್ಲ. ಕೆಲವೊಮ್ಮೆ ಆನೆಗಳು ಕಾಡಾನೆಗಳ ಜೊತೆಗೆ ಒಂದೆರೆಡು ದಿನ ಇದ್ದು ಮತ್ತೆ ಹಿಂತಿರುಗಿ ತಂಡ ಸೇರಿಕೊಳ್ಳುವ ಪರಿಪಾಠವಿದೆ.

ಶ್ರೀರಾಮುಲು ಹಿಂಡಿನಿಂದ ಕಾಣೆಯಾಗಿರುವುದು ಉದ್ಯಾನದ ಸಿಬ್ಬಂದಿಯ ಗಮನಕ್ಕೆ ಬಂದಿತ್ತು. ಅವರು ಉದ್ಯಾನಕ್ಕೆ ಹೊಂದಿಕೊಂಡಿದ್ದ ಕಾಡಿನಲ್ಲಿ ಶೋಧ ನಡೆಸಿದ್ದರು. ಆದರೆ, ಪತ್ತೆಯಾಗಿರಲಿಲ್ಲ. ಬುಧವಾರ ಬೆಳಿಗ್ಗೆ ಹುಡುಕಾಟದಲ್ಲಿ ತೊಡಗಿದ್ದಾಗ ಉದ್ಯಾನಕ್ಕೆ ಸಮೀಪದ ಉದುಗೆ ಬಂಡೆಯಿಂದ ಕೆಳಗೆ ಉರುಳಿ ಬಿದ್ದು ಕೊಳೆತ ಸ್ಥಿತಿಯಲ್ಲಿದ್ದ ಆನೆಯ ಮೃತದೇಹ ಪತ್ತೆಯಾಗಿದೆ. ಎತ್ತರದಿಂದ ಬಿದ್ದ ರಭಸಕ್ಕೆ ಅದರ ದಂತ ಮುರಿದು ಹೋಗಿದೆ.



ಬನ್ನೇರುಘಟ್ಟ ಜೈವಿಕ ಉದ್ಯಾನದ ಐದು ವರ್ಷದ ಮರಿಯಾನೆ ಶ್ರೀರಾಮುಲು

ಕಳೆದ ಒಂದು ವಾರದಿಂದಲೂ ಸತತವಾಗಿ ಮಳೆ ಬೀಳುತ್ತಿದೆ. ಇದರಿಂದ ರಾತ್ರಿ ವೇಳೆ ಹುಲ್ಲು ಮೇಯಲು ಆನೆ ಹೋಗಿದ್ದಾಗ ಬಂಡೆಯಿಂದ ಜಾರಿ ಕೆಳಗೆ ಬಿದ್ದಿರಬಹುದು ಎಂದು ಉದ್ಯಾನದ ಸಿಬ್ಬಂದಿ ಶಂಕಿಸಿದ್ದಾರೆ.

ಆನೆ ಬಿದ್ದಿರುವ ಸ್ಥಳವು ಗುಡ್ಡದಿಂದ ಸುಮಾರು 100 ಮೀಟರ್‌ಗೂ ಹೆಚ್ಚು ಆಳದಲ್ಲಿದೆ. ಉದ್ಯಾನದ ಸಿಬ್ಬಂದಿ ಇತರೇ ಆನೆಗಳ ನೆರವಿನಿಂದ ಮೃತದೇಹವನ್ನು ಮೇಲಕ್ಕೆತ್ತಲು ಹರಸಾಹಸ ಪಡಬೇಕಾಯಿತು ಎಂದು ಉದ್ಯಾನದ ಮೂಲಗಳು ತಿಳಿಸಿವೆ.

2016ರ ನ. 6ರಂದು ಈ ಮರಿಯಾನೆಯು ನಿಸರ್ಗಳಿಗೆ ಜನಿಸಿತ್ತು. ಆನೆಗೆ ಶ್ರೀರಾಮುಲು ಎಂದು ನಾಮಕರಣ ಮಾಡಲಾಗಿತ್ತು.

ಪಿಯೆಜಿಯೊ ಹೊಸ ಷೋರೂಂ ಆರಂಭ

ಬೆಂಗಳೂರು: ಪಿಯೆಜಿಯೊ ವೆಹಿಕಲ್ಸ್ ಪ್ರೈವೇಟ್ ಲಿಮಿಟೆಡ್‌ನ ವಿದ್ಯುತ್ ಚಾಲಿತ ತ್ರಿಚಕ್ರ ವಾಹನಗಳ ಹೊಸ ಷೋರೂಂ ನಗರದ ಬಿ. ಚನ್ನಸಂದ್ರದಲ್ಲಿ ಆರಂಭವಾಗಿದೆ. ಮೊಬಿಲಿಟಿ ಮೋಟರ್ಸ್‌ನ ಸಹಭಾಗಿತ್ವದಲ್ಲಿ ಈ ಷೋರೂಂ ಆರಂಭವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ಕಂಪನಿಯ ಷೋರೂಂ ಉದ್ಘಾಟಿಸುತ್ತಿರುವುದು ಸಂತಸ ತಂದಿದೆ. ರಾಜ್ಯ ಸರ್ಕಾರವು ವಿದ್ಯುತ್ ಚಾಲಿತ ವಾಹನಗಳನ್ನು ಹೆಚ್ಚು ಜನಪ್ರಿಯಗೊಳಿಸಲು ಹಲವು ಯೋಜನೆಗಳನ್ನು ರೂಪಿಸಿದೆ' ಎಂದು ಬುಧವಾರ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಸಾರಿಗೆ ಸಚಿವ ಬಿ. ಶ್ರೀರಾಮುಲು ಅವರು ಹೇಳಿದ್ದಾರೆ.

'ಮಾಹಿತಿ ಕಣಜ'ದಲ್ಲಿ ಇನ್ನು 160 ಸರ್ಕಾರಿ ಸೇವೆ ಲಭ್ಯ

ಬೆಂಗಳೂರು: ಎರಡು ಮೆಟ್ರೊ ನಿಲ್ದಾಣಗಳ ನಡುವಿನ ಪ್ರಯಾಣ ದರ, ಪ್ರತಿ ತಾಲ್ಲೂಕುಗಳಲ್ಲಿರುವ ಎಟಿಎಂಗಳ ಪಟ್ಟಿ, ಸರ್ಕಾರಿ ಶಾಲೆಯೊಂದರಲ್ಲಿ ಕೆಲಸ ಮಾಡುವ ಶಿಕ್ಷಕರ ಸಂಖ್ಯೆ.. ಹೀಗೆ 50 ಇಲಾಖೆಗಳ 160 ಸರ್ಕಾರಿ ಸೇವೆಗಳ ಮಾಹಿತಿ ಇನ್ನು ಮುಂದೆ 'ಮಾಹಿತಿ ಕಣಜ' ಪೋರ್ಟಲ್‌ನಲ್ಲಿ ಲಭ್ಯ ಆಗಲಿದೆ.

2020ರಲ್ಲಿ ಬಿ.ಎಸ್. ಯಡಿಯೂರಪ್ಪ ಆಡಳಿತದ ಅವಧಿಯಲ್ಲಿ ಈ ಪೋರ್ಟಲ್‌ಗೆ ಚಾಲನೆ ನೀಡಲಾಗಿತ್ತು. ಆಗ 10 ಇಲಾಖೆಗಳ 30 ಸೇವೆಗಳನ್ನು ಈ ಪೋರ್ಟಲ್ ಮೂಲಕ ನೀಡಲಾಗಿತ್ತು. ಇದೀಗ ಸೇವೆಗಳ ಸಂಖ್ಯೆಯನ್ನು 160ಕ್ಕೆ ಹೆಚ್ಚಿಸಿ ಇ- ಆಡಳಿತ ಇಲಾಖೆ ಪೋರ್ಟಲ್ ಅನ್ನು ಉನ್ನತೀಕರಿಸಿದೆ.

ಮಾಹಿತಿ ಹಕ್ಕು ಕಾಯ್ದೆ ಜಾರಿಗೆ ಬಂದ 16ನೇ ವರ್ಷದ ನೆನಪಿಗಾಗಿ ಈ ಪೋರ್ಟಲ್‌ಗೆ ಮಂಗಳವಾರ ಮರು ಚಾಲನೆ ನೀಡಿ ಮಾತನಾಡಿದ ಸಿಬ್ಬಂದಿ ಮತ್ತು ಆಡಳಿ ಸುಧಾರಣಾ ಇಲಾಖೆಯ (ಇ- ಆಢಳಿತ) ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೀವ್ ಚಾವ್ಲಾ, '2022ರ ಮಾರ್ಚ್ ವೇಳೆಗೆ ಸೇವೆಗಳ ಸಂಖ್ಯೆಯನ್ನು 500ಕ್ಕೆ ಹೆಚ್ಚಿಸುವ ಗುರಿ ಇದೆ. ಇನ್ನೂ ಹಲವು ಇಲಾಖೆಗಳನ್ನು ಈ ಪೋರ್ಟಲ್‌ನ ವ್ಯಾಪ್ತಿಗೆ ತರಬೇಕಾಗಿದೆ' ಎಂದರು.

ದಾಬಸ್‌ಪೇಟೆಯಲ್ಲಿ ಬಹುಮಾದರಿ ಸಾಗಣೆ ಪಾರ್ಕ್: ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಬಸ್‌ಪೇಟೆಯಲ್ಲಿ ಬಹುಮಾದರಿ ಸಾಗಣೆ ಪಾರ್ಕ್ (ಎಂಎಂಎಲ್‌ಪಿ) ನಿರ್ಮಿಸಲು 400 ಎಕರೆ ಜಮೀನು ಗುರುತಿಸಲಾಗಿದೆ ಎಂದು ವಸತಿ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಪ್ರಧಾನಮಂತ್ರಿ ಗತಿ ಶಕ್ತಿ ಯೋಜನೆಯ ರಾಜ್ಯಮಟ್ಟದ ಉದ್ಘಾಟನಾ ಸಮಾರಂಭದಲ್ಲಿ ಬುಧವಾರ ಮಾತನಾಡಿದ ಅವರು, ‘ದೇಶದಲ್ಲಿ ಅತಿದೊಡ್ಡ ಸಾಗಣೆ ವ್ಯೂಹ ಹೊಂದಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಈ ಕ್ಷೇತ್ರದಲ್ಲಿ ರಾಜ್ಯವನ್ನು ಮೊದಲನೇ ಸ್ಥಾನಕ್ಕೆ ತರುವ ಗುರಿ ಇದೆ. ಅದಕ್ಕೆ ಪೂರಕವಾಗಿ ಬಹುಮಾದರಿ ಸಾಗಣೆ ಪಾರ್ಕ್ ನಿರ್ಮಿಸಲಾಗುವುದು’ ಎಂದರು.



ಪ್ರಧಾನಮಂತ್ರಿ ಗತಿ ಶಕ್ತಿ ರಾಷ್ಟ್ರೀಯ ಮಹಾ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮವನ್ನು ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ವಿ. ಸೋಮಣ್ಣ ಬುಧವಾರ ಉದ್ಘಾಟಿಸಿದರು. ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್‌. ಶಿವಶಂಕರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ, ಬೋಸ್ಟನ್ ಕನ್ಸಲ್ಟಿಂಗ್ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಮಾರಿಯೋ ಗೋನ್ಸಾಲ್ವೇಸ್ ಇದ್ದರು – ಪ್ರಜಾವಾಣಿ ಚಿತ್ರ

ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯು ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ ‘ಲಾಜಿಸ್ಟಿಕ್ಸ್ ಪಾರ್ಕ್’ಗಳನ್ನು ನಿರ್ಮಿಸಲಿದೆ. ಇದರಿಂದ ರಾಜ್ಯದಲ್ಲಿ ವಾಣಿಜ್ಯ ವಹಿವಾಟು ಸುಗಮವಾಗಿ ನಡೆಯಲುನ ಅನುಕೂಲವಾಗಲಿದೆ ಎಂದು ಹೇಳಿದರು.

ಗತಿ ಶಕ್ತಿ ಯೋಜನೆಯು ರಾಷ್ಟ್ರದ ಅಭಿವೃದ್ಧಿಗೆ ದಿಕ್ಸೂಚಿಯಾಗಲಿದೆ. ಮೂಲಸೌಕರ್ಯ ಅಭಿವೃದ್ಧಿಗೆ ಬಲ ತುಂಬಲಿರುವ ಈ ಯೋಜನೆ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಆದ್ಯತೆ ನೀಡಲಿದೆ. ಮಹಾಯೋಜನೆಯ ಅನುಷ್ಠಾನವು ಆರ್ಥಿಕ ವ್ಯವಸ್ಥೆಯನ್ನು ಏಕೀಕರಣಗೊಳಿಸಿ, ದೇಶವನ್ನು ಸಮಗ್ರ ಪ್ರಗತಿಯತ್ತ ಕೊಂಡೊಯ್ಯಲಿದೆ ಎಂದರು.

ವಿವಿಧ ಆರ್ಥಿಕ ವಲಯಗಳನ್ನು ಬೆಸೆಯುವ ಈ ಯೋಜನೆ ಪ್ರಧಾನಿ ನರೇಂದ್ರ ಮೋದಿಯವರ ಕನಸಿನ ಕೂಸು. ರೈಲ್ವೆ, ಭೂಸಾರಿಗೆ ಸೇರಿದಂತೆ 16 ಸಚಿವಾಲಯಗಳನ್ನು ಒಂದು ಜಾಲದಡಿ ತರಲಾಗುತ್ತಿದೆ. ಇದರಿಂದ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬಕ್ಕೆ ಕಡಿವಾಣ ಬೀಳಲಿದೆ. ದೇಶದಾದ್ಯಂತ ಮೂಲಸೌಕರ್ಯ ಅಭಿವೃದ್ಧಿಯ ಹೊಸ ಶಕೆ ಇದರಿಂದ ಆರಂಭವಾಗಲಿದೆ ಎಂದು ಹೇಳಿದರು.

ಯಾವ ಜಗಳವೂ ಇಲ್ಲ, ಗುಂಪೂ ಇಲ್ಲ: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಪಕ್ಷದಲ್ಲಿ ಯಾವ ಜಗಳವೂ ಇಲ್ಲ. ಗುಂಪುಗಳೂ ಇಲ್ಲ. ಉಗ್ರಪ್ಪ ಮತ್ತು ಸಲೀಂ ನಡುವಿನ ಮಾತುಕತೆಗೆ ಸಂಬಂಧಿಸಿದಂತೆ ಕೆ. ರೆಹಮಾನ್ ಖಾನ್ ಅವರ ನೇತೃತ್ವದ ಶಿಸ್ತು ಸಮಿತಿ ನಿರ್ಧಾರ ಕೈಗೊಳ್ಳಲಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ರಾಜಕಾರಣದಲ್ಲಿ ಚಪ್ಪಾಳೆ ಹೊಡೆಯುವವರು, ಜೈಕಾರ ಹಾಕುವವರು, ಕಲ್ಲು ಎಸೆಯುವವರು, ಮೊಟ್ಟೆ ಎಸೆಯುವವರು, ಧಿಕ್ಕಾರ ಕೂಗುವವರು ಎಲ್ಲ ಪಕ್ಷಗಳಲ್ಲೂ ಇರುತ್ತಾರೆ’ ಎಂದರು.

‘ಅವರು ಮಾತನಾಡಿಲ್ಲ (ಉಗ್ರಪ್ಪ ಮತ್ತು ಸಲೀಂ) ಎಂದು ನಾನು ಹೇಳಲು ಹೋಗುವುದಿಲ್ಲ. ನೀವು (ಮಾಧ್ಯಮ) ತೋರಿಸಿರುವುದು ನಿಜ. ಆದರೆ, ಅದು ಇಬ್ಬರ ನಡುವಣ ಆಂತರಿಕ ಮಾತುಕತೆ. ಅಧಿಕೃತ ಹೇಳಿಕೆ ಅಲ್ಲ. ಈ ಬಗ್ಗೆ ಉಗ್ರಪ್ಪ ಅವರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ’ ಎಂದರು.

‘ನಾನು ಮಾಧ್ಯಮಗಳ ತಪ್ಪು ಎಂದು ಯಾಕೆ ಹೇಳಲಿ? ನಾವು ಮಾತನಾಡುವುದನ್ನು ನೀವು ತೋರಿಸುತ್ತೀರಿ. ಹಿಂದೆ, ಯಡಿಯೂರಪ್ಪ ಹಾಗೂ ಅನಂತಕುಮಾರ್ ಮಾತನಾಡಿದ್ದನ್ನು ನೀವು ತೋರಿಸಿದ್ದೀರಿ. ಅದನ್ನು ತಪ್ಪು ಎಂದು ಹೇಳಲು ಸಾಧ್ಯವೇ? ಅದೇ ರೀತಿ ಎಚ್. ವಿಶ್ವನಾಥ್, ಬಸನಗೌಡ ಪಾಟೀಲ ಯತ್ನಾಳ್ ಅವರು ಮಾತನಾಡಿರುವುದನ್ನೂ ತೋರಿಸಿದ್ದೀರಿ. ಅದೇ ರೀತಿ ಈಗ ತೋರಿಸಿದ್ದೀರಿ. ಆದರೆ, ಆ ಸಂಭಾಷಣೆಗೂ ನನಗೂ ಯಾವುದೇ ಸಂಬಂಧ ಇಲ್ಲ’ ಎಂದರು.

‘ಪರ್ಸೆಂಟೇಜ್ ವಿಚಾರದಲ್ಲಿ ಯಾರಾದರೂ ದೂರು ಕೊಟ್ಟರೆ ಕ್ರಮ ಕೈಗೊಳ್ಳುವುದಾಗಿ ಗೃಹ ಸಚಿವರು ತಿಳಿಸಿದ್ದಾರೆ. ಅವರು ಸ್ವಯಂಪ್ರೇರಿತರಾಗಿ ಕೇಸ್ ದಾಖಲಿಸಿದರೂ ಒಳ್ಳೆಯದೇ. ಪರ್ಸೆಂಟೇಜ್ ಬಗ್ಗೆ ನಮ್ಮ ಪಕ್ಷದಲ್ಲಿ ಯಾರೂ ಅಧಿಕೃತ ಹೇಳಿಕೆ ನೀಡಿಲ್ಲ. ಬಿಜೆಪಿ ನಾಯಕರ ಶೇ 30 ಕಮಿಷನ್ ಬಗ್ಗೆ ಎಚ್. ವಿಶ್ವನಾಥ್ ಮಾತನಾಡಿದ್ದಾರೆ. ಮಾಜಿ ಸಚಿವರೊಬ್ಬರು ಬೆಡ್ ರೂಮಿನಲ್ಲಿ ಭ್ರಷ್ಟಾಚಾರದ ಬಗ್ಗೆ ಮಾತನಾಡಿದಾಗ ಅವರ ಬಳಿ ಹೋಗಿ ಯಾಕೆ ಪ್ರಶ್ನೆ ಮಾಡಲಿಲ್ಲ’ ಎಂದೂ ಶಿವಕುಮಾರ್ ಪ್ರಶ್ನಿಸಿದರು.

ಮಸಾಲ ಜಯರಾಮ್ ರಾಜೀನಾಮೆ ಬೆದರಿಕೆ

ತುಮಕೂರು: ‘ನಿಗಮ, ಮಂಡಳಿಯ ಅಧ್ಯಕ್ಷ ಸ್ಥಾನ ಕೊಡದಿದ್ದರೆ ಶಾಸಕ ಸ್ಥಾನ ಹಾಗೂ ಪಕ್ಷಕ್ಕೆ ರಾಜೀನಾಮೆ ನೀಡುತ್ತೇನೆ’ ಎಂದು ತುರುವೇಕೆರೆ ಬಿಜೆಪಿ ಶಾಸಕ ಮಸಾಲ ಜಯರಾಮ್ ಬೆದರಿಕೆ ಹಾಕಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಎಲ್ಲೋ ಒಂದು ಕಡೆ ಪಕ್ಷ ನನಗೆ ದ್ರೋಹ ಮಾಡುತ್ತಿದೆ ಎಂದು ಅನಿಸುತ್ತಿದೆ. ಈವರೆಗೂ ಹೇಳಿದ್ದನ್ನು ಕೇಳಿಕೊಂಡು ಬಂದಿದ್ದೇನೆ. ಬೇಸರವಾಗಿರುವ ವಿಚಾರವನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ, ಮುಖ್ಯಮಂತ್ರಿಗೆ ತಿಳಿಸಿದ್ದೇನೆ’ ಎಂದು ಹೇಳಿದರು.

‘ಸಚಿವ ಸ್ಥಾನ ಕೇಳುತ್ತಿಲ್ಲ. ಒಂದು ಒಳ್ಳೆಯ ನಿಗಮ, ಮಂಡಳಿ ಸ್ಥಾನ ಕೊಡಿ ಎಂದು ಕೇಳಿಕೊಂಡಿದ್ದೇನೆ. ಅದಕ್ಕೂ ಸ್ಪಂದಿಸುತ್ತಿಲ್ಲ. ಇದೇ ರೀತಿ ನಿರ್ಲಕ್ಷ್ಯ ಮುಂದುವರಿದರೆ ನವೆಂಬರ್‌ನಲ್ಲಿ ಒಂದು ನಿರ್ಧಾರ ಕೈಗೊಳ್ಳಲಾಗುವುದು. ನನ್ನ ತಾಳ್ಮೆಗೂ ಒಂದು ಮಿತಿ ಇದೆ’ ಎಂದು ಗುಡುಗಿದರು.

‘ಪಟ್ಟಭದ್ರರ ಕಪಿಮುಷ್ಟಿಯಲ್ಲಿ ರೈತ ಸಂಘ’

ಚಿತ್ರದುರ್ಗ: ಕೋಡಿಹಳ್ಳಿ ಚಂದ್ರಶೇಖರ್ ಬಣದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪಟ್ಟಭದ್ರರ ಕಪಿಮುಷ್ಟಿಗೆ ಸಿಲುಕಿದೆ. ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದ್ದು, ರೈತರಿಗೆ ದೊಡ್ಡ ಮೋಸ ಮಾಡಲಾಗುತ್ತಿದೆ ಎಂದು ಸಂಘದ ಕಾರ್ಯಾಧ್ಯಕ್ಷ ಈಚಘಟ್ಟ ಸಿದ್ಧವೀರಪ್ಪ ಆರೋಪಿಸಿದರು. ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೋಡಿಹಳ್ಳಿ ನಡೆ ಅನುಮಾನಾಸ್ಪದವಾಗಿದೆ’ ಎಂದರು.

ಅನಧಿಕೃತ ಚರ್ಚ್‌ಗಳ ಸಂಖ್ಯೆ ಶೇ 40: ಗೂಳಿಹಟ್ಟಿ ಶೇಖರ್

ಬೆಂಗಳೂರು: ರಾಜ್ಯದಲ್ಲಿ ಅನಧಿಕೃತ ಚರ್ಚ್‌ಗಳ ಸಂಖ್ಯೆ ಶೇ 40 ರಷ್ಟು ಇದ್ದು, ಇವು ವ್ಯಾಪಕವಾಗಿ ಮತಾಂತರ ಕಾರ್ಯದಲ್ಲಿ ತೊಡಗಿವೆ ಎಂದು ಬಿಜೆಪಿ ಶಾಸಕ ಗೂಳಿಹಟ್ಟಿ ಶೇಖರ್ ಅವರು ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ ಬುಧವಾರ ನಡೆದ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ರಾಜ್ಯದಲ್ಲಿ ಅಧಿಕೃತ ಮತ್ತು ಅನಧಿಕೃತ ಮಿಷನರಿಗಳು ಕಾರ್ಯನಿರ್ವಹಿಸುತ್ತಿವೆ. ಇವು ಸರ್ಕಾರದಿಂದ ಪಡೆಯುತ್ತಿರುವ ಸೌಲಭ್ಯಗಳು, ಕ್ರೈಸ್ತ ಸಮುದಾಯಕ್ಕೆ ಸರ್ಕಾರ ನೀಡುತ್ತಿರುವ ಅನುದಾನ, ಅಭಿವೃದ್ಧಿ ಮತ್ತು ಕ್ಷೇಮ ಸಮಾಚಾರದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಅನಧಿಕೃತ ಚರ್ಚ್‌ಗಳು ಮನೆಗಳಲ್ಲೂ ನಡೆಯುತ್ತಿವೆ. ಈ ಎಲ್ಲ ವಿಷಯಗಳ ಬಗ್ಗೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಕೇಳಲಾಗಿದೆ ಎಂದೂ ಅವರು ಹೇಳಿದರು.

ಶಿವಮೊಗ್ಗ ಗ್ರಾಮಾಂತರ ಶಾಸಕ ಅಶೋಕ್ ನಾಯ್ಕ್ ಮಾತನಾಡಿ, ಲಂಬಾಣಿ ಜನಾಂಗದವರನ್ನು ಬಲವಂತವಾಗಿ ಮತಾಂತರ ಮಾಡಲಾಗುತ್ತಿದೆ. ಲಂಬಾಣಿ ಭಾಷೆಯಲ್ಲೇ ಬೈಬಲ್ ಮುದ್ರಿಸಿ ಹಂಚಲಾಗುತ್ತಿದೆ ಎಂದರು. ಸಭೆಯಲ್ಲಿ ಶಾಸಕರಾದ ಪುಟ್ಟರಂಗ ಶೆಟ್ಟಿ, ವಿರೂಪಾಕ್ಷಪ್ಪ ಬಳ್ಳಾರಿ, ರಾಜೇಶ್ ನಾಯ್ಕ್, ವಿಧಾನಪರಿಷತ್ ಸದಸ್ಯ ಬಿ.ಎಂ. ಫಾರೂಕ್ ಅವರೂ ಇದ್ದರು.

ನಗರದಲ್ಲಿ ನಾಳೆ

ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಜನ್ಮದಿನದ ಅಂಗವಾಗಿ ರಾಷ್ಟ್ರೀಯ ನಾವೀನ್ಯತೆ ಮತ್ತು ಸೃಜನಶೀಲತೆ ದಿನ:ಅತಿಥಿಗಳು–ಡಾ.ಗಿರಿಧರ್ ಜೆ.ಗ್ಯಾನಿ, ವೈ.ಎಸ್.ರಾಜನ್, ಕೆ.ಜಿ. ಮೋಹನ್, ಮೈಥಿಲಿ ರಾಮಚಂದ್, ತುಪ್ಪಿಲ್ ವೆಂಕಟೇಶ್, ಆಯೋಜನೆ–ಫೌಂಡೇಷನ್ ಫಾರ್ ಕ್ವಾಲಿಟಿ ಇಂಡಿಯಾ (ಎಫ್‌ಕ್ಯೂಐ), ಸಹಕಾರ–ಭಾರತೀಯ ಆರೋಗ್ಯಸೇವೆ ಪೂರೈಕೆದಾರರ ಸಂಘ (ಎಎಚ್‌ಪಿಐ) ಹಾಗೂ ಭಾರತೀಯ ಜೈವಿಕ ವಿಜ್ಞಾನ ಅಕಾಡೆಮಿ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಭರತನಾಟ್ಯ ರಂಗಪ್ರವೇಶ: ವರ್ಷಾ ವೆಂಕಟೇಶ್, ಅತಿಥಿ–ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತ ಕೃಷ್ಣಶರ್ಮ, ಸಂಸ್ಕಾರ ಭಾರತಿ ಪ್ರಾಂತ ಸಂಘಟನಾ ಕಾರ್ಯದರ್ಶಿ ಎಂ.ಎ.ರಾಮಚಂದ್ರ, ಲೇಖಕಿ ವೈ.ಕೆ. ಸಂಧ್ಯಾಶರ್ಮ, ಭರತ ಕಲಾಗ್ರಾಮ



ವರ್ಷಾ ವೆಂಕಟೇಶ್

ಗುರುಕುಲ ಅಧ್ಯಕ್ಷ ವಸಂತ್ ಕಿರಣ್, ಮಾತೃಕಾ ಟ್ರಸ್ಟ್ ವ್ಯವಸ್ಥಾಪಕ ಟ್ರಸ್ಟಿ ರವಿಶಂಕರ್, ಆಯೋಜನೆ–ಮಾತೃಕಾ ಸಾಂಸ್ಕೃತಿಕ ಟ್ರಸ್ಟ್, ಸ್ಥಳ–ಪತ್ತಿವೇದಿಕೆ ಅವರ್ ಸ್ಕೂಲ್, ಸಂಜೆ 5.30

ಗಂಜಾಂ ನವರಾತ್ರಿ ಸಂಗೀತ ಹಬ್ಬ:ಆಯೋಜನೆ–ವಿದ್ವಾನ್ ಆರ್. ಕೆ.ಶ್ರೀಕಾಂತ್ ಟ್ರಸ್ಟ್, ಎಸ್‌ವಿಎನ್ ಸಂಗೀತ ಅಕಾಡೆಮಿ, ಸ್ಥಳ–ಗಂಜಾಂ ಮಂಟಪ, ಬಸವನಗುಡಿ (ಬೆ.9.30ರಿಂದ ರಾತ್ರಿ 9)

ಐಸಿಎಟಿಟಿ ಏರ್ ಆಂಬುಲೆನ್ಸ್ ನೂತನ ಕಚೇರಿ ಉದ್ಘಾಟನೆ:ಸ್ಥಳ–ಯಲಹಂಕ ನ್ಯೂಟೌನ್, ಪ್ರಖ್ಯಾತ ಹೋಟೆಲ್ ಎದುರು, ಮಧ್ಯಾಹ್ನ 12

ರೈತರಿಗೆ ಡೀಸೆಲ್ ಸಬ್ಸಿಡಿ ಚಿಂತನೆ: ಬಿ.ಸಿ. ಪಾಟೀಲ

ಚಿತ್ರದುರ್ಗ: ಕೃಷಿ ಜಮೀನು ಉಳುಮೆ ಮಾಡಲು ರೈತರಿಗೆ ಡೀಸೆಲ್ ಸಬ್ಸಿಡಿ ನೀಡುವ ನಿಟ್ಟಿನಲ್ಲಿ ಸರ್ಕಾರ ಚಿಂತನೆ ನಡೆಸುತ್ತಿದೆ. ಮುಂದಿನ ಬಜೆಟ್‌ನಲ್ಲಿ ಈ ಬಗ್ಗೆ ತೀರ್ಮಾನ ಹೊರಬೀಳಲಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದರು.

ಇಲ್ಲಿಯ ಮುರುಘಾ ಮಠದ ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ಬುಧವಾರ ಏರ್ಪಡಿಸಿದ್ದ ಕೃಷಿ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಡೀಸೆಲ್ ಸಬ್ಸಿಡಿ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗಮನ ಸೆಳೆಯಲಾಗಿದೆ. ಇಂಧನ ಸಚಿವ ವಿ. ಸುನೀಲ್ ಕುಮಾರ್ ಅವರೊಂದಿಗೆ ಚರ್ಚಿಸಲಾಗಿದೆ. ಮೀನುಗಾರರ ದೋಣಿಗಳಿಗೆ ನೀಡುವ ಸಬ್ಸಿಡಿ ಮಾದರಿಯಲ್ಲಿ ರೈತರಿಗೆ ಡೀಸೆಲ್ ಮಂಜೂರು ಮಾಡಬೇಕು ಎಂಬುದು ನನ್ನ ಬಹುದಿನಗಳ ಕನಸು. ಲೀಟರ್‌ಗೆ ₹ 20 ಸಬ್ಸಿಡಿ ಸಿಕ್ಕರೆ ರೈತರಿಗೆ ಅನುಕೂಲವಾಗಲಿದೆ’ ಎಂದರು.



ಇತಿಹಾಸದ ಓದು ಹೀಗಿರಲಿ..

ಬಹುತೇಕ ಎಲ್ಲಾ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಸಾಮಾನ್ಯ ಅಧ್ಯಯನ (ಜಿಎಸ್)ದಲ್ಲಿ ಇತಿಹಾಸ ಮುಖ್ಯ ವಿಷಯ. ಇದರ ಮೇಲೆ ಸಾಕಷ್ಟು ಪ್ರಶ್ನೆಗಳಿರುವುದರಿಂದ ವಿಸ್ತೃತ ಓದು ಅವಶ್ಯಕ.


ಮನೋಜ್ ಟಿ.ಪಿ.

ಬಹುತೇಕ ಎಲ್ಲಾ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಸಾಮಾನ್ಯ ಅಧ್ಯಯನ ವಿಭಾಗದಲ್ಲಿ ಇತಿಹಾಸ ಪ್ರಮುಖ ವಿಷಯವಾಗಿದೆ. ಹೀಗಾಗಿ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಸರ್ಕಾರಿ ಉದ್ಯೋಗಕ್ಕೆ ಸೇರ ಬಯಸುವವರು ಈ ವಿಷಯದಲ್ಲಿ ಸರಿಯಾದ ಕ್ರಮದಲ್ಲಿ ಹಾಗೂ ವಿಸ್ತೃತವಾಗಿ ಅಧ್ಯಯನ ನಡೆಸಬೇಕಾಗುತ್ತದೆ.

ಯುಪಿಎಸ್‌ಸಿಯಿಂದು ಹಿಡಿದು ಗ್ರೂಪ್ ಸಿ ಕ್ಲರಿಕಲ್ ಪರೀಕ್ಷೆಯವರೆಗೂ ಸಾಮಾನ್ಯ ಅಧ್ಯಯನವೆಂಬುದು ಮೂಲಾಧಾರ ಎನ್ನಬಹುದು. ಈ ದೃಷ್ಟಿಯಿಂದ ಈ ವಿಭಾಗದಲ್ಲಿ ನೀವು ಹೇಗೆ ಸಿದ್ಧತೆ ನಡೆಸುತ್ತೀರಿ ಎಂಬುದರ ಮೇಲೆ ನಿಮ್ಮ ಪರೀಕ್ಷೆಯ ಫಲಿತಾಂಶ ಅಡಗಿದೆ. ಸಾಮಾನ್ಯ ಅಧ್ಯಯನ ವಿಭಾಗದಲ್ಲಿ ಭೂಗೋಳ, ಭಾರತದ ನೀತಿ ನಿರೂಪಣೆ, ವಿಜ್ಞಾನ, ಕ್ರೀಡೆ, ಪ್ರಚಲಿತ ವಿದ್ಯಮಾನ, ಅರ್ಥಶಾಸ್ತ್ರ, ಇತಿಹಾಸ.. ಹೀಗೆ ಎಲ್ಲಾ ಬಗೆಯ ವಿಷಯಗಳು ಅಡಕವಾಗಿದೆ.

ಈಗ ಇತಿಹಾಸದ ವಿಷಯಕ್ಕೆ ಬರೋಣ. ಇದು ಕೇವಲ ಹಿಂದೆ ನಡೆದ ಘಟನೆಗಳ ವಿವರಣೆ ಮಾತ್ರವಲ್ಲ, ವಿಶಾಲವಾದ ದೃಷ್ಟಿಕೋನದಿಂದ ನೋಡಿದರೆ ಇದು ಮಾನವನ ಅಭಿವೃದ್ಧಿ ಪಥವನ್ನು ದಾಖಲಿಸುವ ಪ್ರಕ್ರಿಯೆ ಎನ್ನಬಹುದು. ಕೇವಲ ವರ್ಷ, ಅವಧಿ ನೆನಪಿಟ್ಟುಕೊಂಡರೆ ಸಾಕಾಗದು, ಪ್ರತಿಯೊಂದು ಘಟನೆಯ ಹಿಂದಿನ ಕಾರಣಗಳು, ಅದರ ಪರಿಣಾಮವನ್ನು ವಿಶ್ಲೇಷಣಾತ್ಮಕವಾಗಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕೇವಲ ಕಲಿಕೆಯ ದೃಷ್ಟಿಯಿಂದ ಅಥವಾ ಪರೀಕ್ಷೆಯ ದೃಷ್ಟಿಯಿಂದ ಮಾತ್ರವಲ್ಲ, ಪ್ರಸ್ತುತ ವಿದ್ಯಮಾನಕ್ಕೆ ಜೋಡಿಸಿ ಅಂದಿನ ಘಟನೆಗಳನ್ನು ಅಧ್ಯಯನ ಮಾಡುವುದು ಸೂಕ್ತ.





ಮಾಹಿತಿ ಬೇಕಾದಷ್ಟು ಲಭ್ಯ

ಇತಿಹಾಸ ವಿಷಯ ಪ್ರಮುಖವಾದದ್ದು ಎಂದೇ ಪರಿಗಣಿಸಬಹುದು. ಏಕೆಂದರೆ ಬಹುತೇಕ ಪ್ರಶ್ನೆಗಳನ್ನು ಇತಿಹಾಸದ ಮೇಲೆಯೇ ಕೇಳಲಾಗುತ್ತದೆ. ಇದು ಅತ್ಯಂತ ವಿಸ್ತೃತವಾದ ವಿಷಯ ಎಂದು ಪರಿಗಣಿಸಲಾಗಿದ್ದರೂ ಇದನ್ನು ವಿವಿಧ ವಿಭಾಗಗಳನ್ನಾಗಿ ಮಾಡಿ ಸರಳೀಕರಿಸಿದರೆ ಪ್ರತಿಯೊಂದು ಪ್ರಶ್ನೆಗೂ ನಿಖರವಾದ ಉತ್ತರವನ್ನು ಗುರುತಿಸುವುದು ಬಹಳ ಸುಲಭ. ಮಾಹಿತಿಯನ್ನು ಸ್ಥಿರ ವಿಷಯವೆಂದು ಪರಿಗಣಿಸಲಾಗಿದ್ದು, ಅಧ್ಯಯನ ಸಾಮಗ್ರಿಗಳು ವಿಪುಲವಾಗಿ ದೊರಕುತ್ತವೆ. ಆಫ್‌ಲೈನ್ ಮಾತ್ರವಲ್ಲ, ಆನ್‌ಲೈನ್‌ನಲ್ಲೂ ಈಗ ಸಾಕಷ್ಟು ಮಾಹಿತಿ ಲಭ್ಯ.

ಸಾಮಾನ್ಯವಾಗಿ ಪ್ರತಿಯೊಂದು ವಿಷಯಕ್ಕೂ ಒಂದು ಇತಿಹಾಸವಿರುತ್ತದೆ. ಅಂದರೆ ಅದರ ಮೂಲ, ಬೆಳವಣಿಗೆ.. ಹೀಗೆ. ಉದಾಹರಣೆಗೆ ಭಾರತೀಯ ಸಂವಿಧಾನವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಸಂವಿಧಾನದ ರಚನೆಯ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಹೀಗೆ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮೊದಲಾದವ ವಿಷಯಗಳಲ್ಲೂ ಇದೇ ತತ್ವ ಅಡಕವಾಗಿದೆ.

ಶಾಖೆಗಳು

ಇತಿಹಾಸವು ವಿವಿಧ ಶಾಖೆಗಳನ್ನು ಹೊಂದಿದೆ. ರಾಜಕೀಯ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ಸಾಂಸ್ಕೃತಿಕ, ಆಡಳಿತ ಮೊದಲಾದವು. ಈ ಹಿಂದೆ ಪರೀಕ್ಷೆಯಲ್ಲಿ ರಾಜಕೀಯ ವಿಷಯದ ಮೇಲೆ ಪ್ರಶ್ನೆಗಳು ಬರುತ್ತಿದ್ದವು. ಹಿಂದೆ ರಾಜ್ಯಭಾರ ಮಾಡಿದ ರಾಜರು, ರಾಜಮನೆತನ ಇವೆಲ್ಲವುಗಳ ಮೇಲೆಯೇ ಹೆಚ್ಚು ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ಈಗ ಸಾಕಷ್ಟು ಬದಲಾವಣೆಗಳಾಗಿದ್ದು, ಇತಿಹಾಸದ ವಿವಿಧ ಶಾಖೆಗಳ ಮೇಲೆ ಗಮನವನ್ನು ಕೇಂದ್ರೀಕರಿಸಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಯ ದೃಷ್ಟಿಯಿಂದ ಸ್ಪರ್ಧಾರ್ಥಿಗಳು ಭಾರತೀಯ ಇತಿಹಾಸ, ಅಂದರೆ ಪ್ರಾಚೀನ ಇತಿಹಾಸ, ಮಧ್ಯಕಾಲೀನ ಭಾರತ, ಆಧುನಿಕ ಭಾರತ, ಭಾರತದ ಸ್ವಾತಂತ್ರ್ಯ ಹೋರಾಟ ಹಾಗೂ ಪ್ರಸಕ್ತ ಭಾರತದ ಸ್ಥಿತಿ ಬಗ್ಗೆ ಓದಿ, ಮನನ ಮಾಡಿಕೊಳ್ಳಬೇಕು. ಹಾಗೆಯೇ ಜಾಗತಿಕ ಇತಿಹಾಸದ ಬಗ್ಗೆ ತಿಳಿವಳಿಕೆ ಅವಶ್ಯಕ. ಅಂತರರಾಷ್ಟ್ರೀಯ ಘಟನೆಗಳ ಬಗ್ಗೆ ಸಾಕಷ್ಟು ಜ್ಞಾನ ಇರಬೇಕಾಗುತ್ತದೆ. ಇನ್ನೊಂದು ಮುಖ್ಯ ವಿಷಯವೆಂದರೆ ಒಂದು ರಾಜ್ಯದ ಪರೀಕ್ಷೆ, ಉದಾಹರಣೆಗೆ ಕೆಪಿಎಸ್‌ಸಿ ಪರೀಕ್ಷೆಗೆ ಕೂರುವುದಾದರೆ ಕರ್ನಾಟಕದ ಇತಿಹಾಸದ ಬಗ್ಗೆ ಆಳವಾದ ಅಧ್ಯಯನ ಅಗತ್ಯ.

ಇತಿಹಾಸ ಅಂದರೇ ಹಿಂದಿನ ಘಟನೆಗಳ ಬಗ್ಗೆ ಅಧ್ಯಯನ ಮಾಡುವುದು. ಆದರೆ ಎಷ್ಟು ಹಿಂದಿನಿಂದ ಓದಬೇಕು ಎಂಬ ಪ್ರಶ್ನೆ ಏಳುವುದು ಸಹಜ. ಇತಿಹಾಸ ಪೂರ್ವದಿಂದಲೇ ಓದಬೇಕಾಗುತ್ತದೆ. ಅಂದರೆ ನಾಗರಿಕತೆ ಶುರುವಾದಾಗಿನಿಂದ ಅದರ ಬಗ್ಗೆ ದಾಖಲೆ ಮಾಡಲಾದ ವಿಷಯಗಳನ್ನು ಅಧ್ಯಯನ ಮಾಡುವುದು ಸೂಕ್ತ. ಉದಾಹರಣೆಗೆ ಶಿಲಾಯುಗ. ಬೇರೆ ಬೇರೆ ಸಾಕ್ಷಿಗಳ ಆಧಾರದ ಮೇಲೆ ಘಟನೆಗಳನ್ನು ಜೋಡಿಸಿ ಈ ಬಗ್ಗೆ ಇತಿಹಾಸವನ್ನು ಬರೆಯಲಾಗಿದ್ದು, ಸ್ಪರ್ಧಾರ್ಥಿಗಳು ಇಲ್ಲಿಂದಲೇ ಓದಲು ಆರಂಭಿಸುವುದು ಅವಶ್ಯಕ.

ಸಂಸ್ಕೃತಿಯ ಅಧ್ಯಯನ

ಇತಿಹಾಸದ ಜೊತೆ ಇದು ಗಟ್ಟಿಯಾಗಿ ಜೋಡಿಸ್ಪಲಟ್ಟಿದೆ. ಇದು ಬದುಕಿನ ಒಂದು ಭಾಗ ಎನ್ನುವುದಕ್ಕಿಂತ ಬದುಕಿನ ಜೊತೆ ಹಾಸುಹೊಕ್ಕಾಗಿದೆ. ನಾವು ಏನು ತಿನ್ನುತ್ತೇವೆ, ಏನು ಬಟ್ಟೆ ಧರಿಸುತ್ತೇವೆ, ಮನರಂಜನೆಗೆ ಏನು ಮಾಡುತ್ತೇವೆ, ಯಾವ ಭಾಷೆ ಮಾತನಾಡುತ್ತೇವೆ... ಇವೆಲ್ಲ ಸಂಸ್ಕೃತಿಯಲ್ಲಿ ಬರುತ್ತವೆ. ಕಲೆ, ಸಂಗೀತ, ಸಾಹಿತ್ಯ, ವಾಸ್ತುಶಿಲ್ಪ, ಧರ್ಮ ಈ ಎಲ್ಲವೂ ಸಂಸ್ಕೃತಿಯ ಭಾಗ. ಹಾಗೆಯೇ ಪರಂಪರೆ, ಸಂಪ್ರದಾಯ, ಹಬ್ಬಗಳ ಆಚರಣೆ ಕೂಡ.

ಟಿಪ್ಪಣಿ ಮಾಡಿಕೊಳ್ಳಿ

ಈ ಮೊದಲೇ ಹೇಳಿದಂತೆ ಇದು ಬಹು ವಿಸ್ತಾರವಾದ ವಿಷಯ. ಹೀಗಾಗಿ ನೀವು ಎಷ್ಟು ಓದಿದರೂ ಕಡಿಮೆಯೇ. ವಿಷಯವನ್ನು ವಿವಿಧ ವಿಭಾಗಗಳಾಗಿ ವಿಭಾಗಿಸಿದರೆ ಓದಿದ್ದನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಸುಲಭ. ಇನ್ನೊಂದು ಮುಖ್ಯವಾದ ವಿಷಯವೆಂದರೆ ಓದಿದ್ದನ್ನು ಪುನರ್‌ಮನನ ಮಾಡಬೇಕಾಗುತ್ತದೆ. ಸುಲಭದ ಕೀ ಶಬ್ದಗಳನ್ನು ನೀವೇ ಸಿದ್ಧಪಡಿಸಿ ನೆನಪಿಟ್ಟುಕೊಳ್ಳಿ. ನೋಟ್ಸ್ ಮಾಡಿಕೊಂಡರೆ ಮತ್ತೆ ಮತ್ತೆ ಓದಬಹುದು.

ಹಾಗೆಯೇ ಮ್ಯಾಪ್, ಟೇಬಲ್‌ಗಳನ್ನು ಸಿದ್ಧಪಡಿಸಿಕೊಳ್ಳಿ. ನೆನಪಿನಲ್ಲಿ ಇಟ್ಟುಕೊಳ್ಳಲು ಇವು ಸುಲಭ.

ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳಲು ಇತಿಹಾಸವನ್ನು ಅಧ್ಯಯನ ಮಾಡಬೇಕು. ಪರೀಕ್ಷೆಯ ದೃಷ್ಟಿಯಿಂದ ಇದು ಅತ್ಯಂತ ಮುಖ್ಯ. ಪ್ರತಿಯೊಂದು ಸ್ಪರ್ಧಾತ್ಮಕ ಪರೀಕ್ಷೆಯಲ್ಲೂ ಇದರ ಬಗ್ಗೆ ಸಾಕಷ್ಟು ಪ್ರಶ್ನೆಗಳನ್ನು ಕೇಳಲಾಗುತ್ತದೆ. ಕಲೆ ಮತ್ತು ವಾಸ್ತುಶಿಲ್ಪ, ಧರ್ಮ, ಸಾಹಿತ್ಯದ ಕುರಿತು ಹೆಚ್ಚಿನ ಪ್ರಶ್ನೆಗಳು ಬರುತ್ತವೆ. ಹೀಗಾಗಿ ಇದರ ಬಗ್ಗೆ ಹೆಚ್ಚಿನ ಗಮನ ನೀಡಿ. ವೇದ ಕಾಲದ ಸಾಹಿತ್ಯ, ಜೈನ ಮತ್ತು ಬೌದ್ಧ ಧರ್ಮ ಹಾಗೂ ಅವುಗಳ ಕೊಡುಗೆಗಳು, ವಾಸ್ತುಶಿಲ್ಪ, ಕಲೆ, ಅಂದಿನ ದೇವಾಲಯಗಳ ನಿರ್ಮಾಣ ಮೊದಲಾದವುಗಳಿಗೆ ಒತ್ತು ನೀಡಿ.

ಎಲ್ಲದಕ್ಕೂ ಯೋಜನೆ ಮಾಡಿಕೊಂಡು ಮುಖ್ಯವಾದದ್ದನ್ನು ಗುರುತಿಸಿ, ಅಭ್ಯಾಸ ಮಾಡಿ. ಅಂದರೆ ಪರೀಕ್ಷೆಯ ಓದಿಗೆ ಯೋಜನೆ ಮಾಡಿಕೊಂಡು, ಆದ್ಯತೆ ಮೇಲೆ ಓದಿ. ನೆನಪಿನಲ್ಲಿರಬೇಕಾದರೆ ಪುನರ್‌ಮನನ ಅವಶ್ಯಕ. ❖

ಗ್ರೂಪ್ 'ಸಿ' ತಾಂತ್ರಿಕೇತರ ಹುದ್ದೆ ಪ್ರಶ್ನೋತ್ತರ


ಭೂಸುಧಾರಣೆ

ಗ್ರೂಪ್ 'ಸಿ' ವೃಂದದ ತಾಂತ್ರಿಕೇತರ ಹುದ್ದೆಗಳಾದ ಲೇಬರ್ ಇನ್‌ಸ್ಪೆಕ್ಟರ್, ಹಾಸ್ಟೆಲ್ ವಾರ್ಡನ್, ಸಾಂಖ್ಯಿಕ ನಿರೀಕ್ಷರು, ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು, ಕರವಸೂಲಿಗಾರರು ಈ ಮೊದಲಾದ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ಭೂ ಸುಧಾರಣೆ ಕುರಿತಾದ ಬಹುಆಯ್ಕೆ ಮಾದರಿ ಪ್ರಶ್ನೆಗಳನ್ನು ಇಲ್ಲಿ ನೀಡಲಾಗಿದೆ.

1. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಸ್ವಾಮಿ ಸಹಜಾನಂದ ಅವರ ಅಧ್ಯಕ್ಷತೆಯಲ್ಲಿ ಆಲ್ ಇಂಡಿಯಾ ಕಿಸಾನ್ ಸಭಾದ ಸಭೆಯು 1936ರ ಏಪ್ರಿಲ್ 11ರಂದು ಉತ್ತರಪ್ರದೇಶದ ಲಖನೌನಲ್ಲಿ ಸಮಾವೇಶಗೊಂಡು ಜಮೀನುದಾರಿ ಪದ್ಧತಿಯ ನಿರ್ಮೂಲನೆಗೆ ಕರೆಕೊಟ್ಟರು.
2. 1928ರಲ್ಲಿ ಅಖಿಲ ಭಾರತ ಕಾಂಗ್ರೆಸ್‌ನ ಫೈಜಾಬಾದ್ ಅಧಿವೇಶನವು ಗೇಣಿ ಕಡಿಮೆ ಮಾಡುವ ಮತ್ತು ಫ್ಯೂಡಲಿಸಮ್ ಅನ್ನು ಸಂಪೂರ್ಣವಾಗಿ ತೆಗೆದುಹಾಕುವ ಕುರಿತು ನಿರ್ಣಯವನ್ನು ತೆಗೆದುಕೊಂಡಿತು.
3. ಯೋಜನಾ ಆಯೋಗವೂ ಸಹ ಬ್ರಿಟಿಷರ ಆಡಳಿತದ ಕಾಲದಲ್ಲಿದ್ದ ದೋಷಪೂರಿತ ಭೂ ಹಿಡುವಳಿಯ ಸುಧಾರಣೆಯನ್ನು ತರಲು ತಮ್ಮ ಸಲಹಾ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿತ್ತು.
4. ಜೆ.ಸಿ. ಕುಮಾರಪ್ಪ ಅವರ ನೇತೃತ್ವದಲ್ಲಿ ನೇಮಕವಾದ ಕಾಂಗ್ರೆಸ್ ಅಗ್ರಿಗೇರಿಯನ್ ಕಮಿಟಿಯು ಭೂ ಸುಧಾರಣೆ ಜಾರಿಗೆ ತರಬೇಕಾದರೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಚಿಂತನ ಮಂಥನಗಳಿದ್ದ ವರದಿಯನ್ನು 1949ರ ಜುಲೈನಲ್ಲಿ ನೀಡಿತು.
5. 1950ರ ದಶಕದಲ್ಲಿ ಭೂ ಸುಧಾರಣೆ ತರುವುದಕ್ಕೆ ಕೇರಳ ಮತ್ತು ಪಶ್ಚಿಮ ಬಂಗಾಳದಂತಹ ರಾಜ್ಯಗಳು ವಿರೋಧಿಸಿದವು. ಕಾರಣ ಅಲ್ಲಿ ಕಾಂಗ್ರೆಸೇತರ ಪಕ್ಷಗಳ ಆಡಳಿತವಿತ್ತು.

ಉತ್ತರ ಸಂಕೇತಗಳು
ಎ) 1, 2 ,3 ಮಾತ್ರ ತಪ್ಪಾಗಿದೆ, ಉಳಿದವು ಸರಿ.
ಬಿ) 1, 2, 3 ಮತ್ತು 4 ಮಾತ್ರ ಸರಿಯಾಗಿವೆ
ಸಿ) 2 ಮತ್ತು 4 ತಪ್ಪು. 1 ಮತ್ತು 3 ಸರಿ.
ಡಿ) 1 ರಿಂದ 5ರ ತನಕ ಎಲ್ಲವೂ ಸರಿಯಾಗಿವೆ
ಉತ್ತರ: ಬಿ

2. ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಶಾಂತಿ ಮಾರ್ಗದ ಮೂಲಕ ಭೂಸುಧಾರಣೆಗೆ ಪ್ರಯತ್ನ ಮಾಡಲಾಯಿತು, ಆಚಾರ್ಯ ವಿನೋಬಾ ಭಾವೆಯವರ ನೇತೃತ್ವದಲ್ಲಿ ಈ ಕಾರ್ಯ ನಡೆಯಿತು. ಜಯಪ್ರಕಾಶ ನಾರಾಯಣ ಅವರಂತಹ ನಾಯಕರು ಇದಕ್ಕೆ ಬೆಂಬಲಿಸಿದರು.



ವಿನೋಬಾ ಭಾವೆ

2. ಭಾರತದಲ್ಲಿರುವ 300 ಮಿಲಿಯನ್ ಎಕರೆ ಕೃಷಿ ಭೂಮಿಯಲ್ಲಿ 50 ಮಿಲಿಯನ್ ಎಕರೆಯನ್ನು ದಾನವಾಗಿ ಪಡೆದು ಭೂಮಿ ಇಲ್ಲದ ಬಡವರಿಗೆ ಹಂಚುವುದು ಭೂದಾನ ಆಂದೋಲನ ಉದ್ದೇಶವಾಗಿತ್ತು.
3. ಭೂದಾನ ಆಂದೋಲನದ ಮೂಲಕ 4 ಮಿಲಿಯನ್ ಹೆಕ್ಟೇರ್ ಭೂಮಿಯನ್ನು ಬಡವರಿಗೆ ಮರು ಹಂಚಿಕೆ ಮಾಡಲಾಯಿತು. ಬಿಹಾರ ರಾಜ್ಯದಲ್ಲಿ ಚಳವಳಿ ದೊಡ್ಡ ಪ್ರಮಾಣದಲ್ಲಿ ಯಶಸ್ಸನ್ನು ಪಡೆಯಿತು.
4. ನಮ್ಮ ಕರ್ನಾಟಕದವರೇ ಆದ ಮೀರಾಬಾಯಿ ಕೊಪ್ಪಿಕರ್ ಅವರು ಭೂದಾನ ಚಳವಳಿಯಲ್ಲಿ ಭಾಗವಹಿಸಿದ್ದರು. ಕರ್ನಾಟಕದಲ್ಲಿ 40 ಸಾವಿರ ಎಕರೆ ಭೂಮಿಯನ್ನು ಭೂದಾನದ ಮೂಲಕ ನಿರ್ಗತಿಕರಿಗೆ ನೀಡಲು ಸಹಕರಿಸಿದ್ದರು.

ಉತ್ತರ ಸಂಕೇತಗಳು
ಎ) 1 ರಿಂದ 4ರ ತನಕ ಎಲ್ಲಾ ಹೇಳಿಕೆಗಳು ಸರಿಯಾಗಿವೆ.
ಬಿ) 1, 2 ಮತ್ತು 3 ಮಾತ್ರ ಸರಿಯಾಗಿವೆ.
ಸಿ) 1 ಮತ್ತು 3 ಹೇಳಿಕೆ ಮಾತ್ರ ಸರಿಯಾಗಿವೆ.
ಡಿ) 2, 3 ಮತ್ತು 4 ಹೇಳಿಕೆ ಮಾತ್ರ ಸರಿಯಾಗಿವೆ.
ಉತ್ತರ: ಎ

3. ಕೃಷಿ ಚಟುವಟಿಕೆಯಲ್ಲಿ ತೊಡಗಿದ ರೈತರು ತೆರಿಗೆಯಾಗಿ ಗೇಣಿಯನ್ನು ಮಧ್ಯವರ್ತಿ ನೀಡುವುದನ್ನು ನಿಷೇಧಿಸುವ ಕೆಲಸ ಮಾಡಿದ ಮೊದಲ ರಾಜ್ಯಗಳಲ್ಲಿ ಉತ್ತರ ಪ್ರದೇಶ ಒಂದು, ಉತ್ತರ ಪ್ರದೇಶ ಜಮೀನುದಾರಿ ಅಬಾಲಿಷನ್ ಕಮಿಟಿ ನೇತೃತ್ವವನ್ನು ಈ ಕೆಳಗಿನ ಯಾರು ವಹಿಸಿಕೊಂಡಿದ್ದರು?
ಎ) ಕೈಲಾಷ್ ಜೋಷಿ ಬಿ) ಜಿ. ಬಿ. ಪಂತ್
ಸಿ) ಸರೋಜನಿ ನಾಯ್ಡು ಡಿ) ಸುಚೇತಾ ಕೃಪಲಾನಿ
ಉತ್ತರ: ಬಿ

4. ಬಿಹಾರದಲ್ಲಿ ಜಮೀನುದಾರಿ ಪದ್ಧತಿಯನ್ನು ರದ್ದುಪಡಿಸುವ ಕಾರ್ಯಕ್ಕೆ ಸರ್ಕಾರ ಕೈಹಾಕಿದಾಗ, ಜಮೀನುದಾರರು ಸರ್ಕಾರದ ವಿರುದ್ಧ ಕೋರ್ಟ್ ಮೆಟ್ಟಿಲೇರಿದರು. ಪಟ್ನಾ ಹೈಕೋರ್ಟ್ ಜಮೀನುದಾರರ ಪರವಾಗಿ ತೀರ್ಪು ನೀಡಿದ ಪರಿಣಾಮ ಭಾರತದ ಸಂವಿಧಾನಕ್ಕೆ ತಿದ್ದುಪಡಿ ತರಲಾಯಿತು. ಹಾಗೆ ತಂದ ತಿದ್ದುಪಡಿಗಳನ್ನು ಗುರುತಿಸಿ



1. 1951ರಲ್ಲಿ ತರಲಾದ ಭಾರತದ ಸಂವಿಧಾನದ ಮೊದಲ ತಿದ್ದುಪಡಿ
2. 1955ರಲ್ಲಿ ತರಲಾದ ಭಾರತದ ಸಂವಿಧಾನದ 4ನೇ ತಿದ್ದುಪಡಿ
3. 1953ರಲ್ಲಿ ತರಲಾದ ಭಾರತದ ಸಂವಿಧಾನದ 2ನೇ ತಿದ್ದುಪಡಿ
4. 1956ರಲ್ಲಿ ತರಲಾದ ಭಾರತದ ಸಂವಿಧಾನದ 6ನೇ ತಿದ್ದುಪಡಿ

ಉತ್ತರ ಸಂಕೇತಗಳು
ಎ) 1 ಮತ್ತು 3 ಹೇಳಿಕೆ ಮಾತ್ರ ಸರಿಯಾಗಿವೆ
ಬಿ) 1 ಮತ್ತು 2 ಮಾತ್ರ ಸರಿಯಾಗಿವೆ
ಸಿ) 1 ಮತ್ತು 4 ಹೇಳಿಕೆ ಮಾತ್ರ ಸರಿಯಾಗಿವೆ
ಡಿ) 1, 2, 3 ಮತ್ತು 4 ಹೇಳಿಕೆ ಮಾತ್ರ ಸರಿಯಾಗಿವೆ
ಉತ್ತರ: ಬಿ

5. ಆಪರೇಷನ್ ಬರ್ಗಾ ಯಾವ ರಾಜ್ಯದಲ್ಲಿ ಜಾರಿಗೆ ತರಲಾಯಿತು?
ಎ) ಬಿಹಾರ ಬಿ) ಜಮ್ಮು ಕಾಶ್ಮೀರ
ಸಿ) ಪಶ್ಚಿಮ ಬಂಗಾಳ ಡಿ) ತಮಿಳುನಾಡು
ಉತ್ತರ: ಸಿ (ವಿವರಣೆ: 1978ರಲ್ಲಿ ಪಶ್ಚಿಮ ಬಂಗಾಳದಲ್ಲಿ ಆಪರೇಷನ್ ಬರ್ಗಾ ಎಂಬುದನ್ನು ಜಾರಿಗೆ ತರಲಾಗಿತ್ತು. ಇಲ್ಲಿ ಹಳ್ಳಿಗಳಿಗೆ ಅಧಿಕಾರಿಗಳು ಭೇಟಿ ನೀಡಿ ಗೇಣಿದಾರನನ್ನು ಗುರುತಿಸಿ ಭೂಮಿಯ ಮಾಲಿಕತ್ವದ ಹಕ್ಕನ್ನು ಆತನಿಗೆ ನೀಡುವ ಕಾರ್ಯ ಮಾಡಲಾಗಿತ್ತು. ಹೀಗಾಗಿ ಟೆನೆನ್ಸಿ ರೀಫಾರ್ಮ್ ಅನ್ನು ಪಶ್ಚಿಮ ಬಂಗಾಳದಲ್ಲಿ ಚೆನ್ನಾಗಿ ಜಾರಿಗೆ ತರಲು ಸಾಧ್ಯವಾಯಿತು.)

6. ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. 1953ರಲ್ಲಿ ಆಗ್ರಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶದಲ್ಲಿ ರಾಜ್ಯ ಸರ್ಕಾರಗಳಿಗೆ ತಕ್ಷಣದಲ್ಲಿ ಭೂ ದಾಖಲೆಗಳನ್ನು ಸಂಗ್ರಹಿಸಿ ಗರಿಷ್ಠ ಭೂಮಿತಿಯನ್ನು ಹೇರಿ ಹೆಚ್ಚುವರಿ ಭೂಮಿಯನ್ನು ಬಡವರಿಗೆ ಹಂಚಲು ತಿಳಿಸಿತು.
2. 1959ರ ಜನವರಿಯಲ್ಲಿ ನಾಗಪುರದಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭೂಹಿಡುವಳಿಯ ಮೇಲೆ ಮಿತಿ ಹೇರುವ ಬಗ್ಗೆ ನಿರ್ಣಯವನ್ನು ತೆಗೆದುಕೊಂಡ ಪರಿಣಾಮ ಬಹುತೇಕ ಎಲ್ಲಾ ರಾಜ್ಯ ಸರ್ಕಾರಗಳು ಭೂಹಿಡುವಳಿಯ ಮೇಲೆ ಮಿತಿ ಹೇರುವ ಶಾಸನವನ್ನು ರಚಿಸಿದವು.
3. 1974ರ ಆಗಸ್ಟ್‌ನಲ್ಲಿ ಭಾರತದ ಸಂವಿಧಾನಕ್ಕೆ 34ನೇ ತಿದ್ದುಪಡಿ ತಂದು ಲ್ಯಾಂಡ್ ಸೀಲಿಂಗ್ ಕಾನೂನುಗಳನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸದಂತೆ ತಡೆಯಲು 9ನೇ ಶೆಡ್ಯೂಲಿಗೆ ಸೇರಿಸಲಾಯಿತು.
4. ನೀರಾವರಿ ಭೂಮಿಯಾಗಿದ್ದು ವರ್ಷದಲ್ಲಿ 2 ಬೆಳೆ ಬೆಳೆಯುವಂತಹ ಭೂಮಿಯಾಗಿದ್ದರೆ ವೈಯಕ್ತಿಕವಾಗಿ ಗರಿಷ್ಠ 10 ರಿಂದ 18 ಎಕರೆ ಭೂ ಮಾಲಿಕತ್ವ ಪಡೆಯಬಹುದು, ಒಣಭೂಮಿಯಾಗಿದ್ದು ವರ್ಷಕ್ಕೆ ಒಂದೇ ಬೆಳೆಯನ್ನು ಬೆಳೆಯುವ ಸಾಮರ್ಥ್ಯವಿದ್ದರೆ ಒಬ್ಬ ವ್ಯಕ್ತಿ ಗರಿಷ್ಠ 27 ಎಕರೆ ಭೂಮಿಯ ಮಾಲಿಕತ್ವ ಹೊಂದಬಹುದು ಎಂಬ ಮಿತಿಯನ್ನು ಹಾಕಲಾಯಿತು

ಉತ್ತರ ಸಂಕೇತಗಳು
ಎ) 1, 2 ಮತ್ತು 3 ಹೇಳಿಕೆ ಮಾತ್ರ ಸರಿಯಾಗಿವೆ
ಬಿ) 2, 3 ಮತ್ತು 4 ಮಾತ್ರ ಸರಿಯಾಗಿವೆ
ಸಿ) 1, 3 ಮತ್ತು 4 ಹೇಳಿಕೆ ಮಾತ್ರ ಸರಿಯಾಗಿವೆ
ಡಿ) 1, 2, 3 ಮತ್ತು 4 ಹೇಳಿಕೆ ಮಾತ್ರ ಸರಿಯಾಗಿವೆ
ಉತ್ತರ: ಡಿ

7. ಗರಿಷ್ಠ ಭೂಮಿತಿಯನ್ನು ಹೇರಿ ಶಾಸನವನ್ನು ದೇಶದಾದ್ಯಂತ ಮಿತಿಯನ್ನು ಹೇರಲಾಗಿದ್ದರೂ ಕೆಲವು ಸಂದರ್ಭದಲ್ಲಿ ಅವುಗಳಿಗೆ ಅಪವಾದವೂ ಇತ್ತು. ಅಂದರೆ ಗರಿಷ್ಠ ಭೂಮಿತಿಯಿಂದ ಹೊರಕ್ಕೆ ಇಡಲಾಗಿತ್ತು. ಅವು ಯಾವುವು ಗುರುತಿಸಿ?
ಎ) ಟೀ/ಕಾಫಿ/ ರಬ್ಬರ್ ಪ್ಲಾಂಟೇಷನ್‌ಗೆ ಸೇರಿದ ಭೂಮಿ
ಬಿ) ದೊಡ್ಡ ಕುಟುಂಬಗಳು ಹೊಂದಬಹುದಾದ ಭೂಮಿ
ಸಿ) ಮಂತ್ರಿಗಳು ಹಾಗೂ ಅಧಿಕಾರಿ ವರ್ಗ ಹೊಂದಬಹುದಾದ ಭೂಮಿ
ಡಿ) ಮೇಲಿನ ಯಾವುದೂ ಅಲ್ಲ
ಉತ್ತರ: ಎ



8. ಭೂ ಸುಧಾರಣೆಯ ಭಾಗವಾಗಿ ಭೂಮಿಯ ಕ್ರೋಢೀಕರಣಕ್ಕೆ ಸಂಬಂಧಿಸಿದ ಶಾಸನವನ್ನು ಕಡ್ಡಾಯ ಮಾಡಿ ಜಾರಿಗೊಳಿಸಿದ ರಾಜ್ಯ ಯಾವುದು?
ಎ) ಜಮ್ಮು ಮತ್ತು ಕಾಶ್ಮೀರ ಬಿ) ಅಸ್ಸಾಂ
ಸಿ) ಪಂಜಾಬ್ ಡಿ) ಕರ್ನಾಟಕ
ಉತ್ತರ: ಸಿ

9.ಭೂದಾನ ಆಂದೋಲನವು ಮೊಟ್ಟ ಮೊದಲು ಈ ಕೆಳಗಿನ ಯಾವ ಸ್ಥಳದಲ್ಲಿ (1951ರ ಏಪ್ರಿಲ್ 18ರಂದು) ಆರಂಭವಾಯಿತು?
ಎ) ಕರ್ನಾಟಕದ ಕಣಗಿನಹಾಳ
ಬಿ) ಬಿಹಾರದ ಕಟೋರಿಯಾ
ಸಿ) ತೆಲಂಗಾಣದ ಪಂಚಪಲ್ಲಿ
ಡಿ) ಉತ್ತರ ಪ್ರದೇಶದ ಉರುವಾ
ಉತ್ತರ: ಸಿ

ಕರ್ನಾಟಕ ಆರ್ಥಿಕತೆ

1. ಕರ್ನಾಟಕದ ಎಕಾನಾಮಿಕ್ ಸರ್ವೇಯಲ್ಲಿ ದಾಖಲಾದ ಅಂಶಗಳನ್ನು ಆಧರಿಸಿದ ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಕೋವಿಡ್-19ರ ಕಾರಣಕ್ಕಾಗಿ ನಮ್ಮ ರಾಜ್ಯದಲ್ಲಿ ಪ್ರಗತಿ ಕುಂಠಿತವಾಗಿತ್ತು ಆದರೂ 2020-21ರಲ್ಲಿ ಕೃಷಿ ಕ್ಷೇತ್ರವು ಶೇ 6.4ರಷ್ಟು ಬೆಳವಣಿಗೆ ದಾಖಲಿಸಿತ್ತು. ಆದರೆ ಕೈಗಾರಿಕಾ ಕ್ಷೇತ್ರವು ಶೇ (-) 5.1 ಮತ್ತು ಸೇವಾ ಕ್ಷೇತ್ರವು ಶೇ (-) 3.1 ದಾಖಲಿಸಿತು. ಅಂದರೆ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳು ಋಣಾತ್ಮಕ ಅಭಿವೃದ್ಧಿ ದರವನ್ನು ದಾಖಲಿಸಿದ್ದವು.
2. ಕರ್ನಾಟಕದಲ್ಲಿ 2020-21ರಲ್ಲಿ ತಲಾ ವರಮಾನ (ಪರ್ ಕ್ಯಾಪಿಟಾ ಇನ್‌ಕಮ್) ₹2 ಲಕ್ಷ 26 ಸಾವಿರ ಇದೆ. 2019-20ಕ್ಕೆ ಹೋಲಿಸಿದರೆ (₹2 ಲಕ್ಷ 23 ಸಾವಿರ ಇತ್ತು) ತುಸು ಹೆಚ್ಚಾಗಿದೆ.
3. ಕರ್ನಾಟಕದಲ್ಲಿ 2020-21ರಲ್ಲಿ ಸುಮಾರು 1863 ಯೋಜನೆಗಳು (ಸ್ಕೀಮ್ಸ್) ಜಾರಿಗೆ ತರಲಾಗಿತ್ತು ಅದಕ್ಕಾಗಿ ₹2,09,561 ಕೋಟಿ ಮೀಸಲಾಗಿರಿಸಲಾಗಿತ್ತು. ಅವುಗಳಲ್ಲಿ ₹10 ಕೋಟಿಗೂ ಅಧಿಕ ಹಣ ಮೀಸಲಾಗಿಟ್ಟ 1 ಸಾವಿರಕ್ಕೂ ಹೆಚ್ಚು ಯೋಜನೆಗಳಿದ್ದವು.
4. ನೀತಿ ಆಯೋಗ ಪ್ರಕಟಿಸಿದ 'ಇನೋವೇಷನ್ ಇಂಡೆಕ್ಸ್ -2020' ಪ್ರಕಾರ ಕರ್ನಾಟಕವು ಮೊದಲ ಸ್ಥಾನದಲ್ಲಿದ್ದು, ಭಾರತದ ಒಟ್ಟು ಏರೋಸ್ಪೇಸ್ ರಫ್ತಿನಲ್ಲಿ ಶೇ. 65ರಷ್ಟು ಭಾಗ ಕರ್ನಾಟಕದಿಂದಲೇ ಉತ್ಪತ್ತಿಯಾಗುತ್ತಿರುವುದು ವಿಶೇಷ.

ಮೇಲಿನ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಉತ್ತರ ಸಂಕೇತಗಳು
ಎ) 1, 3 ಮತ್ತು 4 ಮಾತ್ರ ಸರಿಯಾಗಿವೆ
ಬಿ) 2, 3 ಮತ್ತು 4 ಮಾತ್ರ ಸರಿಯಾಗಿದೆ
ಸಿ) 1 ಮತ್ತು 4 ತಪ್ಪು. 2 ಮತ್ತು 3 ಸರಿ.
ಡಿ) 1ರಿಂದ 4ರ ತನಕ ಎಲ್ಲವೂ ಸರಿಯಾಗಿವೆ.
ಉತ್ತರ: ಡಿ

2. ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಕರ್ನಾಟಕವು ಭಾರತದಲ್ಲಿ ಅತಿದೊಡ್ಡ ಎಲೆಕ್ಟ್ರಾನಿಕ್ ಚಿಪ್ ಡಿಸೈನಿಂಗ್ ಹಬ್ ಆಗಿದೆ.
2. ಭಾರತದಲ್ಲಿ ಶೇ. 50ರಷ್ಟು ಮಷಿನ್ ಟೂಲ್‌ಗಳು ಕರ್ನಾಟಕದಲ್ಲಿಯೇ ಉತ್ಪತ್ತಿಯಾಗುತ್ತವೆ.
3. ಭಾರತದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಕರ್ನಾಟಕವು 5ನೇ ಸ್ಥಾನವನ್ನು ಹೊಂದಿದ ರಾಜ್ಯವಾಗಿದೆ.
4. 2007-08 ರಿಂದ 2020-21ರ ಅವಧಿಯಲ್ಲಿ ನಮ್ಮ ರಾಜ್ಯವು 38410 ಮಿಲಿಯನ್ ಅಮೆರಿಕನ್ ಡಾಲರ್‌ನಷ್ಟು ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸಿದೆ.

ಮೇಲಿನ ಹೇಳಿಕೆಗಳನ್ನು ಗಮನಿಸಿ, ಯಾವೆಲ್ಲಾ ಹೇಳಿಕೆಗಳು ತಪ್ಪಾಗಿವೆ ಎಂಬುದನ್ನು ಗುರುತಿಸಿ
ಉತ್ತರ ಸಂಕೇತಗಳು
ಎ) 1 ರಿಂದ 4 ಎಲ್ಲವೂ ತಪ್ಪಾಗಿವೆ
ಬಿ) 1, 3 ಮತ್ತು 4 ಮಾತ್ರ ತಪ್ಪಾಗಿವೆ
ಸಿ) 2 ಮತ್ತು 4 ತಪ್ಪು. 1 ಮತ್ತು 3 ಸರಿ.
ಡಿ) 1ರಿಂದ 4ರ ತನಕ ಯಾವ ಹೇಳಿಕೆಯೂ ತಪ್ಪಾಗಿಲ್ಲ.
ಉತ್ತರ: ಡಿ

3. ಕರ್ನಾಟಕದಲ್ಲಿ 5.5 ಸಾವಿರಕ್ಕೂ ಹೆಚ್ಚು ಮಾಹಿತಿ ತಂತ್ರಜ್ಞಾನ ಕಂಪನಿಗಳು (ಐಟಿ ಕಂಪನಿಗಳು) ಕಾರ್ಯನಿರ್ವಹಿಸುತ್ತಿದ್ದು. 31 ಲಕ್ಷ ಜನರಿಗೆ ಉದ್ಯೋಗವನ್ನು ನೀಡುತ್ತಿವೆ. ಹಾಗಾದರೆ ಇವು ರಾಜ್ಯದ ಜಿಡಿಪಿಗೆ ಎಷ್ಟು ಕೊಡುಗೆಯನ್ನು ನೀಡುತ್ತಿವೆ?
ಎ) ಶೇ. 30 ಬಿ) ಶೇ. 22
ಸಿ) ಶೇ. 18 ಡಿ) ಶೇ.12
ಉತ್ತರ: ಬಿ

4. ಕರ್ನಾಟಕ 2015-20ರ ಸ್ಟಾರ್ಟ್ ಅಪ್ ಪಾಲಿಸಿ ಜಾರಿಗೆ ತಂದಿತು, ರಾಜ್ಯ ಸರ್ಕಾರವು 47.3 ಮಿಲಿಯನ್ ಅಮೆರಿಕನ್ ಡಾಲರ್ ಸ್ಟಾರ್ಟ್‌ಅಪ್ ಕಾರ್ಪಸ್ ಫಂಡ್‌ನಿಂದ ಈ ಕಾರ್ಯ ಆರಂಭಿಸಿತು. ಇಂದು ಕರ್ನಾಟಕ ಸ್ಟಾರ್ಟ್ ಅಪ್ ಸೆಲ್‌ನಿಂದ ಪ್ರಮಾಣಿತ ಒಟ್ಟು ಎಷ್ಟು ಸರ್ಟಿಫೈಡ್ ಸ್ಟಾರ್ಟ್ ಅಪ್‌ಗಳು ಕಾರ್ಯ ನಿರ್ವಹಿಸುತ್ತಿವೆ?
ಎ) 3500 ಬಿ)4500
ಸಿ) 1500 ಡಿ) 750
ಉತ್ತರ: ಸಿ

5. ನಮ್ಮ ಕರ್ನಾಟಕದಲ್ಲಿ 2020-21ರ ಸಾಲಿನಲ್ಲಿ ನವೆಂಬರ್-2020ರ ವರೆಗೆ ₹4874 ಕೋಟಿ ರೂಪಾಯಿಗಳು ಮನರೇಗಾ ಯೋಜನೆಗೆ ಲಭ್ಯವಿತ್ತು, ಅದರ ಪೈಕಿ ₹3978 ಕೋಟಿ ಖರ್ಚು ಮಾಡಿ ಗ್ರಾಮೀಣ ಭಾಗದಲ್ಲಿ 100 ದಿನಗಳ ಕೆಲಸ ನೀಡುವ ಕಾರ್ಯ ಮಾಡಲಾಯಿತು. ಹಾಗಾದರೆ ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ಕೆಲಸಗಳನ್ನು ಈ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು?
ಎ) 3.49 ಲಕ್ಷ ಬಿ) 1.49 ಲಕ್ಷ
ಸಿ) 6.49 ಲಕ್ಷ ಡಿ) 2.49 ಲಕ್ಷ
ಉತ್ತರ: ಡಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 76

1041. ಸಿಐಎಸ್‌ಎಫ್ ವಿಸ್ತಾರ ರೂಪ ಯಾವುದು?
ಎ) ಸೆಂಟ್ರಲ್ ಇಂಡಸ್ಟ್ರಿಯಲ್ ಸರೆಂಡರ್ ಫೋರ್ಸ್
ಬಿ) ಸೆಂಟ್ರಲ್ ಇಂಟೆಲಿಜೆನ್ಸ್ ಸೆಕ್ಯುರಿಟಿ ಫೋರ್ಸ್
ಸಿ) ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್
ಡಿ) ಸೆಂಟ್ರಲ್ ಇಮಿಗ್ರೇಷನ್ ಸೆಕ್ಯುರಿಟಿ ಫೋರ್ಸ್

1042. ಪ್ರತಿಷ್ಠಿತ 'ಬೂಕರ್' ಬಹುಮಾನವು ಇದಕ್ಕಾಗಿ ನೀಡಲ್ಪಡುತ್ತದೆ.
ಎ) ಭೌತಶಾಸ್ತ್ರ ಬಿ) ಔಷಧ
ಸಿ) ಕ್ರೀಡೆ ಡಿ) ಸಾಹಿತ್ಯ

1043. ಭಾರತೀಯ ಸಶಸ್ತ್ರ ಪಡೆಗಳು ಇದನ್ನು ಹೊಂದಿಲ್ಲ.
ಎ) ಭಾರತೀಯ ಸೈನ್ಯ
ಬಿ) ಭಾರತೀಯ ಆಕಾಶಪಡೆ
ಡಿ) ಭಾರತೀಯ ನೌಕಾದಳ
ಡಿ) ಭಾರತೀಯ ವಾಯುಪಡೆ

1044. 6 ಕಿ.ಮೀ ನಡೆದ ನಂತರ ನಾನು ಬಲಕ್ಕೆ ತಿರುಗಿದೆ ಮತ್ತು 2 ಕಿ.ಮೀ ದೂರ ಪ್ರಯಾಣಿಸಿದೆ. ಮತ್ತೆ ಎಡಕ್ಕೆತಿರುಗಿ 10 ಕಿ.ಮೀ ದೂರ ಕ್ರಮಿಸಿದೆ ಕೊನೆಯಲ್ಲಿ ನಾನು ಉತ್ತರದತ್ತ ಚಲಿಸುತ್ತಲಿದ್ದೆ ನಾನು ಯಾವ ದಿಕ್ಕಿನಿಂದ ಪ್ರಯಾಣ ಪ್ರಾರಂಭಿಸಿದೆ?
ಎ) ಉತ್ತರ ಬಿ) ದಕ್ಷಿಣ
ಸಿ) ನೈರುತ್ಯ ಡಿ) ಈಶಾನ್ಯ

1045. 'ಎ' ಯು 'ಬಿ' ಯ ಪತಿಯಾಗಿರುತ್ತಾನೆ. 'ಇ' ಯು 'ಸಿ' ಯ ಮಗಳಾಗಿರುತ್ತಾಳೆ. 'ಎ' ಯು 'ಸಿ' ಯ ತಂದೆ ಆಗಿರುತ್ತಾನೆ. 'ಬಿ' ಯು 'ಇ' ಗೆ ಹೇಗೆ ಸಂಬಂಧಿಯಾಗಿರುತ್ತಾಳೆ?
ಎ) ತಾಯಿ ಬಿ) ಅಜ್ಜಿ
ಸಿ) ಸೋದರತ್ತೆ
ಡಿ) ಸೋದರಸಂಬಂಧಿ

1046. ನೀವು 1ರಿಂದ 100 ರವರೆಗಿನ ಎಲ್ಲಾ ಸಂಖ್ಯೆಗಳನ್ನು ಬರೆಯುತ್ತೀರಿ ಎಂದಾದರೆ, ನೀವು '3' ಸಂಖ್ಯೆಯನ್ನು ಎಷ್ಟುಬಾರಿ ಬರೆಯುತ್ತೀರಿ?
ಎ) 18 ಬಿ) 19
ಸಿ) 20 ಡಿ) 21

1047. ಶೂನ್ಯವೇಳೆ ಇವರ ವಿವೇಚನೆಯಲ್ಲಿರುತ್ತದೆ.
ಎ) ಪ್ರಧಾನಮಂತ್ರಿ
ಬಿ) ರಾಷ್ಟ್ರಾಧ್ಯಕ್ಷರು
ಸಿ) ಸದನದ ಸದಸ್ಯರು
ಡಿ) ಸಭಾಧ್ಯಕ್ಷರು

1048. ಕ್ರಿಮಿಕೀಟಗಳನ್ನು ಭಕ್ಷಿಸುವ ಸಸ್ಯ
ಎ) ಕಸ್ಕುಟ್
ಬಿ) ಚೈನಾ ರೋಸ್
ಸಿ) ಪಿರ್ ಸಸ್ಯ (ಹೂಜಿಗಿಡ)
ಡಿ) ಗುಲಾಬಿ

1049. ಕೆಳಗಿನವುಗಳಲ್ಲಿ ಯಾವುದು ಉಣ್ಣೆಯನ್ನು ನೀಡುವುದಿಲ್ಲ?
ಎ) ಯಾಕ್
ಬಿ) ಒಂಟೆ
ಸಿ) ಆಡು
ಡಿ) ಮೋಲಿ ನಾಯಿ

1050. ದುಗ್ಧಾಮ್ಲ ಇದರಲ್ಲಿ ಕಂಡುಬರುತ್ತದೆ.
ಎ) ಅಕ್ಕಿ ಬಿ) ಚಹಾ
ಸಿ) ಮೊಸರು ಡಿ) ಕಾಫಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 75ರ ಉತ್ತರಗಳು: 1026. ಡಿ, 1027. ಎ, 1028. ಎ, 1029. ಎ, 1030. ಡಿ, 1031. ಎ, 1032. ಡಿ, 1033. ಡಿ, 1034. ಸಿ, 1035. ಡಿ, 1036. ಡಿ, 1037. ಎ, 1038. ಡಿ, 1039. ಎ, 1040. ಡಿ

ಪ್ರಜಾವಾಣಿ ಉದ್ಯೋಗ ವಾರ್ತೆ

ರೈಲ್ವೆಯಲ್ಲಿ 4103 ಅಪ್ರೆಂಟಿಸ್ ಹುದ್ದೆಗಳು

ಸೌಥ್ ಸೆಂಟ್ರಲ್ ರೈಲ್ವೆ ವಿಭಾಗದಲ್ಲಿ ಖಾಲಿ ಇರುವ 4103 ಟ್ರೇಡ್ ಅಪ್ರೆಂಟಿಸ್‌ಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಇದು ನೇರ ನೇಮಕಾತಿಯಾಗಿರುತ್ತದೆ.
ಹುದ್ದೆಗಳ ವಿವರ: ಫಿಟ್ಟರ್, ಟರ್ನರ್, ಎಲೆಕ್ಟ್ರಿಷಿಯನ್, ಮೆಕ್ಯಾನಿಸ್ಟ್, ಪ್ಲಂಬರ್, ಪೇಂಟರ್.
ಒಟ್ಟು ಹುದ್ದೆಗಳ ಸಂಖ್ಯೆ: 4103
ವಿದ್ಯಾರ್ಹತೆ: ಹುದ್ದೆಗಳಿಗೆ ಅನುಗುಣವಾಗಿ ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಐಟಿಐ ವಿದ್ಯಾರ್ಹತೆಯನ್ನು ಮುಗಿಸಿರಬೇಕು.
ತರಬೇತಿ ಭತ್ಯೆ: ಭಾರತ ಸರ್ಕಾರದ ನಿಯಮಗಳ ಅನ್ವಯ ತರಬೇತಿ ಭತ್ಯೆ ನೀಡಲಾಗುವುದು.
ವಯೋಮಿತಿ ಸಡಿಲಿಕೆ: ಅಕ್ಟೋಬರ್ 2021ಕ್ಕೆ ಅನ್ವಯವಾಗುವಂತೆ ಕನಿಷ್ಠ 15, ಗರಿಷ್ಠ 24 ವರ್ಷದವರಾಗಿರಬೇಕು. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.
ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಒಬಿಸಿ ಅಭ್ಯರ್ಥಿಗಳಿಗೆ ₹100. ಎಸ್‌ಸಿ/ ಎಸ್‌ಟಿ, ಅಂಗವಿಕಲ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ.
ನೇಮಕಾತಿ ವಿಧಾನ: ಎಸ್ಸೆಸ್ಸೆಲ್ಸಿ ಹಾಗೂ ಐಟಿಐನಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಲಿಸ್ಟ್ ತಯಾರಿಸಿ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.
ಅರ್ಜಿ ಸಲ್ಲಿಸುವ ವಿಧಾನ: ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಅಧಿಕೃತ ವೆಬ್‌ಸೈಟ್ https://scr.indianrailways.gov.in ಗೆ ಲಾಗಿನ್ ಆಗಿ ಅರ್ಜಿ ಸಲ್ಲಿಸುವ ಮಾಹಿತಿಯನ್ನು ಪಡೆಯಬಹುದು. ಇತರೆ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
ಅರ್ಜಿ ಸಲ್ಲಿಸಲು ಕೊನೆಯ ದಿನ: 03, ನವೆಂಬರ್ 2021
ವೆಬ್‌ಸೈಟ್: https://scr.indianrailways.gov.in

ಎಎಐನಲ್ಲಿ ಅಪ್ರೆಂಟಿಸ್ ಹುದ್ದೆಗಳು

ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ(ಎಎಐ) ಅಪ್ರೆಂಟಿಸ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
ಹುದ್ದೆ: ಅಪ್ರೆಂಟಿಸ್ **ಹುದ್ದೆಗಳ ಸಂಖ್ಯೆ:** 90
ಸ್ಥಳ: ಭಾರತದೆಲ್ಲೆಡೆ
ವಿದ್ಯಾರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ, ಡಿಪ್ಲೊಮಾ ಮುಗಿಸಿರಬೇಕು. ಕೆಲವು ಹುದ್ದೆಗಳಿಗೆ ಐಟಿಐ ಟ್ರೇಡ್ ಪ್ರಮಾಣ ಪತ್ರ ಕಡ್ಡಾಯವಾಗಿದೆ.
ವಯೋಮಿತಿ: ಅಭ್ಯರ್ಥಿಗಳಿಗೆ ಸೆಪ್ಟೆಂಬರ್ 30, 2021ಕ್ಕೆ ಅನ್ವಯವಾಗುವಂತೆ 26 ವರ್ಷ ಮೀರಿರಬಾರದು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷ ಹಾಗೂ ಮಾಜಿ ಯೋಧರಿಗೆ 5 ವರ್ಷ ವಯೋಮಿತಿ ಸಡಿಲಿಕೆ ಇದೆ.
ನೇಮಕಾತಿ ಪ್ರಕ್ರಿಯೆ: ಲಿಖಿತ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ.
ಅರ್ಜಿ ಶುಲ್ಕ: ಯಾವುದೇ ಅರ್ಜಿ ಶುಲ್ಕವಿಲ್ಲ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಅಕ್ಟೋಬರ್ 31, 2021
ಹೆಚ್ಚಿನ ಮಾಹಿತಿಗೆ: https://www.aai.aero/en

ಭೂಕಂಪನ: ಗಡಿಕೇಶ್ವಾರಕ್ಕೆ ತಜ್ಞರ ತಂಡ ಭೇಟಿ • ನವೆಂಬರ್‌ನಲ್ಲಿ ರಾಷ್ಟ್ರಮಟ್ಟದ ವಿಜ್ಞಾನಿಗಳಿಂದ ಸ್ಥಳ ಪರಿಶೀಲನೆ

ಚಿಂಚೋಳಿ: ಕೊನೆಗೂ ಕಾಳಜಿ ಕೇಂದ್ರ ಆರಂಭ

ಪ್ರಜಾವಾಣಿ ವಾರ್ತೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಪದೇ ಪದೇ ಭೂಕಂಪನ ಸಂಭವಿಸುತ್ತಿರುವ ತಾಲ್ಲೂಕಿನ ಗಡಿಕೇಶ್ವಾರ ಗ್ರಾಮಕ್ಕೆ ಭೂವಿಜ್ಞಾನಿಗಳ ತಂಡ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಈ ಸಂದರ್ಭದಲ್ಲಿ ಗ್ರಾಮಸ್ಥರೊಂದಿಗೆ ಮಾತನಾಡಿದ ಕರ್ನಾಟಕ ರಾಜ್ಯ ನೈಸರ್ಗಿ ವಿಪತ್ತುಗಳ ಉಸ್ತುವಾರಿ ಕೇಂದ್ರದ ಭೂಕಂಪ ವಿಜ್ಞಾನಿ ಡಾ. ರಮೇಶ ದಿಕ್ಪಾಲ್, ಪದೇ ಪದೇ ಭೂಕಂಪ ಸಂಭವಿಸುತ್ತಿರುವುದರಿಂದ ಜನರು ಎಚ್ಚರಿಕೆಯಿಂದ ಇರಬೇಕು ಎಂದು ಸಲಹೆ ನೀಡಿದರು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಹ ನಿರ್ದೇಶಕ ಟಿ. ಮಹಾಂತೇಶ, ‘ನಾವು ಭೂಕಂಪದ ಕುರಿತು ಅಧ್ಯಯನ ನಡೆಸುತ್ತಿದ್ದೇವೆ. ಗಡಿಕೇಶ್ವಾರದಲ್ಲಿ ಭೂಕಂಪ ಸಂಭವಿಸುತ್ತಿರುವುದು ದೃಢಪಟ್ಟಿದೆ. ಇಲ್ಲಿ ಹೆಚ್ಚಿನ ಅಧ್ಯಯನದ ಅಗತ್ಯವಿದ್ದು ನವೆಂಬರ್ 8, 9ರಂದು ರಾಷ್ಟ್ರಮಟ್ಟದ ಹಿರಿಯ ವಿಜ್ಞಾನಿಗಳು ಸ್ಥಳ ಪರಿಶೀಲನೆ ನಡೆಸಲಿದ್ದಾರೆ’ ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಂಗಳವಾರ ರಾತ್ರಿ ಗ್ರಾಮಕ್ಕೆ ಭೇಟಿ ನೀಡಿದ್ದರು. ಅಲ್ಲಿಯವರೆಗೆ ಜಿಲ್ಲಾಧಿಕಾರಿ ಗ್ರಾಮಕ್ಕೆ ಭೇಟಿ ನೀಡಿಲ್ಲ ಎಂದು ತರಾಟೆಗೆ ತೆಗೆದುಕೊಂಡಿದ್ದರಲ್ಲದೇ, ಗ್ರಾಮಸ್ಥರ ವಾಸ್ತವ್ಯಕ್ಕಾಗಿ ಶೆಡ್ ನಿರ್ಮಿಸುವಂತೆ ಒತ್ತಾಯಿಸಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ ಅವರ ಸೂಚನೆ ಮೇರೆಗೆ ಜಿಲ್ಲಾ ಆಡಳಿತ, ಗಡಿಕೇಶ್ವಾರದಲ್ಲಿ ತಾತ್ಕಾಲಿಕ ಶಾಮಿಯಾನ ಹಾಕಿ ಜನರಿಗೆ ರಾತ್ರಿ ಮಲಗಲು ವ್ಯವಸ್ಥೆ ಮಾಡಿದೆ. ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ.

‘ತಾಲ್ಲೂಕಿನ ಕಪನೂರ ಗ್ರಾಮದಲ್ಲಿಯೂ ಕಾಳಜಿ ಕೇಂದ್ರ ತೆರೆಯಲಾಗುವುದು. ಜತೆಗೆ ಬಯಲಿನಲ್ಲಿ ದೊಡ್ಡ ಪ್ರಮಾಣದ ಶೆಡ್ ನಿರ್ಮಿಸಲು ಸ್ಥಳ ಪರಿಶೀಲನೆ ನಡೆಯುತ್ತಿದೆ’ ಎಂದು ತಹಶೀಲ್ದಾರ್ ಅಂಜುಂ ತಬಸ್ಸುಮ್ ತಿಳಿಸಿದರು.


ಆರಂಭವಾಗದ ಸರ್ವೆ: ಮಂಗಳವಾರ ಗ್ರಾಮಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ ಅವರು ಗ್ರಾಮದಲ್ಲಿ ವಾಸ ಯೋಗ್ಯ ಮನೆಗಳ ಪತ್ತೆಗೆ ಲೋಕೋಪಯೋಗಿ ಎಂಜಿನಿಯರ್‌ಗಳಿಂದ ಸರ್ವೆ ಮಾಡಿಸಿ ಮನೆಗಳ ಸದೃಢತೆ ಖಚಿತ ಪಡಿಸಿಕೊಳ್ಳಲಾಗುವುದು ಎಂದಿದ್ದರು. ಆದರೆ ಬುಧವಾರ ಯಾವುದೇ ಸರ್ವೆ ನಡೆಯಲಿಲ್ಲ.



ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕು ಗಡಿಕೇಶ್ವಾರದಲ್ಲಿ ಸಂಭವಿಸಿದ ಭೂಕಂಪದ ಕೇಂದ್ರಬಿಂದುವನ್ನು ರಾಜ್ಯ ನೈಸರ್ಗಿಕ ವಿಪತ್ತುಗಳ ಉಸ್ತುವಾರಿ ಕೇಂದ್ರದ ಭೂಕಂಪ ವಿಜ್ಞಾನಿ ಡಾ. ರಮೇಶ ದಿಕ್ಪಾಲ್, ಬಳ್ಳಾರಿಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಹ ನಿರ್ದೇಶಕ ಮಹಾಂತೇಶ ಟಿ. ಪರಿಶೀಲಿಸಿದರು. ತಹಶೀಲ್ದಾರ್ ಅಂಜುಂ ತಬಸ್ಸುಮ್, ಉಮೇಶ ಬಿರಾದಾರ, ಅಣವೀರಪ್ಪ ಬಿರಾದಾರ ಇದ್ದರು

ಅಂತಿಮ ಒಪ್ಪಿಗೆ ಸಿಕ್ಕ ಕೂಡಲೇ ಮಕ್ಕಳಿಗೆ ಲಸಿಕೆ: ಬೊಮ್ಮಾಯಿ

ಉಡುಪಿ: ‘ಕೇಂದ್ರ ಸರ್ಕಾರದ ಸಕ್ಷಮ ಪ್ರಾಧಿಕಾರದಿಂದ ಅಂತಿಮ ಒಪ್ಪಿಗೆ ಸಿಕ್ಕ ಬಳಿಕ, 2 ವರ್ಷದಿಂದ 18 ವರ್ಷ ವಯಸ್ಸಿನೊಳಗಿನವರಿಗೆ ಲಸಿಕೆ ಹಾಕಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಬೊಮ್ಮಾಯಿ

ಬುಧವಾರ ಕಾಪುವಿನ ಅದಮಾರಿನಲ್ಲಿ ಮಾತನಾಡಿದ ಅವರು, ‘ಮಕ್ಕಳ ಸುರಕ್ಷತೆಗೆ ಸರ್ಕಾರ ಅಗತ್ಯ ಕ್ರಮ ತೆಗೆದುಕೊಂಡಿದೆ’ ಎಂದು ತಿಳಿಸಿದರು.

ರಾಜ್ಯದ ಗಡಿ ಭಾಗಗಳಲ್ಲಿ ಕೋವಿಡ್ ನಿರ್ಬಂಧಗಳನ್ನು ಸಡಿಲಗೊಳಿಸುವ ವಿಚಾರವಾಗಿ ದಸರಾ ಮುಗಿದ ಕೂಡಲೇ ತಜ್ಞರ ಸಮಿತಿಯ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಇರುವ ಕೋವಿಡ್ ಪರಿಸ್ಥಿತಿ ಬಗ್ಗೆ ತಜ್ಞರು ಮೌಲ್ಯಮಾಪನ ಮಾಡುತ್ತಿದ್ದಾರೆ. ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವ ಸಂಬಂಧವೂ ತಜ್ಞರ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗುವುದು. ಕೋವಿಡ್ ಸಂದರ್ಭದಲ್ಲಿ ಸಾರ್ವಜನಿಕರ ಮೇಲೆ ದಾಖಲಿಸಿರುವ ಪ್ರಕರಣಗಳ ವಿಚಾರವಾಗಿ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುವುದು ಎಂದು ಹೇಳಿದರು.

ಮಹಾಮಳೆಗೆ ವಾಲಿದ್ದ ಮೂರು ಅಂತಸ್ತಿನ ಕಟ್ಟಡ • ಸುರಕ್ಷಿತವಾಗಿ ನೆಲಸಮ ಮಾಡಿದ ಬಿಬಿಎಂಪಿ ಅಧಿಕಾರಿಗಳು

ಕಮಲಾನಗರ: ಎರಡು ಕಟ್ಟಡ ನೆಲಸಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಮಳೆಯ ಅಬ್ಬರಕ್ಕೆ ನಗರದ ಕಮಲಾನಗರದಲ್ಲಿ ಕುಸಿದಿದ್ದ ಮೂರು ಅಂತಸ್ತಿನ ಕಟ್ಟಡ ಮತ್ತು ಅದಕ್ಕೆ ಹೊಂದಿಕೊಂಡಿದ್ದ ಎರಡು ಅಂತಸ್ತಿನ ಕಟ್ಟಡವನ್ನೂ ಬಿಬಿಎಂಪಿ ಅಧಿಕಾರಿಗಳು ಬುಧವಾರ ನೆಲಸಮ ಮಾಡಿದ್ದಾರೆ. ಕಟ್ಟಡ ಬಿದ್ದಿದ್ದರಿಂದ ಕೆಳಗಿದ್ದ ಶೆಡ್ ರೂಪದ ಮನೆಗಳು ಅಪ್ಪಚ್ಚಿಯಾದವು.

ಅಬ್ಬರದಿಂದ ಸುರಿಯುತ್ತಿರುವ ಮಳೆಗೆ ನಗರದಲ್ಲಿ ಕಟ್ಟಡಗಳು ಸಾಲು ಸಾಲಾಗಿ ಕುಸಿಯುತ್ತಿದ್ದು, ಅವುಗಳ ಸಾಲಿಗೆ ಕಮಲಾನಗರದ ಎರಡು ಕಟ್ಟಡಗಳೂ ಬುಧವಾರ ಸೇರಿಕೊಂಡವು.

ಇಲ್ಲಿನ ಶಂಕರನಾಗ್ ಬಸ್ ನಿಲ್ದಾಣದ ಬಳಿ 15 ವರ್ಷಗಳ ಹಿಂದೆ 15X40 ಅಳತೆಯಲ್ಲಿ ನಿರ್ಮಿಸಿದ್ದ ಮೂರು ಅಂತಸ್ತಿನ ಕಟ್ಟಡ ಮಂಗಳವಾರ ರಾತ್ರಿ ಬಿರುಕು ಬಿಟ್ಟಿತ್ತು. ಶಬ್ದ ಕೇಳಿದ ಕೂಡಲೇ ಮನೆಗಳಿಂದ ನಿವಾಸಿಗಳೆಲ್ಲರೂ ಹೊರಕ್ಕೆ ಬಂದಿದ್ದರು. ಬುಧವಾರ ಬೆಳಿಗ್ಗೆ ಬಿಬಿಎಂಪಿ ಅಧಿಕಾರಿಗಳು ಈ ಕಟ್ಟಡವನ್ನು ಸುರಕ್ಷಿತವಾಗಿ ನೆಲಸಮ ಮಾಡಿದರು.

ಈ ಕಟ್ಟಡದಲ್ಲಿ ಒಟ್ಟು ಆರು ಮನೆಗಳಿದ್ದವು. ನಾಲ್ಕು ಮನೆಗಳಲ್ಲಿ ಭೋಗ್ಯಕ್ಕೆ (ಲೀಸ್‌ಗೆ) ಮತ್ತು ಎರಡು ಮನೆಗಳನ್ನು ಬಾಡಿಗೆಗೆ ನೀಡಲಾಗಿತ್ತು. ಈ ಮನೆಗಳಲ್ಲಿ 15ಕ್ಕೂ ಹೆಚ್ಚು ಜನ ವಾಸವಿದ್ದರು. ರಾತ್ರಿ 10 ಗಂಟೆ ಸುಮಾರಿಗೆ ನೆಲಮಹಡಿ ಕುಸಿದಿದ್ದರಿಂದ ಜೋರಾಗಿ ಶಬ್ದವಾಗಿದೆ. ಕೂಡಲೇ ಕಟ್ಟಡದಿಂದ ನಿವಾಸಿಗಳೆಲ್ಲರೂ ಹೊರಗೆ ಬಂದಿದ್ದಾರೆ.

ಸುದ್ದಿ ತಿಳಿದ ಕೂಡಲೇ ಬಿಬಿಎಂಪಿ, ಅಗ್ನಿಶಾಮಕ, ರಾಷ್ಟ್ರೀಯ ವಿಪತ್ತು ನಿರ್ವಹಣೆ (ಎನ್‌ಡಿಆರ್‌ಎಫ್) ಮತ್ತು ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದರು. ನಿವಾಸಿಗಳನ್ನು ಸಮೀಪದ ಸರ್ಕಾರಿ ಶಾಲೆ ಮತ್ತು ಸಂಬಂಧಿಕರ ಮನೆಗಳಿಗೆ ಸ್ಥಳಾಂತರ ಮಾಡಲಾಯಿತು.

ಕಟ್ಟಡದ ಒಳಕ್ಕೆ ಮತ್ತೆ ಯಾರನ್ನೂ ಬಿಡದೆ ಬುಧವಾರ ಬೆಳಿಗ್ಗೆ 9ರ ಸುಮಾರಿಗೆ ಕಟ್ಟಡ ನೆಲಸಮ ಕಾರ್ಯಾಚರಣೆ ಆರಂಭಿಸಿದರು. ಕಟ್ಟಡ ಬೀಳುವಾಗ ಹಾನಿಯಾಗುವ ಸಂಭವ ಇದ್ದುದರಿಂದ ಅಕ್ಕಪಕ್ಕದ 10ಕ್ಕೂ ಹೆಚ್ಚು ಮನೆಗಳಿಂದ ನಿವಾಸಿಗಳನ್ನು ಖಾಲಿ ಮಾಡಿಸಲಾಗಿತ್ತು. ಮಧ್ಯಾಹ್ನ 12 ಗಂಟೆ ವೇಳೆಗೆ ಮೂರು ಅಂತಸ್ತಿನ ಕಟ್ಟಡ ಸುರಕ್ಷಿತವಾಗಿ ನೆಲಸಮವಾಯಿತು. ವಾಲಿದ್ದ ಕಟ್ಟಡ ಬೀಳುವ ಜಾಗದಲ್ಲೇ ಇದ್ದ ಶೆಡ್ ರೀತಿಯ ಮೂರು ಮನೆಗಳಲ್ಲಿನ ನಿವಾಸಿಗಳನ್ನು ಮನೆಯಿಂದ ಖಾಲಿ ಮಾಡಿಸಲಾಗಿತ್ತು. ಕಟ್ಟಡ ಬಿದ್ದ ರಭಸಕ್ಕೆ ಆ ಮನೆಗಳೂ ಅವಶೇಷವಾದವು.

ಮೂರು ಅಂತಸ್ತಿನ ಕಟ್ಟಡಕ್ಕೆ ಹೊಂದಿಕೊಂಡಂತೆಯೇ ಇದ್ದ ಎರಡು ಅಂತಸ್ತಿನ ಮತ್ತೊಂದು ಕಟ್ಟಡ ಕೂಡ ಸಾಕಷ್ಟು ಹಾನಿಯಾಗಿತ್ತು. ಕುಸಿಯುವ ಆತಂಕ ಇತ್ತು. ಸ್ಥಳದಲ್ಲೇ ನಿರ್ಧಾರ ಕೈಗೊಂಡ ಬಿಬಿಎಂಪಿ ಅಧಿಕಾರಿಗಳು ಅದನ್ನೂ ನೆಲಸಮ ಮಾಡಿದರು.

'ನಾವು ಹುಟ್ಟಿ ಬೆಳೆದ ಮನೆಯನ್ನು ನಮ್ಮದಲ್ಲದ ತಪ್ಪಿಗೆ ನೆಲಸಮ ಮಾಡಲಾಗಿದೆ. ಮನೆ ಕಳೆದುಕೊಂಡು ಎಲ್ಲಿಗೆ ಹೋಗಬೇಕು' ಎಂದು ಮನೆಯ ಮಾಲೀಕ ರಮೇಶ್ ಆಕ್ರೋಶ ವ್ಯಕ್ತಪಡಿಸಿದರು. ಆ ಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳು ಅವಕಾಶ ಮಾಡಿಕೊಟ್ಟರು.




ನಗರದಲ್ಲಿ ಮಂಗಳವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ಕಮಲಾನಗರದ ಶಂಕರ್‌ನಾಗ್ ಬಸ್ ನಿಲ್ದಾಣದ ಹಿಂಭಾಗ ಕುಸಿಯುವ ಹಂತದಲ್ಲಿದ್ದ ಮೂರು ಮಹಡಿಯ ಕಟ್ಟಡವನ್ನು ಬಿಬಿಎಂಪಿ ಸಿಬ್ಬಂದಿ ಬುಧವಾರ ನೆಲಸಮಗೊಳಿಸಿದರು. –ಪ್ರಜಾವಾಣಿ ಚಿತ್ರಗಳು/ ರಂಜು ಪಿ.

ನಗರ್ತಪೇಟೆ: ಕುಸಿದ ಗೋಡೆ

ನಗರ್ತಪೇಟೆಯಲ್ಲಿ ಹಳೆಯ ಹೆಂಚಿನ ಮನೆಯೊಂದರ ಗೋಡೆ ಕುಸಿದು ಬಿದ್ದಿದ್ದು, ಮನೆಯಲ್ಲಿ ಯಾರೂ ಇಲ್ಲದ ಕಾರಣ ಯಾವುದೇ ಅನಾಹುತ ಸಂಭವಿಸಿಲ್ಲ.

ಧರ್ಮರಾಯಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿ ಸುಮಾರು 90 ವರ್ಷ ಹಳೆಯದಾದ ಈ ಮನೆಯ ಒಂದು ಕಡೆಯ ಗೋಡೆ ಕುಸಿದಿದೆ. 6 ವರ್ಷದಿಂದ ಮನೆಯಲ್ಲಿ ಯಾರೂ ವಾಸ ಇರಲಿಲ್ಲ. ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಕುಸಿಯುವ ಹಂತದಲ್ಲಿರುವ 185 ಮನೆಗಳ ಸರ್ವೆಯನ್ನು ಎರಡು ವರ್ಷಗಳ ಹಿಂದೆಯೇ ಮಾಡಲಾಗಿದೆ. 10 ಕಟ್ಟಡ ನೆಲಸಮ ಮಾಡಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ನೆರವಿಗೆ ಬದ್ಧ: ಗೋಪಾಲಯ್ಯ

'ಮನೆಯಲ್ಲಿದ್ದ ಎಲ್ಲ ವಸ್ತುಗಳನ್ನು ಕಳೆದುಕೊಂಡು ಬರಿಗೈ ಆಗಿರುವ ನಿವಾಸಿಗಳ ನೆರವಿಗೆ ಸರ್ಕಾರ ನಿಲ್ಲಲಿದೆ. ವೈಯಕ್ತಿಕವಾಗಿ ನಾನು ಸಹಾಯ ಮಾಡುತ್ತೇನೆ' ಎಂದು ಸಚಿವ ಕೆ. ಗೋಪಾಲಯ್ಯ ತಿಳಿಸಿದರು. ಕಟ್ಟಡ ಅಪಾಯದಲ್ಲಿರುವ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಎರಡು ಬಾರಿ ನೋಟಿಸ್ ನೀಡಿದ್ದರು. ಭೋಗ್ಯ ಮತ್ತು ಬಾಡಿಗೆಗೆ ಇದ್ದ ನಿವಾಸಿಗಳಿಗೆ ಮುಂಗಡ ಮೊತ್ತವನ್ನು ಮಾಲೀಕರು ವಾಪಸ್ ನೀಡಿದ್ದರೆ ಅವರೆಲ್ಲರೂ ಖಾಲಿ ಮಾಡುತ್ತಿದ್ದರು ಎಂದರು.

'ಮಾಲೀಕರು ನಿರ್ಲಕ್ಷ್ಯ ವಹಿಸಿದ್ದರಿಂದ ಈ ರೀತಿ ಆಗಿದೆ. ಅವರ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು. ಬಾಡಿಗೆದಾರರ ನೆರವಿಗೆ ಸರ್ಕಾರ ಬದ್ಧ' ಎಂದರು.

ಮಗಳ ಮದುವೆಯ ಚಿನ್ನ ಮಣ್ಣುಪಾಲು

ಈ ಕಟ್ಟದಲ್ಲಿ ವಾಸವಿದ್ದ ನಿವಾಸಿಯೊಬ್ಬರು ಮಗಳ ಮದುವೆಗೆಂದು ಮಾಡಿಸಿಟ್ಟಿದ್ದ ₹6 ಲಕ್ಷ ಮೌಲ್ಯದ ಚಿನ್ನದ ಆಭರಣಗಳು ಕಟ್ಟಡದೊಂದಿಗೆ ಮಣ್ಣುಪಾಲಾಗಿವೆ.

ನಿಶ್ಚಯವಾಗಿದ್ದ ಮದುವೆಯನ್ನು ದೀಪಾವಳಿ ಬಳಿಕ ನೆರವೇರಿಸಲು ನಿರ್ಧರಿಸಲಾಗಿತ್ತು. ಕಟ್ಟಡ ಕುಸಿದ ಅನುಭವ ಆದ ಕೂಡಲೇ ಹೊರಗೆ ಓಡಿ ಬಂದೆವು. ಮನೆಯೊಳಗೆ ಪ್ರವೇಶ ಮಾಡಲು ಅಧಿಕಾರಿಗಳು ಬಿಡಲಿಲ್ಲ ಎಂದು ಅವರು ಕಣ್ಣೀರಿಟ್ಟರು.

'ಒಂದು ನೆಕ್ಲೇಸ್, ಎರಡು ಉಂಗುರ, ಸರ, ಕೊರಳ ಹಾರ ಮನೆಯ ಕಪಾಟಿನಲ್ಲಿ ಇಟ್ಟಿದ್ದೆವು. ಅಂಗಲಾಚಿದರೂ ಒಳಗೆ ಹೋಗಲು ಪೊಲೀಸರು ಅವಕಾಶ ನೀಡಲಿಲ್ಲ.' ಎಂದು ಅತ್ತರು.

ಕಟ್ಟಡ ನೆಲಸಮ ಆದ ಬಳಿಕವೂ ಆ ಸ್ಥಳಕ್ಕೆ ಪೊಲೀಸರು ಯಾರನ್ನೂ ಬಿಟ್ಟಿಲ್ಲ. ಬಿದ್ದಿರುವ ಕಟ್ಟಡದಲ್ಲಿ ವಸ್ತುಗಳನ್ನು ಎತ್ತಿಕೊಳ್ಳಲು ಹೋದಾಗ ಗೋಡೆ ಅಥವಾ ಇನ್ನಿತರ ವಸ್ತುಗಳು ಬಿದ್ದು ಅಪಾಯವಾಗುವ ಸಾಧ್ಯತೆ ಇರುವ ಕಾರಣ ಪೂರ್ತಿ ನೆಲಸಮ ಆಗುವ ತನಕ ಯಾರಿಗೂ ಅವಕಾಶ ನೀಡುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದರು.

ಎರಡು ನೋಟಿಸ್ ನೀಡಿದ್ದ ಬಿಬಿಎಂಪಿ

ಶಿಥಿಲಗೊಂಡಿದ್ದ ಕಟ್ಟಡಗಳ ಸಮೀಕ್ಷೆಯನ್ನು ಬಿಬಿಎಂಪಿ ಅಧಿಕಾರಿಗಳು 2019ರಲ್ಲೇ ನಡೆಸಿದ್ದರು. ಆ ಪಟ್ಟಿಯಲ್ಲಿದ್ದ ಮೂರು ಅಂತಸ್ತಿನ ಕಟ್ಟಡಕ್ಕೂ ಎರಡು ಬಾರಿ ನೋಟಿಸ್ ನೀಡಲಾಗಿತ್ತು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ. ಕಟ್ಟಡ ಮಾಲೀಕರು ಬ್ಯಾಂಕ್ ಸಾಲ ಮಾಡಿದ್ದರಿಂದ 'ಈ ಕಟ್ಟಡ ಸಿಂಡಿಕೇಟ್ ಬ್ಯಾಂಕ್ ಶೇಷಾದ್ರಿಪುರಕ್ಕೆ ಸೇರಿದ ಆಸ್ತಿ' ಎಂದು ಕಟ್ಟಡದ ಮೇಲೆ ಬರೆಯಲಾಗಿತ್ತು.

'ಮನೆ ಮಾರಾಟಕ್ಕಿಟ್ಟಿದ್ದೆ'

'ಮನೆಯನ್ನು 2016ರಲ್ಲಿ ₹39 ಲಕ್ಷಕ್ಕೆ ಖರೀದಿ ಮಾಡಿದ್ದೆ. ಬ್ಯಾಂಕ್‌ನಿಂದ ₹26 ಲಕ್ಷ ಸಾಲ ಪಡೆದಿದ್ದೆ. ಮನೆ ಮಾರಾಟಕ್ಕೆ ಇಟ್ಟಿದ್ದೆ. ಅಷ್ಟರಲ್ಲಿ ಹೀಗಾಗಿದೆ' ಎಂದು ಮನೆಯ ಮಾಲೀಕರಾದ ರಾಜೇಶ್ವರಿ ಹೇಳಿದರು.

'ಮನೆ ಖರೀದಿಸಿದ ಬಳಿಕ ಅದರ ಮೇಲೆ ಒಂದು ಅಂತಸ್ತು ನಿರ್ಮಿಸಿದ್ದೆ. ನಾಲ್ಕು ಮನೆಗಳನ್ನು ಭೋಗ್ಯಕ್ಕೆ ಮತ್ತು ಎರಡು ಮನೆಯನ್ನು ಬಾಡಿಗೆಗೆ ನೀಡಿದ್ದೆ. ಮನೆ ಮಾರಾಟ ಮಾಡಿ ಎಲ್ಲರಿಗೂ ಹಣ ವಾಪಸ್ ಕೊಡಲು ನಿರ್ಧರಿಸಿದ್ದೆ' ಎಂದು ರಾಜೇಶ್ವರಿ ಕಣ್ಣೀರಿಟ್ಟರು.



ಮನೆ ಕಳೆದುಕೊಂಡು ಕಣ್ಣೀರಿಡುತ್ತಿರುವ ಮಹಿಳೆಯರು

ಉಟ್ಟಬಟ್ಟೆಯಲ್ಲೇ ಬೀದಿ ಪಾಲಾದರು

ರಾತ್ರಿ ಕಟ್ಟಡ ಕುಸಿಯುವ ಶಬ್ದ ಕೇಳುತ್ತಿದ್ದಂತೆ ಉಟ್ಟ ಬಟ್ಟೆಯಲ್ಲೇ ಮನೆಯಿಂದ ಹೊರಗೆ ಓಡಿ ಬಂದಿದ್ದ ಮೂರು ಅಂತಸ್ತಿನ ಕಟ್ಟಡದ ಆರು ಮನೆಗಳ ನಿವಾಸಿಗಳು ಅಕ್ಷರಶಃ ಬೀದಿಪಾಲಾಗಿದ್ದಾರೆ.

ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಳ್ಳುವುದಾಗಿ ಗೋಗರೆದರೂ ಮನೆಯ ಒಳಗೆ ಹೋಗಲು ಪೊಲೀಸರು ಅವಕಾಶ ನೀಡಲಿಲ್ಲ. ಅಪಾಯ ಕಡಿಮೆ ಇದ್ದ ಮೂರು ಮನೆಗಳಿಗೆ ಹೋಗಿ ಬೆಲೆಬಾಳುವ ವಸ್ತು ಮತ್ತು ಕಾಗದ ಪತ್ರಗಳನ್ನು ತೆಗೆದುಕೊಳ್ಳಲು ಮೂರು ನಿಮಿಷ ಅವಕಾಶ ನೀಡಲಾಗಿತ್ತು. ಉಳಿದ ಮನೆಗಳಲ್ಲಿ ಅಪಾಯ ಜಾಸ್ತಿ ಇದ್ದುದರಿಂದ ಅವಕಾಶ ನೀಡಲಿಲ್ಲ. ಆ ಮನೆಗಳ ನಿವಾಸಿಗಳು ಕಣ್ಣೀರಿಟ್ಟು ಪೊಲೀಸರ ಬಳಿ ಬೇಡಿಕೊಳ್ಳುತ್ತಿದ್ದ ದೃಶ್ಯ ಮನ ಕಲಕುವಂತಿತ್ತು. 'ಕೂಲಿ ಕೆಲಸ ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದೆವು. ಒಮ್ಮೆಲೇ ಬರಿಗೈ ಆಗಿದ್ದೇವೆ. ಕೊನೆಯದಾಗಿ ಒಂದು ತೊಟ್ಟು ವಿಷ ಕೊಟ್ಟುಬಿಡಿ' ಎಂದು ಮಹಿಳೆಯೊಬ್ಬರು ಗೋಳಾಡಿದರು.

4 ಸಾವಿರ ಹುದ್ದೆಗಳ ಭರ್ತಿ: ಆರಗ

ಪ್ರಜಾವಾಣಿ ವಾರ್ತೆ

ಯಲಹಂಕ: ಕಳೆದ ನಾಲ್ಕೈದು ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಖಾಲಿಯಿದ್ದ 33 ಸಾವಿರ ಹುದ್ದೆಗಳ ಪೈಕಿ 17 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಈ ವರ್ಷ ಇನ್ನೂ 4 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ ಎಂದು ಗೃಹಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಸಶಸ್ತ್ರ ಪೊಲೀಸ್ ತರಬೇತಿ ಶಾಲೆಯಲ್ಲಿ 7ನೇ ತಂಡದ ನಾಗರಿಕ, 33ನೇ ತಂಡದ ಸಶಸ್ತ್ರ ಹಾಗೂ 3ನೇ ತಂಡದ ಕೆಎಸ್‌ಐಎಸ್‌ಎಫ್ ಪೊಲೀಸ್ ಕಾನ್‌ಸ್ಟೆಬಲ್‌ಗಳು ಸೇರಿದಂತೆ ಒಟ್ಟು 309 ಪ್ರಶಿಕ್ಷಣಾರ್ಥಿಗಳಿಗಾಗಿ ಆಯೋಜಿಸಿದ್ದ ನಿರ್ಗಮನ ಪಥಸಂಚಲನ ಕಾರ್ಯಕ್ರಮ ಹಾಗೂ ನವೀಕರಣಗೊಂಡ ನೂತನ ಸಭಾಂಗಣದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.



ಆರಗ ಜ್ಞಾನೇಂದ್ರ ಅವರು, ತರಬೇತಿ ಅವಧಿಯಲ್ಲಿ ಎಲ್ಲ ವಿಭಾಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಚಂದ್ರಶೇಖರ ಅವರಿಗೆ 'ಸರ್ವೋತ್ತಮ ಪ್ರಶಿಕ್ಷಣಾರ್ಥಿ' ಪ್ರಶಸ್ತಿ ವಿತರಿಸಿದರು. ಪ್ರವೀಣ್ ಸೂದ್, ಪಿ.ಹರಿಶೇಖರನ್ ಇದ್ದರು.

ಪೊಲೀಸರಿಗಾಗಿ ಈಗಾಗಲೆ 11 ಸಾವಿರ ವಸತಿಗೃಹಗಳನ್ನು ನಿರ್ಮಿಸಲಾಗಿದ್ದು, ಈಗ ಮತ್ತೆ 10 ಸಾವಿರ ವಸತಿಗೃಹಗಳನ್ನು ನಿರ್ಮಿಸಲಾಗುತ್ತಿದೆ. ಅಲ್ಲದೆ ಈ ವರ್ಷ ಹೊಸದಾಗಿ 100 ಪೊಲೀಸ್ ಠಾಣೆಗಳನ್ನು ನಿರ್ಮಿಸಲು ₹200 ಕೋಟಿ ಅನುದಾನ ಖರ್ಚು ಮಾಡಲಾಗುತ್ತಿದೆ ಎಂದರು.

ಪೊಲೀಸರ ಮೇಲೆ ಅಲ್ಲಲ್ಲಿ ಕೇಳಿಬರುತ್ತಿರುವ ಕೆಲವು ಆಪಾದನೆಗಳು ಮನಸ್ಸಿಗೆ ಅತ್ಯಂತ ನೋವುತಂದಿದೆ. ಸಾರ್ವಜನಿಕರನ್ನು ಹಣಕ್ಕಾಗಿ ಪೀಡಿಸಿ, ಹಿಂಸಿಸುವ ಮತ್ತು ರಿಯಲ್ ಎಸ್ಟೇಟ್ ದಂಧೆಯವರ ಜೊತೆ ಸೇರುವುದು ಮರ್ಯಾದೆ ತರುವಂತಹದ್ದಲ್ಲ. ಇಲಾಖೆಯ ಗೌರವ ಹೆಚ್ಚಿಸುವ ಕಾರ್ಯ ಮಾಡಬೇಕು ಎಂದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ತರಬೇತಿ) ಪಿ.ಹರಿಶೇಖರನ್, ಸಶಸ್ತ್ರ ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲ ಕೆ. ಆರ್. ಶಿವಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಆಕಸ್ಮಿಕ ಸಾವು: ಬೇಧಿಸಿದಾಗ ಕೊಲೆ ವಿಷಯ ಬಹಿರಂಗ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಗಾಣಿಗರ ಪಾಳ್ಯದ ಭೋವಿ ಕಾಲೊನಿಯಲ್ಲಿ ಇತ್ತೀಚೆಗೆ ಮಂಜುನಾಥ್ (32) ಎಂಬುವವರು ಮೃತರಾಗಿದ್ದರು. ಕೋಣನಕುಂಟೆ ಪೊಲೀಸರು ಆಕಸ್ಮಿಕ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಜೊತೆಗಾರರೇ ಮಂಜುನಾಥ್ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿರುವ ಮಾಹಿತಿ ಬಹಿರಂಗವಾಗಿದೆ.

'ಚಿಕ್ಕಮಗಳೂರಿನ ಮಂಜುನಾಥ್, ನಗರದಲ್ಲಿ ಮರ ಕಡಿಯುವ ಹಾಗೂ ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸುವ ಕೆಲಸ ಮಾಡುತ್ತಿದ್ದರು. ಆರೋಪಿಗಳಾದ ಆಕಾಶ್ ಮತ್ತು ಅನಿಲ್ ಕುಮಾರ್ ಕೂಡ ಅವರ ಜೊತೆಗೇ ಕೆಲಸಕ್ಕೆ ಹೋಗುತ್ತಿದ್ದರು. ಇವರೆಲ್ಲಾ ಇದೇ 3ರಂದು ಕೋಣನಕುಂಟೆಯ ಬೀರಣ್ಣ ಎಂಬುವರಿಗೆ ಸೇರಿದ ಖಾಲಿ ನಿವೇಶನದಲ್ಲಿ ಬೆಳೆದಿದ್ದ ಮರಗಳನ್ನು ಕತ್ತರಿಸಿ ನಿವೇಶನ ಸ್ವಚ್ಛಗೊಳಿಸಿದ್ದರು. ಇದಕ್ಕಾಗಿ ಬೀರಣ್ಣ, ಮಂಜುನಾಥ್‌ಗೆ ₹1,200 ಮೊತ್ತ ನೀಡಿದ್ದರು. ಈ ಹಣವನ್ನು ಮೂವರೂ ಸಮನಾಗಿ ಹಂಚಿಕೊಳ್ಳುವಂತೆ ಸೂಚಿಸಿದ್ದರು. ಆದರೆ, ಮಂಜುನಾಥ್ ಅದನ್ನು ಆಕಾಶ್ ಮತ್ತು ಅನಿಲ್‌ಗೆ ನೀಡಿರಲಿಲ್ಲ. ಈ ವಿಚಾರವಾಗಿ ಮೂವರ ನಡುವೆ ಜಗಳ ನಡೆದಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'ಇದೇ 4ರಂದು ಇವರೆಲ್ಲಾ ಖೋಡೆಸ್ ಸಿಲ್ವರ್ ಟ್ರೀ ಫಾರ್ಮ್ ಬಳಿ ಸೇರಿದ್ದರು. ಆಗ ಬಸಲಿಂಗಪ್ಪ ಎಂಬುವರೂ ಇವರ ಜೊತೆಗಿದ್ದರು. ಈ ವೇಳೆ ಆರೋಪಿಗಳು ಬಸಲಿಂಗಪ್ಪ ಕೈಗೆ ₹200 ಮೊತ್ತ ನೀಡಿ ಮದ್ಯ ತರುವಂತೆ ಕಳುಹಿಸಿದ್ದರು. ಬಳಿಕ ಎಲ್ಲರೂ ಒಂದೆಡೆ ಕೂತು ಮದ್ಯ ಸೇವಿಸಿದ್ದರು. ರಾತ್ರಿ 1 ಗಂಟೆಯಲ್ಲಿ ಆಕಾಶ್ ಮತ್ತು ಅನಿಲ್, ಮಂಜುನಾಥ್ ಜೊತೆ ವಾಗ್ವಾದ ನಡೆಸಿದ್ದರು. ಸಿಟ್ಟಿಗೆದ್ದು ಸೌದೆಯಿಂದ ಮಂಜುನಾಥ್ ಮೇಲೆ ಹಲ್ಲೆ ನಡೆಸಿದ್ದರು. ಮಂಜುನಾಥ್ ಅವರ ಎಡಗೈಯಿಂದ ರಕ್ತ ಸೋರುತ್ತಿರುವುದನ್ನು ಗಮನಿಸಿದ್ದ ಆರೋಪಿಗಳು ಬ್ಯಾಂಡೇಜ್ ತಂದು ಕಟ್ಟಿದ್ದರು. ಬೆಳಗ್ಗಿನ ಜಾವ 3.15ರ ಸುಮಾರಿಗೆ ಮಂಜುನಾಥ್ ಅವರನ್ನು ಕೋಣನಕುಂಟೆ ಕ್ರಾಸ್ ಬಳಿ ಕರೆತಂದು ಬಿಎಂಟಿಸಿ ಬಸ್ ಹತ್ತಿಸಿದ್ದರು. ಟಿಕೆಟ್ ಖರೀದಿಸಲು 20 ರೂಪಾಯಿ ಕೊಟ್ಟು ಹೊರಟು ಹೋಗಿದ್ದರು' ಎಂದು ವಿವರಿಸಿದ್ದಾರೆ.

'ಇದೇ 4ರ ಬೆಳಿಗ್ಗೆ ಕನಕಪುರ ರಸ್ತೆಯಲ್ಲಿರುವ ಆಸ್ಪತ್ರೆಗೆ ದಾಖಲಾಗಿದ್ದ ಮಂಜುನಾಥ್, ಚಿಕಿತ್ಸೆಗೆ ಸ್ಪಂದಿಸದೇ ಸಂಜೆ ಮೃತಪಟ್ಟಿದ್ದರು. ಮಂಜುನಾಥ್ ಅವರ ಸಹೋದರ ನಾಗರಾಜು ಕೊಟ್ಟ ದೂರಿನ ಅನ್ವಯ ಆಕಸ್ಮಿಕ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಬಳಿಕ ಬಸಲಿಂಗಪ್ಪ ಅವರನ್ನು ಠಾಣೆಗೆ ಕರೆದು ವಿಚಾರಿಸಿದಾಗ ಅವರು ನಡೆದಿದ್ದನ್ನೆಲ್ಲಾ ವಿವರಿಸಿದ್ದರು' ಎಂದು ಮಾಹಿತಿ ನೀಡಿದರು.

ಕ್ಷುಲ್ಲಕ ಕಾರಣಕ್ಕೆ ಬೈಕ್ ಚಾಲಕನ ಮೇಲೆ ಗುಂಡಿನ ದಾಳಿ

ಬೆಂಗಳೂರು: ಔಡಿ ಕಾರಿನಲ್ಲಿದ್ದ ಅಪರಿಚಿತ ವ್ಯಕ್ತಿಯೊಬ್ಬ ಕ್ಷುಲ್ಲಕ ಕಾರಣಕ್ಕೆ ಬೈಕ್ ಸವಾರ ಅನಿಲ್ ಎಂಬಾತನ ಮೇಲೆ ಗುಂಡಿನ ದಾಳಿ ನಡೆಸಿ ಪರಾರಿಯಾಗಿದ್ದಾನೆ. ರಾಮಯ್ಯ ಆಸ್ಪತ್ರೆಯ ಹಿಂಬದಿಯ ಗೇಟ್ ಬಳಿ ಬುಧವಾರ ರಾತ್ರಿ ಘಟನೆ ನಡೆದಿದೆ. ಯಶವಂತಪುರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೈಕ್ ಹಾಗೂ ಔಡಿ ಕಾರಿನ ನಡುವೆ ಡಿಕ್ಕಿ ಸಂಭವಿಸಿತ್ತು. ಈ ವಿಚಾರವಾಗಿ ಸವಾರರ ನಡುವೆ ಮಾತಿನ ಚಕಮಕಿ ನಡೆದಿತ್ತು. ಈ ವೇಳೆ ಔಡಿ ಚಾಲಕ ತನ್ನ ಬಳಿ ಇದ್ದ ಪಿಸ್ತೂಲಿನಿಂದ ಅನಿಲ್ ಮೇಲೆ ಎರಡು ಸುತ್ತು ಗುಂಡು ಹಾರಿಸಿದ್ದಾನೆ. ಅದೃಷ್ಟವಶಾತ್ ಅನಿಲ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆರೋಪಿಯ ಪತ್ತೆ ಕಾರ್ಯ ಆರಂಭಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕ ಹ್ಯಾರಿಸ್ ಚಿಕ್ಕಪ್ಪನ ಬ್ಯಾಗ್‌ನಲ್ಲಿ ಜೀವಂತ ಗುಂಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಎ.ಹ್ಯಾರಿಸ್ ಅವರ ಚಿಕ್ಕಪ್ಪ ಉಮರ್ ಫಾರೂಕ್ ಹ್ಯಾರಿಸ್ ನಲಪಾಡ್ ಅವರ ಬ್ಯಾಗ್‌ನಲ್ಲಿ ಬಂದೂಕಿನ ಜೀವಂತ ಗುಂಡುಗಳು ಪತ್ತೆಯಾಗಿವೆ.

ಫಾರೂಕ್ ಅವರು ದುಬೈಗೆ ಹೋಗುವ ಸಲುವಾಗಿ ಮಂಗಳವಾರ ಬೆಳಿಗ್ಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಅವರ ಬಳಿ ಇದ್ದ ಕ್ಯಾಬಿನ್ ಲಗೇಜ್ ಪರಿಶೀಲನೆ ವೇಳೆ ಗುಂಡುಗಳು ಪತ್ತೆಯಾಗಿವೆ. ನಿಲ್ದಾಣದ ಸಿಬ್ಬಂದಿ ಈ ವಿಚಾರವನ್ನು ಸಿಐಎಸ್‌ಎಫ್ ಅಧಿಕಾರಿಗಳಿಗೆ ತಿಳಿಸಿದ್ದರು. ಅವರು ಫಾರೂಕ್ ಅವರನ್ನು ವಿಮಾನ ನಿಲ್ದಾಣದ ಪೊಲೀಸರಿಗೆ ಒಪ್ಪಿಸಿದ್ದರು.

'ಬಟ್ಟೆಗಳನ್ನು ಬ್ಯಾಗ್‌ಗೆ ತುಂಬುವ ವೇಳೆ ಆಕಸ್ಮಿಕವಾಗಿ ಗುಂಡುಗಳು ಸೇರಿಕೊಂಡಿವೆ ಎಂದು ಫಾರೂಕ್ ತಿಳಿಸಿದ್ದಾರೆ. ತಮ್ಮ ಬಳಿ ಬಂದೂಕಿನ ಪರವಾನಗಿ ಇರುವ ವಿಚಾರವನ್ನೂ ಹೇಳಿದ್ದಾರೆ. ಈ ಕುರಿತು ಪರಿಶೀಲನೆ ನಡೆಸಿದಾಗ ಅವರು ಹೇಳಿರುವುದು ಸತ್ಯ ಎಂಬುದು ಮನದಟ್ಟಾಗಿದೆ. ಅವರಿಗೆ ದುಬೈಗೆ ಪ್ರಯಾಣ ಮಾಡಲು ಅನುಮತಿ ನೀಡಿ, ಜೀವಂತ ಗುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾಪತ್ತೆಯಾಗಿದ್ದ ಮಕ್ಕಳು ಮನೆಗೆ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಿಂದ ನಾಪತ್ತೆಯಾಗಿದ್ದ ನಾಲ್ವರು ಮಕ್ಕಳನ್ನು ಪೊಲೀಸರು ಮಂಗಳೂರಿನಿಂದ ಬುಧವಾರ ಬೆಳಿಗ್ಗೆ ನಗರಕ್ಕೆ ಕರೆತಂದಿದ್ದಾರೆ. ಅವರಿಂದ ಲಿಖಿತ ಹೇಳಿಕೆ ಪಡೆದು ಮನೆಗೆ ಕಳುಹಿಸಿಕೊಟ್ಟಿದ್ದಾರೆ.

ಬಿಸಿಎ ಮೂರನೇ ವರ್ಷದ ವಿದ್ಯಾರ್ಥಿನಿ ಅಮೃತವರ್ಷಿಣಿ (21), 12 ವರ್ಷ ವಯಸ್ಸಿನ ರಾಯನ್ ಸಿದ್ದಾರ್ಥ್, ಚಿಂತನ್ ಹಾಗೂ ಭೂಮಿ ಎಂಬುವರು ಮಂಗಳೂರಿನಲ್ಲಿ ಮಂಗಳವಾರ ಪತ್ತೆಯಾಗಿದ್ದರು. ವಿಷಯ ತಿಳಿದೊಡನೇ ಪೋಷಕರೊಂದಿಗೆ ಮಂಗಳೂರಿಗೆ ಪ್ರಯಾಣ ಬೆಳೆಸಿದ್ದ ಸೋಲದೇವನಹಳ್ಳಿ ಠಾಣೆ ಇನ್‌ಸ್ಪೆಕ್ಟರ್ ನೇತೃತ್ವದ ತಂಡ ಅಲ್ಲಿಯ ಠಾಣೆಯಲ್ಲಿ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಮಕ್ಕಳನ್ನು ಕರೆತಂದಿದೆ.

'ಮನೆ ಬಿಟ್ಟುಹೋಗಲು ಕಾರಣವೇನು ಎಂಬುದರ ಕುರಿತು ಹೇಳಿಕೆ ಪಡೆದುಕೊಳ್ಳಲಾಗಿದೆ.' ಎಂದು ಪೊಲೀಸರು ತಿಳಿಸಿದ್ದಾರೆ.

'ಜ್ಞಾನಭಾರತಿ ಕ್ಯಾಂಪಸ್ ಕಸಮುಕ್ತಗೊಳಿಸಿ'

ಬೆಂಗಳೂರು: 'ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ ಹಾಕಲಾಗುತ್ತಿದ್ದು, ಕ್ಯಾಂಪಸ್ ಅನ್ನು ಕೂಡಲೇ ಕಸದಿಂದ ಮುಕ್ತಿಗೊಳಿಸಬೇಕು' ಎಂದು ಜ್ಞಾನಭಾರತಿ ವಾಯುವಿಹಾರಿಗಳ ಸಂಘ ಆಗ್ರಹಿಸಿದೆ.

'ಮೈಸೂರು ರಸ್ತೆ, ನಾಗರಬಾವಿ ಹಾಗೂ ಮರಿಯಪ್ಪನಪಾಳ್ಯದಿಂದ ವಿಶ್ವವಿದ್ಯಾಲಯಕ್ಕೆ ಪ್ರವೇಶಗಳಿವೆ. ಈ ಮಾರ್ಗಗಳಲ್ಲಿರುವ ರಸ್ತೆಬದಿಗಳಲ್ಲಿ ಕಸದ ರಾಶಿಗಳ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. ಇದು, 'ಜ್ಞಾನ'ಭಾರತಿ ಎನ್ನುವ ಹೆಸರಿಗೇ ಕಳಂಕ' ಎಂದು ಜ್ಞಾನಭಾರತಿ ವಾಯುವಿಹಾರಿಗಳ ಸಂಘದ ಕಾರ್ಯದರ್ಶಿ ಎಚ್.ಕೆ.ಗೌಡಯ್ಯ ದೂರಿದರು.

'ಕೆಲವರು ವಾಹನಗಳಲ್ಲಿ ಬಂದು ಇಲ್ಲಿ ಕಸ ಸುರಿಯುತ್ತಾರೆ. ಕಸಕ್ಕೆ ಒಂದು ಸೂಕ್ತ ಸ್ಥಳ ಇಲ್ಲದಂತೆ ಮಾರ್ಗವುದ್ದಕ್ಕೂ ರಾಶಿ ಬಿದ್ದಿದೆ. ವಿಶ್ವವಿದ್ಯಾಲಯ ಹಾಸ್ಟೆಲ್‌ಗಳ ಬಳಿಯೇ ಕಸದ ರಾಶಿಗಳನ್ನು ಕಾಣಬಹುದು. ಕುಲಪತಿಗಳ ನಿವಾಸದ ಸಮೀಪದಲ್ಲೇ ಇರುವ ಮುಖ್ಯರಸ್ತೆಯಲ್ಲಿ ರಾಶಿ ಕಸ ಬಿದ್ದಿದೆ. ಕಸ ವಿಲೇವಾರಿಯಾಗದೆ, ಕ್ಯಾಂಪಸ್‌ನಲ್ಲಿ ಸ್ವಚ್ಛತೆ ಮರೆಯಾಗಿದೆ' ಎಂದರು.

'ಮನೆಯ ಕಸ, ಕಟ್ಟಡ ಅವಶೇಷಗಳು, ಹಳೆಯ ವಸ್ತುಗಳಿಂದ ಕೂಡಿದ ಕಸದ ರಾಶಿಗಳು ಕಂಡಾಗ ವಾಯುವಿಹಾರ ಮಾಡಲು ಬೇಸರವಾಗುತ್ತದೆ. ಸಂಘದ ವತಿಯಿಂದ ಸಾಧ್ಯವಾದಷ್ಟು ಕಸವನ್ನು ಸ್ವಚ್ಛಗೊಳಿಸುತ್ತೇವೆ. ಈ ಸಮಸ್ಯೆ ಪರಿಹರಿಸುವಂತೆ ವಿಶ್ವವಿದ್ಯಾಲಯದ ಕುಲಸಚಿವರಿಗೂ ಮನವಿ ಸಲ್ಲಿಸಿದ್ದೇವೆ. ಆದರೆ, ಕಸ ಹಾಗೆಯೇ ಇದೆ' ಎಂದರು.

'ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಹೆಸರುವಾಸಿಯಾದ ಈ ಆವರಣ, ಕಸದಿಂದ ಮುಕ್ತವಾಗಿರಬೇಕು. ಕೂಡಲೇ ಇಲ್ಲಿನ ಕಸ ವಿಲೇವಾರಿ ಮಾಡಿ, ಸ್ವಚ್ಛತೆ ಕಾಪಾಡಲು ವಿಶ್ವವಿದ್ಯಾಲಯ ಮುಂದಾಗಬೇಕು' ಎಂದೂ ಆಗ್ರಹಿಸಿದರು.

ಅನುಮಾನಾಸ್ಪದ ಸೂಟ್‌ಕೇಸ್‌ಗಳಲ್ಲಿ ಬಟ್ಟೆ ಪತ್ತೆ

ಬೆಂಗಳೂರು: 'ಬಿವಿಕೆ ಅಯ್ಯಂಗಾರ್ ರಸ್ತೆಯಲ್ಲಿ ಕಾಣಿಸಿಕೊಂಡಿದ್ದ ಸೂಟ್‌ಕೇಸ್‌ಗಳಲ್ಲಿ ಬಟ್ಟೆಗಳು ಸಿಕ್ಕಿವೆ. ಸುತ್ತಲಿನ ಸಿಸಿಟಿವಿಗಳನ್ನು ಪರಿಶೀಲಿಸಲಾಗುತ್ತಿದ್ದು, ಸೂಟ್‌ಕೇಸ್‌ಗಳ ವಾರಸುದಾರರನ್ನು ಶೀಘ್ರವೇ ಪತ್ತೆಹಚ್ಚಲಾಗುತ್ತದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮಳಿಗೆಯೊಂದರ ಬಳಿ ನಿಲ್ಲಿಸಿದ್ದ ಸ್ಕೂಟರ್ ಮೇಲೆ ಕಪ್ಪು ವರ್ಣದ ಎರಡು ಸೂಟ್‌ಕೇಸ್‌ಗಳು ಇದ್ದ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದರು. ಅವುಗಳಲ್ಲಿ ಬಾಂಬ್ ಇರಬಹುದೆಂದು ಶಂಕಿಸಲಾಗಿತ್ತು. ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸೂಟ್‌ಕೇಸ್‌ಗಳನ್ನು ಸ್ವಾತಂತ್ರ್ಯ ಉದ್ಯಾನಕ್ಕೆ ತೆಗೆದುಕೊಂಡು ಹೋಗಿದ್ದರು. ಅಲ್ಲಿ ಅದನ್ನು ವೈಜ್ಞಾನಿಕ ರೀತಿಯಲ್ಲಿ ತೆರೆದು ನೋಡಿದಾಗ ಬಟ್ಟೆಗಳು ಸಿಕ್ಕಿವೆ. ಗುರುತಿನ ಚೀಟಿಯೊಂದು ಪತ್ತೆಯಾಗಿದೆ. ಯಾರಾದರೂ ಮರೆತು ಅವುಗಳನ್ನು ಬಿಟ್ಟುಹೋಗಿರಬಹುದು' ಎಂದು ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದ್ದಾರೆ.



ಶ್ವಾನ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸೂಟ್‌ಕೇಸ್ ಪರಿಶೀಲಿಸಿದರು

ಲ್ಯಾಪ್‌ಟಾಪ್ ಕದಿಯುತ್ತಿದ್ದವನ ಬಂಧನ

ಬೆಂಗಳೂರು: ರಾತ್ರಿ ಸಮಯದಲ್ಲಿ ರಸ್ತೆಯಲ್ಲಿ ನಡೆದುಕೊಂಡು ಹೋಗುವವರನ್ನು ಅಡ್ಡಗಟ್ಟಿ ಲ್ಯಾಪ್‌ಟಾಪ್ ಹಾಗೂ ಟ್ಯಾಬ್ ಸುಲಿಗೆ ಮಾಡುತ್ತಿದ್ದ ಆರೋಪಿಯನ್ನು ಉಪ್ಪಾರಪೇಟೆ ಪೊಲೀಸರು ಬಂಧಿಸಿದ್ದಾರೆ.

ಲಿಯಾಕತ್ (52) ಬಂಧಿತ ಆರೋಪಿ. ಈತನಿಂದ ₹9.60 ಲಕ್ಷ ಮೌಲ್ಯದ 8 ಲ್ಯಾಪ್‌ಟಾಪ್ ಹಾಗೂ ಒಂದು ಟ್ಯಾಬ್ ಜಪ್ತಿಮಾಡಲಾಗಿದೆ.

'ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಅಪರಿಚಿತ ವ್ಯಕ್ತಿಯೊಬ್ಬ ಅಡ್ಡಗಟ್ಟಿ ಲ್ಯಾಪ್‌ಟಾಪ್ ಕಸಿದು ಪರಾರಿಯಾಗಿದ್ದ ಎಂದು ವಿಘ್ನೇಶ್ವರ ರೆಡ್ಡಿ ಎಂಬುವವರು ದೂರು ನೀಡಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ಸಿಬ್ಬಂದಿ ಆರೋಪಿಯನ್ನು ಬಂಧಿಸಿದ್ದಾರೆ. ಆತ ಕಲಬುರಗಿಯ ಜಿಲಾನಾಬಾದ್‌ನ ಮದೀನಾ ಕಾಲೊನಿ ನಿವಾಸಿ' ಎಂದು ಪೊಲೀಸರು ಹೇಳಿದ್ದಾರೆ.'ಆರೋಪಿಯು ಉಪ್ಪಾರಪೇಟೆ ಹಾಗೂ ಗಂಗಮ್ಮನಗುಡಿ ವ್ಯಾಪ್ತಿಯಲ್ಲಿ ಹಲವು ಲ್ಯಾಪ್‌ಟಾಪ್ ಹಾಗೂ ಟ್ಯಾಬ್ ಕದ್ದಿರುವುದಾಗಿ ಒಪ್ಪಿಕೊಂಡಿದ್ದಾನೆ' ಎಂದು ತಿಳಿಸಿದ್ದಾರೆ.

ಕುಡಿದು ಗಲಾಟೆ: ಸ್ನೇಹಿತರಿಂದ ಯುವಕನ ಕೊಲೆ

ಬೆಂಗಳೂರು: ಕುಡಿದ ಅಮಲಿನಲ್ಲಿ ಯುವಕರು ಸ್ನೇಹಿತನ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದು ಈ ಸಂಬಂಧ ದಾಬಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನೆಲಮಂಗಲ ತಾಲ್ಲೂಕಿನ ಶಿವಗಂಗೆ ಸನಿಹದ ಬರಗೇನಹಳ್ಳಿ ಗ್ರಾಮದ ನಿವಾಸಿ ಕೆಂಪಣ್ಣ (22) ಕೊಲೆಯಾದವರು. ಅವರು ಮಾರುತಿ ಟ್ರೇಡರ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

'ಕೆಂಪಣ್ಣ ಹಾಗೂ ಆತನ ನಾಲ್ವರು ಸ್ನೇಹಿತರು ಮಂಗಳವಾರ ರಾತ್ರಿ ಮದ್ಯದ ಪಾರ್ಟಿ ಮಾಡಿದ್ದರು. ಈ ವೇಳೆ ಪರಸ್ಪರರ ನಡುವೆ ಜಗಳ ನಡೆದಿತ್ತು. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಕುಪಿತಗೊಂಡ ಸ್ನೇಹಿತರು ಕೆಂಪಣ್ಣನ ತಲೆ ಮೇಲೆ ಮಾರ್ಬಲ್ ಕಲ್ಲು ಎತ್ತಿಹಾಕಿದ್ದರು. ಆರೋಪಿಗಳು ತಲೆಮರೆಸಿಕೊಂಡಿದ್ದು ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ತಿಳಿಸಿದ್ದಾರೆ.

'ರಾತ್ರಿ 11 ಗಂಟೆ ಸುಮಾರಿಗೆ ಯಾರೊ ಚೀರಿಕೊಂಡಂತಾಯಿತು. ಮನೆಯಿಂದ ಹೊರಗೆ ಬಂದಾಗ ಕೆಲ ಯುವಕರು ಓಡಿ ಹೋಗುತ್ತಿದ್ದುದು ಕಾಣಿಸಿತು. ಸ್ಥಳಕ್ಕೆ ಹೋಗಿ ನೋಡಿದಾಗ ಯುವಕನೊಬ್ಬ ರಕ್ತದ ಮಡುವಿನಲ್ಲಿ ಬಿದ್ದಿದ್ದ. ಕೂಡಲೇ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ್ದೆ' ಎಂದು ಸ್ಥಳೀಯರಾದ ಗಿರೀಶ್ ಹೇಳಿದ್ದಾರೆ.

ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಬಿ.ಶಿರೂರು ಹೇಳಿಕೆ

'ಶ್ರೀಗಂಧ ಕೃಷಿಗೆ ಉತ್ತೇಜನ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಶ್ರೀಗಂಧದ ಉತ್ಪನ್ನಗಳು ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿವೆ. ಆದರೆ, ಶ್ರೀಗಂಧ ಮರಗಳನ್ನು ಬೆಳೆಯುವವರ ಪ್ರಮಾಣ ಇತ್ತೀಚೆಗೆ ಕಡಿಮೆ ಆಗುತ್ತಿದೆ' ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಸಂಸ್ಥೆಯ (ಕೆಎಸ್‌ಡಿಎಲ್) ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಬಿ.ಶಿರೂರು ತಿಳಿಸಿದರು.

ಅಂಚೆ ಇಲಾಖೆ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಮೈಸೂರು ಶ್ರೀಗಂಧದ ಎಣ್ಣೆ ಹಾಗೂ ಕಡಿದಾಳ್ ಮಂಜಪ್ಪ ಅವರ ಗೌರವಾರ್ಥ ವಿಶೇಷ ಅಂಚೆ ಲಕೋಟೆಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಶ್ರೀಗಂಧ ಕೃಷಿ ಮಾಡಲು ರೈತರಿಗೆ ವಿಶೇಷ ತರಬೇತಿ ಮತ್ತು ಉತ್ತೇಜನ ನೀಡುವ ಮೂಲಕ ಶ್ರೀಗಂಧದ ಲಭ್ಯತೆ ಹೆಚ್ಚಿಸಬಹುದು. ಇದಕ್ಕಾಗಿ ರೈತರಿಗೆ ಪ್ರಚಾರದ ಅಗತ್ಯವಿದ್ದು, ಅಂಚೆ ಇಲಾಖೆ ಸಹಕರಿಸಿದರೆ ರೈತರನ್ನು ಸುಲಭವಾಗಿ ತಲುಪಬಹುದು' ಎಂದರು.

ಮೈಸೂರು ಶ್ರೀಗಂಧದ ಎಣ್ಣೆ ಹಾಗೂ ಕಡಿದಾಳ್ ಮಂಜಪ್ಪ ಅವರ ಗೌರವಾರ್ಥ ವಿಶೇಷ ಅಂಚೆ ಲಕೋಟೆಗಳನ್ನು ಬೆಂಗಳೂರು ಪ್ರಧಾನ ಕಚೇರಿಯ ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ.ಡಾಶ್ ಬಿಡುಗಡೆಗೊಳಿಸಿದರು.



ಲಕೋಟೆ ಬಿಡುಗಡೆ ಕಾರ್ಯಕ್ರಮದಲ್ಲಿ (ಎಡದಿಂದ) ಅಂಚೆ ಇಲಾಖೆ ಹಿರಿಯ ಅಧಿಕಾರಿಗಳಾದ ಸುರೇಖ್ ರಘುನಾದನ್, ಎಂ.ಬಿ.ಗಜಿಬೇಯಿ, ಎಲ್.ಕೆ.ಡಾಶ್, ಕೆಎಸ್‌ಡಿಎಲ್‌ನ ಮಹೇಶ್ ಬಿ.ಶಿರೂರು, ಶ್ರೀಕಲಾ ಕಡಿದಾಳ್ ಭಾಗವಹಿಸಿದ್ದರು.

'ಹಾಸ್ಟೆಲ್‌ನಲ್ಲಿ ಮೂಲಸೌಕರ್ಯ ಹೆಚ್ಚಿಸಿ'

ಬೆಂಗಳೂರು: ಹನುಮಂತನಗರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಹಾಸ್ಟೆಲ್‌ಗೆ ಹೆಚ್ಚುವರಿ ಹಾಸಿಗೆಗಳು ಸೇರಿದಂತೆ ಮೂಲ ಸೌಕರ್ಯಗಳನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿಗಳು ಹಾಸ್ಟೆಲ್ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಚಳವಳಿಯಲ್ಲಿ ಹಾಸ್ಟೆಲ್‌ನ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದರು.

'ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ನೂರಾರು ವಿದ್ಯಾರ್ಥಿಗಳು ಈ ಹಾಸ್ಟೆಲ್‌ನಲ್ಲಿದ್ದೇವೆ. ಇಲ್ಲಿ ಕಳಪೆ ಗುಣಮಟ್ಟದ ಆಹಾರ ನೀಡಲಾಗುತ್ತಿದೆ. ಶೌಚಾಲಯಗಳಲ್ಲಿ ನೈರ್ಮಲ್ಯ ಕಾಪಾಡುತ್ತಿಲ್ಲ. ಓದಲು ತಾಂತ್ರಿಕ ಪುಸ್ತಕಗಳ ಲಭ್ಯತೆ ಇಲ್ಲ' ಎಂದು ಸಮಾಜ ಕಲ್ಯಾಣ ಇಲಾಖೆಯ ವಿರುದ್ಧ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಬಂದ ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ನಿರ್ದೇಶಕ ನಾಗೇಶ್ ಹಾಗೂ ಜಂಟಿ ನಿರ್ದೇಶಕ ಲಕ್ಷ್ಮಣ್ ರೆಡ್ಡಿ ಅವರು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಿದರು.

'ಹಾಸ್ಟೆಲ್‌ಗೆ ಹೆಚ್ಚುವರಿ ಹಾಸಿಗೆಗಳನ್ನು ನೀಡಬೇಕು. ಸೋಲಾರ್ ಗೀಸರ್‌ನ ಸಾಮರ್ಥ್ಯ ಹೆಚ್ಚಿಸಬೇಕು. ಶೌಚಾಲಯಗಳ ಸ್ವಚ್ಛತೆ ಕಾಪಾಡಬೇಕು ಹಾಗೂ ಪಟ್ಟಿಯಲ್ಲಿರುವಂತೆ ವಿದ್ಯಾರ್ಥಿಗಳಿಗೆ ಆಹಾರ ನೀಡಬೇಕು' ಎಂದು ಅಧಿಕಾರಿಗಳ ಮುಂದೆ ಬೇಡಿಕೆ ಇಟ್ಟರು.

ಎಐಡಿಎಸ್‌ಒ ನಗರ ಜಿಲ್ಲಾ ಸಮಿತಿ ಪದಾಧಿಕಾರಿ ಕಲ್ಯಾಣ್ ಕುಮಾರ್, 'ವಿದ್ಯಾರ್ಥಿಗಳ ಹೋರಾಟಕ್ಕೆ ಸ್ಪಂದಿಸಿರುವ ಇಲಾಖೆಯ ಅಧಿಕಾರಿಗಳು ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ವಿದ್ಯಾರ್ಥಿಗಳ ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದಾರೆ. ಗಡುವಿನಲ್ಲಿ ಬೇಡಿಕೆ ಈಡೇರದಿದ್ದಲ್ಲಿ, ನಮ್ಮ ಹೋರಾಟ ಮುಂದುವರಿಯಲಿದೆ' ಎಂದೂ ಎಚ್ಚರಿಸಿದರು.

ಆವರಣದಲ್ಲಿ 500 ಜನರಿಗೆ ಮಾತ್ರ ಅವಕಾಶ ● 'ಪ್ರಜಾವಾಣಿ' ಜಾಲತಾಣದಲ್ಲಿ ನೇರ ಪ್ರಸಾರ

'ಅರಮನೆ'ಯೊಳಗಿನ ಜಂಬೂಸವಾರಿಗೆ ಕ್ಷಣಗಣನೆ

ಪ್ರಜಾವಾಣಿ ವಾರ್ತೆ

ಮೈಸೂರು: ದೀಪಾಲಂಕಾರದ ವೈಭವದಲ್ಲಿ ಝಗಮಗಿಸುತ್ತಿರುವ ಸಾಂಸ್ಕೃತಿಕ ನಗರಿಯತ್ತ ಎಲ್ಲರ ಚಿತ್ತ ಹರಿದಿದ್ದು, ಜಂಬೂಸವಾರಿಗೆ ಕ್ಷಣಗಣನೆ ಆರಂಭವಾಗಿದೆ. ದಸರಾ ಮಹೋತ್ಸವದ ಕೊನೆಯ ದಿನವಾದ ಶುಕ್ರವಾರ (ಅ.15) ಅರಮನೆ ಆವರಣಕ್ಕೆ ಸೀಮಿತವಾಗಿ ವಿಜಯದಶಮಿ ಮೆರವಣಿಗೆ ನಡೆಯಲಿದೆ.

ಕೋವಿಡ್–19 ಕಾರಣ ಸತತ ಎರಡನೇ ವರ್ಷವೂ ಜಂಬೂಸವಾರಿಯನ್ನು ನೇರವಾಗಿ ಕಣ್ತುಂಬಿಕೊಳ್ಳಲು ಜನಸಾಮಾನ್ಯರಿಗೆ ಅವಕಾಶವಿಲ್ಲ. ಆವರಣದಲ್ಲಿ 500 ಜನರನ್ನು ಸೇರಿಸಲು ಮಾತ್ರ ಸರ್ಕಾರ ಅನುಮತಿ ನೀಡಿದ್ದು, ಸಾಮಾಜಿಕ ಜಾಲತಾಣದಲ್ಲಿ ನೇರ ಪ್ರಸಾರ ಮಾಡುತ್ತಿದೆ.

ಅಂದು ಸಂಜೆ 4.36ಕ್ಕೆ ಅರಮನೆಯ ಬಲರಾಮ ದ್ವಾರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಂದಿಧ್ವಜಕ್ಕೆ ಪೂಜೆ ಸಲ್ಲಿಸಲಿದ್ದಾರೆ. ಸಂಜೆ 5ಕ್ಕೆ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಅಂಬಾರಿಯಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ನಾಡದೇವತೆ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಅದಕ್ಕೂ ಮುನ್ನ ಉತ್ಸವ ಮೂರ್ತಿಯನ್ನು ಚಾಮುಂಡಿಬೆಟ್ಟದಿಂದ ರಥದಲ್ಲಿ ಮೆರವಣಿಗೆಯಲ್ಲಿ ತರಲಾಗುತ್ತದೆ.

ಕಾಡಾನೆ ಹಾಗೂ ಹುಲಿ ಸೆರೆ ಕಾರ್ಯಾಚರಣೆಯ ಮುಂದಾಳು ಎನಿಸಿರುವ ಅಭಿಮನ್ಯು ಆನೆಯು ಸತತ ಎರಡನೇ ಬಾರಿ 750 ಕೆ.ಜಿ ತೂಕದ ಚಿನ್ನದ ಅಂಬಾರಿ ಹೊತ್ತು ಸಾಗಲಿದೆ. ಕೇವಲ 250ರಿಂದ 300 ಮೀಟರ್ ದೂರಕ್ಕೆ ಸೀಮಿತವಾಗಿ ಜಂಬೂಸವಾರಿ ನಡೆಯಲಿದೆ. ಆರು ಆನೆಗಳು, ಆರು ಸ್ತಬ್ಧಚಿತ್ರ, 12 ಕಲಾ ತಂಡಗಳು, ಅಶ್ವಾರೋಹಿ ಪಡೆ ಪಾಲ್ಗೊಳ್ಳಲಿವೆ.

ಅರಮನೆಯಲ್ಲಿ ಆಯುಧಪೂಜೆ: ಆಯುಧಪೂಜೆ ಹಾಗೂ ವಿಜಯದಶಮಿ ಅಂಗವಾಗಿ ಅರಮನೆಯ ರಾಜವಂಶಸ್ಥರ ಖಾಸಗಿ ನಿವಾಸದಲ್ಲಿ ಗುರುವಾರ, ಶುಕ್ರವಾರ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಪಟ್ಟದ ಕುದುರೆ, ಪಟ್ಟದ ಹಸು, ಪಟ್ಟದ ಆನೆ, ವಾಹನ ಹಾಗೂ ಆಯುಧಗಳಿಗೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ಪೂಜೆ ಸಲ್ಲಿಸಲಾಗುತ್ತದೆ.

ಪ್ರವಾಸೋದ್ಯಮ ಚೇತರಿಕೆ: ಏಳು ದಿನಗಳಿಂದ ಅರಮನೆ, ರಸ್ತೆಗಳು, ವೃತ್ತಗಳು, ಪಾರಂಪರಿಕ ಕಟ್ಟಡಗಳು ವಿದ್ಯುತ್ ದೀಪಾಲಂಕಾರದಿಂದ ಝಗಮಗಿಸುತ್ತಿದ್ದು, ಭಾರಿ ಸಂಖ್ಯೆಯಲ್ಲಿ ಜನ ಮಳೆ ಲೆಕ್ಕಿಸದೆ ಕುಟುಂಬ ಸಮೇತರಾಗಿ ಬಂದು ವೀಕ್ಷಿಸುತ್ತಿರುವುದು ಪ್ರವಾಸೋದ್ಯಮ ಚೇತರಿಕೆಗೆ ಪುಷ್ಟಿ ನೀಡಿದೆ.

ಮುಖ್ಯಾಂಶಗಳು

- ಇಂದು ಆಯುಧಪೂಜೆ, ನಾಳೆ ಮೆರವಣಿಗೆ
- ದೀಪಾಲಂಕಾರದಿಂದ ಮೈಸೂರು ಝಗಮಗ
- ಹಲವು ನಿರ್ಬಂಧದ ನಡುವೆ ವಿಜಯದಶಮಿ

ಜಂಬೂಸವಾರಿಗೆ 6 ಆನೆ ಆಯ್ಕೆ ಮಾಡಿದ್ದು, 3 ಬಾರಿ ತಾಲೀಮು ನಡೆಸಲಾಗಿದೆ. ಎಲ್ಲಾ ಆನೆಗಳು ಆರೋಗ್ಯವಾಗಿದ್ದು, ಮೆರವಣಿಗೆ ಯಶಸ್ವಿಗೊಳಿಸುತ್ತೇವೆ

ವಿ.ಕರಿಕಾಳನ್, ಡಿಸಿಎಫ್ (ವನ್ಯಜೀವಿ)

ಮೈಸೂರು ದಸರಾ
ಕ್ರಿ.ಶ 1610 ರಿಂದ ಆಚರಣೆ



ಮೈಸೂರು ಅರಮನೆ ಆವರಣದಲ್ಲಿ ಬುಧವಾರ ಜಂಬೂಸವಾರಿ ಅಂತಿಮ ತಾಲೀಮಿನ ವೇಳೆ ನಗರ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ಅವರು ಅಭಿಮನ್ಯು ನೇತೃತ್ವದ ಗಜಪಡೆಗೆ ಪುಷ್ಪಾರ್ಚನೆ ಮಾಡಿ ವಂದಿಸಿದರು. ಡಿಸಿಎಫ್ ವಿ.ಕರಿಕಾಳನ್, ಡಿಸಿಪಿಗಳಾದ ಗೀತಾ ಪ್ರಸನ್ನ, ಶಿವರಾಮು, ಪ್ರದೀಪ್ ಗುಂಟಿ ಇದ್ದಾರೆ –ಪ್ರಜಾವಾಣಿ ಚಿತ್ರ

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಅರಮನೆ ಪ್ರವೇಶಕ್ಕೆ ನಿರ್ಬಂಧ

ಆಯುಧಪೂಜೆ ಪ್ರಯುಕ್ತ ರಾಜವಂಶಸ್ಥರು ಧಾರ್ಮಿಕ ಪೂಜಾ ಕಾರ್ಯಕ್ರಮ ನಡೆಸುವುದರಿಂದ ಗುರುವಾರ (ಅ.14) ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ಅರಮನೆ ಪ್ರವೇಶಕ್ಕೆ ಪ್ರವಾಸಿಗರಿಗೆ ನಿರ್ಬಂಧ ವಿಧಿಸಲಾಗಿದೆ. ಶುಕ್ರವಾರ (ಅ.15) ವಿಜಯದಶಮಿ ಕಾರಣ ಸಂಪೂರ್ಣ ದಿನ ಪ್ರವೇಶವಿರುವುದಿಲ್ಲ.

ಮೈಸೂರಿನಲ್ಲಿ ದಸರಾ ಹಬ್ಬ

● ಯಶಸ್ವಿನಿ ಶರ್ಮಾ

ನವರಾತ್ರಿಯನ್ನು ಭಾರತದೆಲ್ಲೆಡೆ ಆಚರಿಸುವುದು ನಿಜವಾದರೂ ಮೈಸೂರಿನಲ್ಲಿನ ವೈಖರಿಯೇ ಬೇರೆ. ಈ ಪರಂಪರೆ ಕರ್ಣಾಟಕ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯಲ್ಲಿ ಜನನವೆತ್ತಿ ಕ್ರಮೇಣ ರಾಜ ಒಡೆಯರ ಆಳ್ವಿಕೆಯಲ್ಲಿ, ಹದಿನೇಳನೆಯ ಶತಮಾನದಿಂದ, ಮೈಸೂರು ರಾಜ್ಯದಲ್ಲಿ ಪ್ರಚಲಿತವಾಯಿತು. ಮೈಸೂರು ರಾಜ್ಯದಲ್ಲಿ ಮೊದಲಬಾರಿಗೆ ಶ್ರೀರಂಗಪಟ್ಟಣದಲ್ಲಿ ದಸರಾ ಹಬ್ಬವನ್ನು 17-27 ಸೆಪ್ಟೆಂಬರ್, 1610ರಲ್ಲಿ ಆಚರಿಸಲಾಯಿತು. ಹಿಂದೆ ರಾಜಾಳ್ವಿಕೆಯಲ್ಲಿ ಮಹಾರಾಜರು ಹಾಗೂ ಅವರ ಧಾರ್ಮಿಕ ಆಚಾರಗಳು ದಸರಾ ಹಬ್ಬದ ಕೇಂದ್ರಬಿಂದು. ಭಾರತವು ಸ್ವತಂತ್ರವಾದ ಹಲವು ವರ್ಷಗಳ ಬಳಿಕ, ದಸರಾ ಹಬ್ಬವನ್ನು ನಾಡಹಬ್ಬವನ್ನಾಗಿ ಹಾಗೂ ಆದಿಶಕ್ತಿ ಸ್ವರೂಪಳಾದ ಶ್ರೀ ಚಾಮುಂಡೇಶ್ವರಿಯನ್ನೇ ಕೇಂದ್ರಬಿಂದುವಾಗಿ ಕರ್ನಾಟಕ ರಾಜ್ಯವು ಅಳವಡಿಸಿಕೊಂಡಿತು.

ಶ್ರೀ ಚಾಮುಂಡೇಶ್ವರಿಯು ಮೈಸೂರಿನ ಅರಸು ಸಂಸ್ಥಾನದ ಅಧಿದೇವತೆ. ಬೆಟ್ಟದ ಮೇಲಿನ ಅಮ್ಮನವರ ದೇವಸ್ಥಾನವನ್ನು ವಿಸ್ತರಿಸಿ, ರಾಜಗೋಪುರವನ್ನು ಕಟ್ಟಿಸಿ, ಗೋಪುರ ಪ್ರತಿಷ್ಠೆ, ಸುವರ್ಣಕಲಶ ಪ್ರತಿಷ್ಠೆ ಮಾಡಿಸಿ ಅಂತರಾಳದಲ್ಲಿ, ಲಕ್ಷ್ಮೀವಿಲಾಸದ ಪಟ್ಟ ಮಹಿಷಿ ಕೃಷ್ಣವಿಲಾಸದ ಧರ್ಮಪತ್ನಿ ರಮಾವಿಲಾಸದ ಧರ್ಮಪತ್ನಿ ಸಹಿತವಾದ ತಮ್ಮ ರೂಪು ಶಿಲಾಪ್ರತಿಮೆಗಳನ್ನು 1824ರಲ್ಲಿ ಸ್ಥಾಪಿಸಿ ಜೀರ್ಣೋದ್ಧಾರಕಾರ್ಯವನ್ನು ಮಹರಾಜ ಮುಮ್ಮಡಿ ಕೃಷ್ಣರಾಜ ಒಡೆಯರವರು ಮಾಡಿದ್ದರು. ತರುವಾಯ, ಗೋಪುರಕ್ಕೆ ರಜತ ಮಹಾದ್ವಾರವನ್ನು 1952ರ ಮಾರ್ಚ್ ಆರರಂದು ಮೈಸೂರಿನ ಕೊನೆಯ ಆಳಿದ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರವರು ಸಮರ್ಪಿಸಿದರು.



ಚಾಮುಂಡೇಶ್ವರಿ


ಮೈಸೂರಿನ ಜನರು ದಸರೆಯ ಪ್ರಯುಕ್ತ ತಮ್ಮ ಮನೆಗಳಲ್ಲಿ ಕಳಶವಿಟ್ಟು ಪೂಜಿಸಿ, ದೇವರುಗಳ, ರಾಜ-ರಾಣಿ ಮತ್ತಿತರ ಬೊಂಬೆಗಳನ್ನು ಜೋಡಿಸಿ, ಬೊಂಬೆ ತಿಂಡಿಗಳನ್ನು ಸ್ನೇಹಿತರೊಡನೆ ಹಂಚಿಕೊಂಡು ಹರ್ಷಿಸುತ್ತಾರೆ. ಮೊದಲಿಗೆ ಶ್ರೀ ರಾಜರಾಜೇಶ್ವರಿಯನ್ನು ಪೂಜಿಸಿ, ಸಪ್ತಮಿಯಲ್ಲಿ ಶ್ರೀ ಸರಸ್ವತಿಯನ್ನು, ಅಷ್ಟಮಿಯಲ್ಲಿ ಶ್ರೀ ದುರ್ಗೆಯನ್ನು, ನವಮಿಯಲ್ಲಿ ಆಯುಧಗಳನ್ನು ಹಾಗೂ ದಶಮಿಯಲ್ಲಿ ಶ್ರೀ ಚಾಮುಂಡೇಶ್ವರಿ ಹಾಗು ಶ್ರೀ ರಾಮನನ್ನು ಪೂಜಿಸುತ್ತಾರೆ. ಮೈಸೂರಿನ ಅರಮನೆಯಲ್ಲಿ ಸಿಂಹಾಸನವನ್ನು ಜೋಡಿಸುವುದರಿಂದ ಹಿಡಿದು ಸಕಲ ಪೂಜಾ ಕೈಂಕರ್ಯಗಳು, ಮಹಾರಾಜರ ಸಿಂಹಾಸನಾರೋಹಣ ಇತ್ಯಾದಿ ಕಲಾಪಗಳೆಲ್ಲ ಆಯಾ ಲಗ್ನಕ್ಕೆ ಅನುಸಾರವಾಗಿ ನಡೆಯುತ್ತದೆ.

ಅರಮನೆಯಲ್ಲಿ ಮೂಲಾನಕ್ಷತ್ರದ ಮುಹೂರ್ತದಲ್ಲಿ ಶ್ರೀ ಸರಸ್ವತಿಯ ಪೂಜೆ ನಡೆಯುತ್ತದೆ ಮತ್ತು ಸಪ್ತಮಿಯ ರಾತ್ರಿ ದೇವಿಯ ಕರಾಳರೂಪವಾದ ಶ್ರೀ ಕಾಳರಾತ್ರಿಯ ಪೂಜೆ ನಡೆಯುತ್ತದೆ, ಆದರೆ ಇಲ್ಲಿ ಬಲಿಯ ಪದ್ಧತಿಯಿಲ್ಲ. ಇದನ್ನು ಆಚರಿಸುವ ಪ್ರಯುಕ್ತ ರೋಚಕಗೊಳಿಸುವ ಪುತ್ಥಳಿಯನ್ನು ರಾಜಮನೆತನ ಮಾಡಿಸಿದೆ. ದೇವಿಯ ಮೂರ್ತಿಯಿಂದ ಚಲಾಯಿಸಿದ ಬಾಣ–ಬಿರುಸು ಮಹಿಷಾಸುರನ ಪುತ್ಥಳಿಯನ್ನು ತಾಕಿದಾಗ, ಮಹಿಷನ ರುಂಡವು ಉರುಳಿ, ಅಸುರನು ಹೊರಬರುತ್ತಾನೆ; ಹಾಗೆ ತುಂಬಿಸಿದ ಕುಂಕುಮಸಹಿತ ನೀರು ರಕ್ತದಂತೆ ಸುರಿಯುತ್ತದೆ. ದುರ್ಗಾಷ್ಟಮಿಯಂದು ಚಂಡೀಹೋಮವನ್ನು ಶಾಸ್ತ್ರೋಕ್ತವಾಗಿ ಮಾಡಲಾಗುತ್ತದೆ, ನವಮಿಯ ದಿನದಂದು ಪಟ್ಟದ ಕತ್ತಿಯ ಸಮೇತ ಆಯುಧಗಳನೆಲ್ಲ ಜೋಡಿಸಿ ಮಹಾರಾಜರು ಪೂಜೆ ಸಲ್ಲಿಸುತ್ತಾರೆ. ಪಟ್ಟದ ಆನೆ, ಕುದುರೆ, ವಾಹನಗಳಿಗೆಲ್ಲ ಅಂದು ಪೂಜೆ ನಡೆಯುತ್ತದೆ. ವಿಜಯದಶಮಿಯ ದಿನ ಶ್ರೀ ಚಾಮುಂಡೇಶ್ವರಿ ಮಹಿಷಾಸುರನ ಮೇಲೆ ವಿಜಯಸಾಧಿಸಿದ್ದು ಎಂದು ಪ್ರತೀತಿ, ಇದೆ ದಿನ ಶ್ರೀ ರಾಮನು ರಾವಣನ ಮೇಲೆ ವಿಜಯಸಾಧಿಸಿದ್ದು ಎಂದು ಇನ್ನೊಂದು ಪ್ರತೀತಿ. ಮೈಸೂರಿನಲ್ಲಿ ಆ ದಿನ ಮಹಾರಾಜರ ವಿಜಯ ಯಾತ್ರೆ. ಹಿಂದೆ ಆನೆಯ ಮೇಲೆ ಅಂಬಾರಿಯಲ್ಲಿ ಮಹಾರಾಜರು ಕುಳಿತು, ಸೈನ್ಯಪಡೆಗಳು, ಆನೆ ಗಾಡಿ, ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಬನ್ನಿಮಂಟಪಕ್ಕೆ ತೆರಳಿ, ಅಲ್ಲಿ ಶಮಿ ಪೂಜೆಯನ್ನು ನಡೆಸಿ, ಪಂಜಿನ ಪ್ರದರ್ಶನವನ್ನು ವೀಕ್ಷಿಸಿ ತದನಂತರ ಅರಮನೆಗೆ ತೆರಳುತ್ತಿದ್ದರು. ಅದೇ ಮೆರವಣಿಗೆ ನಾಡಹಬ್ಬವಾಗಿ ಮಾರ್ಪಾಟಾದ ಬಳಿಕ ಶ್ರೀ ಚಾಮುಂಡೇಶ್ವರಿ ಅಮ್ಮನವರ ಉತ್ಸವಮೂರ್ತಿಯನ್ನು ಅಂಬಾರಿಯಲ್ಲಿಟ್ಟು ಮೆರವಣಿಗೆಯನ್ನು ರಾಜ್ಯ ಸರ್ಕಾರ ನೆರವೇರಿಸುತ್ತದೆ.

ಆದಿಶಕ್ತಿಯನ್ನು ನದಿ, ಬೆಟ್ಟ, ಅರಣ್ಯ, ವೃಕ್ಷ, ಆಕಾರವಿಲ್ಲದ ಶಿಲೆ ಇತ್ಯಾದಿ ರೂಪಗಳಲ್ಲಿಯೂ ಸಹ ಜನರು ಪೂಜಿಸುತ್ತಾರೆ. ಅವಳು ಕೆರೆಗಳನ್ನು ಕಾಯುವ ಕೆರೆಯಮ್ಮನೂ ಆಗಿರಬಹುದು, ಇಲ್ಲವೇ ಹಳ್ಳಿಯ ಮಾರಮ್ಮನಾಗಿರಬಹುದು. ಮಾರ್ಕಂಡೇಯ ಪುರಾಣದ ದೇವಿಮಹಾತ್ಮೆಯ ಪ್ರಕಾರ, ನವರಾತ್ರಿಯಲ್ಲಿ ನವದುರ್ಗೆಯರಾದ ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯಿನಿ, ಕಾಳರಾತ್ರಿ, ಮಹಾಗೌರಿ, ಸಿದ್ಧಿದಾತ್ರಿ ಎಂಬ ಒಂಬತ್ತು ರೂಪಗಳನ್ನು ಪೂಜಿಸುತ್ತಾರೆ.

ಕಾಂಗ್ರೆಸ್ ವಿರುದ್ಧವೇ ಸಿದ್ದರಾಮಯ್ಯ ಸಂಚು: ಕುಮಾರಸ್ವಾಮಿ ಆರೋಪ

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ರಾಮನಗರ: 'ಕಾಂಗ್ರೆಸ್ ಎಚ್ಚೆತ್ತುಕೊಳ್ಳದೇ ಹೋದರೆ ಸಿದ್ದರಾಮಯ್ಯ ಅವರೇ ಆ ಪಕ್ಷದ ಬುಡಕ್ಕೆ ಬೆಂಕಿ ಇಡುವುದು ಖಚಿತ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಬಿಡದಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಹಿಂದೆ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಆಗಿದ್ದ ವೇಳೆ ಜೆಡಿಎಸ್‌ನಲ್ಲಿ ಇದ್ದುಕೊಂಡೇ, ಬಿಜೆಪಿ ಹಾಗೂ ಕಾಂಗ್ರೆಸ್‌ನಲ್ಲಿನ ಮುಖಂಡರನ್ನು ಸೇರಿಸಿಕೊಂಡು 'ಅಹಿಂದ' ಹೆಸರಿನಲ್ಲಿ ಸಂಘಟನೆ ಮಾಡಿದ್ದರು. ಆ ಮೂಲಕ ಜೆಡಿಎಸ್ ಅನ್ನೇ ಮುಗಿಸಲು ಹೊರಟಿದ್ದರು. ಈಗ ಮತ್ತೆ ಅದೇ ಕೆಲಸ ಆರಂಭಿಸಿದ್ದಾರೆ. ನಿನ್ನೆ ಕಲಬುರಗಿಯಲ್ಲಿ ನಡೆದ ಕಾರ್ಯಕ್ರಮ ಕಾಂಗ್ರೆಸ್‌ನದ್ದೋ ಇಲ್ಲ ಅಹಿಂದ ವರ್ಗದ್ದೋ' ಎಂದು ಪ್ರಶ್ನಿಸಿದರು.

'ಚರ್ಚೆಗೆ ಬನ್ನಿ ಎಂಬ ಸಿದ್ದರಾಮಯ್ಯ ಅವರ ಸವಾಲನ್ನು ಸ್ವೀಕರಿಸಲು ಸಿದ್ಧನಿದ್ದೇನೆ. ನನ್ನ ತಂದೆ ನನಗೂ ರಾಜಕೀಯ ಕಲುಹಿಸಿದ್ದಾರೆ. ಪಲಾಯನ ಮಾಡುವುದಿಲ್ಲ. ನೀವು ಈ ಚರ್ಚೆಗೆ ಮಂಗಳ ಹಾಡಿದರೆ ನಾನೂ ಸುಮ್ಮನಿರುತ್ತೇನೆ. ಇಲ್ಲವಾದರೆ ಮಾತನಾಡಲು ನನಗೂ ಬಹಳಷ್ಟು ವಿಷಯಗಳಿವೆ' ಎಂದರು.

ಅವರೇ ಕಾರಣ: ಸಮ್ಮಿಶ್ರ ಸರ್ಕಾರ ಬೀಳಲು ಸಿದ್ದರಾಮಯ್ಯ ಅವರೇ ನೇರ ಕಾರಣ. ಬಿಜೆಪಿಗೆ ಶಾಸಕರನ್ನು ಕಳಿಸಿದ್ದೂ ಅವರೇ. ಸಮ್ಮಿಶ್ರ ಸರ್ಕಾರ ಪತನದ ಸಂದರ್ಭ ನಾನು ಅಮೆರಿಕಕ್ಕೆ ಹೋಗಿದ್ದು ನಿಜ. ಆದಿಚುಂಚನಗಿರಿ ಶ್ರೀಗಳು ಕರೆದ ಕಾರಣ ಕಾಲಭೈರವೇಶ್ವರ ದೇಗುಲ ನಿರ್ಮಾಣಕ್ಕೆ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಹೋಗಿದ್ದೆ. ಅಲ್ಲಿದ್ದಾಗ ನಾನೇ ಕುಮಾರಸ್ವಾಮಿಗೆ ಕರೆ ಮಾಡಿದ್ದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಯಾರಿಗೆ ಕರೆ ಮಾಡಿದ್ದೀರಿ? ಯಾವ ನಂಬರ್‌ಗೆ ಕರೆ ಮಾಡಿದ್ದೀರಿ? ಸ್ವಲ್ಪ ಆ ನಂಬರ್ ಇದ್ದರೆ ಕೊಡುತ್ತೀರಾ? ಎಂದು ಪ್ರಶ್ನಿಸಿದರು.

ಉಪ ಚುನಾವಣೆಗೆ ಹಣ: ಯಡಿಯೂರಪ್ಪ ಅವರನ್ನು ಭೇಟಿಯೇ ಮಾಡಿಲ್ಲ ಎನ್ನುತ್ತೀರಿ. ಹಾಗಿದ್ದರೆ ಎಂಟು ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನೇ ಸೋಲಿಸಲು ಯಾರನ್ನು ಕಳುಹಿಸಿ ಯಡಿಯೂರಪ್ಪ ಅವರ ಹತ್ತಿರ ದುಡ್ಡು ತರಿಸಿಕೊಂಡಿದ್ದೀರಿ, ನೀವೆಷ್ಟು ನೇರ ರಾಜಕಾರಣ ಮಾಡಿದ್ದೀರಿ ಎಂಬುದು ನನಗೆ ಗೊತ್ತಿದೆ ಎಂದು ಟೀಕಿಸಿದರು.

'ಮಂಡ್ಯದಲ್ಲಿ ಜೆಡಿಎಸ್ ಸಂಪೂರ್ಣ ವೀಕ್ ಆಗಿದೆ ಎನ್ನುತ್ತೀರಿ? ನಿಮಗೇಕೆ ನಮ್ಮ ಪಕ್ಷದ ಚಿಂತೆ? ಪದೇ ಪದೇ ಏಕೆ ನಮ್ಮನ್ನು ಕೆಣಕುತ್ತೀರಿ. ಮುಂದಿನ ಚುನಾವಣೆಯಲ್ಲಿ ಮಂಡ್ಯದ ಜನ ಯಾರ ಪರ ಇದ್ದಾರೆ ಎಂಬುದನ್ನು ತೋರಿಸಲಿದ್ದಾರೆ' ಎಂದು ಹೇಳಿದರು.

'2013ರಲ್ಲೇ ಇದು ನನ್ನ ಕೊನೆಯ ಚುನಾವಣೆ ಎಂದಿದ್ದೀರಿ. ಆದರೂ ಇನ್ನೂ ನಿಮ್ಮ ಮುಖ್ಯಮಂತ್ರಿ ಆಸೆ ಹೋಗಿಲ್ಲ' ಎಂದು ಟೀಕಿಸಿದರು.

'ಅಗೌರವ ತೋರಿಲ್ಲ'

ವಿಪಕ್ಷ ನಾಯಕ ಸ್ಥಾನದ ಕುರಿತು ತಮ್ಮ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, 'ಎಚ್.ಡಿ, ದೇವೇಗೌಡರು, ಶಾಂತವೇರಿ ಗೋಪಾಲಗೌಡರಂತಹ ನಾಯಕರು ವಿಪಕ್ಷ ನಾಯಕರಾಗಿ ಆ ಹುದ್ದೆಗೆ ಘನತೆ ತಂದಿದ್ದರು. ಆದರೆ, ಆ ಮಟ್ಟದ ಕೆಲಸ ಮಾಡಲು ಸಿದ್ದರಾಮಯ್ಯರಂತಹ ವ್ಯಕ್ತಿಯಿಂದ ಸಾಧ್ಯವಿಲ್ಲ. ಇಂತಹವರಿಂದಲೇ ಆ ಹುದ್ದೆ ಘನತೆಗೆ ಕುಂದು ಉಂಟಾಗಿದೆ ಎಂದಷ್ಟೇ ಹೇಳಿದ್ದೇನೆ ಹೊರತು ಸಾಂವಿಧಾನಿಕ ಹುದ್ದೆ ಬಗ್ಗೆ ಅಗೌರವವಾಗಿ ಮಾತನಾಡಿಲ್ಲ' ಎಂದು ಎಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

'ಬಿಎಸ್‌ವೈ ಭೇಟಿ ಮಾಡಿದ್ದು ಸಾಬೀತು ಮಾಡಲಿ'

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಕಲಬುರಗಿ: 'ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ನಾನು ಭೇಟಿಯಾಗಿದ್ದನ್ನು ಎಚ್.ಡಿ.ಕುಮಾರಸ್ವಾಮಿ ಸಾಬೀತು ಮಾಡಿದರೆ ರಾಜಕೀಯ ಸನ್ಯಾಸ ಸ್ವೀಕರಿಸುತ್ತೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಹಿಂದೆ ಯಡಿಯೂರಪ್ಪ ಅವರ 76ನೇ ಜನ್ಮದಿನದಂದು ಮಾತ್ರ ನಾನು ಖುದ್ದಾಗಿ ಭೇಟಿ ಮಾಡಿದ್ದೇನೆ. ನಂತರ ಸದನದಲ್ಲಿ ಮುಖಾಮುಖಿಯಾಗಿದ್ದೇವೆ. ಇದನ್ನು ಹೊರತುಪಡಿಸಿ ಯಡಿಯೂರಪ್ಪ ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದರು.

'ವಿರೋಧ ಪಕ್ಷದ ನಾಯಕನಾಗಲು ಸರ್ಕಾರ ಬೀಳಿಸಿದೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಹಾಗಿದ್ದರೆ ಜೆಡಿಎಸ್‌ನ ಮೂವರು ಶಾಸಕರೂ ಬಿಜೆಪಿಗೆ ಹೋದರಲ್ಲ. ಅದರ ಬಗ್ಗೆ ಏನು ಹೇಳುತ್ತಾರೆ. ಅವರನ್ನೂ ನಾನೇ ಬಿಜೆಪಿಗೆ ಕಳಿಸಿದೆನಾ' ಎಂದು ಪ್ರಶ್ನಿಸಿದರು.

'ಪುಟಗೋಸಿ ವಿರೋಧ ಪಕ್ಷದ ನಾಯಕನಾಗಲು ಸರ್ಕಾರ ಬೀಳಿಸಿದೆ ಎಂದು ಆರೋಪಿಸಿದ್ದಾರೆ. ಒಂದು ಸಂವಿಧಾನಾತ್ಮಕ ಹುದ್ದೆಯನ್ನು ಮುಖ್ಯಮಂತ್ರಿ ಆಗಿದ್ದವರು ಇಷ್ಟೊಂದು ಕೀಳಾಗಿ ನೋಡಿದರೆ ಹೇಗೆ? ಅವರ ತಂದೆ ಎಚ್.ಡಿ. ದೇವೇಗೌಡ ಅವರು, ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ವಿರೋಧ ಪಕ್ಷದ ನಾಯಕರಾಗಿದ್ದರು. ಹಾಗಿದ್ದರೆ ಅವರೂ ಪುಟಗೋಸಿನಾ' ಎಂದು ಹರಿಹಾಯ್ದರು.

ಎಚ್‌ಡಿಕೆಗೆ ಎರಡು ನಾಲಿಗೆ: 'ಕುಮಾರಸ್ವಾಮಿ ಅವರಿಗೆ ಎರಡು ನಾಲಿಗೆ ಇವೆ. ವಿರೋಧ ಪಕ್ಷದ ನಾಯಕನಾಗುವ ಉದ್ದೇಶದಿಂದ ನಾನು ಸರ್ಕಾರ ಬೀಳಿಸಿದೆ ಎಂದು ಸದನದ ಹೊರಗೆ ಹೇಳಿಕೆ ನೀಡುತ್ತಾರೆ. ಸರ್ಕಾರ ಬೀಳುವ ಸಂದರ್ಭದಲ್ಲಿ ಇದಕ್ಕೆ ಬಿ.ಎಸ್. ಯಡಿಯೂರಪ್ಪ ಕಾರಣ ಎಂದು ಸದನದಲ್ಲಿ ಹೇಳಿದ್ದರು. ರಾಜಕೀಯದಲ್ಲಿ ಒಂದು ಸಿದ್ಧಾಂತ ಇರಬೇಕು. ಕುಮಾರಸ್ವಾಮಿ ಅವರಿಗೆ ಸಿದ್ಧಾಂತವೇ ಇಲ್ಲ. 'ಜಾತ್ಯತೀತ' ಜನತಾದಳ ಎಂದು ಪಕ್ಷಕ್ಕೆ ಹೆಸರಿಟ್ಟುಕೊಂಡ ಕುಮಾರಸ್ವಾಮಿ ಕೋಮುವಾದಿ ಬಿಜೆಪಿಯೊಂದಿಗೆ ಹಿಂದೆ ಕೈಜೋಡಿಸಿದ್ದರು' ಎಂದರು.

'ಕುಮಾರಸ್ವಾಮಿಗೆ ನನ್ನನ್ನು ಕಂಡರೆ ಭಯ. ಅದಕ್ಕೇ ತಾವು ಕಾಂಗ್ರೆಸ್ ವಿರೋಧಿಸುತ್ತಿಲ್ಲ, ಸಿದ್ದರಾಮಯ್ಯ ಅವರನ್ನು ವಿರೋಧಿಸುತ್ತೇನೆ ಎಂದಿದ್ದಾರೆ. ಅಲ್ಲದೇ, ಮೈಸೂರು ಜನರನ್ನು ನನ್ನ ವಿರುದ್ಧ ಎತ್ತಿ ಕಟ್ಟಲು ಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿದರು.

ಸಿದ್ದರಾಮಯ್ಯ ಭೇಟಿ ಮಾಡಿಲ್ಲ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ



ಯಡಿಯೂರಪ್ಪ

ಬೆಂಗಳೂರು: 'ನನ್ನ ಜನ್ಮದಿನದ ಕಾರ್ಯಕ್ರಮ ಸಂದರ್ಭವನ್ನು ಹೊರತುಪಡಿಸಿ, ಸಿದ್ದರಾಮಯ್ಯ ಅವರನ್ನು ನಾನು ವೈಯಕ್ತಿಕವಾಗಿ ಭೇಟಿ ಮಾಡಿಲ್ಲ, ಭೇಟಿ ಮಾಡುವ ಅಗತ್ಯವೂ ನನಗಿಲ್ಲ' ಎಂದು ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

'ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದರಿಂದಲೇ ಯಡಿಯೂರಪ್ಪ ಮತ್ತು ಅವರ ಪುತ್ರ ವಿಜಯೇಂದ್ರ ಆಪ್ತರ ಮೇಲೆ ಐಟಿ ದಾಳಿ ನಡೆದಿದೆ' ಎಂದು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ ನೀಡಿದ್ದರು. ಅದಕ್ಕೆ ಟ್ವೀಟ್ ಮೂಲಕ ಯಡಿಯೂರಪ್ಪ ಪ್ರತಿಕ್ರಿಯಿಸಿದ್ದಾರೆ.

'ಗುರಿ ತಲುಪುವವರೆಗೆ ವಿಶ್ರಮಿಸುವುದಿಲ್ಲ. ನಂಬಿದ ಸಿದ್ಧಾಂತಗಳೊಂದಿಗೆ ನಾನೆಂದೂ ರಾಜಿಯಾಗಿಲ್ಲ, ಆಗುವುದೂ ಇಲ್ಲ. ಅದೇ ರೀತಿ ಸಿದ್ದರಾಮಯ್ಯ ಅವರನ್ನು ಕೂಡಾ ಭೇಟಿಯಾಗಿಲ್ಲ. ಮಾಧ್ಯಮಗಳಲ್ಲಿ ಪ್ರಸ್ತಾಪವಾಗಿರುವ ಸುದ್ದಿಯು ಸತ್ಯಕ್ಕೆ ದೂರವಾಗಿದ್ದು, ಅರ್ಥರಹಿತವಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಹಿಂದುತ್ವದ ವಿಚಾರಕ್ಕೆ ಬಂದರೆ ಅನುಭವಿಸುತ್ತಾರೆ'

ಶಿವಮೊಗ್ಗ: ಹಿಂದುತ್ವದ ವಿಚಾರಕ್ಕೆ ಯಾರೇ ಬಂದರೂ ಬಹಳ ಅನುಭವಿಸುತ್ತಾರೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಎಚ್ಚರಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೆಲವು ಮುಸ್ಲಿಮರು ತಾವೇ ಸಮಾಜದ ಉದ್ಧಾರಕರು ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ಚೈತ್ರಾ ಕುಂದಾಪುರ ಅವರ ವಿಡಿಯೊ ಸ್ಟೇಟಸ್‌ಗೆ ಹಾಕಿದ್ದಕ್ಕೆ ಹಲ್ಲೆ ನಡೆಸಿದ್ದಾರೆ ಎಂದರೆ ಅವರಿಗೆ ಎಷ್ಟು ಸೊಕ್ಕಿರಬೇಕು? ರಾಜ್ಯದಲ್ಲಿ ಇಂತಹ ವರ್ತನೆಗೆ ಅವಕಾಶವಿಲ್ಲ. ಮಿತಿಮೀರಿದರೆ ಅನುಭವಿಸುತ್ತಾರೆ' ಎಂದು ಗುಡುಗಿದರು.

ವಿರೋಧ ಪಕ್ಷದ ನಾಯಕ ಸ್ಥಾನಕ್ಕಾಗಿ ಬಿಜೆಪಿ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯ ಸಹಕರಿಸಿದರು ಎಂಬ ಹೇಳಿಕೆ ಒಪ್ಪಲು ಸಾಧ್ಯವಿಲ್ಲ. ದಾಖಲೆಗಳಿಲ್ಲದೇ ಹೇಳುವ ಯಾವ ಮಾತುಗಳಿಗೂ ಮನ್ನಣೆ ನೀಡುವ ಅಗತ್ಯವಿಲ್ಲ ಎಂದು ಪ್ರತಿಕ್ರಿಯಿಸಿದರು.

'ಕುರುಬರ ಮೀಸಲಾತಿ ವಿಚಾರದಲ್ಲಿ ಚರ್ಚೆಗೆ ಬರುವಂತೆ ಸಿದ್ದರಾಮಯ್ಯ ಆಹ್ವಾನ ನೀಡಿರುವ ವಿಷಯ ಗೊತ್ತಿಲ್ಲ. ಕಾಗಿನೆಲೆ ಶ್ರೀಗಳ ಆಹ್ವಾನದಂತೆ ಹೋರಾಟದಲ್ಲಿ ಭಾಗವಹಿಸಿದ್ದೆ. ವಿಷಯ ಸ್ಪಷ್ಟಪಡಿಸಿದರೆ ಚರ್ಚೆಗೆ ಬರಲು ಸಿದ್ಧ' ಎಂದರು.

ಕಾಂಗ್ರೆಸ್ ಒಂದು ಹಾಸ್ಯಾಸ್ಪದ ಪಕ್ಷ. ಉಗ್ರಪ್ಪ, ಸಲೀಂ ಅವರು ಡಿ.ಕೆ. ಶಿವಕುಮಾರ್ ಬಗ್ಗೆ ಮಾತನಾಡಿರುವುದನ್ನು ಮಾಧ್ಯಮಗಳಲ್ಲಿ ಕೇಳಿದೆ. ಅಂತಹ ಪದಗಳನ್ನು ತಾವು ಬಳಸುವುದಿಲ್ಲ. ಕಾಂಗ್ರೆಸ್ ಇಬ್ಭಾಗವಾಗಲಿದೆ ಎಂದು ಹೇಳಿದರು.

ಕಾಂಗ್ರೆಸ್‌ನಿಂದ ಸಲೀಂ ಉಚ್ಚಾಟನೆ; ಉಗ್ರಪ್ಪಗೆ ನೋಟಿಸ್

'ಡಿಕೆಶಿ ಪರ್ಸಂಟೇಜ್' ಸದ್ದು

ಒಂದನೇ ಪುಟದಿಂದ...

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೀಗೆ ಅನೇಕರು ಸಲೀಂ ಮತ್ತು ಉಗ್ರಪ್ಪ ನಡುವಿನ ಸಂಭಾಷಣೆಗೆ ಪ್ರತಿಕ್ರಿಯಿಸಿದ್ದಾರೆ.

ತಮ್ಮ ಬಗ್ಗೆ ಆಡಿದ ಮಾತಿಗೆ ಪ್ರತಿಕ್ರಿಯಿಸಿರುವ ಡಿ.ಕೆ. ಶಿವಕುಮಾರ್, 'ಮಾಧ್ಯಮಗಳಲ್ಲಿ ತೋರಿಸುತ್ತಿರುವ ಸಂಭಾಷಣೆಗೂ ನನಗೂ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ಸಂಬಂಧ ಇಲ್ಲ. ಆದರೆ, ಈ ಮಾತುಕತೆಯಿಂದ ಪಕ್ಷಕ್ಕೆ ಖಂಡಿತ ಮುಜುಗರ ಆಗಿದೆ. ನಾನು ಯಾವುದೇ ಪರ್ಸಂಟೇಜ್ ವಿಚಾರದಲ್ಲಿ ಭಾಗಿಯಾಗಿಲ್ಲ. ಪಕ್ಷದ ಶಿಸ್ತು ಸಮಿತಿ ಯಾವ ತೀರ್ಮಾನ ತೆಗೆದುಕೊಳ್ಳುತ್ತೊ ಅದಕ್ಕೆ ಬದ್ಧ' ಎಂದಿದ್ದಾರೆ.

ಸಲೀಂ ಅವರನ್ನು ಕೆ. ರಹಮಾನ್ ಖಾನ್ ನೇತೃತ್ವದ ಕೆಪಿಸಿಸಿ ಶಿಸ್ತು ಪಾಲನಾ ಸಮಿತಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷದ ಅವಧಿಗೆ ಉಚ್ಚಾಟಿಸಿದೆ. ಅಶಿಸ್ತಿನ ನಡವಳಿಕೆ ತೋರಿಸಿದ್ದೀರೆಂದು ಉಗ್ರಪ್ಪ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಿರುವ ಸಮಿತಿ, ಮೂರು ದಿನಗಳ ಒಳಗೆ ಉತ್ತರಿಸುವಂತೆ ಸೂಚಿಸಿದೆ.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಉಗ್ರಪ್ಪ, 'ನಾನು ಪತ್ರಿಕಾಗೋಷ್ಠಿಗೆ ಬಂದಾಗ ಸಲೀಂ ನನ್ನ ಕಿವಿಯಲ್ಲಿ, ನೀರಾವರಿ ಇಲಾಖೆಯ ಹಗರಣ ವಿಚಾರವಾಗಿ ನಮ್ಮ ಪಕ್ಷದ ನಾಯಕರ ವಿರುದ್ಧ ಗೂಬೆ ಕೂರಿಸಲು ಬಿಜೆಪಿಯವರು ಈ ರೀತಿ ಆರೋಪ ಮಾಡಿದ್ದಾರೆ ಎಂದರು. ನಾನು ಅದನ್ನು ಅಲ್ಲಿಗೆ ನಿಲ್ಲಿಸಿ ಪತ್ರಿಕಾಗೋಷ್ಠಿ ನಡೆಸಿದೆ. ಆದರೆ, ಮಾಧ್ಯಮಗಳು ಅದನ್ನು ಬೇರೆ ರೀತಿ ಬಿಂಬಿಸುತ್ತಿವೆ' ಎಂದರು.

'ಕಮಿಷನ್, ಭ್ರಷ್ಟಾಚಾರದಿಂದ ಕಾಂಗ್ರೆಸ್ ದೂರ. ಅದರಲ್ಲೂ ಪಕ್ಷದ ಅಧ್ಯಕ್ಷರು ಇನ್ನೂ ದೂರ. ಅವರು ಅಧಿಕಾರದಲ್ಲಿದ್ದಾಗ ಪರ್ಸಂಟೇಜ್ ಪಡೆಯುವ ಸಂಸ್ಕೃತಿ ಬೆಳೆಸಿಲ್ಲ. ಹೀಗಾಗಿ, ನಮ್ಮ ಮಾತನ್ನು ವೈಭವೀಕರಿಸಿ ಬಿಂಬಿಸುವ ಕೆಲಸ ಮಾಧ್ಯಮ ಮೌಲ್ಯಗಳಿಗೆ ಸಮಂಜಸವಲ್ಲ' ಎಂದರು.

ಕಲೆಕ್ಷನ್ ಗಿರಾಕಿ–ಸಲೀಂ ಅವ್ನ ತಕ್ಕಡಿ ಏಳುತ್ತಿಲ್ಲ–ಉಗ್ರಪ್ಪ

ಕೆಪಿಸಿಸಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿ ಆರಂಭಕ್ಕೆ ಮುನ್ನ ಉಗ್ರಪ್ಪ ಅವರ ಬಳಿ ಬಂದು ಕುಳಿತು ಸಲೀಂ ಮಾತನಾಡಿದ್ದು, ಅದಕ್ಕೆ ಉಗ್ರಪ್ಪ ಪ್ರತಿಕ್ರಿಯಿಸಿದ್ದು ಇಲ್ಲಿದೆ.

ಸಲೀಂ: ಏನಾಯಿತು ಸಾರ್... 6ರಿಂದ 8 ಪರ್ಸೆಂಟ್ ಇತ್ತು. 10ರಿಂದ 12 ಪರ್ಸೆಂಟ್ ಮಾಡಿದ್ರು. ಅಡ್ಜಸ್ಟ್‌ಮೆಂಟ್ ಡಿಕೆದ್ದೂ ಇದೆ..

ಸಲೀಂ: ಜಾಸ್ತಿ ಉಪ್ಪಾರ್, ಜಿ. ಶಂಕರ್, ಹನುಮಂತಪ್ಪ. ಹನುಮಂತಪ್ಪ ಬಳ್ಳಾರಿಯವನು ಗೊತ್ತಾ ಸರ್... ಹನುಮಂತಪ್ಪ ಹೊಸಪೇಟೆ. ಇವನು ಉಪ್ಪಾರ್, ಬೆಂಗಳೂರು. ಜಿ. ಶಂಕರ್ ಉಡುಪಿ.

ಉಗ್ರಪ್ಪ: ಉಪ್ಪಾರ್ ಬಿಜಾಪುರ್

ಸಲೀಂ: ಬಿಜಾಪುರ್.. ಮತ್ತೆ ಅವನ ಮನೆ ಎಸ್.ಎಂ. ಕೃಷ್ಣ ಮನೆ ಎದುರುಗಡೆ

ಉಗ್ರಪ್ಪ: ಇದು ಇದೆಯಲ್ಲ...

ಸಲೀಂ: ದೊಡ್ಡ ಸ್ಕ್ಯಾಂಡಲ್... ಕೆದಕುತ್ತಾ ಹೋದರೆ ಇವರದ್ದೂ ಬರುತ್ತೆ.

ಉಗ್ರಪ್ಪ: ನಾನು ನಿಮಗೆ ಹೇಳಲಾ. ಕಣ್ಣು ಮುಚ್ಚಿ...

ಸಲೀಂ: ನಮ್ಮ ಮುಳಗುಂದ 50ರಿಂದ 100 ಕೋಟಿ ಮಾಡಿದ್ದಾನೆ. ಮುಳಗುಂದ... ಅವನು 50, 100 ಮಾಡಿದ್ದಾನೆ ಅಂದ್ರೆ ಇವನ ಹತ್ರ ಎಷ್ಟು ಇರಬಹುದು. ಡಿಕೆ ಹತ್ರ. ಲೆಕ್ಕ ಹಾಕಿ. ಅವನು ಬರೀ ಕಲೆಕ್ಷನ್ ಗಿರಾಕಿ.

ಉಗ್ರಪ್ಪ: ನಿಮಗೆಲ್ಲ ಗೊತ್ತಿಲ್ಲ... ನಾವೆಲ್ಲಾ ಪಟ್ಟುಹಿಡಿದು ಅಧ್ಯಕ್ಷನನ್ನಾಗಿ ಮಾಡಿಸಿದ್ದು ಅವನಿಗೆ. ನಮ್ ದೌರ್ಭಾಗ್ಯ. ಅವನ ತಕ್ಕಡಿ ಏಳುತ್ತಿಲ್ಲ... ಇವೆಲ್ಲ ಕಾರಣಗಳಿಂದ.

ಸಲೀಂ: ಇಲ್ಲಾ ಸಾರ್. ಇಲ್ಲ ಸಾರ್ ಭಾರಿ ಆಯಿತು. ಮತ್ತೆ ನೀವು ನೋಡ್ತೀರಲ್ಲ. ಮಾತನಾಡುವಾಗ ತೊದಲಿಸುತ್ತಾರೆ. ಏನೊ ಲೋ ಬಿಪಿನೊ.. ನೋಡಿ.. ಕುಡುಕರೂ..

ಉಗ್ರಪ್ಪ: ಅದನ್ನೇ ಹೇಳಿದ್ದು ಈಗ.

ಸಲೀಂ: ಸಾರ್... ಅರ್ಥ ಆಗಿಲ್ಲ ಅವರಿಗೆ... ಡ್ರಿಂಕ್ಸ್ ಮಾಡಿದ್ದಾರಾ ಅಂತಾರೆ. ಡ್ರಿಂಕ್ಸ್ ಮಾಡಲಿಲ್ಲ. ಅದು ಆ್ಯಕ್ಚುವಲಿ.. (ಇಬ್ಬರೂ ನಗು)

ಸಲೀಂ (ನಗುತ್ತಲೇ): ಮಾತಾಡುವ ಶೈಲಿ... (ಮತ್ತೆ ಇಬ್ಬರೂ ಜೋರು ನಗು)

ಸಲೀಂ– ಲೋ ಬಿಪಿ... ಎಮೋಷನ್‌ನಲಿ ಹೋಗ್ತಾರೆ... ಇನ್ನೊಂದು, ಬಾಡಿ ಲಾಂಗ್ವೇಜ್ ಇವರದ್ದು ಹೆಂಗಿದೆ ಸಾರ್... ಸಿದ್ದರಾಮಯ್ಯನವರದ್ದು, ಖಡಕ್ ಅಂದ್ರೆ ಖಡಕ್.



ಎಂ.ಎ. ಸಲೀಂ ಮತ್ತು ವಿ.ಎಸ್. ಉಗ್ರಪ್ಪ ನಡುವೆ 'ಪಿಸುಮಾತು'

'ಡಿಕೆಶಿಗೆ ಖೆಡ್ಡಾ ತೋಡಿದ ಸಿದ್ದರಾಮಯ್ಯ ಶಿಷ್ಯ ಪಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಅವರ ಶಿಷ್ಯ ಪಡೆ ಡಿ.ಕೆ.ಶಿವಕುಮಾರ್ ಅವರಿಗೆ ಖೆಡ್ಡಾ ತೋಡಲು ಸಜ್ಜಾಗಿರುವಂತೆ ಕಾಣುತ್ತಿದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಡಿ.ಕೆ.ಶಿವಕುಮಾರ್ ಕುರಿತು ಕಾಂಗ್ರೆಸ್ ನಾಯಕರಾದ ವಿ.ಎಸ್. ಉಗ್ರಪ್ಪ ಮತ್ತು ಸಲೀಂ ಮಧ್ಯೆ ನಡೆದ ಸಂಭಾಷಣೆಯ ಕುರಿತು ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ರವಿ, 'ಒಂದು ಕಡೆ ತಮ್ಮ ನಾಯಕನನ್ನು ಹೊಗಳಿ, ಇನ್ನೊಂದು ಕಡೆ ನಿಮ್ಮನ್ನು ಜನತೆ ಮುಂದೆ ಬೆತ್ತಲು ಮಾಡಲು ಹೊರಟಂತಿದೆ. ಯಾವುದಕ್ಕೂ ನೀವು (ಡಿಕೆ) ಎಚ್ಚೆತ್ತುಕೊಳ್ಳುವುದು ಒಳಿತು' ಎಂದು ವ್ಯಂಗಭರಿತ ಸಲಹೆ ನೀಡಿದ್ದಾರೆ.

'ಕೊತ್ವಾಲ್ ರಾಮಚಂದ್ರನ ಶಿಷ್ಯನ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಅವರದೇ ಪಕ್ಷದ ಮುಖಂಡರು ಕಚೇರಿಯಲ್ಲೇ ಬಹಿರಂಗಪಡಿಸಿದ್ದಾರೆ ಎಂದರೆ ಕೆಪಿಸಿಸಿಗೆ ಎಂಥ ದುರ್ಗತಿ ಬಂದಿರಬಹುದು. ಶಿವಕುಮಾರ್ ಕಲೆಕ್ಷನ್ ಗುಟ್ಟನ್ನು ಕೊನೆಗೂ ಅವರದೇ ಪಕ್ಷದ ಮುಖಂಡ ಗುಸುಗುಸಿನಲ್ಲೇ ಜಗಜ್ಜಾಹೀರು ಮಾಡಿದ್ದಾರೆ. ಕಾಣದ ಕಲೆಕ್ಷನ್ ಎಷ್ಟಿರಬಹುದು' ಎಂದು ರವಿ ಪ್ರಶ್ನಿಸಿದ್ದಾರೆ.

ಸತ್ಯ ಹೊರಗೆ ಬರಲೇಬೇಕು: 'ಶಿವಕುಮಾರ್ ಅವರನ್ನು ಕುಡುಕ, ಕಲೆಕ್ಷನ್ ಗಿರಾಕಿ, ಭ್ರಷ್ಟಾಚಾರಿ, ತನಿಖೆ ಮಾಡಿದರೆ ತುಂಬಾ ಹಗರಣ ಹೊರಗೆ ಬರುತ್ತದೆ ಎಂದು ಹೇಳಿದ್ದಾರೆ. ಸತ್ಯ ಯಾವತ್ತಾದರೂ ಹೊರಗೆ ಬರಲೇಬೇಕು ಎಂಬುದು ಸಾಬೀತಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

'ವಿಡಿಯೊ ಹಿಂದೆ ಸಿದ್ದರಾಮಯ್ಯ ಇರಬಹುದೇ?'

ಡಿ.ಕೆ. ಶಿವಕುಮಾರ್ ವಿರುದ್ಧ ಕಾಂಗ್ರೆಸ್ ಮುಖಂಡರಾದ ಎಂ.ಎ. ಸಲೀಂ ಮತ್ತು ವಿ.ಎಸ್. ಉಗ್ರಪ್ಪ ಮಾತನಾಡುತ್ತಿರುವ ವಿಡಿಯೊ ಹೊರಬಂದಿರುವುದರ ಹಿಂದೆ ಸಿದ್ದರಾಮಯ್ಯ ಇರಬಹುದೇ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಪ್ರಶ್ನಿಸಿದ್ದಾರೆ.

ಈ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಶಿವಕುಮಾರ್ ಒಮ್ಮೆಯಾದರೂ ಮುಖ್ಯಮಂತ್ರಿ ಆಗಬೇಕು ಎಂದು ಓಡಾಡುತ್ತಿದ್ದಾರೆ. ಮತ್ತೊಂದೆಡೆ ಅವರನ್ನು ಮನೆಗೆ ಕಳುಹಿಸಲು ಸಿದ್ದರಾಮಯ್ಯ ಓಡಾಡುತ್ತಿದ್ದಾರೆ. ಸಿದ್ದರಾಮಯ್ಯ ಶಿಷ್ಯರೇ ಶಿವಕುಮಾರ್ ಬಗ್ಗೆ ಮಾತನಾಡಿದ್ದಾರೆ. ಯಾವ ಉದ್ದೇಶ ಇದೆಯೋ ಗೊತ್ತಿಲ್ಲ' ಎಂದರು.

ದೂರು ಕೊಟ್ಟರೆ ತನಿಖೆ: ಆರಗ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಭ್ರಷ್ಟಾಚಾರದ ಬಗ್ಗೆ ದೂರು ಕೊಟ್ಟರೆ ತನಿಖೆ ಆದೇಶಿಸುತ್ತೇನೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಈ ವಿಚಾರವಾಗಿ ವಿ.ಎಸ್. ಉಗ್ರಪ್ಪ ಅವರು ದೂರು ಕೊಟ್ಟರೆ ತನಿಖೆ ಮಾಡುತ್ತೇವೆ. ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಳ್ಳುವುದು ಕಷ್ಟ. ಅವರೇ ದೂರು ಕೊಡಲಿ ಎಂದರು.

'ಬರಿ ಬಾಯಿ ಮಾತಲ್ಲಿ ಹೇಳಿದರೆ, ಅದು ಬೊಗಳೆ ಆಗುತ್ತದೆ. ಭ್ರಷ್ಟಾಚಾರ ಮುಕ್ತವಾಗಬೇಕು ಎಂಬ ಕಾಳಜಿ ಉಗ್ರಪ್ಪ ಅವರಿಗೆ ಇದ್ದರೆ ದೂರು ನೀಡಲಿ' ಎಂದೂ ಹೇಳಿದರು.

ನ.24ಕ್ಕೆ ರಾಜ್ಯಾಧ್ಯಕ್ಷ ಸ್ಥಾನದ ಫಲಿತಾಂಶ

ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ ನ.21ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕದ ಅಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ನ. 21ರಂದು ಚುನಾವಣೆ ನಡೆಯಲಿದೆ.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತಿನ ಚುನಾವಣೆ ಕಳೆದ ಮೇ 9ರಂದು ಈ ಹಿಂದೆ ನಿಗದಿಯಾಗಿತ್ತು. ನಾಮಪತ್ರ ಪರಿಶೀಲನೆ ಸೇರಿದಂತೆ ವಿವಿಧ ಪ್ರಕ್ರಿಯೆಗಳು ಪೂರ್ಣಗೊಂಡು, ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅಂತಿಮವಾಗಿ 21 ಮಂದಿ ಸ್ಪರ್ಧೆಯಲ್ಲಿದ್ದರು. ಮಾರ್ಚ್ ಮೂರನೇ ವಾರದ ಬಳಿಕ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದು, ಏಪ್ರಿಲ್ ತಿಂಗಳಲ್ಲಿ ಗರಿಷ್ಠ ಸಂಖ್ಯೆಗೆ ತಲುಪಿದ ಕಾರಣ ಚುನಾವಣೆಯನ್ನು ಸರ್ಕಾರ ಮುಂದೂಡಿತ್ತು.

ಚುನಾವಣಾ ಪ್ರಕ್ರಿಯೆಯನ್ನು ಮುಂದೂಡಿದ ಹಂತದಿಂದ ಯಥಾವತ್ತಾಗಿ ಮುಂದುವರಿಸಲಾಗುವುದು ಎಂದು ಕಳೆದ ಏಪ್ರಿಲ್ 26ರಂದು ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿತ್ತು. ಈಗ ಸರ್ಕಾರವು ಚುನಾವಣೆ ನಡೆಸಲು ಅನುಮತಿ ನೀಡಿದೆ. ಹೀಗಾಗಿ, ಸ್ಥಗಿತಗೊಂಡ ಚುನಾವಣೆ ಪ್ರಕ್ರಿಯೆಯನ್ನು ಯಥಾವತ್ತಾಗಿ ನಡೆಸಲು ಕೇಂದ್ರ ಚುನಾವಣಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಕ್ರಮಕೈಗೊಂಡಿದ್ದಾರೆ.

ನ.24ಕ್ಕೆ ಫಲಿತಾಂಶ: ಈ ಬಾರಿ ಚುನಾವಣೆಯಲ್ಲಿ 3,10,109 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ನ.21ರಂದು ಬೆಳಿಗ್ಗೆ 8ರಿಂದ ಸಂಜೆ 4 ಗಂಟೆಯವರೆಗೆ ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳು ಹಾಗೂ ಬೆಂಗಳೂರು ನಗರ ಜಿಲ್ಲೆಯ 27 ವಿಧಾನಸಭೆ ಕ್ಷೇತ್ರಗಳ ಗುರುತಿಸಲಾದ ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ. ಜಿಲ್ಲಾ ಘಟಕಗಳ ಅಧ್ಯಕ್ಷರ ಫಲಿತಾಂಶ ಅದೇ ದಿನ ಘೋಷಣೆಯಾಗಲಿದೆ ಎಂದು ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

'ನ.24 ರಂದು ಪರಿಷತ್ತಿನ ಚುನಾವಣಾಧಿಕಾರಿಯ ಕೇಂದ್ರ ಕಚೇರಿಯಲ್ಲಿ ಗಡಿನಾಡ ಘಟಕಗಳ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಅಂಚೆ ಮತಪತ್ರಗಳನ್ನು ಎಣಿಕೆ ಮಾಡಿ, ಫಲಿತಾಂಶ ಘೋಷಿಸಲಾಗುತ್ತದೆ. ರಾಜ್ಯಾಧ್ಯಕ್ಷರ ಆಯ್ಕೆಗೆ ಎಲ್ಲ ಜಿಲ್ಲೆಗಳಿಂದ ಬಂದ ಮತಗಳು ಹಾಗೂ ಅಂಚೆ ಮತಗಳನ್ನು ಕ್ರೋಢೀಕರಿಸಿ, ಅದೇ ದಿನ ಫಲಿತಾಂಶವನ್ನು ಘೋಷಿಸಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ರಾಜ್ಯ ಘಟಕ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದವರು

ಮ.ಚಿ. ಕೃಷ್ಣ, ವ.ಚ. ಚನ್ನೇಗೌಡ, ಮಹೇಶ್ ಜೋಶಿ, ಸಂಗಮೇಶ ಬಾದವಾಡಗಿ, ಸಿ.ಕೆ. ರಾಮೇಗೌಡ, ರಾಜಶೇಖರ ಮುಲಾಲಿ, ಬಸವರಾಜ ಶಿ. ಹಳ್ಳೂರ, ಬಾಡದ ಭದ್ರಿನಾಥ್, ಶಿವರಾಜ ಪಾಟೀಲ, ಸರಸ್ವತಿ ಶಿವಪ್ಪ ಚಿಮ್ಮಲಗಿ, ವೈ. ರೇಣುಕಾ, ಶೇಖರಗೌಡ ಮಾಲಿ ಪಾಟೀಲ, ಕೆ. ರತ್ನಾಕರ ಶೆಟ್ಟಿ, ವಾಲ್ಮೀಕಪ್ಪ ಹ. ಯಕ್ಕರನಾಳ, ಮಾಯಣ್ಣ, ಪ್ರಮೋದ್ ಹಳಕಟ್ಟಿ, ಶಿವಪ್ಪ ಮಲ್ಲಪ್ಪ ಬಾಗಲ, ಕೆ. ರವಿ ಅಂಬೇಕರ, ನ.ಶ್ರೀ. ಸುಧೀಂದ್ರರಾವ್, ಶರಣಬಸಪ್ಪ ಕಲ್ಲಪ್ಪ ದಾನಕೈ ಹಾಗೂ ಶಿವರುದ್ರಸ್ವಾಮಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

ಚುನಾವಣೆ ಕಣದಲ್ಲಿ ಇರುವವರು

- ರಾಜ್ಯ ಘಟಕ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದವರು; 21
- ಜಿಲ್ಲಾ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದವರು; 223
- ಗಡಿನಾಡು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದವರು; 16

ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯಲ್ಲಿ ಭಾರಿ ಮಳೆ; ಉತ್ತರ ಪಿನಾಕಿನಿ ನದಿ ಹರಿವು ಹೆಚ್ಚಳ

ಕೆರೆಗಳಿಗೆ ಹಾನಿ: ಕುಟುಂಬಗಳ ಸ್ಥಳಾಂತರಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಎರಡು ದಿನಗಳಿಂದ ಭಾರಿ ಮಳೆ ಸುರಿದಿದ್ದು, ಕೆರೆಗಳಿಗೆ ನೀರಿನ ಹರಿವು ಹೆಚ್ಚಿದೆ. ಶಿಡ್ಲಘಟ್ಟ ತಾಲ್ಲೂಕಿನ ನಾರಾಯಣಕೆರೆ, ಚಿಕ್ಕಭದ್ರನಘಟ್ಟ ಕೆರೆ, ನಲ್ಲೋಜನಹಳ್ಳಿ ಅಗ್ರಹಾರ ಕೆರೆ ಹಾಗೂ ಗೋಣಿಮರದ-ಹಳ್ಳಿ ಕೆರೆಗೆ ಹಾನಿಯಾಗಿದೆ.

ನಲ್ಲೋಜನಹಳ್ಳಿ ಅಗ್ರಹಾರ ಕೆರೆಯ ಒಂದು ಬದಿ ಒಡೆದ ಕಾರಣ ರಭಸವಾಗಿ ನೀರು ಹೊರ ಹೋಗುತ್ತಿದೆ. ಕೆರೆ ಸುತ್ತಲಿನ ಜಮೀನುಗಳು ಜಲಾವೃತವಾಗಿವೆ. ಸುತ್ತಲಿನ ಮನೆಗಳವರು ಬೇರೆಡೆ ತೆರಳುವಂತೆ ಅಧಿಕಾರಿಗಳು ಸೂಚಿಸಿದ್ದಾರೆ. ಗೋಣಿ-ಮರದಹಳ್ಳಿ ಮತ್ತು ಕೆ. ಹೊಸೂರು ನಡುವಿನ ರಸ್ತೆಯ ಮೋರಿ ಕಿತ್ತು ಹೋಗಿದೆ.



ಶಿಡ್ಲಘಟ್ಟ ತಾಲ್ಲೂಕಿನ ನಲ್ಲೋಜನಹಳ್ಳಿ ಅಗ್ರಹಾರ ಕೆರೆ ಒಡೆದು ನೀರು ಹೊರ ಹೋಗುತ್ತಿರುವುದು

ಗೌರಿಬಿದನೂರು ಹೊರವಲಯದ-ಲ್ಲಿ ಉತ್ತರ ಪಿನಾಕಿನಿ ನದಿ ಹರಿಯುತ್ತಿದೆ. ನೀರಿನ ರಭಸ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ. ಮುಂಜಾಗ್ರತೆಯಾಗಿ ನದಿ ಅಂಚಿನಲ್ಲಿರುವ 800ಕ್ಕೂ ಹೆಚ್ಚು ಕುಟುಂಬಗಳ ಸ್ಥಳಾಂತರಕ್ಕೆ ತಾಲ್ಲೂಕು ಆಡಳಿತ ಮುಂದಾಗಿದ್ದು, ಸಮೀಪದ ಕಲ್ಯಾಣ ಮಂಟಪದಲ್ಲಿ ವಸತಿಗೆ ವ್ಯವಸ್ಥೆ ಮಾಡಲಾಗಿದೆ. ಬಾಗೇಪಲ್ಲಿ ತಾಲ್ಲೂಕಿನ ಕಾಣ-ದಮಾಕಲಪಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮದ್ದಲಕಾನ ಹಾಗೂ ದೇಶಮಾರ ತಾಂಡ ಸಂಪರ್ಕಿಸುವ ರಸ್ತೆಯಲ್ಲಿನ ಮೇಲ್ಸೇತುವೆ ಕುಸಿದು ಬಿದ್ದಿದೆ. ಮಾರ್ಗಾನುಕುಂಟೆ, ಯಲ್ಲಂಪಲ್ಲಿ, ಮಿಟ್ಟೇಮರಿಯಲ್ಲಿ-ಯೂ ರಸ್ತೆಗಳು ಹಾಳಾಗಿವೆ. ಚಿತ್ರಾವತಿ ಜಲಾಶಯ ತುಂಬಿದೆ.

ರಾಗಿ, ಶೇಂಗಾ ಬೆಳೆಗೆ ಹಾನಿ (ಕೋಲಾರ ವರದಿ): ಜಿಲ್ಲೆಯಲ್ಲಿ ಧಾರಾಕಾರ ಮಳೆಗೆ ರೈತರ ಬದುಕು ನೀರು ಪಾಲಾಗಿದೆ. ಜಮೀನುಗಳಲ್ಲಿ ಮಳೆ ನೀರು ಕೆರೆಯಂತೆ ನಿಂತಿದ್ದು, ರಾಗಿ ಹಾಗೂ ಶೇಂಗಾ ಬೆಳೆ ಕೊಳೆಯಲಾರಂಭಿಸಿವೆ.

ಸತತ ಮಳೆಗೆ ಜಿಲ್ಲೆಯ ಬಹುಪಾಲು ಕೆರೆಗಳು ತುಂಬಿ ಕೋಡಿ ಹರಿದಿದ್ದು, ಕೆರೆಯ ಅಕ್ಕಪಕ್ಕದ ಜಮೀನುಗಳು ಜಲಾವೃತವಾಗಿವೆ. ಹಲವೆಡೆ ಮಳೆ ನೀರು ಜಮೀನುಗಳಲ್ಲಿ ಹಳ್ಳದಂತೆ ಹರಿಯುತ್ತಿದ್ದು, ಬೆಳೆಗಳು ಕೊಚ್ಚಿ ಹೋಗಿವೆ. ಜಮೀನುಗಳಲ್ಲಿನ ಕೊಳವೆಬಾವಿ, ಕೃಷಿ ಯಂತ್ರೋಪಕರಣ-ಗಳು ನೀರಿನಲ್ಲಿ ಮುಳುಗಿವೆ.

ಹದಿನಾರು ವರ್ಷಗಳ ನಂತರ ಜಿಲ್ಲೆಯ ನಂಗಲಿ ಕೆರೆ ಕೋಡಿ ಹರಿದಿದೆ.

ಕರಾವಳಿಯಲ್ಲಿ ಧಾರಾಕಾರ ಮಳೆ: ಮನೆಗಳಿಗೆ ಹಾನಿ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಮಳೆಯ ಅಬ್ಬರ ಜೋರಾಗಿದ್ದು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವಾರು ಮನೆಗಳಿಗೆ ಹಾನಿಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3 ಮನೆಗಳು ಪೂರ್ಣ ಹಾಗೂ 14 ಮನೆಗಳಿಗೆ ಭಾಗಶಃ ಹಾನಿಯಾಗಿವೆ. 104 ವಿದ್ಯುತ್ ಕಂಬಗಳು, 5 ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ. ಮಂಗಳೂರಿನ ದೇರೆಬೈಲ್‌ನಲ್ಲಿ ರಸ್ತೆ ಕುಸಿದಿದೆ. ಜಿಲ್ಲೆಯಲ್ಲಿ ಸರಾಸರಿ 10.2 ಸೆಂ.ಮೀ. ಮಳೆಯಾಗಿದ್ದು, ಮೂಡುಬಿದಿರೆ ತಾಲ್ಲೂಕಿನಲ್ಲಿ 16.7, ಬೆಳ್ತಂಗಡಿ ತಾಲ್ಲೂಕಿನಲ್ಲಿ 14, ಮಂಗಳೂರು ತಾಲ್ಲೂಕಿನಲ್ಲಿ 12.6 ಹಾಗೂ ಬಂಟ್ವಾಳ ತಾಲ್ಲೂಕಿನಲ್ಲಿ 10.8 ಸೆಂ.ಮೀ. ಮಳೆಯಾಗಿದೆ.

ಉಡುಪಿ ಜಿಲ್ಲೆಯಾದ್ಯಂತ ಮಂಗಳವಾರ ಅಬ್ಬರಿಸಿದ್ದ ಮಳೆ ಬುಧವಾರ ಕೊಂಚ ತಗ್ಗಿತ್ತು. 24 ಗಂಟೆಗಳಲ್ಲಿ ಜಿಲ್ಲೆಯಾದ್ಯಂತ ಭಾರಿ ಮಳೆ ಸುರಿದಿದ್ದು, ತಾಲ್ಲೂಕಿನ ಐರೋಡಿಯಲ್ಲಿ 30.4 ಸೆಂ.ಮೀ, ಬಾರ್ಕೂರಿನಲ್ಲಿ 29 ಸೆಂ.ಮೀ ಹಾಗೂ ಕುರ್ಕಾಲಿನಲ್ಲಿ 26.6 ಸೆಂ.ಮೀ ಮಳೆ ಬಿದ್ದಿದೆ.

ಕಾಪು ತಾಲ್ಲೂಕಿನ ನಂದಿಕೂರು, ಪಡು, ಬೆಳಪು, ಬೆಳ್ಳೆ, ಉಡುಪಿ ತಾಲ್ಲೂಕಿನ ಉದ್ಯಾವರದಲ್ಲಿ ಗಾಳಿ ಮಳೆಗೆ ಮನೆಗಳಿಗೆ ಹಾನಿಯಾಗಿದೆ. ಕಾರ್ಕಳ ತಾಲ್ಲೂಕಿನ ಕಣಜಾರು ಗ್ರಾಮದಲ್ಲಿ ಭತ್ತದ ಬೆಳೆ ನಾಶವಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	117.14	10,306	4,906
ಹಾರಂಗಿ	2,859	2,858.41	2,222	1,250
ಕಬಿನಿ	2,284	2,279.45	5,800	2,000
ಹೇಮಾವತಿ	2,922	2,911.59	3,586	4,423
ಲಿಂಗನಮಕ್ಕಿ	1,819	1,815.85	3,682	-
ಸೂಪಾ (ಮೀ)	564	557.11	2,649	2,202
ಮಾಣಿ	594.36	587.50	793	-
ತುಂಗಭದ್ರಾ	1,633	1,632.99	20,758	20,338
ಮಲಪ್ರಭಾ	2,079.50	2,079.50	3,394	3,394
ಘಟಪ್ರಭಾ	2,175	2,175	2,195	2,195
ಭದ್ರಾ	186	186	5,888	5,888
ಆಲಮಟ್ಟಿ (ಮೀ)	519.60	519.60	17,592	13,530
ನಾರಾಯಣಪುರ (ಮೀ)	492.25	492.23	15,000	26,400

* ನೆಲಮಟ್ಟದಿಂದ



ಮುರುಘಾಶ್ರೀ ಪ್ರಶಸ್ತಿ ಪ್ರದಾನ

ಚಿತ್ರದುರ್ಗದ ಮುರುಘಾ ಮಠದಲ್ಲಿ ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ಬುಧವಾರ ನಡೆದ ಸಮಾರಂಭದಲ್ಲಿ ಯೋಗಪಟು ತನುಶ್ರೀ ಅವರಿಗೆ ಭರಮಣ್ಣನಾಯಕ ಶೌರ್ಯ ಪ್ರಶಸ್ತಿ, ಸಂತೆಬೆನ್ನೂರು ಸಿದ್ಧನಮಠದ ಯುಗಧರ್ಮ ರಾಮಣ್ಣ, ತಮಿಳುನಾಡು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ನಾಗರತ್ನಂ, ಹೆಬ್ಬಾಳು ವಿರಕ್ತಮಠದ ಮಹಾಂತ ರುದ್ರೇಶ್ವರ ಸ್ವಾಮೀಜಿ, 'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಶಿಕಾರಿಪುರ ಜುಬೇದಾ ವಿದ್ಯಾಸಂಸ್ಥೆಯ ಸಂಸ್ಥಾಪಕ ಡಾ.ಅಮ್ಜಾದ್ ಹುಸ್ಸೇನ್ ಅವರಿಗೆ ಮುರುಘಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಉತ್ಸವ ಸಮಿತಿ ಕಾರ್ಯಾಧ್ಯಕ್ಷ ಕೆ.ಎಸ್. ನವೀನ್, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು, ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಇದ್ದಾರೆ. – ಪ್ರಜಾವಾಣಿ ಚಿತ್ರ

ಮತೀಯ ಗೂಂಡಾಗಿರಿ ಬೊಮ್ಮಾಯಿ ಸಮರ್ಥನೆ

ಒಂದನೇ ಪುಟದಿಂದ...

'ಸಂವಿಧಾನದ ಹೆಸರಿನಲ್ಲಿ ಪ್ರಮಾಣ ಮಾಡಿದ ಮುಖ್ಯಮಂತ್ರಿ ಈ ರೀತಿ ಹೇಳಿಕೆ ನೀಡಿರುವುದು ನಾಚಿಕೆಗೇಡಿನ ಕೆಲಸ. ಈ ಮಾತಿನಿಂದ ಮತೀಯವಾದಿಗಳು ಪ್ರಚೋದಿತರಾಗಿ ಬೀದಿಗಿಳಿಯುವುದು ಖಚಿತ. ಈ ಮಾತಿಗಾಗಿ ಬೊಮ್ಮಾಯಿ ಅವರು ರಾಜ್ಯದ ಜನರ ಕ್ಷಮೆ ಯಾಚಿಸಬೇಕು' ಎಂದು ಡಿವೈಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಆಗ್ರಹಿಸಿದ್ದಾರೆ.

'ಇದೊಂದು ದುರದೃಷ್ಟಕರ ಬೆಳವಣಿಗೆ. ಇಂತಹ ಕೃತ್ಯಗಳನ್ನು ಮುಖ್ಯಮಂತ್ರಿಯೇ ಬೆಂಬಲಿಸಿದ್ದಾರೆ. 'ಅನೈತಿಕ ಪೊಲೀಸ್‌ಗಿರಿ' ಹೆಸರಿನಲ್ಲಿ ನಡೆಯುವ ಗುಂಪು ಹಲ್ಲೆಯನ್ನು ಸಾಮಾನ್ಯ ಎಂಬಂತೆ ಬಿಂಬಿಸುತ್ತಿದ್ದಾರೆ' ಎಂದು ಜೆಡಿಎಸ್ ಮಾಹಿತಿ ತಂತ್ರಜ್ಞಾನ ಘಟಕದ ಮುಖ್ಯಸ್ಥ ಪ್ರತಾಪ್ ಕಣಗಲ್ ಪ್ರತಿಕ್ರಿಯಿಸಿದ್ದಾರೆ.

ಗ್ಲೆನ್ ಡಿಸೋಜ ಎಂಬುವವರು, 'ಬೊಮ್ಮಾಯಿ ಕರ್ನಾಟಕವನ್ನು ಉತ್ತರ ಪ್ರದೇಶ ಮಾಡಲು ಹೊರಟಿದ್ದಾರೆ. ಕರ್ನಾಟಕ ಬಸವಣ್ಣನ ನಾಡು. ಶಾಂತಿಯ ತೋಟ ಎಂದೇ ಹೆಸರಾಗಿದೆ. ಆದರೆ, ಈಗ ಬೊಮ್ಮಾಯಿ ಅವರ ಆಡಳಿತದಲ್ಲಿ ಕರ್ನಾಟಕ ಉತ್ತರ ಪ್ರದೇಶವಾಗುತ್ತಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಹೋರಾಟಗಾರ ವಿನಯ್ ಶ್ರೀನಿವಾಸ, 'ಮತೀಯ ಗೂಂಡಾಗಿರಿ ವ್ಯಕ್ತಿಯ ಮೂಲಭೂತ ಹಕ್ಕುಗಳನ್ನು ನಾಶ ಮಾಡುತ್ತದೆ. ಇದು ಮತೀಯವಾದಿಗಳು ಹಾಗೂ ಫ್ಯಾಸಿಸ್ಟ್ ಮನಸ್ಥಿತಿಯವರು ಎಸಗುವ ಕೃತ್ಯ. ಇದರಿಂದ ಸಮಾಜ ಒಡೆದುಹೋಗುತ್ತದೆ. ನಮ್ಮ ಹಳೆಯ ಕರ್ನಾಟಕವನ್ನು ವಾಪಸು ಕೊಡಿ' ಎಂದು ಆಗ್ರಹಿಸಿದ್ದಾರೆ.

'ಇಂತಹ ಎಚ್ಚರಿಕೆ ಇಲ್ಲದ ಹೇಳಿಕೆಗಳು ಜನರ ರಕ್ಷಣೆಯ ಕುರಿತು ಆತಂಕ ಹುಟ್ಟಿಸುತ್ತಿವೆ. ಜನರ ರಕ್ಷಣೆ ಸರ್ಕಾರದ ಹೊಣೆ. ಆದರೆ, ಈ ಬೇಜವಾಬ್ದಾರಿ ಸರ್ಕಾರ ಜನರ ನಡುವೆ ಬೆಂಕಿ ಹಚ್ಚಲು ಯತ್ನಿಸುತ್ತಿದೆ' ಎಂದು ಯುವ ಕಾಂಗ್ರೆಸ್ ಮುಖಂಡ ಮೊಹಮ್ಮದ್ ಹ್ಯಾರೀಸ್ ನಲಪಾಡ್ ಪ್ರತಿಕ್ರಿಯಿಸಿದ್ದಾರೆ.

'ಹಿಂಸೆಗೆ ಪ್ರಚೋದನೆ ಖಂಡನೀಯ'

ಒಂದನೇ ಪುಟದಿಂದ..

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್, ಸಾಹಿತಿಗಳಾದ ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಡಾ.ಕೆ. ಮರುಳಸಿದ್ದಪ್ಪ, ಡಾ. ವಿಜಯಾ, ಡಾ. ಸಬೀಹಾ ಭೂಮಿಗೌಡ, ವಕೀಲೆ ಭಾನು ಮುಷ್ತಾಕ್, ಹೋರಾಟಗಾರ್ತಿ ದು. ಸರಸ್ವತಿ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ವಿಮಲಾ, ದಲಿತ ಸಂಘರ್ಷ ಸಮಿತಿಯ ಮಾವಳ್ಳಿ ಶಂಕರ್ ಸೇರಿದಂತೆ ಹಲವರು ಜಂಟಿ ಹೇಳಿಕೆಗೆ ಸಹಿ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹಾನಗಲ್–ಸಿಂದಗಿ ಕಣದಲ್ಲಿ 19 ಅಭ್ಯರ್ಥಿಗಳು

ಹಾವೇರಿ/ಸಿಂದಗಿ: ನಾಮಪತ್ರ ಹಿಂಪಡೆಯುವ ಕೊನೆಯ ದಿನವಾದ ಬುಧವಾರ ಹಾನಗಲ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿ ಸಿ.ಆರ್.ಬಳ್ಳಾರಿ ಸೇರಿದಂತೆ ನಾಲ್ವರು ಅಭ್ಯರ್ಥಿಗಳು ನಾಮಪತ್ರಗಳನ್ನು ಹಿಂಪಡೆದಿದ್ದು ಅಂತಿಮ ಕಣದಲ್ಲಿ 13 ಅಭ್ಯರ್ಥಿಗಳು ಉಳಿದಿದ್ದಾರೆ.

ವಿಜಯಪುರ ಜಿಲ್ಲೆಯ ಸಿಂದಗಿ ವಿಧಾನಸಭಾ ಕ್ಷೇತ್ರದಲ್ಲಿ ಇಬ್ಬರು ತಮ್ಮ ನಾಮಪತ್ರಗಳನ್ನು ಹಿಂಪಡೆದುಕೊಂಡಿದ್ದು ಒಟ್ಟು ಆರು ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

ಉಪ ಚುನಾವಣೆಯ ಮತದಾನ ಅ.30ರಂದು ನಡೆಯಲಿದ್ದು, ಮತ ಎಣಿಕೆಯು ನ.2 ರಂದು ನಡೆಯಲಿದೆ.

ಸಾರಿಗೆ ಸಿಬ್ಬಂದಿ ವೇತನಕ್ಕೆ ₹171.69 ಕೋಟಿ ಬಿಡುಗಡೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಸೇರಿ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯ ಆಗಸ್ಟ್ ತಿಂಗಳ ವೇತನ ಪಾವತಿಗಾಗಿ ರಾಜ್ಯ ಸರ್ಕಾರ ₹171.69 ಕೋಟಿ ಬಿಡುಗಡೆಗೊಳಿಸಿದೆ.

2021–22 ನೇ ಸಾಲಿನ ಆಯವ್ಯಯದ ಸಹಾಯಧನದಡಿ ವೇತನದ ಶೇ 50 ರಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಕೆಎಸ್‌ಆರ್‌ಟಿ-ಸಿಗೆ ₹55.48 ಕೋಟಿ, ಬಿಎಂಟಿಸಿಗೆ ₹50.58 ಕೋಟಿ, ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ₹34.41 ಕೋಟಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ₹31.23 ಕೋಟಿ ಹಂಚಿಕೆ ಮಾಡಲಾಗಿದೆ.

ಯಾವ ಪಕ್ಷದೊಂದಿಗೂ ಚುನಾವಣಾ ಮೈತ್ರಿ ಇಲ್ಲ: ಎಚ್‌ಡಿಕೆ

ವಿಜಯಪುರ: 'ಯಾವ ಪಕ್ಷಗಳೊಂದಿಗೂ ಚುನಾವಣಾ ಸಂಬಂಧವಿಲ್ಲ. ಉಪ ಚುನಾವಣೆ ಸೇರಿದಂತೆ ಮುಂಬರುವ ಎಲ್ಲ ಚುನಾವಣೆಯಲ್ಲೂ ಪಕ್ಷ ಏಕಾಂಗಿಯಾಗಿ ಹೋರಾಟ ನಡೆಸಲಿದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಮುಖ್ಯಮಂತ್ರಿ ಹೇಳಿದ್ದೇನು?

ಒಂದನೇ ಪುಟದಿಂದ...

ಮುಖ್ಯಮಂತ್ರಿಯ ಈ ಹೇಳಿಕೆಗೆ ವ್ಯಾಪಕ ವಿರೋಧ ಕೇಳಿಬಂದಿದ್ದು, ಮುಖ್ಯಮಂತ್ರಿಯೇ ಈ ರೀತಿ ಹೇಳಿಕೆ ನೀಡಿದಲ್ಲಿ, ಕರಾವಳಿಯ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ ಎಂಬ ಆತಂಕವ್ಯಕ್ತ-ವಾಗಿದೆ. 'ಮುಖ್ಯಮಂತ್ರಿ ಈ ರೀತಿ ಹೇಳಿಕೆ ನೀಡಿರುವುದು ನಾಚಿಕೆಗೇಡು. ಕೂಡಲೇ ರಾಜ್ಯದ ಜನರ ಕ್ಷಮೆ ಕೇಳಬೇಕು' ಎಂದು ವಿವಿಧ ಪಕ್ಷಗಳ ಮುಖಂಡರು ಮತ್ತು ಸಂಘಟನೆಯವರು ಒತ್ತಾಯಿಸಿದ್ದಾರೆ.

'ಇದು ಬಹಳ ಸೂಕ್ಷ್ಮ ವಿಷಯ. ನಮಗೆಲ್ಲರಿಗೂ ಜವಾಬ್ದಾರಿ ಇದೆ. ಕಾನೂನು ಸುವ್ಯವಸ್ಥೆಯ ಜೊತೆಗೆ ಸಾಮಾಜಿಕವಾಗಿ ಸಾಮರಸ್ಯ ಕಾಪಾಡುವುದು ಸಹ ಪ್ರತಿಯೊಬ್ಬರ ಹಾಗೂ ಸರ್ಕಾರದ ಕರ್ತವ್ಯ' ಎಂದು ಪ್ರತಿಕ್ರಿಯೆ ನೀಡಿದ್ದಾರೆ.

ಇತ್ತೀಚೆಗೆ ನಡೆದ ಎರಡು ಘಟನೆ

ಅನೈತಿಕ ಪೊಲೀಸ್‌ಗಿರಿಯ ಎರಡು ಘಟನೆಗಳು ಮಂಗಳೂರಿನಲ್ಲಿ ಇತ್ತೀಚೆಗೆ ನಡೆದಿವೆ. ಒಂದೇ ವಾಹನದಲ್ಲಿ ಹೋಗುತ್ತಿದ್ದ ಬೇರೆಬೇರೆ ಧರ್ಮೀಯ ವಿದ್ಯಾರ್ಥಿಗಳನ್ನು ತಡೆದು ಹಲ್ಲೆ ನಡೆಸಿದ ಘಟನೆ ಸುರತ್ಕಲ್‌ನಲ್ಲಿ ಈಚೆಗೆ ನಡೆದಿದೆ.

ಮೂಡುಬಿದಿರೆಯಲ್ಲಿ ಅನ್ಯಧರ್ಮದ ವ್ಯಕ್ತಿಯೊಬ್ಬರ ಕಾರಿನಲ್ಲಿ ಹಿಂದೂ ಧರ್ಮದ ಮಹಿಳೆಯರು ಪ್ರಯಾಣಿಸಿದ್ದಕ್ಕೆ ಬಜರಂಗದಳ ಕಾರ್ಯಕರ್ತರು ಹಲ್ಲೆ ಮಾಡಿದ್ದ ಘಟನೆ ಕಳೆದ ಭಾನುವಾರ ನಡೆದಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಬ್ಬರನ್ನು ಬಂಧಿಸಿದ್ದರು.

ಮೂಡುಬಿದಿರೆ ಘಟನೆಯ ಆರೋಪಿಗಳಾದ ಬಜರಂಗದಳದ ಕಾರ್ಯಕರ್ತರಿಗೆ ಕೋರ್ಟ್‌ನಿಂದ ಜಾಮೀನು ದೊರೆತಿದ್ದು, ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್ ಅವರೇ ಪೊಲೀಸ್ ಠಾಣೆಗೆ ತೆರಳಿ ಪೊಲೀಸರ ಮೇಲೆ ಒತ್ತಡ ಹಾಕಿದ್ದಾರೆ ಎನ್ನುವ ಆರೋಪ ಕೇಳಿ ಬಂದಿತ್ತು. ಈ ಬಗ್ಗೆ ಮಾಜಿ ಸಚಿವ ಅಭಯಚಂದ್ರ ಜೈನ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಸಿದ್ದರಾಮಯ್ಯ ಅವರ ಮೂಲಕ ಈ ವಿಷಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪಿಸಲಾಗುವುದು ಎಂದು ಅವರು ತಿಳಿಸಿದ್ದರು.

ಯುಪಿಎಸ್‌ಸಿ ತೀರ್ಮಾನ ಎತ್ತಿಹಿಡಿದ ಸಿಎಟಿ

ಐಎಎಸ್ ಬಡ್ತಿ: ರಾಜಪ್ಪ ಹೆಸರು ತಿರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಎಸ್‌ಯೇತರ ವೃಂದದ ಅಧಿಕಾರಿಗಳಿಗೆ 2016ರ ಬ್ಯಾಚ್‌ನ ಐಎಎಸ್‌ಗೆ ಬಡ್ತಿ ನೀಡುವ ಪ್ರಕ್ರಿಯೆಯಲ್ಲಿ ಮುಖ್ಯಮಂತ್ರಿಯವರ ಆಪ್ತ ಕಾರ್ಯ-ದರ್ಶಿಯಾಗಿರುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಜಂಟಿ ನಿರ್ದೇಶಕ ಎಚ್.ಆರ್. ರಾಜಪ್ಪ ಹೆಸರನ್ನು ತಿರಸ್ಕರಿಸಿ-ರುವ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ನಿರ್ಧಾರವನ್ನು ಕೇಂದ್ರ ಆಡಳಿತ ನ್ಯಾಯಮಂಡಳಿ (ಸಿಎಟಿ) ಎತ್ತಿಹಿಡಿದಿದೆ.

2016ರ ಸಾಲಿನಲ್ಲಿ ಕೆಎಎಸ್‌ಯೇತರ ವೃಂದದವರಿಗಾಗಿ ಖಾಲಿ ಇದ್ದ ಮೂರು ಐಎಎಸ್ ಅಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡಲು 2017ರಲ್ಲಿ ಪ್ರಕ್ರಿಯೆ ಆರಂಭಿಸಲಾಗಿತ್ತು. ಬಡ್ತಿಗೆ ಅರ್ಹರಾದ ಅಧಿಕಾರಿಗಳ ಪಟ್ಟಿ ಸಲ್ಲಿಸಲು 2017ರ ಜೂನ್ 30 ಕೊನೆಯ ದಿನವಾಗಿತ್ತು. ರಾಜಪ್ಪ ಹೆಸರನ್ನು ಎರಡೂವರೆ ವರ್ಷಗಳ ಬಳಿಕ ಪಟ್ಟಿಗೆ ಸೇರಿಸಿ, ಶಿಫಾರಸು ಮಾಡಿರುವ ಕ್ರಮ ಸಮರ್ಥನೀಯವಲ್ಲ ಎಂದು ನ್ಯಾಯಮಂಡಳಿ ಹೇಳಿದೆ.

'ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಧಾನ ಕಾರ್ಯ-ದರ್ಶಿಯಾಗಿದ್ದ ಗೌರವ್ ಗುಪ್ತ ಸರಿಯಾಗಿ ಯೋಚಿಸದೆ ಎರಡೂವರೆ ವರ್ಷಗಳ ಬಳಿಕ ರಾಜಪ್ಪ ಹೆಸರನ್ನು ಶಿಫಾರಸು ಮಾಡಿದ್ದಾರೆ. ಮೂರು ಹುದ್ದೆಗಳಿಗೆ ಬಡ್ತಿ ನೀಡಲು 15 ಅಧಿಕಾರಿಗಳ ಹೆಸರನ್ನು ಮಾತ್ರ ಶಿಫಾರಸು ಮಾಡಬೇಕಿತ್ತು. 15 ಮಂದಿಯ ಪಟ್ಟಿ ಇದ್ದಾಗಲೂ 16ನೇ ಹೆಸರಾಗಿ ರಾಜಪ್ಪ ಹೆಸರನ್ನು ಶಿಫಾರಸು ಮಾಡಿದ್ದು ಏಕೆ ಎಂಬುದೇ ಅರ್ಥವಾ-ಗುತ್ತಿಲ್ಲ' ಎಂದು ಸಿಎಟಿಯ ಚಂಡೀಗಢ ಪೀಠದ ಸುರೇಶ್ ಕುಮಾರ್ ಮೋಂಗಾ ಮತ್ತು ದೆಹಲಿ ಪ್ರಧಾನ ಪೀಠದ ಮೊಹಮ್ಮದ್ ಜಮ್‌ಶೆಡ್ ಅವರನ್ನೊ-ಳಗೊಂಡ ದ್ವಿಸದಸ್ಯ ಪೀಠ ಅಕ್ಟೋಬರ್ 4ರಂದು ನೀಡಿರುವ ಆದೇಶದಲ್ಲಿ ಹೇಳಿದೆ.

ಮುಖ್ಯಾಂಶಗಳು

- ಸಿ.ಎಂ ಆಪ್ತ ಕಾರ್ಯದ-ರ್ಶಿಯಾಗಿರುವ ಎಚ್.ಆರ್. ರಾಜಪ್ಪ
- ಯುಪಿಎಸ್‌ಸಿ ನಿರ್ಧಾರ ಎತ್ತಿಹಿಡಿದ ಸಿಎಟಿ

ಆರಂಭದಿಂದಲೂ ಹಲವು ಬಾರಿ ಪಟ್ಟಿಯನ್ನು ಪರಿಷ್ಕರಿಸಲಾಗಿ-ತ್ತು. ನ್ಯಾಯಾಲಯಗಳ ಆದೇಶದಿಂದ ಡಾ.ಎ. ಲೋಕೇಶ್ ಮತ್ತು ಡಾ.ವೈ. ಮಂಜುನಾಥ್ ಹೆಸರನ್ನು ಪರಿಶೀಲನಾ ಪಟ್ಟಿಗೆ ಸೇರಿಸಲಾಗಿತ್ತು. ನಂತರ ಶಿಸ್ತುಕ್ರಮ ಎದುರಿಸುತ್ತಿರುವ ಕಾರಣಕ್ಕಾಗಿ ಕೆ.ಆರ್. ರುದ್ರಪ್ಪ ಹೆಸರನ್ನು ಕೈಬಿಡಲಾಗಿತ್ತು. ಅವರ ಬದಲಿಗೆ ಪ್ರಧಾನ ಎಂಜಿನಿಯರ್ ಬಿ.ಜಿ ಗುರುಪಾದಸ್ವಾಮಿ ಹೆಸರನ್ನು ಶಿಫಾರಸು ಮಾಡಲಾಗಿತ್ತು. ಆ ಬಳಿಕ ರಾಜಪ್ಪ ಹೆಸರನ್ನು ಶಿಫಾರಸು ಮಾಡಲಾಗಿತ್ತು.

'2019ರ ಸೆಪ್ಟೆಂಬರ್ 14ರಂದು ಗುರುಪಾದಸ್ವಾಮಿ ಹೆಸರನ್ನು ಸೇರಿಸಿ 15 ಅಭ್ಯರ್ಥಿಗಳ ಪರಿಷ್ಕೃತ ಪಟ್ಟಿಯನ್ನು ಕಳು-ಹಿಸಲಾಗಿತ್ತು. ಅದೇ ದಿನ ಮತ್ತೊಂದು ಪತ್ರದ ಮೂಲಕ ರಾಜಪ್ಪ ಹೆಸರನ್ನೂ ಶಿಫಾರಸು ಮಾಡಲಾಗಿದೆ. ಅದಕ್ಕೂ ಮೊದಲು ಸೇರಿಸಿದ್ದ ಗುರುಪಾದಸ್ವಾಮಿ ಹೆಸರನ್ನು ಹಿಂಪಡೆಯುವ ಪ್ರಕ್ರಿಯೆಯೂ ನಡೆದಿಲ್ಲ. ತರಾತುರಿಯಲ್ಲಿ ರಾಜಪ್ಪ ಹೆಸರನ್ನು ಶಿಫಾರಸು ಮಾಡಿರುವುದು ಸಂಶಯಾಸ್ಪದ ರೀತಿಯಲ್ಲಿದೆ' ಎಂದು ಪೀಠ ಹೇಳಿದೆ.

2020ರ ಜೂನ್ 22ರಂದು ಸಭೆ ನಡೆಸಿದ್ದ ಯುಪಿಎಸ್‌ಸಿ ಆಯ್ಕೆ ಸಮಿತಿ, ರಾಜಪ್ಪ ಹೆಸರನ್ನು ಪರಿಶೀಲನಾ ಪಟ್ಟಿಯಿಂದ ಕೈಬಿಟ್ಟಿತ್ತು. ಆಯೋಗದ ನಿರ್ಧಾರವನ್ನು ಎತ್ತಿಹಿಡಿದಿರುವ ಮಂಡಳಿ, 'ಆಯ್ಕೆ ಪ್ರಕ್ರಿಯೆಯಲ್ಲಿ ಶಿಫಾರಸು ಕಳಿಸಲು ನಿಗದಿತ ದಿನಾಂಕದ ಗಡುವು ನೀಡಲಾಗಿತ್ತು. ಅರ್ಹತೆಯನ್ನು ಗುರುತಿ-ಸುವುದಕ್ಕಾಗಿ ಗಡುವು ಇತ್ತು. ಅದನ್ನು ಮೀರಿ ಅರ್ಜಿದಾರರ ಹೆಸರು ಕಳುಹಿ-ಸಲಾಗಿತ್ತು. ಆಯೋಗದ ನಿರ್ಧಾರದಲ್ಲಿ ಯಾವುದೇ ತಪ್ಪು ಕಾಣಿಸುತ್ತಿಲ್ಲ' ಎಂದು ಆದೇಶದಲ್ಲಿ ತಿಳಿಸಿದೆ.

ಶೇ 83 ಮಂದಿಗೆ ಮೊದಲ ಡೋಸ್ ಲಸಿಕೆ ಶೇ 38ರಷ್ಟು ಮಂದಿ ಮಾತ್ರ ಎರಡೂ ಡೋಸ್ ಪೂರ್ಣ

ಕೋವಿಡ್ ಲಸಿಕೆ: 2ನೇ ಡೋಸ್‌ಗೆ ನಿರಾಸಕ್ತಿ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದ್ದಂತೆ ಲಸಿಕೆಯ ಎರಡನೇ ಡೋಸ್ ಪಡೆಯಲು ಹಲವರು ನಿರಾಸಕ್ತಿ ತೋರುತ್ತಿದ್ದಾರೆ. ಮೊದಲ ಡೋಸ್ ಪಡೆದವರ ಪ್ರಮಾಣ ಶೇ 83ಕ್ಕೆ ಏರಿಕೆ ಕಂಡಿದ್ದರೂ, ಶೇ 38 ರಷ್ಟು ಮಂದಿ ಮಾತ್ರ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ.

ಈ ವರ್ಷಾಂತ್ಯಕ್ಕೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಲಸಿಕೆ ವಿತರಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ. ಲಸಿಕೆ ವಿತರಣಾ ಅಭಿಯಾನ ಪ್ರಾರಂಭವಾಗಿ 9 ತಿಂಗಳಾಗುತ್ತಾ ಬಂದರೂ ಮೊದಲ ಡೋಸ್ ಪಡೆದವರಲ್ಲಿ ಅರ್ಧದಷ್ಟು ಮಂದಿಯೂ ಎರಡನೇ ಡೋಸ್ ಪಡೆದಿಲ್ಲ.

ಕಳೆದ ಜ.16ರಿಂದ ರಾಜ್ಯದಲ್ಲಿ ಲಸಿಕಾ ಅಭಿಯಾನ ಪ್ರಾರಂಭವಾಗಿದೆ. ಪ್ರಾರಂಭಿಕ ದಿನಗಳಲ್ಲಿ ಆರೋಗ್ಯ ಕಾರ್ಯಕರ್ತರು ಹಾಗೂ ಕೋವಿಡ್ ಮುಂಚೂಣಿ ಯೋಧರಿಗೆ ಆದ್ಯತೆ ನೀಡಿ, ಲಸಿಕೆ ಒದಗಿಸಲಾಗಿತ್ತು. ಬಳಿಕ ವಯೋಮಿತಿ ಅನುಸಾರ 18 ವರ್ಷಗಳು ಮೇಲ್ಪಟ್ಟ ಎಲ್ಲರಿಗೂ ಲಸಿಕೆ ವಿತರಣೆಯನ್ನು ಪ್ರಾರಂಭಿಸಲಾಗಿತ್ತು. ಕೋವಿಡ್ ಎರಡನೇ ಅಲೆ ಕಾಣಿಸಿಕೊಳ್ಳುತ್ತಿದ್ದಂತೆ ದಿನವೊಂದಕ್ಕೆ ವಿತರಿಸಲಾಗುತ್ತಿದ್ದ ಡೋಸ್‌ಗಳ ಸಂಖ್ಯೆಯನ್ನು 2.5 ಲಕ್ಷಕ್ಕೆ ಏರಿಕೆ ಮಾಡಲಾಗಿತ್ತು.

ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರು ಸಂಭಾವ್ಯ ಮೂರನೇ ಅಲೆಯ ಬಗ್ಗೆ ಎಚ್ಚರಿಕೆ ನೀಡಿದ್ದರಿಂದ ಸರ್ಕಾರವು ಲಸಿಕಾ ಮೇಳಗಳನ್ನು ರಾಜ್ಯದ ವಿವಿಧೆಡೆ ನಡೆಸಿ, ಲಸಿಕೆಯನ್ನು ವಿತರಿಸಿತ್ತು. ಕೆಲ ದಿನಗಳಿಂದ ದಿನವೊಂದಕ್ಕೆ 4 ಲಕ್ಷದಿಂದ 5 ಲಕ್ಷ ಡೋಸ್‌ಗಳನ್ನು ಫಲಾನುಭವಿಗಳಿಗೆ ನೀಡಲಾಗುತ್ತಿದೆ. ಇದರಿಂದಾಗಿ ಜುಲೈ ಅಂತ್ಯಕ್ಕೆ 36.5ರಷ್ಟಿದ್ದ ಮೊದಲ ಡೋಸ್ ಲಸಿಕೆ ಪಡೆದವರ ಪ್ರಮಾಣ, ಈಗ ಶೇ 83ಕ್ಕೆ ತಲುಪಿದೆ.

ಕೆಲ ದಿನಗಳಿಂದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ, ಲಸಿಕೆ ಪಡೆದುಕೊಂಡ ಬಳಿಕ ಕಾಣಿಸಿಕೊಳ್ಳುವ ಜ್ವರದಂತಹ ಸಾಮಾನ್ಯ ಲಕ್ಷಣಗಳಿಂದಾಗಿ ಮೊದಲ ಡೋಸ್ ಪಡೆದವರಲ್ಲಿ ಕೆಲವರು ಅವಧಿ ಮುಗಿದರೂ ಎರಡನೇ ಡೋಸ್ ಹಾಕಿಸಿಕೊಳ್ಳುತ್ತಿಲ್ಲ.

15 ಜಿಲ್ಲೆಗಳು ಹಿಂದೆ: ಈವರೆಗೆ ಲಸಿಕೆ ವಿತರಣೆಯನ್ನು ಆಧರಿಸಿ ಕೋವಿಡ್ ವಾರ್ ರೂಮ್ ವಿಶ್ಲೇಷಣೆ ಮಾಡಿದ್ದು, 15 ಜಿಲ್ಲೆಗಳು ಲಸಿಕೆ ವಿತರಣೆಯಲ್ಲಿ ರಾಜ್ಯದ ಸರಾಸರಿಗಿಂತ ಹಿಂದೆ ಉಳಿದಿವೆ. ಬೆಂಗಳೂರು, ಉಡುಪಿ, ಕೊಡಗು, ಹಾಸನ ಸೇರಿದಂತೆ 10 ಜಿಲ್ಲೆಗಳಲ್ಲಿ ಗುರುತಿಸಲಾದ ಫಲಾನುಭವಿಗಳಲ್ಲಿ ಶೇ 90ಕ್ಕೂ ಅಧಿಕ ಮಂದಿಗೆ ಮೊದಲ ಡೋಸ್ ಹಾಗೂ ಶೇ 40ಕ್ಕೂ ಅಧಿಕ ಮಂದಿಗೆ ಎರಡನೇ ಡೋಸ್ ವಿತರಿಸಲಾಗಿದೆ.

ಯಾದಗಿರಿ, ಕಲಬುರಗಿ, ರಾಯಚೂರು, ದಾವಣಗೆರೆ ಹಾಗೂ ಕೊಪ್ಪಳ ಜಿಲ್ಲೆ ಲಸಿಕೆ ವಿತರಣೆಯಲ್ಲಿ ಹಿಂದೆ ಬಿದ್ದಿವೆ. ಈ ಜಿಲ್ಲೆಗಳಲ್ಲಿ ಮೊದಲ ಡೋಸ್ ಪಡೆದವರ ಪ್ರಮಾಣ ಶೇ 70ಕ್ಕಿಂತ ಕಡಿಮೆಯಿದೆ. ಎರಡನೇ ಡೋಸ್ ವಿತರಣೆಯಲ್ಲಿ ಹಾವೇರಿ ಜಿಲ್ಲೆಯು ಕಡೆಯ ಸ್ಥಾನದಲ್ಲಿದೆ. ಶೇ 80ರಷ್ಟು ಮೊದಲ ಡೋಸ್ ವಿತರಿಸಿದ್ದರೂ, ಶೇ 22ರಷ್ಟು ಮಂದಿ ಮಾತ್ರ ಎರಡನೇ ಡೋಸ್ ಪಡೆದಿದ್ದಾರೆ.

ಪ್ರಜಾವಾಣಿ ವಿಶೇಷ

ಲಸಿಕೆ: ಪರ್ಯಾಯ ದಿನಕ್ಕೆ ಮನವಿ

ಬೆಂಗಳೂರು: ದಸರಾ ಹಬ್ಬದ ಪ್ರಯುಕ್ತ ಲಸಿಕಾ ಕಾರ್ಯಕ್ರಮಕ್ಕೆ ಐದು ದಿನಗಳು ಬಿಡುವು ನೀಡಿ, ಪರ್ಯಾಯ ದಿನಗಳನ್ನು ಗುರುತಿಸಬೇಕು ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘವು ಸರ್ಕಾರಕ್ಕೆ ಆಗ್ರಹಿಸಿದೆ.

ಈ ಬಗ್ಗೆ ಸಂಘವು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಪತ್ರ ಬರೆದಿದೆ. 'ಕೋವಿಡ್ ನಿಯಂತ್ರಣ ಸಂಬಂಧ ಇದೇ 10 ರಿಂದ 15ರವರೆಗೆ ಲಸಿಕಾ ಕಾರ್ಯಕ್ರಮ ನಡೆಸಲು ಆದೇಶಿಸಲಾಗಿದೆ. ದಸರಾ ಹಬ್ಬ ಇರುವುದರಿಂದ ಸತತ ಐದು ದಿನಗಳು ಬಿಡುವಿಲ್ಲದೇ ಲಸಿಕಾ ಕಾರ್ಯಕ್ರಮ ನಡೆಸುವುದು ಸಮಸ್ಯೆಯಾಗುತ್ತದೆ. ಹಾಗಾಗಿ, ಪರ್ಯಾಯ ದಿನಗಳನ್ನು ನಿಗದಿಪಡಿಸುವಂತೆ ಇಲಾಖೆಯ ವಿವಿಧ ವೃಂದದ ಸಂಘದವರು ಮನವಿ ಮಾಡಿದ್ದಾರೆ' ಎಂದು ಪತ್ರದಲ್ಲಿ ಸಂಘದ ಅಧ್ಯಕ್ಷ ಆರ್. ಶ್ರೀನಿವಾಸ್ ತಿಳಿಸಿದ್ದಾರೆ.

'ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ, ಇತರೆ ಕರ್ತವ್ಯದ ದಿನಗಳಂದು ಲಸಿಕಾ ಕಾರ್ಯಕ್ರಮ ನಡೆಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

ಕೋವಿಡ್ ಲಸಿಕೆಯ ವಿವರ

4.89 ಕೋಟಿ ರಾಜ್ಯದಲ್ಲಿ ಗುರುತಿಸಲಾದ 18 ವರ್ಷ ಮೇಲ್ಪಟ್ಟವರು


4.06 ಕೋಟಿ ಮೊದಲ ಡೋಸ್ ಲಸಿಕೆ ಪಡೆದವರು


6.03 ಕೋಟಿ ರಾಜ್ಯದಲ್ಲಿ ವಿತರಿಸಲಾದ ಒಟ್ಟು ಡೋಸ್‌ಗಳು

1.97 ಕೋಟಿ ಎರಡನೇ ಡೋಸ್ ಲಸಿಕೆ ಪಡೆದವರು

ಲಸಿಕೆ ವಿತರಣೆಯಲ್ಲಿ ಹಿಂದಿರುವ 5 ಜಿಲ್ಲೆಗಳು

ಜಿಲ್ಲೆ	ಫಲಾನುಭವಿಗಳು	ಮೊದಲ ಡೋಸ್ (%)	ಎರಡನೇ ಡೋಸ್ (%)
ಯಾದಗಿರಿ	9,82,594	58	29
ಕಲಬುರಗಿ	20,59,956	58	24
ರಾಯಚೂರು	15,15,004	61	23
ದಾವಣಗೆರೆ	14,39,856	65	26
ಬೀದರ್	13,16,103	67	30





ಕೊರೊನಾ ಸೋಂಕಿನಿಂದ ಸಂಪೂರ್ಣ ಸುರಕ್ಷತೆ ಪಡೆಯಲು ಲಸಿಕೆಯ ಎರಡೂ ಡೋಸ್ ಪಡೆಯುವುದು ಅವಶ್ಯಕ. ಕೋವಿಡ್ ಇನ್ನೂ ಪೂರ್ಣವಾಗಿ ನಿವಾರಣೆ ಆಗಿಲ್ಲ

ಡಾ. ಅಪ್ಪಾಸಾಹೇಬ್ ಎಸ್. ನರಟ್ಟಿ
ಆರೋಗ್ಯ ಇಲಾಖೆ ನಿರ್ದೇಶಕ

ಲಸಿಕೆಯು ಪರಿಣಾಮಕಾರಿ ಎನ್ನುವುದು ಅಧ್ಯಯನಗಳಿಂದ ದೃಢಪಟ್ಟಿದೆ. ಆದಷ್ಟು ಬೇಗ ಎರಡೂ ಡೋಸ್ ಲಸಿಕೆ ಪಡೆದುಕೊಳ್ಳಬೇಕು

ಡಾ.ಸಿ.ಎನ್. ಮಂಜುನಾಥ್
ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

ಸುದ್ದಿ 2 ನಿಮಿಷ

ಎನ್‌ಇಪಿ ಹಕ್ಕು, ಸೌಲಭ್ಯ ಕಸಿಯಲ್ಲ: ಸಚಿವ ಅಶ್ವತ್ಥನಾರಾಯಣ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಬಗ್ಗೆ ಅಲ್ಪಸಂಖ್ಯಾತ ಸಮುದಾಯದವರಿಗೆ ಅನುಮಾನ, ಆತಂಕ ಬೇಡ. ಇದು ಹಕ್ಕು, ಸೌಲಭ್ಯ ಕಸಿದುಕೊಳ್ಳುವುದಿಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.

ಎನ್‌ಇಪಿ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಮುಸ್ಲಿಂ ಸಮುದಾಯದ ಪ್ರತಿನಿಧಿಗಳ ಜೊತೆ ನಡೆದ ಸಂವಾದದಲ್ಲಿ ಅವರು ಈ ಭರವಸೆ ನೀಡಿದರು.

ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ತಿಮ್ಮೇಗೌಡ ಅವರು ಎನ್‌ಇಪಿ ಕುರಿತು ವಿವರಿಸಿದರು. ನಿವೃತ್ತ ಐಎಎಸ್ ಅಧಿಕಾರಿ ಸನಾವುಲ್ಲಾ, 'ಈ ನೀತಿಯು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗೆ ಸಂವಿಧಾನವು ಹೇಳಿರುವ ಆಶಯಗಳಿಗೆ ವಿರುದ್ಧವಾಗಿರುವಂತಿದೆ' ಎಂದು ಸಂದೇಹ ವ್ಯಕ್ತಪಡಿಸಿದರು. ಇದಕ್ಕೆ ಸಚಿವರು, 'ಅಲ್ಪಸಂಖ್ಯಾತರ ಹಿತರಕ್ಷಣೆಗೆಂದು ಸಂವಿಧಾನದಲ್ಲಿರುವ ಆಶಯಗಳನ್ನು ಬದಲಿಸುವ ಪ್ರಶ್ನೆಯೇ ಇಲ್ಲ. ಎನ್‌ಇಪಿ ವಿಶೇಷವಾಗಿ, ಶಿಕ್ಷಣದಲ್ಲಿ ಹಿಂದುಳಿದಿರುವ ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಜನಾಂಗದವರು ಹಾಗೂ ಬುಡಕಟ್ಟು ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸಲು ಒತ್ತು ಕೊಟ್ಟಿದೆ. ಯಾವುದೇ ಆಧಾರರಹಿತ ಅನುಮಾನಗಳನ್ನು ಇಟ್ಟುಕೊಳ್ಳಬೇಡಿ' ಎಂದು ಮನವರಿಕೆ ಮಾಡಿದರು.

'ಎನ್‌ಇಪಿಯಿಂದ ವಿದ್ಯಾರ್ಥಿವೇತನ, ಮೀಸಲು ಇತ್ಯಾದಿಗಳು ಇಲ್ಲದಾಗಬಹುದು' ಎಂದು ಕೆಲವರು ಹೇಳಿದಾಗ, ಸಚಿವರು 'ಎನ್‌ಇಪಿ ಮತ್ತು ಉಳಿದ ವಿಷಯಗಳನ್ನು ಅನಗತ್ಯವಾಗಿ ತಳುಕು ಹಾಕಿಕೊಂಡು, ಗೊಂದಲಕ್ಕೆ ಒಳಗಾಗಬೇಡಿ' ಎಂದರು.

'ಎನ್‌ಇಪಿ ಬಿಜೆಪಿ ಕಾರ್ಯಕ್ರಮವಲ್ಲ. ಇದಕ್ಕೆ ಅಂತಿಮ ರೂಪ ಕೊಡುವ ಮೊದಲು ಮೂರು ಲಕ್ಷಕ್ಕೂ ಹೆಚ್ಚು ಸಲಹೆಗಳನ್ನು ಸ್ವೀಕರಿಸಲಾಗಿದೆ' ಎಂದೂ ಸಚಿವರು ಹೇಳಿದರು.

ಸುರಂಗ ಕೊರೆದು ಹೊರಬಂದ 'ವಿಂಧ್ಯಾ'



ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದ ಕಾಮಗಾರಿಯಡಿ ಕಂಟೋನ್ಮೆಂಟ್‌ನಿಂದ ಶಿವಾಜಿನಗರ ಮೆಟ್ರೊ ನಿಲ್ದಾಣದವರೆಗೆ ಸುರಂಗ ಮಾರ್ಗ ಕೊರೆಯುವ ಕಾರ್ಯವನ್ನು 'ವಿಂಧ್ಯಾ' ಹೆಸರಿನ ಟಿಬಿಎಂ (ಸುರಂಗ ಕೊರೆಯುವ ಯಂತ್ರ) ಯಶಸ್ವಿಯಾಗಿ ಪೂರ್ಣಗೊಳಿಸಿ ಬುಧವಾರ ಹೊರಬಂದಿದೆ.

ಇದೇ ಮಾರ್ಗಕ್ಕೆ ಮತ್ತೊಂದು ಸುರಂಗ ಕೊರೆದಿದ್ದ ಮೊದಲ ಯಂತ್ರ 'ಊರ್ಜಾ' ಸೆ.22ರಂದು ಯಶಸ್ವಿಯಾಗಿ ಹೊರಬಂದಿತ್ತು.

ಈಗ ಸಮಾನಾಂತರ ಸುರಂಗ ಮಾರ್ಗ ಕೊರೆಯಲು ತೆರಳಿದ್ದ ವಿಂಧ್ಯಾ, ಶಿವಾಜಿನಗರ ಮೆಟ್ರೊ ನಿಲ್ದಾಣದ ದಕ್ಷಿಣ ತುದಿಯಲ್ಲಿ ಹೊರಬಂದಿದೆ. ಒಟ್ಟು 855 ಮೀಟರ್ ಉದ್ದದ ಸುರಂಗ ಕೊರೆಯುವ ಕೆಲಸವನ್ನು ವಿಂಧ್ಯಾ ಪೂರ್ಣಗೊಳಿಸಿದೆ.

'ಕಂಟೋನ್ಮೆಂಟ್ ನಿಲ್ದಾಣದಲ್ಲಿ ಈ ಯಂತ್ರವನ್ನು ಮರುಜೋಡಣೆ ಮಾಡಿ, ಈ ನಿಲ್ದಾಣದಿಂದ ಪಾಟರಿ ಟೌನ್ ನಿಲ್ದಾಣದವರೆಗೆ ಸುರಂಗ ಮಾರ್ಗ ಕೊರೆಯಲು ನಿಯೋಜಿಸಲಾಗುವುದು' ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಪ್ರಕಟಣೆ ತಿಳಿಸಿದೆ.

ಗುಂಡಿಮಯ ರಸ್ತೆ: ಸಂಚಾರ ಕಿರಿಕಿರಿ

ಬೆಂಗಳೂರು: ನಗರದ ಲಗ್ಗೆರೆ ಮುಖ್ಯ ರಸ್ತೆಯು ಗುಂಡಿಗಳಿಂದ ಆವರಿಸಿಕೊಂಡಿದ್ದು, ವಾಹನ ಸವಾರರು ಸಂಚಾರಕ್ಕೆ ಪರದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯ ರಭಸಕ್ಕೆ ರಸ್ತೆಯ ಡಾಂಬರು ಕಿತ್ತುಹೋಗಿದೆ. ಇದರಿಂದಾಗಿ ವಾಹನ ಸವಾರರು ಗುಂಡಿಗಳನ್ನು ತಪ್ಪಿಸುತ್ತಾ ಸಾಗಲು ಹರಸಾಹಸ ಪಡುವ ದೃಶ್ಯ ಸಾಮಾನ್ಯವಾಗಿದೆ. ಗುಂಡಿಗಳಲ್ಲಿ ಮಳೆ ನೀರು ತುಂಬಿಕೊಂಡರಂತೂ ರಾತ್ರಿ ವೇಳೆ ಸಂಚಾರ ಮಾಡುವುದು ದುಸ್ತರ. ಕಾರು ಸೇರಿದಂತೆ ನಾಲ್ಕು ಚಕ್ರಗಳ ವಾಹನಗಳು ಮುಖಾಮುಖಿಯಾದರೆ ಸರಾಗವಾಗಿ ಸಾಗಲು ಸಾಧ್ಯವಾಗುವುದಿಲ್ಲ. ಹೀಗಾಗಿ, ವಾಹನ ದಟ್ಟಣೆಯೂ ನಿರ್ಮಾಣವಾಗುತ್ತಿದೆ.

ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಉಸಿರು ಬಿಗಿ ಹಿಡಿದೇ ಸಾಗಬೇಕಾಗಿದೆ. ಸ್ವಲ್ಪ ಎಚ್ಚರ ತಪ್ಪಿದರೂ ಗುಂಡಿಗಳಲ್ಲಿ ಬೀಳುವುದು ನಿಶ್ಚಿತ.





ರಾಜೀವ್ ಗಾಂಧಿ ನಗರದಲ್ಲಿರುವ ಮುಖ್ಯ ರಸ್ತೆ. ನಗರದ ಚೌಡೇಶ್ವರಿ ನಗರದ, ಲಗ್ಗೆರೆಯ ಮುಖ್ಯ ರಸ್ತೆಯು ಸಂಪೂರ್ಣವಾಗಿ ಹಾಳಾಗಿದ್ದು ವಾಹನ ಸವಾರರು ಓಡಾಡಲು ಕಷ್ಟಪಡುತ್ತಿರುವ ದೃಶ್ಯ ಬುಧವಾರ ಕಂಡುಬಂತು –ಪ್ರಜಾವಾಣಿ ಚಿತ್ರಗಳು

'ಅಲೆಮಾರಿ ಜನರನ್ನು ಗುಡಿಸಲು ಮುಕ್ತಗೊಳಿಸಿ'

ಬೆಂಗಳೂರು: 'ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಅಭಿವೃದ್ಧಿ ನಿಗಮಕ್ಕೆ ಸರ್ಕಾರ ₹250 ಕೋಟಿ ಅನುದಾನ ನೀಡಬೇಕು' ಎಂದು ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ (ಪ್ರವರ್ಗ–1) ಒಕ್ಕೂಟದ ಅಧ್ಯಕ್ಷ ವಿಠ್ಠಲ ಗಣಾಚಾರಿ ಆಗ್ರಹಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದುಳಿದ ವರ್ಗಗಳ ಪ್ರವರ್ಗ–1ರಡಿ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳಲ್ಲಿ 46 ಜಾತಿಗಳ ಅಭಿವೃದ್ಧಿಗೆ ಸರ್ಕಾರ ನಿಗಮ ಸ್ಥಾಪಿಸಿದೆ. ಆದರೂ ಈ ಜನಾಂಗಗಳು ಎಲ್ಲ ಕ್ಷೇತ್ರಗಳಲ್ಲಿ ಹಿಂದುಳಿದಿವೆ' ಎಂದು ಬೇಸರ ವ್ಯಕ್ತಪಡಿಸಿದರು.

'ಜನಾಂಗದ ಹಲವರು ಈಗಲೂ ಗುಡಿಸಲುಗಳಲ್ಲಿ ದುಸ್ತರವಾದ ಜೀವನ ನಡೆಸುತ್ತಿದ್ದಾರೆ. ಸಮುದಾಯದವರಿಗೆ ಉತ್ತಮ ವಸತಿ ಕಲ್ಪಿಸುವ ಮೂಲಕ ಅವರನ್ನು 'ಗುಡಿಸಲು ಮುಕ್ತ'ರನ್ನಾಗಿ ಮಾಡಬೇಕು. ಅಲೆಮಾರಿ ಜನಾಂಗಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಮೀಸಲಾತಿ ನೀಡಬೇಕು ಹಾಗೂ ನಿಗಮಕ್ಕೆ ಅನುದಾನವನ್ನೂ ಹೆಚ್ಚಿಸಬೇಕು' ಎಂದು ಒತ್ತಾಯಿಸಿದರು.

12ರಿಂದ 17 ವರ್ಷದ ಮಕ್ಕಳಿಗೆ ಕೋವಿಡ್ ಲಸಿಕೆ: ಗೌರವ್ ಗುಪ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 12ರಿಂದ 17 ವರ್ಷದ ಮಕ್ಕಳಿಗೆ ಮೊದಲ ಹಂತದಲ್ಲಿ ಕೋವಿಡ್ ಲಸಿಕೆ ನೀಡಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ನಗರದಲ್ಲಿರುವ ಮಕ್ಕಳ ಅಂಕಿ–ಅಂಶ ಪಾಲಿಕೆ ಬಳಿ ಇದೆ. ಹಂತ–ಹಂತವಾಗಿ ಲಸಿಕೆ ನೀಡಲಾಗುವುದು ಎಂದು ಹೇಳಿದರು.

18 ವರ್ಷ ಮೇಲ್ಪಟ್ಟವರಲ್ಲಿ ಶೇ 10ರಷ್ಟು ಜನ ಇನ್ನೂ ಮೊದಲ ಡೋಸ್ ಲಸಿಕೆ ಪಡೆದಿಲ್ಲ. ಲಸಿಕೆ ಕಡ್ಡಾಯ ಎಂಬ ಕಾನೂನು ಇಲ್ಲದ ಕಾರಣ ಅವರ ವಿರುದ್ಧ ಕ್ರಮ ಜರುಗಿಸಲು ಆಗುವುದಿಲ್ಲ. ಸಂಘ–ಸಂಸ್ಥೆಗಳ ನೆರವು ಪಡೆದುಕೊಂಡು ಅವರಿಗೆ ಮನವರಿಕೆ ಮಾಡಿಸುವ ಪ್ರಯತ್ನ ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದರು.

ವೇತನ ಪಾವತಿ ವಿಳಂಬ ಖಂಡಿಸಿ ಪೌರಕಾರ್ಮಿಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪೌರಕಾರ್ಮಿಕರಿಗೆ ವೇತನ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಹದೇವಪುರ ವಲಯದ ಬಿಬಿಎಂಪಿ ಜಂಟಿ ಆಯುಕ್ತರ ಕಚೇರಿ ಎದುರು ಪೌರಕಾರ್ಮಿಕರು ಪ್ರತಿಭಟನೆ ನಡೆಸಿದರು.

ಎಐಸಿಟಿಯು ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಳೆಯನ್ನೂ ಲೆಕ್ಕಿಸದೆ, ಪೌರಕಾರ್ಮಿಕರನ್ನು ಭಾಗವಹಿಸಿದ್ದರು. ಕೆಲಸ ಖಾಯಂಗೊಳಿಸಬೇಕು ಎಂದು ಘೋಷಣೆ ಕೂಗಿದರು.

'ವೇತನ ಪಾವತಿ ಕಾಯ್ದೆಯಡಿ ಪ್ರತಿ ತಿಂಗಳ ಮೊದಲ ವಾರದಲ್ಲಿ ವೇತನ ಪಾವತಿ ಮಾಡಬೇಕೆಂಬ ನಿಯಮವಿದೆ. ಆದರೆ, ಸಕಾಲಕ್ಕೆ ವೇತನ ಪಾವತಿ ಮಾಡದೆ ಇರುವುದರಿಂದ ಕುಟುಂಬ ನಿರ್ವಹಣೆ ಕಷ್ಟವಾಗಿದೆ. ಸಾಲ ಹೊರೆಯಿಂದ ಜೀವನವೇ ದುಸ್ತರವಾಗಿದೆ' ಎಂದು ಪೌರಕಾರ್ಮಿಕರೊಬ್ಬರು ಅಳಲು ತೋಡಿಕೊಂಡರು.

'ಪೌರಕಾರ್ಮಿಕರಿಗೆ ನೀಡುವ ವೇತನ ಕಡಿತಗೊಳಿಸಲಾಗುತ್ತದೆ. ವೇತನ ಚೀಟಿ ನೀಡುವುದು ಕಾರ್ಮಿಕ ಕಾನೂನಿನ ಅನ್ವಯ ಕಡ್ಡಾಯ. ಇದು ಇಲ್ಲದಿರುವುದರಿಂದ ಬ್ಯಾಂಕ್ ವ್ಯವಹಾರಗಳಿಗೆ ತೊಡಕುಗಳು ಎದುರಾಗಿವೆ' ಎಂದರು.

ಮಹದೇವಪುರ ವಲಯದ ಜಂಟಿ ಆಯುಕ್ತ ವೆಂಕಟಾಚಲಪತಿ, 'ಸಾರ್ವಜನಿಕರ ಆರೋಗ್ಯವನ್ನು ಸಂರಕ್ಷಿಸುವಲ್ಲಿ ಪೌರಕಾರ್ಮಿಕರು ಮುಖ್ಯ ಪಾತ್ರ ವಹಿಸುತ್ತಿದ್ದಾರೆ. ನಿಮ್ಮ ಹಕ್ಕೊತ್ತಾಯಗಳನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುವುದು' ಎಂದು ಭರವಸೆ ನೀಡಿದರು.



ಮಹದೇವಪುರ ವಲಯದ ಜಂಟಿ ಆಯುಕ್ತರ ಕಚೇರಿ ಮುಂದೆ ಪೌರಕಾರ್ಮಿಕರು ಪ್ರತಿಭಟನೆ ನಡೆಸಿದರು.

ಟೆಂಡರ್ ಇಲ್ಲದೆಯೇ ₹4,721 ಕೋಟಿ ಮೊತ್ತದ ಯೋಜನೆಗೆ ಒಪ್ಪಿಗೆ: ಬಿಎನ್‌ಪಿ

ಬೆಂಗಳೂರು: ನಗರದಲ್ಲಿ ಕೈಗೊಂಡ ₹4,721 ಕೋಟಿ ಮೊತ್ತದ ಯೋಜನೆಗಳನ್ನು ಯಾವುದೇ ಟೆಂಡರ್ ಪ್ರಕ್ರಿಯೆ ಇಲ್ಲದೆಯೇ ಕೆಆರ್‌ಐಡಿಎಲ್‌ಗೆ ನೀಡಲಾಗಿದೆ. ಈ ಮೂಲಕ ಕರ್ನಾಟಕ ಪಾರದರ್ಶಕ ಕಾರ್ಯವಿಧಾನಗಳ ಕಾಯ್ದೆ (ಕೆಟಿಪಿಪಿ) ಉಲ್ಲಂಘಿಸಲಾಗಿದೆ ಎಂದು ಬೆಂಗಳೂರು ನವನಿರ್ಮಾಣ ಪಕ್ಷ ಆರೋಪಿಸಿದೆ.

ಬಿಎನ್‌ಪಿ ಕಳೆದ ಐದು ವರ್ಷಗಳಲ್ಲಿ (2015ರಿಂದ 2020ರವರೆಗಿನ) 19 ವಾರ್ಡ್‌ಗಳಲ್ಲಿ ಬಿಬಿಎಂಪಿ ಅನುಮೋದಿಸಿದ ಮತ್ತು ಕೈಗೊಂಡ ಯೋಜನೆಗಳ ವಿಶ್ಲೇಷಣೆ ಮಾಡಿದೆ. ಈ ಅವಧಿಯಲ್ಲಿ ಒಟ್ಟು ₹10,018 ಕೋಟಿ ಮೊತ್ತದ ಒಟ್ಟು 28,1314 ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಆದರೆ, ₹4,721 ಕೋಟಿ ಮೊತ್ತದ ಶೇಕಡ 50ರಷ್ಟು ಯೋಜನೆಗಳನ್ನು ಯಾವುದೇ ಟೆಂಡರ್ ಪ್ರಕ್ರಿಯೆ ಇಲ್ಲದೆಯೇ ಕೆಆರ್‌ಐಡಿಎಲ್‌ಗೆ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಾಮಾನ್ಯವಾಗಿ ದೊಡ್ಡ ಯೋಜನೆಗಳನ್ನು ಸಣ್ಣ ವಿಭಾಗಗಳಾಗಿ ವಿಭಜಿಸಲಾಗುತ್ತದೆ ಮತ್ತು ಕೆಟಿಪಿಪಿ ಕಾಯ್ದೆಯ ನಿಯಮಗಳಿಂದ ತಪ್ಪಿಸಿಕೊಳ್ಳಲು ಟೆಂಡರ್‌ಗಳಿಲ್ಲದೆಯೇ ಹಲವಾರು ಗುತ್ತಿಗೆದಾರರಿಗೆ ನೀಡಲಾಗಿದೆ. ಈ ಮೂಲಕ ಸಹಜವಾಗಿಯೇ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಮಾರ್ಗ ಅನುಸರಿಸಲಾಗಿದೆ ಎಂದು ದೂರಿದೆ.

ಒಪ್ಪಂದದ ಗುತ್ತಿಗೆಗಳ ಮೂಲಕ ಹಣ ವರ್ಗಾವಣೆಯ ಅನುಮಾನಸ್ಪದವಾಗಿದ್ದರೂ ಹೆಚ್ಚಿನ ಟೆಂಡರ್‌ಗಳು ಸಮರ್ಪಕ ಪ್ರಕ್ರಿಯೆಯೂ ಇಲ್ಲದೆಯೇ ನಡೆಯುತ್ತಿರುವುದು ಆಘಾತಕಾರಿಯಾಗಿದೆ. ಕೆಆರ್‌ಐಡಿಎಲ್ ಈ ಒಪ್ಪಂದಗಳನ್ನು ಕೈಗೆತ್ತಿಕೊಳ್ಳುವ ಏಜೆನ್ಸಿಯಾಗಿದೆ ಮತ್ತು ಪ್ರತಿ ಯೋಜನೆಯಲ್ಲಿಯೂ ಶೇಕಡ 5ರಿಂದ 15ರಷ್ಟು ಕಮಿಷನ್ ನೀಡಲಾಗುತ್ತಿದೆ. ಯಾವುದೇ ಟೆಂಡರ್ ಪ್ರಕ್ರಿಯೆ ಇಲ್ಲದೆ ಮತ್ತು ಕಮಿಷನ್‌ನೊಂದಿಗೆ ಒಬ್ಬ ಗುತ್ತಿಗೆದಾರರಿಗೆ ನೀಡಲಾದ ಸಾವಿರಾರು ಕೋಟಿ ಯೋಜನೆಗಳು ಭ್ರಷ್ಟಾಚಾರ ಮತ್ತು ದುರಾಡಳಿತಕ್ಕೆ ಹೆಚ್ಚಿನ ಅವಕಾಶ ನೀಡುತ್ತದೆ. ಇದು ನಿಯಮಗಳು, ಪ್ರಕ್ರಿಯೆ ಮತ್ತು ಆಡಳಿತದ ಮೂಲ ತತ್ವಗಳ ಸಂಪೂರ್ಣ ಉಲ್ಲಂಘನೆಯಾಗಿದೆ ಎಂದು ತಿಳಿಸಿದೆ.



ವಾಹನ ದಟ್ಟಣೆ

ಆಯುಧ ಪೂಜೆಗಾಗಿ ಹಣ್ಣು, ಹೂಗಳ ಖರೀದಿ ಪ್ರಯುಕ್ತ ನಗರದ ಕೆ.ಆರ್.ಮಾರುಕಟ್ಟೆ ಬಳಿ ಬುಧವಾರ ಕಂಡುಬಂದ ಜನದಟ್ಟಣೆ ಮತ್ತು ವಾಹನ ದಟ್ಟಣೆ

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬಿಎಸ್‌ಎಫ್ ಕಾರ್ಯಾಚರಣೆಯ ವ್ಯಾಪ್ತಿ ವಿಸ್ತರಣೆ

ನವದೆಹಲಿ (ಪಿಟಿಐ): ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಪಂಜಾಬ್, ಪಶ್ಚಿಮ ಬಂಗಾಳ, ಅಸ್ಸಾಂನ ಅಂತರರಾಷ್ಟ್ರೀಯ ಗಡಿ ಪ್ರದೇಶದಲ್ಲಿ 15 ಕಿ.ಮೀ ಬದಲಿಗೆ 50 ಕಿ.ಮೀ ಪ್ರದೇಶದ ವ್ಯಾಪ್ತಿಯಲ್ಲಿ ಶೋಧ ಕಾರ್ಯಾಚರಣೆ, ಜಪ್ತಿ, ಬಂಧನಕ್ಕೆ ಅವಕಾಶ ಕಲ್ಪಿಸಿ ಕೇಂದ್ರ ಸರ್ಕಾರ ಬಿಎಸ್‌ಎಫ್ ಕಾಯ್ದೆಗೆ ತಿದ್ದುಪಡಿ ತಂದಿದೆ.

ಪಾಕಿಸ್ತಾನದೊಂದಿಗೆ ಗಡಿ ಹಂಚಿಕೊಂಡಿರುವ ಗುಜರಾತ್‌ನಲ್ಲಿ ಈ ಮಿತಿಯನ್ನು 80 ಕಿ.ಮೀನಿಂದ 50 ಕಿ.ಮೀಗೆ ಇಳಿಸಲಾಗಿದೆ. ರಾಜಸ್ಥಾನದಲ್ಲಿ ಈಗಿರುವ 50 ಕಿ.ಮೀ ಮಿತಿಯನ್ನೇ ಮುಂದುವರಿಸಲಾಗಿದೆ.

ರಾಜಸ್ಥಾನ ಮತ್ತು ಪಂಜಾಬ್ ರಾಜ್ಯಗಳು ಸಹ ಪಾಕಿಸ್ತಾನದ ಜೊತೆ ಗಡಿ ಹಂಚಿಕೊಂಡಿದ್ದರೆ, ಅಸ್ಸಾಂ ಬಾಂಗ್ಲಾದೇಶದೊಂದಿಗೆ ಅಂತರರಾಷ್ಟ್ರೀಯ ಗಡಿಯನ್ನು ಹೊಂದಿದೆ.

ಅಭಿವೃದ್ಧಿ ಕಾಮಗಾರಿಗೆ ಸಂಸದ ಡಿ.ವಿ.ಸದಾನಂದಗೌಡ ಶಂಕುಸ್ಥಾಪನೆ

ಬಂಡಿಕೊಡಿಗೇಹಳ್ಳಿ: ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕೋವಿಡ್‌ನಿಂದ ಸ್ಥಗಿತಗೊಂಡಿದ್ದ 94ಸಿಸಿ ಹಕ್ಕುಪತ್ರ ಆದೇಶಪತ್ರಗಳ ವಿತರಣೆ ಪ್ರಕ್ರಿಯೆಗೆ ಮತ್ತೆ ಚಾಲನೆ ನೀಡುವ ಸಂಬಂಧ 15 ದಿನಗಳ ಒಳಗಾಗಿ ದಿನಾಂಕ ನಿಗದಿಪಡಿಸಿ, ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಂಸದ ಡಿ.ವಿ.ಸದಾನಂದಗೌಡ ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದ ಬಂಡಿಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ₹9.63 ಕೋಟಿ ಅನುದಾನದಲ್ಲಿ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಬಾಕಿಯಿರುವ ಹಕ್ಕುಪತ್ರಗಳನ್ನು ವಿತರಿಸುವುದರ ಜೊತೆಗೆ ಸಣ್ಣಪುಟ್ಟ ದೋಷಗಳಿಂದ ತಡೆಹಿಡಿದಿರುವ ಅರ್ಜಿಗಳನ್ನು ಮತ್ತೆ ಪಡೆದು ಸರಿಪಡಿಸಿ, ಆದೇಶಪತ್ರಗಳನ್ನು ವಿತರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎನ್.ಜಗದೀಶ್ ಮಾತನಾಡಿ, ಗ್ರಾಮಪಂಚಾಯಿತಿ ಕಟ್ಟಡ ತುಂಬಾ ಹಳೆಯದಾಗಿರುವುದರಿಂದ ನೂತನಕಟ್ಟಡ ನಿರ್ಮಿಸಲು 1 ಎಕರೆ 5 ಗುಂಟೆ ಜಮೀನನ್ನು ಮಂಜೂರು ಮಾಡುವ ಸಂಬಂಧ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಇದಕ್ಕಾಗಿ ₹80 ಲಕ್ಷ ಅನುದಾನ ಮೀಸಲಿರಿಸಲಾಗಿದೆ ಎಂದರು.

ಗ್ರಾಮ ಪಂಚಾಯಿತಿ ಅನುದಾನದಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಪ್ರೋತ್ಸಾಹಧನ ಹಾಗೂ ಅಂಗವಿಕಲರಿಗೆ ಸಹಾಯಧನದ ಚೆಕ್ ವಿತರಿಸಲಾಯಿತು. ಪಂಚಾಯಿತಿಯಿಂದ ಗ್ರಾಮಗಳಲ್ಲಿ ಕಸಸಂಗ್ರಹಣೆಗಾಗಿ ನೂತನ ವಾಹನಕ್ಕೆ ಚಾಲನೆ ನೀಡಲಾಯಿತು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಚೈತ್ರ ರಾಜಶೇಖರ್, ಬಿಎಂಟಿಸಿ ನಿರ್ದೇಶಕ ಟಿ.ಪಿ.ಪ್ರಕಾಶ್, ಮುಖಂಡರಾದ ದೊಡ್ಡಬಸವರಾಜು, ದೀಪು, ಡಿ.ಆರ್.ಮುನಿರಾಜು ಮತ್ತಿತರರು ಉಪಸ್ಥಿತರಿದ್ದರು.



ಸದಾನಂದಗೌಡ ಅವರು ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಎನ್‌ಜಗದೀಶ್, ಬಿಎಂಟಿಸಿ ನಿರ್ದೇಶಕ ಟಿ.ಪಿ.ಪ್ರಕಾಶ್, ಮುಖಂಡರಾದ ದೊಡ್ಡಬಸವರಾಜು, ದೀಪು, ಡಿ.ಆರ್‌ಮುನಿರಾಜು ಇತರರು ಇದ್ದರು.

ಸಂಕ್ಷಿಪ್ತ ಸುದ್ದಿ

ಯತ್ನಾಳ್ ವಿರುದ್ಧದ ಪೋಸ್ಟ್: ದೂರು

ವಿಜಯಪುರ: ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಸಂಬಂಧಿಸಿದ ಅಶ್ಲೀಲ ಸಿಡಿ ಬಿಡುಗಡೆಯಾಗಲಿದೆ ಎಂಬ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಬುಧವಾರ ಭಾರೀ ಸದ್ದು ಮಾಡಿದೆ.

'ಹಿಂದೂ ಹುಲಿಯ ಸಿಡಿ ಬಿಡುಗಡೆಗೆ ಕ್ಷಣ ಗಣನೆ, ಭರ್ಜರಿ ಯಶಸ್ಸು ಕಾಣಲಿ' ಎಂಬ ಬರಹ ಹಾಗೂ ಶಾಸಕ ಯತ್ನಾಳ ಅವರ ಭಾವಚಿತ್ರ ಇರುವ ಪೋಸ್ಟ್ ಹರಿದಾಡುತ್ತಿದ್ದು, ಈ ಸಂಬಂಧ ಯತ್ನಾಳ ಅವರ ಆಪ್ತ, ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯ ಲಕ್ಷ್ಮಣ ಜಾಧವ್ ಅವರು ವಿಜಯಪುರದ ಸೈಬರ್ (ಸಿಇಎನ್) ಕ್ರೈಂ ಪೊಲೀಸ್ ಠಾಣೆಗೆ ಬುಧವಾರ ಸಂಜೆ ದೂರು ನೀಡಿದ್ದಾರೆ.

'ನಮ್ಮ ಕಾಂಗ್ರೆಸ್' ಇನ್‌ಸ್ಟಾಗ್ರಾಂ ಖಾತೆಯ ಪ್ರೊಫೈಲ್ ನಲ್ಲಿ ಶಾಸಕ ಯತ್ನಾಳ ಅವರ ಭಾವಚಿತ್ರ ಹಾಗೂ ಅಶ್ಲೀಲ ಬರಹ ಹರಿದಾಡುತ್ತಿದೆ. ಈ ಮೂಲಕ ಶಾಸಕರಿಗೆ ಅವಮಾನ ಮಾಡಲಾಗಿದೆ. ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಅಂತರಧರ್ಮೀಯ ದಂಪತಿಗೆ ಒಟ್ಟಿಗೆ ವಾಸಿಸಲು ಅವಕಾಶ

ಅಹಮದಾಬಾದ್: ಗುಜರಾತ್ ಧಾರ್ಮಿಕ ಸ್ವಾತಂತ್ರ್ಯ (ತಿದ್ದುಪಡಿ) ಕಾಯ್ದೆ 2021ರ ಅಡಿಯಲ್ಲಿ ದಾಖಲಾದ ಮೊದಲ ಪ್ರಕರಣದಲ್ಲಿ ಜೈಲಿನಲ್ಲಿರುವ ಆರೋಪಿಗಳ ಬಿಡುಗಡೆಗೆ ಗುಜರಾತ್ ಹೈಕೋರ್ಟ್ ಬುಧವಾರ ಆದೇಶಿಸಿದೆ.

ಈ ಪ್ರಕರಣವನ್ನು ಇತ್ಯರ್ಥಗೊಳಿಸುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಿರುವ ಅಂತರ ಧರ್ಮೀಯ ದಂಪತಿಯ ಅರ್ಜಿಗಳನ್ನು ಆಲಿಸುವಾಗ ನ್ಯಾಯಾಲಯ ಈ ತೀರ್ಪು ನೀಡಿದೆ.

ಮಹಿಳೆಯ ಪತಿ, ಮೌಲಾವಿ ಮತ್ತು ಇಬ್ಬರು ಸಾಕ್ಷಿದಾರರಿಗೆ ಮಧ್ಯಂತರ ಜಾಮೀನು ಮಂಜೂರು ಮಾಡಿ ನ್ಯಾಯಮೂರ್ತಿ ಇಲೇಶ್ ಜೆ ವೋರಾ ಅವರು ಆದೇಶಿಸಿದರು. ದಂಪತಿ ಜೊತೆಯಾಗಿ ವಾಸಿಸಲು ಅನುಮತಿ ನೀಡಿದ ನ್ಯಾಯಮೂರ್ತಿಯವರು, ಈ ಪ್ರಕರಣದಲ್ಲಿ ಬಂಧನಕ್ಕೊಳಗಾಗದ ಇನ್ನೊಬ್ಬ ಆರೋಪಿಗೂ ರಕ್ಷಣೆ ನೀಡಿದ್ದಾರೆ. ಇತರ ಮೂವರು ಆರೋಪಿಗಳಿಗೆ ಈಗಾಗಲೇ ಜಾಮೀನು ದೊರೆತಿದೆ.

ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿರುವ ಅರ್ಜಿಯನ್ನು ಮುಂದಿನ ವಿಚಾರಣೆಯಲ್ಲಿ ನಿರ್ಧರಿಸಲಾಗುವುದು ಎಂದು ಹೈಕೋರ್ಟ್ ಹೇಳಿದೆ.




ಸುಭಾಷಿತ

ಭೌತಿಕ ಪ್ರಪಂಚಕ್ಕಿಂತ ಮಿಗಿಲಾದದ್ದು ಏನೂ ಇಲ್ಲ ಎಂದು ಮನಸ್ಸು ಹೇಳುತ್ತದೆ. ಅಂತಹದ್ದೊಂದು ಇದೆ, ಹಲವು ಬಾರಿ ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ ಎಂದು ಹೃದಯ ನುಡಿಯುತ್ತದೆ. -ರೂಮಿ

ಕಲ್ಲಿದ್ದಲು ಕೊರತೆ: ಪ್ರಮಾದ ಒಪ್ಪಿಕೊಂಡು ಪರಿಹಾರಕ್ಕೆ ಸರ್ಕಾರ ಮುಂದಾಗಬೇಕು

ವಿದ್ಯುತ್ ಸ್ಥಾವರಗಳಲ್ಲಿ ಬಳಸುವುದಕ್ಕೆ ಕಲ್ಲಿದ್ದಲು ಕೊರತೆ ಇಲ್ಲವೇ ಇಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟೀಕರಣ ಕೊಟ್ಟಿದೆ. ಹಾಗಿದ್ದರೂ ದೇಶದ ವಿವಿಧ ಭಾಗಗಳಲ್ಲಿರುವ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲು ಪೂರೈಕೆಯಲ್ಲಿ ಕೊರತೆ ಆಗಿದೆ ಮತ್ತು ಲಭ್ಯತೆ ಕಡಿಮೆ ಇದೆ ಎಂಬುದರ ಬಗೆಗಿನ ಕಳವಳವೇನೂ ಕಡಿಮೆ ಆಗಿಲ್ಲ. ದೇಶದ ಹೆಚ್ಚಿನ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲಿನ ಕೊರತೆ ಇರುವುದರಿಂದಾಗಿ ಬಹು ಗಂಭೀರವಾದ ವಿದ್ಯುತ್ ಬಿಕ್ಕಟ್ಟು ಎದುರಾಗಿದೆ. 135 ವಿದ್ಯುತ್ ಸ್ಥಾವರಗಳ ಪೈಕಿ 104 ಸ್ಥಾವರಗಳಲ್ಲಿ ಕೊರತೆ ಇದೆ. ತಮ್ಮಲ್ಲಿ ಇರುವ ಕಲ್ಲಿದ್ದಲಿನ ಸಂಗ್ರಹವು ಎರಡೋ ಮೂರೋ ದಿನಗಳಿಗಷ್ಟೇ ಸಾಕಾಗುತ್ತದೆ ಎಂಬ ಆತಂಕವನ್ನು ಹಲವು ಸ್ಥಾವರಗಳ ಆಡಳಿತ ಮಂಡಳಿಗಳು ವ್ಯಕ್ತಪಡಿಸಿವೆ. ಕೆಲವು ಸ್ಥಾವರಗಳು ಸ್ಥಗಿತಗೊಂಡಿವೆ. ಕನಿಷ್ಠ 20 ದಿನಗಳಿಗೆ ಬೇಕಾಗುವಷ್ಟು ಕಲ್ಲಿದ್ದಲು ದಾಸ್ತಾನು ಇರಿಸಿಕೊಳ್ಳಬೇಕು ಎಂಬುದು ನಿಯಮ. ಕೆಲವು ರಾಜ್ಯಗಳಲ್ಲಿ ವಿದ್ಯುತ್ ಕಡಿತವನ್ನು ಈಗಾಗಲೇ ಘೋಷಿಸಲಾಗಿದೆ. ಲೋಡ್ ಶೆಡ್ಡಿಂಗ್ ಆರಂಭವಾಗಿದೆ. ಇನ್ನೂ ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ ಆಗಲಿದೆ ಎಂಬ ಸೂಚನೆಯನ್ನು ಜನರಿಗೆ ನೀಡಲಾಗಿದೆ. ವಿದ್ಯುತ್ ಕಡಿತದ ಎಚ್ಚರಿಕೆಯನ್ನು ದೆಹಲಿ ಸರ್ಕಾರವು ಈಗಾಗಲೇ ನೀಡಿದೆ. ವಿದ್ಯುತ್ ಉತ್ಪಾದನೆಯು ಸಾಮಾನ್ಯ ಮಟ್ಟದಿಂದ ಕೆಳಕ್ಕೆ ಕುಸಿದಿದೆ. ಇದು ವಿದ್ಯುತ್ತಿನ ಗೃಹ ಬಳಕೆ ಮತ್ತು ಕೈಗಾರಿಕಾ ಬಳಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ಸೂರತ್‌ನ ಜವಳಿ ಉದ್ಯಮವನ್ನು ಒಂದು ತಿಂಗಳು ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ ಎಂದು ವರದಿಯಾಗಿದೆ.



ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾದರೆ ಈಗಷ್ಟೇ ಚೇತರಿಸಿಕೊಳ್ಳಲು ಆರಂಭಿಸಿರುವ ಆರ್ಥಿಕತೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ

ವರ್ಷದ ಕೊನೆಯ ತಿಂಗಳುಗಳಲ್ಲಿ ಕಲ್ಲಿದ್ದಲು ಕೊರತೆ ಸಾಮಾನ್ಯವಾಗಿ ಇರುತ್ತದೆ. ಆದರೆ, ಈ ಬಾರಿ ಕೋಲ್ ಇಂಡಿಯಾ ಲಿಮಿಟೆಡ್‌ನ (ಸಿಐಎಲ್) ಅಸಮರ್ಪಕ ನಿರ್ವಹಣೆಯಿಂದಾಗಿ ಸಮಸ್ಯೆ ಬಿಗಡಾಯಿಸಿದೆ. ದೇಶದ ಒಟ್ಟು ವಿದ್ಯುತ್ ಉತ್ಪಾದನೆಯ ಸುಮಾರು ಶೇ 55ರಷ್ಟು ಕಲ್ಲಿದ್ದಲಿನ ಮೇಲೆ ಅವಲಂಬಿತವಾಗಿದೆ. ಇದಕ್ಕೆ ಬೇಕಾದ ಶೇ 83ರಷ್ಟು ಕಲ್ಲಿದ್ದಲನ್ನು ಸಿಐಎಲ್ ಪೂರೈಸುತ್ತಿದೆ. ಸಾಂಕ್ರಾಮಿಕದ ಅಬ್ಬರದ ತಿಂಗಳುಗಳಲ್ಲಿ ಕಲ್ಲಿದ್ದಲು ಉತ್ಪಾದನೆಯನ್ನು ಕಡಿಮೆ ಮಾಡುವುದು ಸಿಐಎಲ್‌ಗೆ ಅನಿವಾರ್ಯವಾಗಿತ್ತು. ಆದರೆ, ಅರ್ಥ ವ್ಯವಸ್ಥೆಯು ಪುನಶ್ಚೇತನದ ಹಾದಿಗೆ ಬಂದ ಬಳಿಕ ಬೇಡಿಕೆ ಹೆಚ್ಚಲಿದೆ ಎಂಬುದನ್ನು ಸಿಐಎಲ್ ಅಂದಾಜಿಸಲೇ ಇಲ್ಲ. ಉತ್ಪಾದನೆಯು ನಿಧಾನಗತಿಗೆ ಹೊರಳಿಕೊಂಡಿತ್ತು ಮತ್ತು ಬೇಡಿಕೆಯಲ್ಲಿ ದಿಢೀರ್ ಹೆಚ್ಚಳ ಆಗಲಿದೆ ಎಂಬುದರ ಬಗ್ಗೆ ಯೋಚನೆಯನ್ನೇ ಮಾಡಿರಲಿಲ್ಲ. ಮುಂಗಾರು ಮಳೆಯು ಕೂಡ ಕಲ್ಲಿದ್ದಲು ಉತ್ಪಾದನೆಗೆ ಅಡ್ಡಿ ಉಂಟು ಮಾಡಿತ್ತು ಎಂಬುದು ನಿಜ. ಜತೆಗೆ, ಕಲ್ಲಿದ್ದಲನ್ನು ಗಣಿಗಳಿಂದ ವಿದ್ಯುತ್ ಸ್ಥಾವರಗಳಿಗೆ ಸಾಗಿಸುವುದು ಕೂಡ ಕಷ್ಟವಾಗಿತ್ತು. ಈ ಎಲ್ಲದರ ಬಗ್ಗೆ ಮುಂದಾಲೋಚನೆ ಇದ್ದಿದ್ದರೆ, ಅದಕ್ಕೆ ಅನುಗುಣವಾಗಿ ಯೋಜನೆ ರೂಪಿಸಿದ್ದಿದ್ದರೆ ಈಗಿನ ಬಿಕ್ಕಟ್ಟನ್ನು ತಪ್ಪಿಸಬಹುದಾಗಿತ್ತು. ದೇಶೀಯವಾಗಿ ಕಲ್ಲಿದ್ದಲು ಲಭ್ಯವಿಲ್ಲ ಎಂದಾದಾಗ ಆಮದು ಹೆಚ್ಚಳವಾಯಿತು. ಆದರೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕಲ್ಲಿದ್ದಲು ದರ ಏರಿಕೆಯಾದದ್ದು ಪರಿಸ್ಥಿತಿ ಇನ್ನಷ್ಟು ಹದಗೆಡುವಂತೆ ಮಾಡಿತು. ಆಮದು ಮಾಡಿಕೊಂಡ ಕಲ್ಲಿದ್ದಲು ಬಳಸಿ ಉತ್ಪಾದನೆ ಮಾಡುತ್ತಿದ್ದ ವಿದ್ಯುತ್ ಪ್ರಮಾಣವೂ ತಗ್ಗಿತು ಮತ್ತು ವಿದ್ಯುತ್ ದರದಲ್ಲಿ ಏರಿಕೆಯೂ ಆಯಿತು. ರಾಜ್ಯಗಳಿಗೆ ಕರಾರು ಪ್ರಕಾರ ಪೂರೈಸಬೇಕಾಗಿದ್ದ ವಿದ್ಯುತ್ ಒದಗಿಸಲು ಕೆಲವು ವಿದ್ಯುತ್ ಉತ್ಪಾದಕ ಸಂಸ್ಥೆಗಳಿಗೆ ಸಾಧ್ಯವಾಗಲಿಲ್ಲ.

ವಿದ್ಯುತ್ ಅತ್ಯಂತ ಅಗತ್ಯ. ಅದರ ಪೂರೈಕೆಯಲ್ಲಿ ವ್ಯತ್ಯಯವಾದರೆ ಈಗಷ್ಟೇ ಚೇತರಿಸಿಕೊಳ್ಳಲು ಆರಂಭಿಸಿರುವ ಆರ್ಥಿಕತೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಅರ್ಥ ವ್ಯವಸ್ಥೆಯು ಮತ್ತೆ ಕುಸಿಯಲಾರಂಭಿಸಿದರೆ ಅದನ್ನು ತಡೆದು ನಿಲ್ಲಿಸಲು ಮತ್ತೆ ಹೆಣಗಾಡಬೇಕು. ಜತೆಗೆ, ವಿದ್ಯುತ್ ಕೊರತೆಯಿಂದಾಗಿ ವಿದ್ಯುತ್ ದರ ಏರಿಕೆಯಾದರೆ, ಅದು ಹಣದುಬ್ಬರ ಏರಿಕೆಗೆ ಕಾರಣವಾಗಬಹುದು. ಈ ಕಾರಣಕ್ಕಾಗಿಯೇ ವಿದ್ಯುತ್ ದರ ಹೆಚ್ಚಳಕ್ಕೆ ಸರ್ಕಾರ ಅವಕಾಶ ಕೊಡದಿರಬಹುದು. ಇದು ವಿದ್ಯುತ್ ವಿತರಣಾ ಕಂಪನಿಗಳ ಮೇಲೆ ಆರ್ಥಿಕ ಒತ್ತಡ ಹೇರಬಹುದು. ಕೆಲವು ರಾಜ್ಯಗಳು ಅನಗತ್ಯವಾಗಿ ದಿಗಿಲು ಸೃಷ್ಟಿಸುವ ಕೆಲಸ ಮಾಡಿವೆ ಎಂದು ಕೇಂದ್ರ ವಿದ್ಯುತ್ ಸಚಿವ ಆರ್.ಕೆ. ಸಿಂಗ್ ಹರಿಹಾಯ್ದಿದ್ದಾರೆ. ಲೋಡ್ ಶೆಡ್ಡಿಂಗ್ ಮಾಡಲೇಬಾರದು ಎಂದು ವಿದ್ಯುತ್ ವಿತರಣಾ ಕಂಪನಿಗಳಿಗೆ ಅವರು ಎಚ್ಚರಿಕೆ ಕೊಟ್ಟಿದ್ದಾರೆ. ‘ಹೊಣೆಗೇಡಿ ವರ್ತನೆ’ಗಾಗಿ ಗೇಲ್ ಮತ್ತು ಟಾಟಾ ಪವರ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ. ಈಗಿನ ಬಿಕ್ಕಟ್ಟಿಗೆ ಹಿಂದೆ ಅಧಿಕಾರದಲ್ಲಿ ಇದ್ದ ಯುಪಿಎ ಸರ್ಕಾರ ಕಾರಣ ಎಂದು ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರು ಹೇಳಿದ್ದಾರೆ. ಭಾರತವು ವಿದ್ಯುತ್ ಮಿಗತೆ ಇರುವ ದೇಶ, ದೇಶದಲ್ಲಿ ಕಲ್ಲಿದ್ದಲು ಕೊರತೆ ಇಲ್ಲವೇ ಇಲ್ಲ, ಕೊರತೆ ಇದೆ ಎಂಬ ವರದಿಗಳು ಆಧಾರರಹಿತ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಅದಕ್ಷತೆಯಿಂದಾಗಿ ಬಿಕ್ಕಟ್ಟು ಸೃಷ್ಟಿಯಾಗಿದೆ ಎಂಬುದು ನಿಜ. ಅದನ್ನು ಒಪ್ಪಿಕೊಳ್ಳುವ ಮನಃಸ್ಥಿತಿಯನ್ನು ಸರ್ಕಾರ ತೋರಬೇಕು. ಸಮಸ್ಯೆಯೇ ಇಲ್ಲ ಎಂದು ತಪ್ಪಿಸಿಕೊಳ್ಳುವುದು ಪಲಾಯನವಾದವಲ್ಲದೆ ಬೇರೇನಲ್ಲ. ಈಗಿನ ಸಮಸ್ಯೆಗೆ ಹಿಂದಿನ, ಅದಕ್ಕೂ ಹಿಂದಿನ ಸರ್ಕಾರಗಳು ಕಾರಣ ಎಂಬುದು ಕೈಲಾಗದವರ ಪ್ರಲಾಪದಂತೆ ತೋರುತ್ತದೆಯೇ ಹೊರತು ದಕ್ಷತೆ ಅನಿಸುವುದಿಲ್ಲ. ಇತರರ ಮೇಲೆ ಗೂಬೆ ಕೂರಿಸುವುದನ್ನು ಬಿಟ್ಟು, ಈಗ ಎದುರಾಗಿರುವ ಕಲ್ಲಿದ್ದಲು ಕೊರತೆ ಮತ್ತು ವಿದ್ಯುತ್ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಸರ್ಕಾರ ತಕ್ಷಣ ಕಾರ್ಯತತ್ಪರ ಆಗಬೇಕಿದೆ.

ದಿನದ ಟ್ವೀಟ್

ಭಿನ್ನ ದನಿಗೆ ಅರ್ಥವಿದೆ



ರಾಷ್ಟ್ರಪತಿ ಅವರನ್ನು ಭೇಟಿ ಮಾಡಿದ ಕಾಂಗ್ರೆಸ್ ನಿಯೋಗದಲ್ಲಿ ಗುಲಾಂ ನಬಿ ಆಜಾದ್ ಅವರೂ ಇದ್ದುದನ್ನು ಕಂಡೆ. ಹಾಗಿದ್ದಮೇಲೆ ಈ ಜಿ- 23 ಎನ್ನುವುದೆಲ್ಲ ಏನು? ಎಲ್ಲ ರಾಜಕೀಯ ಪಕ್ಷಗಳಲ್ಲೂ ಭಿನ್ನಾಭಿಪ್ರಾಯಗಳು ಇರುತ್ತವೆ. ಕೆಲವೊಮ್ಮೆ ದನಿ ಎತ್ತುವುದು ಪ್ರಜಾಪ್ರಭುತ್ವದ ಸಲುವಾಗಿಯೇ ಆಗಿರುತ್ತದೆ.

ಪ್ರವೇಶ್ ಜೈನ್, ಉದ್ಯಮಿ

ಕಿಡಿನುಡಿ



ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬಗ್ಗೆ ಅವರ ಪಕ್ಷದವರೇ ಹೇಳಿರುವ ಮಾತುಗಳನ್ನು ರಾಜ್ಯದ ಜನ ಕೇಳುತ್ತಿದ್ದಾರೆ. ಡಿಕೆಶಿ ಮೇಲೆ ಇ.ಡಿ, ಸಿಬಿಐ ದಾಳಿಯಾದಾಗ ರಾಜಕೀಯಪ್ರೇರಿತ ಎಂದವರಿಗೆ ಅವರದ್ದೇ ಪಕ್ಷದ ಮುಖಂಡರು ಸಾಕ್ಷ್ಯ ನೀಡಿದ್ದಾರೆ.

ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಸೋಮವಾರ, 14-10-1996

• **ಸಡಗರದ ಮೈಸೂರು ದಸರಾ ಆರಂಭ**

ಮೈಸೂರು, ಅ. 13– ಕನ್ನಡ ನಾಡಿನ ಹೆಮ್ಮೆಯ ನವರಾತ್ರಿಯ ಹಬ್ಬಕ್ಕೆ ಫಾಲ್ಕೆ ಪ್ರಶಸ್ತಿ ವಿಜೇತ ನಟ ಡಾ.ರಾಜಕುಮಾರ್ ಅವರು ಇಂದಿಲ್ಲಿ ಚಾಲನೆ ನೀಡಿದರು.

ಚಾಮುಂಡಿ ಬೆಟ್ಟದ ಮೇಲೆ ಮೈಸೂರು ಮಲ್ಲಿಗೆಯಿಂದ ಅಲಂಕರಿಸಿದ್ದ ಚಾಮುಂಡೇಶ್ವರಿಗೆ, ಪತ್ನಿ ಸಮೇತರಾಗಿ ಪೂಜೆ ಸಲ್ಲಿಸಿದ ರಾಜಕುಮಾರ್ ಅವರು ತಮ್ಮ ಗಾಯನದ ಕಂಪನ್ನೂ ಪಸರಿಸಿ ನಾಡಹಬ್ಬದ ಕಹಳೆಯನ್ನು ಮೊಳಗಿಸಿದರು.

ಮೋಡಗಳ ಮಧ್ಯೆ ಪ್ರಖರವಾಗಿ ಉರಿಯುತ್ತಿದ್ದ ಬೆಳಗಿನ ಸೂರ್ಯನ ಸಾಕ್ಷಿಯಲ್ಲಿ ಇಡೀ ಬೆಟ್ಟವೇ ಹೊಳೆಯುತ್ತಿದ್ದು, ಮೈಸೂರು ನಗರದಲ್ಲಿ ಇನ್ನು ಹತ್ತು ದಿನಗಳ ಕಾಲ ಸಾಂಸ್ಕೃತಿಕ ಹಬ್ಬವಾಗಿ, ಪರಂಪರೆಯ ವೈಭವವನ್ನು ಮೆರೆಸುವ ದಸರಾ, ರಾಜ್ ದಂಪತಿಯ ಆಗಮನದಿಂದ ಸಹಜವಾಗಿಯೇ ಸಡಗರವನ್ನು ಪಡೆದುಕೊಂಡಿತ್ತು.

• **ಸರ್ಕಾರ ರಚನೆಗೆ ಬಿಜೆಪಿ ಸನ್ನಾಹ**

ನವದೆಹಲಿ, ಅ. 13 (ಯುಎನ್ಐ, ಪಿಟಿಐ)– ಉತ್ತರಪ್ರದೇಶದ ಮುಖ್ಯಮಂತ್ರಿ ಆಯ್ಕೆ ಸಂಬಂಧ ಕೇಂದ್ರದ ಸಂಯುಕ್ತರಂಗ ಸರ್ಕಾರಕ್ಕೆ ಯಾವುದೇ ಬೆದರಿಕೆ ಒಡ್ಡಲು ಇಂದು ಇಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಿರಾಕರಿಸಿದೆ. ಈ ನಡುವೆ, ಉತ್ತರಪ್ರದೇಶದಲ್ಲಿ ಸರ್ಕಾರ ರಚಿಸಲು ತಮ್ಮನ್ನು ಆಹ್ವಾನಿಸುವಂತೆ ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಭಾರತೀಯ ಜನತಾ ಪಕ್ಷ ನಿರ್ಧರಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 14-10-1971

• **ಬೆಳಗಾವಿ ಸಮ್ಮೇಳನದಲ್ಲಿ ಘರ್ಷಣೆ, ಗೊಂದಲ**

ಬೆಳಗಾವಿ, ಅ. 13– ಎರಡು ಗುಂಪುಗಳ ನಡುವೆ ನೇರ ಘರ್ಷಣೆ, ಘೋಷಣೆ, ಕೂಗಾಟ ಹಾಗೂ ಕೈಕೈ ಮಿಲಾಯಿಸಿ ಇಂದು ಮೈಸೂರು ಪ್ರದೇಶ ಆಡಳಿತ ಕಾಂಗ್ರೆಸ್ಸಿನ ರಾಜಕೀಯ ಸಮ್ಮೇಳನದಲ್ಲಿ ಸುಮಾರು ತೊಂಬತ್ತು ನಿಮಿಷ ತೀವ್ರ ಗೊಂದಲ ಉಂಟಾಯಿತು.

ಹಲವರಿಗೆ ಹೊಡೆತ ಬಿದ್ದು ತಳ್ಳಾಟ ಪ್ರಾರಂಭವಾದಾಗ ಪೊಲೀಸರು ಚಪ್ಪರಕ್ಕೆ ಪ್ರವೇಶಿಸಿ ಕೆಲವರನ್ನು ಓಡಿಸಿದರು.

ಗುಂಪು ಹತೋಟಿಗೆ ಬರದಿದ್ದಾಗ ಲಘು ಲಾಠಿ ಪ್ರಹಾರ ನಡೆಯಿತು.

ನಿನ್ನೆ ಮತ್ತು ಇಂದು ಬೆಳಿಗ್ಗೆ ಸುಸೂತ್ರವಾಗಿ ಸಾಗಿದ ಸಮ್ಮೇಳನದಲ್ಲಿ ನಿರ್ಣಯವೊಂದು ಆಸ್ಫೋಟನಕ್ಕೆ ಕಾರಣವಾಯಿತು.

ಮಧ್ಯದಲ್ಲಿ ಕೆಲವರು ಮಹಾಜನ್ ವರದಿ ಕಾರ್ಯಗತವಾಗಬೇಕೆಂದು ಘೋಷಣೆ ಕೂಗಿದರು. ವಿದ್ಯಾರ್ಥಿಗಳೂ ಘೋಷಣೆ ಹಾಕಲು ಆರಂಭಿಸಿದರು.

ಮಧ್ಯೆ ‘ಕರ್ನಾಟಕ’ ಹೆಸರಿನ ಬಗೆಗೆ ಕೂಗಾಟ ನಡೆಯಿತು. ಈ ರೀತಿ ನಾನಾ ವರ್ಗಗಳ ಮಿಶ್ರಣವು ಹಲವಾರು ಬಾರಿ ಗೊಂದಲ ಉಂಟು ಮಾಡಿತು.

ತಾಪಮಾನ ನಿಯಂತ್ರಣಕ್ಕೆಂದು ಸ್ಕಾಟ್ಲೆಂಡಿನಲ್ಲಿ ಇನ್ನೊಂದು ಜಾಗತಿಕ ಸಮಾವೇಶ ನಡೆಯಲಿದೆ. ನಮ್ಮ ಸಿದ್ಧತೆ ಏನು?

ಬಿಸಿಲ್ಗುದುರೆಯೆ, ತಂಪೆರೆಯುವ ತೆರೆಯೆ?



ವಿಜ್ಞಾನ ವಿಶೇಷ

ನಾಗೇಶ ಹೆಗಡೆ


ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತ ನೀರು ಮಡುಗಟ್ಟಿದ್ದರಿಂದ ಪ್ರಯಾಣಿಕರು ಟ್ರ್ಯಾಕ್ಟರ್ ಸವಾರಿ ಮಾಡುತ್ತಿದ್ದ ಚಿತ್ರಗಳು ನಿನ್ನೆ ಪ್ರಸಾರವಾದವು. ಹೇಳಿಕೇಳಿ ನಿನ್ನೆಯೇ (ಅ. 13) ‘ಅಂತಾರಾಷ್ಟ್ರೀಯ ಡಿಸಾಸ್ಟರ್ ರಿಡಕ್ಷನ್ ಡೇ’ ಆಗಿತ್ತು. ದಿನೇ ದಿನೇ ಹೆಚ್ಚುತ್ತಿರುವ ನೈಸರ್ಗಿಕ ದುರಂತಗಳಿಂದ ಮನುಕುಲವನ್ನು (ಮತ್ತು ಇತರ ಕುಲಗಳನ್ನೂ) ಪಾರುಮಾಡಲು ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದು ಹೇಗೆಂಬುದನ್ನು ಚಿಂತಿಸಬೇಕಾದ ದಿನ ಅದು.

ಟ್ರ್ಯಾಕ್ಟರ್‌ಗಳ ಸಹಾಯದಿಂದ ವಿಮಾನವನ್ನೂ ಎಳೆದು ಹೊರಡಿಸಬೇಕಾದ ಇನ್ನೊಂದು ಸಂದರ್ಭ ನೆನಪಿಗೆ ಬರುತ್ತದೆ. ವಾಷಿಂಗ್ಟನ್‌ನ ರೇಗನ್ ವಿಮಾನ ನಿಲ್ದಾಣದಿಂದ ಮೇಲೇರಲು ತಯಾರಾಗಿದ್ದ ವಿಮಾನದ ಚಕ್ರಗಳು ಕರಗಿದ ಡಾಂಬರಿನಲ್ಲಿ ಹೂತುಹೋಗಿದ್ದವು. ಏಕೆಂದರೆ ಬಿಸಿಲಿನ ಝಳ ಅಂದು ಅಷ್ಟು ತೀವ್ರವಾಗಿತ್ತು. ಆಸೀನರಾಗಿದ್ದ ಪ್ರಯಾಣಿಕರನ್ನೆಲ್ಲ ಇಳಿಸಿ, ಎಂಜಿನ್ನಿಗೆ ಅದೆಷ್ಟೇ ನೂಕುಬಲ ಕೊಟ್ಟರೂ ವಿಮಾನ ಮಿಸುಕಲಿಲ್ಲ. ಟ್ರ್ಯಾಕ್ಟರಿನಿಂದ ಜಗ್ಗಿದರೂ ಚಕ್ರ ಮೇಲೇಳಲಿಲ್ಲ. ಬಲಿಷ್ಠ ಜಗ್ಗುಯಂತ್ರಗಳ ನೆರವಿನಿಂದ ಕೊನೆಗೂ ವಿಮಾನ ಕದಲಿ ಆಕಾಶಕ್ಕೇರಿತು ಎನ್ನಿ. ಬಂಡವಾಳಶಾಹಿ ಜಗತ್ತನ್ನು ಕಟುವಾಗಿ ಟೀಕಿಸುವ ಕೆನಡಾದ ಪ್ರಸಿದ್ಧ ಲೇಖಕಿ ನವೊಮಿ ಕ್ಲೇನ್ 2012ರ ಆ ಘಟನೆಯಿಂದಲೇ ತಮ್ಮ ‘ದಿಸ್ ಚೇಂಜಸ್ ಎವ್ರಿಥಿಂಗ್’ ಹೆಸರಿನ ಗ್ರಂಥವನ್ನು ಆರಂಭಿಸಿದ್ದಾರೆ. ಭೂತಾಪ ಏರಿಕೆ ಜಗತ್ತಿನ ಎಲ್ಲವನ್ನೂ ಬದಲಿಸಲಿದೆ ಎಂದು ವಾದಿಸುವ ಆಕೆ ಈ ಟ್ರ್ಯಾಕ್ಟರ್ ಘಟನೆಯನ್ನು ಓದುಗರ ಮುಂದಿಡುತ್ತ, ‘ಭೂಮಿಯ ಮೇಲಿನ ನಾವೆಲ್ಲರೂ ಅಂಥ ವಿಮಾನದ ಪ್ರಯಾಣಿಕರೇ ಆಗಿದ್ದೇವೆ’ ಎಂದು ಬರೆದಿದ್ದಾರೆ.

ಈಗಿರುವ ತಂತ್ರಜ್ಞಾನದ ಬಿಸಿಲ್ಗುದುರೆಯನ್ನೇರಿ ಹವಾಮಾನ ಸಂಕಟಗಳನ್ನು ಎದುರಿಸಲು ಹೋದಾಗ ಇಂಥ ವೈರುಧ್ಯಗಳು ಎದುರಾಗುತ್ತಿವೆ. ಗಣಿ ಪ್ರದೇಶದಲ್ಲಿ ಸುರಿದ ಅತಿ ಮಳೆಯೇ ಕಲ್ಲಿದ್ದಲ ಗಣಿಗಾರಿಕೆಗೆ ಅಡ್ಡಿಯಾಗಿದೆ ಎನ್ನುತ್ತ, ಅವಸರದಲ್ಲಿ ಹಡಗುಭರ್ತಿ ವಿದೇಶೀ ಕಲ್ಲಿದ್ದಲನ್ನು ತರಿಸಲೆಂದು ಇನ್ನಷ್ಟು ಇಂಧನಗಳನ್ನು ಉರಿಸುತ್ತ ವಿದ್ಯುತ್ ಉತ್ಪಾದನೆ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ. ಇನ್ನೇನು, ಚಳಿಗಾಲ ಬಂತೆಂದರೆ ಉತ್ತರ ಭಾರತದ ಉದ್ದಗಲಕ್ಕೂ ವಿದ್ಯುತ್ ಶಕ್ತಿಗೆ ಬೇಡಿಕೆ ಹೆಚ್ಚುವುದರಿಂದ ಕಲ್ಲಿದ್ದಲನ್ನು ಇನ್ನೂ ಜಾಸ್ತಿ ಉರಿಸಬೇಕಾಗುತ್ತದೆ. ಅದರಿಂದ ಹೊಂಜು (ಹೊಗೆ+ಮಂಜು) ಕವಿದು ಉಸಿರಾಟವೂ ಕಷ್ಟವಾದಾಗ ಕಲ್ಲಿದ್ದಲ ಉಷ್ಣಸ್ಥಾವರಗಳನ್ನು ಸ್ಥಗಿತಗೊಳಿಸುವ ಆದೇಶವನ್ನು ದಿಲ್ಲಿ ಸರ್ಕಾರ ಹೊರಡಿಸುತ್ತದೆ. ಆಗ ವಿದ್ಯುತ್ ಕಡಿತದಿಂದಾಗಿ ಮನೆಮನೆಗಳಲ್ಲಿ ಕಲ್ಲಿದ್ದಲನ್ನು ಉರಿಸುವುದರಿಂದ ಹೊಗೆ ಮತ್ತಷ್ಟು ಹೆಚ್ಚಾಗಿ ವಾಹನ ಸಂಚಾರಕ್ಕೂ ಮಿತಿ ಹೇರಬೇಕಾಗುತ್ತದೆ. ಅದೆಲ್ಲ ಗೊತ್ತಿದ್ದರೂ ದಿಲ್ಲಿಗೆ ಇನ್ನೂ ಹೆಚ್ಚು ಕಲ್ಲಿದ್ದಲನ್ನು ಶೀಘ್ರ ಪೂರೈಸುವಂತೆ ಪ್ರಧಾನಿಗೆ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪತ್ರ ಬರೆಯುತ್ತಾರೆ. ಸಿಮೆಂಟ್ ಉತ್ಪಾದನೆಗೆಂದು ರಾಜ್ಯಕ್ಕೆಲ್ಲ ಸುಣ್ಣದ ಕಲ್ಲನ್ನು ಪೂರೈಸುವ ಕಲಬುರಗಿ ಜಿಲ್ಲೆಯಲ್ಲಿ ಸಿಮೆಂಟ್ ಲೇಪವಿಲ್ಲದ ಮನೆಗಳೇ ಭೂಕಂಪನದ ಭಯದಲ್ಲಿ ನಲುಗುತ್ತಿವೆ. ಸಿಮೆಂಟ್ ಉತ್ಪಾದನೆಯಲ್ಲಿ ಹೇರಳ ಬಳಕೆಯಾಗುವ ಹೊಗೆಕಕ್ಕುವ ಇಂಧನಗಳೇ ಅತಿಮಳೆಗೂ ಭೂಕಂಪನಕ್ಕೂ ಕಾರಣವಾಗುತ್ತಿವೆ.

ಬರಲಿರುವ ದುರಂತಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅನೇಕ ಜಾಗತಿಕ ಸಮಾವೇಶಗಳಾಗಿವೆ. ಜಪಾನಿನ ಸೆಂಡಾಯ್ ನಗರದಲ್ಲಿ 2016ರ ಅಕ್ಟೋಬರ್ 13ರಂದು ವಿಶ್ವಸಂಸ್ಥೆಯ ಅಧ್ಯಕ್ಷರು ‘ಸೆಂಡಾಯ್ ಸೆವೆನ್: ಏಳು ಗುರಿಗಳು, ಏಳು ವರ್ಷ’ ಎಂಬ ಘೋಷಣೆ ಹೊರಡಿಸಿದ್ದರು (ನೆನಪಿದೆಯೆ 2011ರಲ್ಲಿ ಸೆಂಡಾಯ್ ನಗರ ಮತ್ತು ಸಮೀಪದ ಫುಕುಶಿಮಾ ಪರಮಾಣು ಸ್ಥಾವರಗಳು ಭೀಕರ ಭೂಕಂಪನ ಮತ್ತು ಸುನಾಮಿಗೆ ಸಿಕ್ಕು ನೆಲಕಚ್ಚಿ, ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನ ಗತಿಸಿದರು). ವ್ಯಂಗ್ಯ ಏನೆಂದರೆ ಪ್ರತಿವರ್ಷವೂ ಎಂಬಂತೆ ಅಕ್ಟೋಬರ್ 13ರ ಆಸುಪಾಸಿನಲ್ಲೇ ಬೆಂಗಳೂರಿನಲ್ಲಿ ಅತಿವೃಷ್ಟಿಯ ಅನಾಹುತಗಳಾಗುತ್ತಿವೆ. ಸೆಂಡಾಯ್ ಗುರಿಗಳು ಯಾರಿಗೆ ನೆನಪಿದೆಯೊ, ನಮ್ಮ ಸರ್ಕಾರವಂತೂ ದುರಂತ ತಡೆಯುವತ್ತ ನಾಗರಿಕರನ್ನು ಸಜ್ಜುಗೊಳಿಸುವ ಯಾವ ಜನಜಾಗೃತಿ ಕಾರ್ಯಕ್ರಮಗಳನ್ನೂ ನಿನ್ನೆ ಹಾಕಿಕೊಂಡಂತಿಲ್ಲ. ಈಗ ಇನ್ನೊಂದು ಜಾಗತಿಕ ಸಮಾವೇಶಕ್ಕೆ ಸಿದ್ಧತೆ ಭರದಿಂದ ನಡೆದಿದೆ.

ತಾಪಮಾನ ನಿಯಂತ್ರಣ ಕುರಿತ 2015ರ ಪ್ಯಾರಿಸ್ ಶೃಂಗಸಭೆಯ ನಂತರದ ಅತಿ ದೊಡ್ಡ ಸಮಾವೇಶ (ಸಿಒಪಿ26) ಸ್ಕಾಟ್ಲೆಂಡಿನ ಗ್ಲಾಸ್ಗೋ ನಗರದಲ್ಲಿ ಈ ಅಕ್ಟೋಬರ್ 31ರಿಂದ ಎರಡು ವಾರಗಳ ಕಾಲ ನಡೆಯಲಿದೆ. 196 ದೇಶಗಳ ಮುತ್ಸದ್ದಿಗಳು, ಬಹುರಾಷ್ಟ್ರೀಯ ಕಂಪನಿಗಳ ಮುಖ್ಯಸ್ಥರು, ಪರಿಸರವಾದಿಗಳು, ತಂತ್ರವಿದ್ಯಾ ವಿಶಾರದರು ಮತ್ತು ಹೂಡಿಕೆದಾರ ಸಂಸ್ಥೆಗಳು ಭಾಗವಹಿಸುವ ಈ ಚರ್ಚಾಮೇಳದ ಅಧ್ಯಕ್ಷತೆ ಬ್ರಿಟನ್ನಿನ ಸಂಸತ್ ಸದಸ್ಯ ಅಲೋಕ್ ಶರ್ಮಾ ಹೆಗಲಿಗೆ ಬಂದಿದೆ. ಕಾಲೇಜಿನಲ್ಲಿ ಫಿಸಿಕ್ಸ್ ಓದಿದ್ದರೂ ಮುಂದೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮೆರೆದು, ಕಳೆದ 15 ವರ್ಷಗಳಿಂದ ಸಂಸದರಾಗಿ, ಜನಪ್ರಿಯ ಸಚಿವರಾಗಿ (ಭಾರತೀಯ ಮೂಲದ ಶರ್ಮಾ ಮತ್ತು ಹಣಕಾಸು ಸಚಿವ ರಿಷಿ ಸುನಕ್ ಇಬ್ಬರೂ ಬೈಬಲ್ ಬದಲು ಭಗವದ್ಗೀತೆ ಹಿಡಿದು ಸಂಸತ್ತಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದ್ದರು) ಈಗ ಜಾಗತಿಕ ಮೇಳದ ಸರ್ವಾಧ್ಯಕ್ಷರಾಗಿದ್ದಾರೆ. ‘ಭೂತಾಪ ತಡೆಗೆ ಪ್ಯಾರಿಸ್ ಸಮಾವೇಶದಲ್ಲಿ ಪ್ರತಿಜ್ಞೆ ಮಾಡಿದೆವು; ಈಗ ಕ್ರಿಯಾಶೀಲರಾಗೋಣ’ ಎಂಬ ಘೋಷಣೆ ಹೊರಡಿಸಿರುವ ಶರ್ಮಾ, ಬದಲೀ ತಂತ್ರಜ್ಞಾನವನ್ನು ಬೆಂಬಲಿಸುವಂತೆ ಹೂಡಿಕೆದಾರರಿಗೆ ಮತ್ತು ರಾಷ್ಟ್ರನಾಯಕರಿಗೆ ಕರೆ ನೀಡಿದ್ದಾರೆ. ಗ್ಲಾಸ್ಗೋ ನಗರದಲ್ಲಿ ಒಂದೆರಡಲ್ಲ, ಮೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಸೀಪ್ಲೇನ್ ನಿಲ್ದಾಣಗಳಿದ್ದು ಅವೆಲ್ಲವೂ ನವೆಂಬರ್ ಆರಂಭದಲ್ಲಿ ವಿಶ್ವನಾಯಕರಿಂದ ಧುಮುಧುಮಿಸಲಿವೆ.



ವಿಮಾನ ನಿಲ್ದಾಣಗಳ ಉದಾಹರಣೆ ಪದೇ ಪದೇ ಇಲ್ಲೇಕೆ ಬಂತು ಗೊತ್ತೆ? ಅಲ್ಲಿಗೇನಾದರೂ ಅಪಾಯ ಬಂದರೆ ಶರವೇಗದಲ್ಲಿ ವಿಜ್ಞಾನ, ತಂತ್ರಜ್ಞಾನ, ಧನರಾಶಿ ಅತ್ತ ಧಾವಿಸಿ ಬರುತ್ತವೆ. ಭೂಮಿಗೆ ತಗುಲಿದ ಕಾಯಿಲೆಗಳಿಗೂ ಆ ಮೂಲಕವೇ ಮದ್ದು ತ್ವರಿತವಾಗಿ ರೂಪುಗೊಳ್ಳುತ್ತದೆ. ಕೊರೊನಾ ಕೂಡ ವಿಮಾನದಿಂದ ಬಂದಿದ್ದಕ್ಕೇ ಅಲ್ಲವೆ, ಅಷ್ಟು ಶೀಘ್ರವಾಗಿ ಲಸಿಕೆ ತಯಾರಾಗಿದ್ದು? (ವರ್ಷಕ್ಕೆ ನಾಲ್ಕು ಲಕ್ಷ ಬಡವರನ್ನು ಬಲಿ ತೆಗೆದುಕೊಳ್ಳುವ ಮಲೇರಿಯಾಕ್ಕೆ ಲಸಿಕೆ ತಯಾರಿಸಲು 37 ವರ್ಷ ತಗುಲಿದ್ದು, ಇದೀಗ ಅಕ್ಟೋಬರ್ 6ರಂದು ವಿಶ್ವ ಆರೋಗ್ಯ ಸಂಸ್ಥೆ ಆರ್‌ಟಿಎಸ್ಎಸ್ ಲಸಿಕೆಯ ಜಾಗತಿಕ ಬಳಕೆಗೆ ಸಮ್ಮತಿ ಘೋಷಿಸಿದೆ).

ಲಂಡನ್ನಿನ ಹೀಥ್ರೋ ವಿಮಾನ ನಿಲ್ದಾಣಕ್ಕೆ ಹೊಸದೊಂದು ರನ್ ವೇ ಬೇಕೇ-ಬೇಡವೇ ಎಂದು ಕಳೆದ ಒಂಬತ್ತು ವರ್ಷಗಳಿಂದ ನಡೆದ ಹಗ್ಗಜಗ್ಗಾಟದಲ್ಲಿ ಮೊದಮೊದಲು ಬೇಕೆಂದು ಹೋರಾಡಿದ ಇದೇ ಅಲೋಕ್ ಶರ್ಮಾ ಕೊನೆಗೆ ಬೇಡವೇ ಬೇಡವೆಂದು ವಾದಿಸಿ ಸಂಸದೀಯ ಚುನಾವಣೆ ಗೆದ್ದು ಸಚಿವರಾಗಿ ಇಂದು ಇಡೀ ಜಗತ್ತಿನ ತಾಪಮಾನ ನಿಯಂತ್ರಣ ಕುರಿತ ಜಾಗತಿಕ ಸಮ್ಮೇಳನಕ್ಕೆ ಚಾಲನೆ ಕೊಡುತ್ತಿದ್ದಾರೆ. ಭಾರೀ ಹೊಗೆಕಕ್ಕುವ ಸೀಮೆಣ್ಣೆಯನ್ನೇ ಬಹುತೇಕ ವಿಮಾನಗಳು ಇದುವರೆಗೆ ಇಂಧನವನ್ನಾಗಿ ಬಳಸುತ್ತಿದ್ದು ಅದರ ಬದಲು ಹೈಡ್ರೋಜನ್ ಅನಿಲವನ್ನು ಬಳಸಲೆಂದು ತ್ವರಿತ ಸಂಶೋಧನೆಗಳು ನಡೆಯುತ್ತಿವೆ. ಹವಾಗುಣ ವೈಪರೀತ್ಯಗಳಿಂದ ದೇಶದ ವಿಮಾನ ನಿಲ್ದಾಣಗಳನ್ನು ಹೇಗೆ ರಕ್ಷಿಸಬೇಕೆಂದು ಅಮೆರಿಕದಲ್ಲಿ ತಜ್ಞರ ಸಮ್ಮೇಳನ ನಡೆದಿದೆ. ಅಂಥ ತಂತ್ರಜ್ಞಾನಗಳೆಲ್ಲ ಕ್ರಮೇಣ ಸಾರ್ವತ್ರಿಕ ಬಳಕೆಗೆ ಬರುತ್ತವೆ.

ಇತ್ತ ನಮ್ಮ ಸರ್ಕಾರ 2024ರೊಳಗೆ ನೂರು ಹೊಸ ವಿಮಾನ ನಿಲ್ದಾಣಗಳ ನಿರ್ಮಾಣದ ಯೋಜನೆ ಹಾಕಿಕೊಂಡಿದೆ. ‘ಹವಾಯಿ ಚಪ್ಪಲ್ ಹಾಕಿದವರಿಗೂ ಹವಾಯಿ ಜಹಾಜ್’ ಎಂಬ ಅದರ ಘೋಷವಾಕ್ಯ ಚುನಾವಣೆಯ ಹೊತ್ತಿಗೆ ಮತ್ತೆ ಮೊಳಗಬಹುದು. ಇತ್ತ ವಿಜ್ಞಾನ ಸಂಶೋಧನೆಗಳು ಭೂಮಿಗೆ ತಂಪೆರೆಯುವತ್ತ ಜಗ್ಗುತ್ತಿದ್ದರೆ ಅತ್ತ ನೇತಾಗಣ ಅಭಿವೃದ್ಧಿಯ ಬಿಸಿಲ್ಗುದುರೆಗೆ ಹಣ ಹೂಡುತ್ತಿದೆ.

ಇನ್ನು 30 ವರ್ಷಗಳಲ್ಲಿ ಕಾರ್ಬನ್ ವಿಸರ್ಜನೆಯ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಬೇಕೆಂದು ‘ಶೂನ್ಯದತ್ತ ಸಕಲರ ಓಟ’ ಎಂಬ ಘೋಷಣೆ ಗ್ಲಾಸ್ಗೋದಲ್ಲಿ ಹೊಮ್ಮಲಿದೆ. ಮಾತೆತ್ತಿದರೆ ದಿಲ್ಲಿಗೆ ಧಾವಿಸಲೆಂದು ವಿಮಾನ ನಿಲ್ದಾಣಗಳತ್ತ ಓಟ ಕೀಳುವ ನಮ್ಮ ನಾಯಕರಿಗೆ ಅದು ಕೇಳೀಸೀತೆ?

ಚುರುಮುರಿ



ಮನೆ ರಿಪೇರಿ

• ಆನಂದ

‘ಪಕ್ಕದ ಮನೆ ರಾಜು ಬಂದಿದ್ದರು. ಅವರ ಮನೆ ರಿಪೇರಿ ಆಗಬೇಕಂತೆ’ ಎಂದು ಹೆಂಡತಿ ಹೇಳಿದಾಗ ನಾನು ‘ಹೌದೇನು?’ ಎಂದೆ.

‘ಗೊಂದಲದಲ್ಲಿದ್ದಾರೆ. ರಿನೊವೇಟ್ ಮಾಡೋದೊ ಅಥವಾ ಕೆಡವಿ ಹೊಸದು ಕಟ್ಟಿಸುವುದೂ ಅಂತ’.

‘ರಿನೊವೇಟ್ ಸುಲಭ ಅಲ್ಲವೆ?’

‘ರಿನೊವೇಟ್ ಮಾಡೋದಿಕ್ಕೆ ಹೋಗಿ ಮೈಮೇಲೆ ಕೆಡವಿಕೊಂಡಂತೆ ಆದರೆ ಅನ್ನೋ ಹೆದರಿಕೆ ಅವರಿಗೆ’.

‘ಹೊಸದೇ ಕಟ್ಟಿಸಲಿ’ ಎಂದೆ. ‘ಅಲ್ಲೂ ಗೊಂದಲ. ಕಿಟಕಿ, ಬಾಗಿಲು ಎಲ್ಲಾ ಚೆನ್ನಾಗಿವೆ. ಹಿಂದೆ ಹಾಕಿಸಿರೊ ಗ್ರಿಲ್ ಒಳ್ಳೇ ಕಬ್ಬಿಣದ್ದು. ಒಡೆದುಹಾಕಿದರೆ ಅವೆಲ್ಲಾ ವೇಸ್ಟ್ ಆಗುತ್ತವೆ ಎಂಬ ಚಿಂತೆ’.

‘ಹೀಗೂ ಸಮಸ್ಯೆ ಹಾಗೂ ಸಮಸ್ಯೆ ಪಾಪ ಅವರಿಗೆ’ ಎಂದು ನನ್ನ ಮಾಮೂಲಿ ಲಿಪ್ ಸಿಂಪಥಿ ತೋರಿಸಿದೆ.

‘ರಾಹುಲ್ ಗಾಂಧಿಗೂ ಇದೇ ಸಮಸ್ಯೆ ಅಲ್ಲವೇ?’ ಎಂದು ಅವಳು ಕೇಳಿದಾಗ ನನಗೆ ಡಿಕೆಶಿ- ಸಿದ್ದು ನಗುನಗುತಾ ಕೈ ಹಿಡಿದುಕೊಂಡು ಆಲ್ ಈಸ್ ವೆಲ್ ತರಹ ಬರ್ತಾ ಇರೋದನ್ನ ನೋಡಿದಷ್ಟೇ ಆಶ್ಚರ್ಯವಾಯಿತು.

‘ಅರೆ! ರಾಹುಲ್ ಗಾಂಧಿಗೂ ರಾಜುಗೂ ಏನು ಸಂಬಂಧ?’ ಆಗವಳು ಮಧ್ಯೆ ಬಾಯಿ ಹಾಕಿ ‘ಅಲ್ರೀ ರಾಹುಲ್ ಸಹ ಈಗ ಕಾಂಗ್ರೆಸ್ ಪುನರ್‌ನಿರ್ಮಾಣ ಮಾಡೋದಿಕ್ಕೆ ಹೊರಟಿದಾರೆ. ಅವರಿಗೂ ಈಗ ರಾಜು ಸಮಸ್ಯೇನ’.

‘ಅಂದರೆ?’

‘ಕಾಂಗ್ರೆಸ್ ಎಂಬ ಮನೇನ ರಿಪೇರಿ ಮಾಡೋದ ಅಥವಾ ಪೂರ್ತಿ ಒಡೆದು ಬೇರೆ ಕಟ್ಟೋದಾ?’

‘ನೀನು ಬಹಳ ಶ್ಯಾಣೆ ಇದ್ದೀಯ’ ಎಂದು ಧಾರವಾಡ ಶೈಲಿಯಲ್ಲಿ ಹೊಗಳಿದೆ.

‘ಈಗ ರಿಪೇರಿ ಮಾಡೋದಕ್ಕೆ ಹೊರಟರೆ ತ್ಯಾಪೆ ಹಚ್ಚಿದಾಗ ಕಾಣುತ್ತೆ. ನ್ಯೂ ಲುಕ್ ಇದ್ದರೂ ಹಳೇ ವಾಸನೆ ಇದ್ದೇ ಇರುತ್ತೆ. ಇದು ರಾಹುಲ್‌ಗೆ ಬಹುಶಃ ಬೇಡ. ಆದರೆ ಕೆಡವಿದರೆ ಅಲ್ಲಿರೋ ಹಳೆ ವಸ್ತುಗಳು ವೇಸ್ಟ್ ಆಗುತ್ವೆ’.

‘ಅದಕ್ಕೆ ಅವರು ಏನು ಮಾಡೋದಿಕ್ಕೂ ಹಿಂದೇಟು ಹಾಕ್ತಿದಾರೆ ಅಂತೀಯ?’

‘ನನಗೇನೋ ಹಾಗೆ ಅನ್ನಿಸುತ್ತಿದೇರಿ’ ಎಂದಳು.

ಇರಬಹುದೇ?

ಸಂಗತ

ಅವನ ನೆಮ್ಮದಿ ಅಡುಗೆ ಮನೆಯಲ್ಲಿ!

ತಿನ್ನುವ ಕೈಗಳು ಬೇಯಿಸುವುದನ್ನೂ ಕಲಿಯಬೇಡವೇ?

• ಆರತಿ ಪಟ್ರಮೆ


ಕೊರೊನಾ ಕಲಿಸಿದ ಹಲವು ಪಾಠಗಳಲ್ಲಿ ಪ್ರತಿಯೊಬ್ಬರೂ ಅಡುಗೆ ಕಲಿಯಲೇಬೇಕು ಎಂಬುದು ಮುಖ್ಯವಾದದ್ದೇ ಹೌದು. ಕ್ವಾರಂಟೈನು, ಐಸೊಲೇಷನ್‌ಗಳ ನಡುವೆ ಹೊರಗಡೆ ಹೋಟೆಲುಗಳು, ರೆಸ್ಟೊರೆಂಟ್‌ಗಳು ತೆರೆದಿರುವುದಿಲ್ಲ ಎಂಬ ಭೀತಿ ಅನೇಕ ಮಂದಿಗೆ ಅಡುಗೆಮನೆಯನ್ನು ಪ್ರೀತಿಸುವುದನ್ನು ಕಲಿಸಿಕೊಟ್ಟಿದೆ.

ಮೊದಮೊದಲು ಅಡುಗೆಮನೆಯೇನಿದ್ದರೂ ಮನೆಯ ಹೆಂಗಳೆಯರಿಗೆ ಎಂಬಂತಿದ್ದ ಪರಿಸ್ಥಿತಿ ಕೊಂಚ ಮಟ್ಟಿಗಾದರೂ ಬದಲಾಗಿ, ಮನೆಯ ಮಕ್ಕಳೂ ಸಮೇತ ಕನಿಷ್ಠ ಅನ್ನ ಬೇಯಿಸಿಕೊಂಡು, ಸಾರು ಕುದಿಸಿಕೊಂಡು ಊಟ ಮಾಡುವಷ್ಟು ಅಡುಗೆ ವಿದ್ಯೆ ಕಲಿಯಲೇಬೇಕು ಎಂಬ ವಾತಾವರಣ ಸೃಷ್ಟಿಯಾದದ್ದು ಈ ಶತಮಾನದ ಕೊಡುಗೆಯೂ ಹೌದು. ಇಲ್ಲವಾದಲ್ಲಿ ಅಕ್ಕಿ ಬೆಂದು ಅನ್ನವಾಗುವ ಪರಿಯೇ ತಿಳಿಯದು ಎಂಬ ಅನೇಕ ಮಕ್ಕಳನ್ನು ನಾವು ಕಾಣಬೇಕಿತ್ತು.

ತರಗತಿಯಲ್ಲಿ ಪಾಠ ಬೋಧಿಸುವ ಸಂದರ್ಭ ಅಡುಗೆಯ ವಿಚಾರ ಬಂದಾಗ ಕುತೂಹಲಕ್ಕಾಗಿ ಮಕ್ಕಳನ್ನು ‘ಎಷ್ಟು ಮಂದಿಗೆ ಅಡುಗೆ ತಿಳಿದಿದೆ’ ಎಂದು ಪ್ರಶ್ನಿಸಿದೆ. ಕೆಲವು ಹೆಣ್ಣುಮಕ್ಕಳು ಬೇಕೋ ಬೇಡವೋ ಎಂಬಂತೆ ಕೈಯೆತ್ತಿದರೆ ಹುಡುಗರ ಕಡೆಯಿಂದ ಒಬ್ಬ ಮಾತ್ರ ಅತ್ಯಂತ ಸಂಕೋಚಪಟ್ಟುಕೊಂಡು ‘ಮಿಸ್, ನಂಗೆ ಮುದ್ದೆ ಮಾಡೋದು ಗೊತ್ತು, ಸೊಪ್ಪುಸಾರು ಮಾಡೋದೂ ಗೊತ್ತು. ಅನ್ನಕ್ಕಿಡ್ತೀನಿ, ಆದ್ರೆ ಚಪಾತಿ ಮಾತ್ರ ಮಾಡಕ್ಕೆ ಬರಲ್ಲ’ ಎಂದ. ತರಗತಿಯವರೆಲ್ಲ ಘೊಳ್ಳನೆ ನಕ್ಕುಬಿಟ್ಟರು. ಅವನಾಡಿದ ಮಾತುಗಳಲ್ಲಿ ನಗುವಂಥದ್ದೇನಿತ್ತೋ ಗೊತ್ತಾಗಲಿಲ್ಲ. ಅಂತೂ ನಗೆಯ ಅಲೆ ನಿಂತ ಮೇಲೆ, ‘ನಮಗೆ ಊಟ ಮಾಡುವುದು ಅನಿವಾರ್ಯ ಎಂದಮೇಲೆ ಅಡುಗೆ ಕಲಿಯುವುದೂ ಯಾಕೆ ಅನಿವಾರ್ಯ’ ಎಂಬುದನ್ನು ವಿವರಿಸಿದೆ. ಅದರ ಮಹತ್ವ ಎಷ್ಟು ಮಂದಿಗೆ ಅರ್ಥವಾಯಿತೋ ತಿಳಿಯಲಿಲ್ಲ.

ಇದು ಸಣ್ಣ ಸಂಗತಿಯಲ್ಲ ಎಂಬುದು ನನಗೆ ಗೊತ್ತಾದದ್ದು, ಹೊಸದಾಗಿ ಬಂದ ಒಬ್ಬ ಸಹೋದ್ಯೋಗಿ ಅಡುಗೆಯ ಕಾರಣದಿಂದಲೇ ತಮ್ಮ ಮನೆಯಲ್ಲಿ ಸೃಷ್ಟಿ ಯಾಗುವ ಕದನ ಕೋಲಾಹಲವನ್ನು ವಿವರಿಸಿದಾಗ! ಸಹಜವಾಗಿಯೇ ಉದ್ಯೋಗಸ್ಥ ಮಹಿಳೆಯರಿಗೆ ಅಡುಗೆ ಎಂಬುದು ಹೊರೆಯಾಗಿ ಮಾರ್ಪಡುತ್ತದೆ. ಬೆಳಗಿನಿಂದ ಸಂಜೆಯವರೆಗೂ ಕಚೇರಿ ಕೆಲಸ ಮುಗಿಸಿಕೊಂಡು ಮನೆಗೆ ಹೋಗುವಾಗ ಸಹಜವಾಗಿಯೇ ದಣಿವು ಕಾಡುತ್ತದೆ. ಗಂಡಸರ ದಣಿವು ಮನೆಯ ಎಲ್ಲರಿಗೂ ಅರ್ಥವಾಗುತ್ತದೆ; ಆದರೆ ಹೆಣ್ಣುಮಕ್ಕಳ ದಣಿವಿಗೆ ಅರ್ಥ ಕಂಡುಕೊಳ್ಳುವ ಪ್ರಯತ್ನ ಯಾರೂ ಮಾಡುವುದಿಲ್ಲ. ಇನ್ನೇನೂ ಕೆಲಸ ನನ್ನಿಂದಾಗದು ಎನ್ನಿಸುವ ಶರೀರಕ್ಕೆ ಮತ್ತೆ ಅಡುಗೆಮನೆಯ ಕೆಲಸವನ್ನು ನೆನಪಿಸುವುದು ಕಷ್ಟದ ಕೆಲಸವೇ. ಆದರೆ ಅಡುಗೆ ಮನೆಯೆಂಬುದು ಮನೆಯ ನೆಮ್ಮದಿಕೇಂದ್ರ ಹೌದಷ್ಟೇ. ಪ್ರತಿನಿತ್ಯವೂ ಹೋಟೆಲಿನ ಊಟ ಹಿಡಿಸೀತೇ? ಆರೋಗ್ಯಕ್ಕೆ ಹಿತವೆನಿಸೀತೇ? ಬಹುತೇಕ ಮನೆಗಳಲ್ಲಿ ಅಡುಗೆಮನೆಯೆಂಬುದು ಇನ್ನೂ ಹೆಂಗಳೆಯರ ಸಾಮ್ರಾಜ್ಯ. ಅಲ್ಲಿ ರಾಣಿಯೂ ಸೇವಕಿಯೂ ಎಲ್ಲ ಅವಳೇ! ಅದರ ನಿರ್ವಹಣೆ ಕೆಟ್ಟಿತೆಂದಾದರೆ ಬದುಕಿನ ರಾಗ ತಾಳಗಳೆಲ್ಲವೂ ಹದಗೆಟ್ಟಂತೆ ಆಗುತ್ತವೆ.

ಸೋಜಿಗದ ಸಂಗತಿಯೆಂದರೆ, ಹಸಿವಿನ ಅರಿವು ಇರುವವರಿಗೆ ಅಡುಗೆಯ ವಿಧಾನಗಳನ್ನು ಕಲಿತಿರಬೇಕು ಎಂಬ ಅರಿವು ಇಲ್ಲದೇ ಹೋಗುವುದು ಅಥವಾ ಅಡುಗೆಯನ್ನು ಕಲಿಯುವುದೆಂದರೆ ತಮ್ಮ ಸ್ಥಾನಕ್ಕೆ ಕುಂದೆಂದು ಭಾವಿಸುವುದು. ಮನೆಗೆ ತೆರಳುವಾಗ ಹಸಿವಿನಿಂದ ಮುಕ್ತರಾಗುವುದಕ್ಕೆ ಏನನ್ನಾದರೂ ನಿರೀಕ್ಷಿಸುವುದು ತಮ್ಮ ಹಕ್ಕೆಂದು ಭಾವಿಸುವ ಪ್ರತಿಯೊಬ್ಬರಿಗೂ ಅದು ತಮ್ಮ ಕರ್ತವ್ಯವೂ ಹೌದು ಎಂಬುದು ನೆನಪಾಗುವುದಿಲ್ಲ. ಮನೆಯ ಯಜಮಾನನಾದವನಿಗೆ ಅಡುಗೆಯಲ್ಲಿ ನೆರವಾಗುವ ಮನಸ್ಸಿದ್ದರೂ ಮನೆಯಲ್ಲಿ ಹಳೆಯಕಾಲದ ಮನಸ್ಸುಗಳಿದ್ದರೆ ಅವರಿಗದು ಸಮ್ಮತವೆನಿಸುವುದಿಲ್ಲ.



ವಲಲನ ಅಡುಗೆ ಸಾಮರ್ಥ್ಯವನ್ನೋ ನಳ ಚಕ್ರವರ್ತಿಯ ಕೌಶಲವನ್ನೋ ಮತ್ತೆಮತ್ತೆ ಉದಾಹರಿಸುವ ಯಾರಿಗೂ ತಾವೂ ಅವರಂತಾಗಬೇಕೆಂಬ ಬಯಕೆ ಕಾಡದು. ಮನೆಯ ಪುಟ್ಟ ಮಗನೂ ಏನಾದರೂ ಅಡುಗೆಯಲ್ಲಿ ಆಸಕ್ತಿ ತೋರಿಸುತ್ತಾನೆಂದಾದರೆ, ‘ಅಡುಗೆ ಭಟ್ಟನಾಗಬೇಕೆಂದಿದ್ದೀಯಾ?’ ಎಂದು ನಗುವವರೇ ಹೆಚ್ಚು. ಅಲ್ಲಿಗೆ ಮಗುವಿನ ಮನಸ್ಸಿನಲ್ಲಿಯೂ ಅಡುಗೆಯೆಂಬುದು ತಾನು ಮಾಡಬಾರದ ಕೆಲಸವಾಗಿ ಮುದ್ರಿತವಾಗುತ್ತದೆ. ಅಮ್ಮ ಅಡುಗೆ ಮಾಡುತ್ತಾಳೆ. ಮುಂದೆಯೂ ಅಷ್ಟೇ ‘ಅವಳು ಅಡುಗೆ ಮಾಡುತ್ತಾಳೆ’ ಎಂಬುದಷ್ಟೇ ಮನಸ್ಸಿನಲ್ಲಿ ಬೇರೂರುತ್ತದೆ.

ಮಕ್ಕಳನ್ನು ಮುದ್ದು ಮುಚ್ಚಟೆಗಳಿಂದ ಅಡುಗೆಮನೆ ಕೆಲಸದಿಂದ ವಿನಾಯಿತಿ ಕೊಟ್ಟು ಬೆಳೆಸುವ ತಪ್ಪನ್ನು ಬಹುತೇಕರು ಮಾಡುತ್ತಿದ್ದೇವೆ. ಮಗಳು ತಮ್ಮಂತೆ ಅಡುಗೆಮನೆಗೆ ಸೀಮಿತವಾಗಬಾರದು ಎಂಬ ಅಮ್ಮಂದಿರೇ ಹೆಚ್ಚಾಗುತ್ತಿದ್ದೇವೆ. ಅತಿಮುಖ್ಯವಾದ ಅಡುಗೆ ಮಾಡುವುದನ್ನು ಸಮಾನತೆಯ ಹೆಸರಿನಲ್ಲಿ ಕಲಿಸುವುದನ್ನು ಮರೆತಿದ್ದೇವೆ. ಈ ವಿಷಯದಲ್ಲಾದರೂ ಸಮಾನತೆಯನ್ನು ಸಾಧಿಸಬೇಕಿರುವುದು ಮನೆಯ ಮಗನಿಗೂ ಅಡುಗೆಯನ್ನು ಕಲಿಸುವ ಮೂಲಕ ಎಂಬುದೊಂದು ಸಣ್ಣ ವಿಚಾರವನ್ನು ಅರ್ಥ ಮಾಡಿಕೊಳ್ಳದೇ ಹೋದರೆ ನಮ್ಮ ಮಕ್ಕಳ ಬದುಕಿನ ನೆಮ್ಮದಿಯ ಬಹುಪಾಲನ್ನು ನಾವು ಕಿತ್ತುಕೊಂಡಂತೆಯೇ ಸರಿ ಎಂಬುದು ಮನದಟ್ಟಾಗಬೇಕಿದೆ.

ಉಣ್ಣುವ ಕೈಗಳಿಗೆ ಉಣ್ಣಿಸುವುದು ತಿಳಿದಿರಲಿ, ಬಿಸಿ ಬಿಸಿ ಊಟವನ್ನು ನಿರೀಕ್ಷಿಸುವವರಿಗೆ ಅಡುಗೆ ಮನೆಯ ಬಿಸಿಯೂ ಅರ್ಥವಾಗಲಿ. ಇದು ವರ್ತಮಾನದ ಅಗತ್ಯಗಳಲ್ಲೊಂದು.

ವಾಚಕರ ವಾಣಿ

ಕನ್ನಡದಲ್ಲಿ ಎಂಜಿನಿಯರಿಂಗ್ ಬೋಧನೆ: ಸ್ವಾಗತಾರ್ಹ

ರಾಜ್ಯದ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಬಿ.ಇ ಕಲಿಕೆಗೆ ರಾಜ್ಯವನ್ನು ಅತ್ಯುತ್ತಮ ತಾಣವನ್ನಾಗಿ ಬೆಳೆಸುವ ಉದ್ದೇಶದ ‘ಡೆಸ್ಟಿನೇಷನ್ ಕರ್ನಾಟಕ’, ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಾಲ್ಕು ವರ್ಷದ ಬಿ.ಎಸ್ಸಿ (ಆನರ್ಸ್) ಪದವಿ ಮತ್ತು ಕನ್ನಡ ಮಾಧ್ಯಮದಲ್ಲೂ ಬಿ.ಇ ಬೋಧನೆಗೆ ಹಸಿರು ನಿಶಾನೆ ತೋರಿಸಿರುವುದು (ಪ್ರ.ವಾ., ಅ. 13) ಸ್ವಾಗತಾರ್ಹ. ಹಾಗೆಯೇ ಕನ್ನಡ ಮಾಧ್ಯಮದಲ್ಲಿ ವೈದ್ಯಕೀಯ ಶಿಕ್ಷಣಕ್ಕೂ ಅವಕಾಶ ಕಲ್ಪಿಸಬೇಕು. ಬಿ.ಇ. ಹಾಗೂ ವೈದ್ಯಕೀಯ ಶಿಕ್ಷಣ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್ ಪಾರಿಭಾಷಿಕ ಪದಗಳನ್ನು ಕನ್ನಡೀಕರಿಸಲು ಅನುವು ಮಾಡಿಕೊಡಬೇಕು. ಇದರಿಂದ ಗ್ರಾಮೀಣ ವಿದ್ಯಾರ್ಥಿಗಳು ಮುಂದೆ ಬರಲು ಸಾಧ್ಯವಾಗುವುದರ ಜೊತೆಗೆ ಕನ್ನಡ ಭಾಷೆಗೆ ಮನ್ನಣೆ ಕೊಟ್ಟಂತೆಯೂ ಆಗುತ್ತದೆ.

ಎಲ್.ಎಸ್.ಶಿವಮೂರ್ತಿ, ಬೆಂಗಳೂರು

ಸೊಲ್ಲಡಗಿರುವುದಕ್ಕೆ ಬೇರೆ ಕಾರಣವಿದೆ!

‘ಬೆಲೆಯೇರಿಕೆ: ಸೊಲ್ಲೆತ್ತದವರ ಕೊಡುಗೆ!’ ಲೇಖನದಲ್ಲಿ (ಸಂಗತ, ಅ. 12) ಡಾ. ಎಂ.ವೆಂಕಟಸ್ವಾಮಿ ಅವರು ‘ಸಂಕಷ್ಟ ಅನುಭವಿಸುತ್ತಿರುವ ಜನರೇಕೆ ಇದರ ವಿರುದ್ಧ ದನಿ ಎತ್ತುತ್ತಿಲ್ಲ’ ಎಂದು ಪ್ರಶ್ನಿಸಿದ್ದಾರೆ. ಹಾಗೇನೂ ಇಲ್ಲ. ಸೆಪ್ಟೆಂಬರ್ 27ರಂದು ನಡೆದ ‘ಭಾರತ್ ಬಂದ್’ನಲ್ಲಿ ಇಡೀ ದೇಶವೇ ಈ ಬೆಲೆ ಏರಿಕೆ ವಿರುದ್ಧ ಪ್ರತಿಭಟಿಸಿದೆ. ಆದರೆ ಸರ್ಕಾರ ಮಾತ್ರ ಅಂಥ ಪ್ರತಿಭಟನೆಗೆ ಸ್ಪಂದಿಸದೆ ಇಂಧನ ಬೆಲೆ ಏರಿಸುತ್ತಲೇ ಇದೆ. ಅದಕ್ಕೆ ಕಾರಣವೂ ಸ್ಪಷ್ಟವಾಗಿದೆ. ಅದೇನೆಂದರೆ ಆಡಳಿತ ಪಕ್ಷಕ್ಕೆ ಸ್ಪಷ್ಟ ಬೆಂಬಲವಿರುವುದು ಒಂದಾದರೆ, ಮತ್ತೊಂದು ಕಾರಣ ಬಲಿಷ್ಠವಾದ ವಿರೋಧ ಪಕ್ಷ ಇಲ್ಲದಿರುವುದಾಗಿದೆ.

ಈ ನಡುವೆ ಬೆಲೆ ಏರಿಕೆಯ ನೇರ ಪರಿಣಾಮ ಅನುಭವಿಸುತ್ತಿರುವ ರೈತ ಕೂಲಿಕಾರರು ನಿಜಕ್ಕೂ ದನಿ ಎತ್ತಲಾರದಷ್ಟು ನಿಶ್ಶಕ್ತರಾಗಿದ್ದಾರೆ! ಇಂತಹ ಪರಿಸ್ಥಿತಿಯಿಂದಾಗಿ ಬೆಲೆ ಏರಿಕೆ ನಿತ್ಯವಾಗಿದೆ. ಆದರೆ ಮತದಾರರು ಮಾತ್ರ ಚುನಾವಣೆ ಬಂದಾಗ ಬೆಲೆ ಏರಿಕೆಗೆ ಕಾರಣವಾದ ಪಕ್ಷಕ್ಕೆ ಪಾಠ ಕಲಿಸುತ್ತಾರೆಂಬ ವಿಶ್ವಾಸವೂ ಹೋರಾಟಗಾರರಿಗಿದೆ. ಸರಿ ತಾನೆ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅಭಿಮಾನಿಗಳ ಕನವರಿಕೆ

ಪ್ರತಿವರ್ಷದಂತೆ...
‘ಈ ಸರ್ತಿ ಕಪ್ಪು ನಮ್ದೇ...’ ಎಂದು
ನಿದ್ರೆಯಲ್ಲೂ ಕನವರಿಸುತ್ತಿದ್ದ
ಆರ್‌ಸಿಬಿ ಅಭಿಮಾನಿಗಳನ್ನು ಹೆಂಡಂದಿರು
‘ಬರೀ ಕಪ್ ಏನು? ಲೋಟ, ಪಾತ್ರೆ, ಕುಕ್ಕರ್
ಎಲ್ಲಾ ನಿಮ್ದೇ, ಬೇಗೆದ್ದು ತೊಳೆಯಿರಿ’
ಎಂದು ತಿವಿದು ಎಬ್ಬಿಸಿದರು...!

ವಿ.ವಿಜಯೇಂದ್ರ ರಾವ್, ಬೆಂಗಳೂರು

ತೆರಿಗೆ ದಾಳಿಗೆ ನಾನಾ ಮುಖ

ರಾಜಕಾರಣಿಗಳು ಮತ್ತು ಅವರೊಂದಿಗೆ ನಂಟು ಹೊಂದಿರುವ ವ್ಯಕ್ತಿಗಳ ವಿರುದ್ಧ ನಡೆಯುವ ತೆರಿಗೆ ದಾಳಿಗಳ ಹಿಂದೆ ಕಾನೂನಿನ ಅನ್ವಯದ ಸಿದ್ಧತೆಗಳಿರುತ್ತವೆಯಾದ್ದರಿಂದ ಅವನ್ನು ರಾಜಕೀಯಪ್ರೇರಿತ ಎನ್ನುವುದು ಸರಿಯಲ್ಲ ಎಂಬ ಸಾಮಗ ದತ್ತಾತ್ರಿ ಅವರ ವಾದ (ಪ್ರ.ವಾ., ಅ. 13) ಸರಿಯಾದುದೇ. ಆದರೆ, ಅದು ವಾಸ್ತವದ ಒಂದು ಮುಖ ಮಾತ್ರ. ಇಂಥ ದಾಳಿಗಳಲ್ಲಿ ಇರುವ ರಾಜಕೀಯ, ಯಾರ ಯಾರ ಮೇಲೆ ದಾಳಿ ನಡೆದಿದೆ ಎಂಬುದರಲ್ಲಲ್ಲ. ಯಾರ ಯಾರ ಮೇಲೆ ದಾಳಿ ಯಾವಾಗ ನಡೆಯುತ್ತದೆ ಅಥವಾ ನಡೆದಿಲ್ಲ ಅಥವಾ ಯಾಕೆ ನಡೆಯುತ್ತಿಲ್ಲ ಎಂಬುದರಲ್ಲಿ.

ಕಾನೂನಿನ ಅನುಷ್ಠಾನದಲ್ಲಿ ಕಮಿಷನ್ ಮತ್ತು ಒಮಿಷನ್ ಎಂಬ ಎರಡು ಅಂಗಗಳಿವೆ. ಕಮಿಷನ್ ನ್ಯಾಯಬದ್ಧವಾಗೇ ಇರುವುದು ಎಲ್ಲರಿಗೂ ಕಾಣಿಸುತ್ತದೆ. ಆದರೆ ಒಮಿಷನ್ ನ್ಯಾಯಬದ್ಧವಾಗಿ ಇಲ್ಲದಿದ್ದಾಗ ಅದು ಹಾಗೆ ಕಾಣಿಸುವುದಿಲ್ಲ, ಅಷ್ಟೆ. ರಾಜಕೀಯಪ್ರೇರಿತ ಎನ್ನುವುದು ಇದನ್ನೇ. ಈ ಸಂದರ್ಭದಲ್ಲಿ ಸರ್ವಜ್ಞನ ವಚನವೊಂದು ನೆನಪಾಗುತ್ತದೆ: ಧನಕನಕ ಉಳ್ಳನಕ ದಿನಕರನಂತಿಕ್ಕು/ ಧನಕನಕ ಹೋದ ಮರುದಿನ– ಹಾಳೂರ/ ಶುನಕನಂತಕ್ಕು ಸರ್ವಜ್ಞ. ಇಲ್ಲಿ ಬೇಕಿದ್ದರೆ ಧನಕನಕದ ಸ್ಥಾನದಲ್ಲಿ ಅಧಿಕಾರ ಎಂಬ ಪದವನ್ನು ಸೇರಿಸಿಕೊಂಡು ಓದಿಕೊಳ್ಳಬಹುದು.

ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

ಯಾರೋ ಮಾಡಿದ ತಪ್ಪಿಗೆ...

ದಾವಣಗೆರೆಯಲ್ಲಿ ಇತ್ತೀಚೆಗೆ ನಾನು ಚಿಗಟೇರಿ ಜಿಲ್ಲಾ ಆಸ್ಪತ್ರೆಯಿಂದ ಬಸ್ ನಿಲ್ದಾಣಕ್ಕೆ ತೆರಳಲು ಸಿಟಿ ಬಸ್‌ಗಾಗಿ ಕಾಯುತ್ತಿದ್ದೆ. ಪಕ್ಕದಲ್ಲಿ ಒಬ್ಬ ಸಮವಸ್ತ್ರಧಾರಿ ಪೊಲೀಸ್ ಕಾನ್‌ಸ್ಟೆಬಲ್ ಕೂಡ ಬಸ್‌ಗಾಗಿ ಕಾಯುತ್ತಿದ್ದರು. ಬಸ್ ಬರುವುದು ತಡವಾದ ಕಾರಣ ಅವರು ಆಟೊವೊಂದಕ್ಕೆ ಕೈ ಮಾಡಿ ಕರೆದರು. ಅದರಲ್ಲಿ ಬೇರೆ ಪ್ರಯಾಣಿಕರು ಇರಲಿಲ್ಲ, ಆದರೂ ಚಾಲಕ ಆಟೊವನ್ನು ನಿಲ್ಲಿಸಲಿಲ್ಲ. ಮತ್ತೆ ಒಂದು ಆಟೊ ಬಂತು. ಅದು ಕೂಡ ಇವರ ಕೈಸನ್ನೆಯನ್ನು ನಿರ್ಲಕ್ಷಿಸಿ ಹಾಗೇ ಹೊರಟು ಹೋಯಿತು!

ಕೊನೆಗೆ ಬಸ್ ಬಂತು. ಇಬ್ಬರೂ ಹತ್ತಿ ಅಕ್ಕಪಕ್ಕ ಕುಳಿತೆವು. ನಾನು ಆಟೊದವರ ನಡವಳಿಕೆಯನ್ನು ಅವರಲ್ಲಿ ಪ್ರಸ್ತಾಪಿಸಿದೆ. ‘ನಮ್ಮ ಇಲಾಖೆಯ ಕೆಲವು ಮೂರ್ಖರು ಮಾಡುವ ತಪ್ಪಿಗೆ ಎಲ್ಲರನ್ನೂ ಅನುಮಾನದಿಂದ ನೋಡುವಂತಾಗಿದೆ’ ಎಂದು ತುಂಬಾ ಬೇಸರದಿಂದ ಹೇಳಿದರು. ಹೌದು, ಕೆಲವು ಪೊಲೀಸರು ಆಟೊ ಹತ್ತುತ್ತಾರೆ, ದುಡ್ಡು ಕೊಡದೆ ಇಳಿದು ಹೋಗುತ್ತಾರೆ. ಯಾವುದೋ ಬಡಪಾಯಿ ಕಿರಾಣಿ ಅಂಗಡಿಯವನ ಹತ್ತಿರ ಗುಟ್ಕಾ, ಸಿಗರೇಟು ತೆಗೆದುಕೊಳ್ಳುತ್ತಾರೆ, ದುಡ್ಡು ಕೊಡದೆ ಹೋಗುತ್ತಾರೆ. ಹೋಟೆಲ್‌ನಲ್ಲಿ ಟೀ, ಕಾಫಿ ಕುಡಿಯುತ್ತಾರೆ, ದುಡ್ಡು ಕೊಡದೆ ಹೋಗುತ್ತಾರೆ. ಇದರಿಂದ ಪ್ರಾಮಾಣಿಕ ಪೊಲೀಸರನ್ನೂ ಜನ ಅನುಮಾನದಿಂದ ನೋಡುವಂತಾಗಿದೆ ಎಂದು ನಡು ವಯಸ್ಸಿನ ಆ ಪೊಲೀಸ್ ಕಾನ್‌ಸ್ಟೆಬಲ್ ಉದಾಹರಣೆಗಳನ್ನು ಕೊಟ್ಟರು. ‘ಅವಸರವಾಗಿ ಶಿವಮೊಗ್ಗಕ್ಕೆ ಹೋಗಬೇಕಾಗಿತ್ತು, ಆಟೊದವರ ಅವಾಂತರದಿಂದ ಲೇಟಾಯಿತು’ ಎಂದು ಗೊಣಗುತ್ತ ಬಸ್ ಇಳಿದರು.


ಇನ್ನಾದರೂ ಜನರ ಮನಸ್ಸಿನಲ್ಲಿರುವ ಈ ತರಹದ ಕಹಿ ನೆನಪುಗಳನ್ನು ತೊಲಗಿಸಿ, ಜನಸ್ನೇಹಿ ಆಗುವತ್ತ ಎಲ್ಲ ಪೊಲೀಸರೂ ಪ್ರಯತ್ನಿಸುವಂತಾಗಲಿ. ಯಾರೋ ಒಂದಿಬ್ಬರು ಮಾಡಿದ ತಪ್ಪಿಗೆ ಎಲ್ಲ ಪೊಲೀಸರನ್ನೂ ಒಂದೇ ರೀತಿ ನೋಡುವ ಮನಃಸ್ಥಿತಿಯನ್ನು ಜನರೂ ಬಿಡಲಿ.

ರಾಜು ಬಿ. ಲಕ್ಕಂಪುರ, ಜಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬೊಕ್ಕಸ ತುಂಬಿಸುತ್ತಿರುವ ಇಂಧನ ಅಬಕಾರಿ ಸುಂಕ


ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕೇಂದ್ರ ಸರ್ಕಾರವು ಸಂಗ್ರಹಿಸುತ್ತಿರುವ ಅಬಕಾರಿ ಸುಂಕವು ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಲೇ ಇದೆ. ಸುಂಕದ ಪ್ರಮಾಣವನ್ನು ಸರ್ಕಾರ ಏರಿಕೆ ಮಾಡಿದ್ದರಿಂದಲೇ ಸರ್ಕಾರದ ಆದಾಯ ಏರಿಕೆಯಾಗಿದೆ. ತತ್ಪರಿಣಾಮವಾಗಿ ಪೆಟ್ರೋಲ್ ಮತ್ತು ಡೀಸೆಲ್‌ನ ಪ್ರತಿ ಲೀಟರ್ ಚಿಲ್ಲರೆ ಮಾರಾಟ ಬೆಲೆ ₹100 ಗಡಿ ದಾಟಿದೆ.



- 2018-2019ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕೇಂದ್ರ ಸರ್ಕಾರವು ಸಂಗ್ರಹಿಸಿದ ಒಟ್ಟು ತೆರಿಗೆ ಮೊತ್ತ ₹1.83 ಲಕ್ಷದಷ್ಟಾಗಿತ್ತು
- 2018-19ಕ್ಕೆ ಹೋಲಿಸಿದರೆ, 2019-20ನೇ ಸಾಲಿನ ಆರ್ಥಿಕ ವರ್ಷದಲ್ಲಿ ಎರಡೂ ಇಂಧನಗಳ ಮೇಲೆ ಸರ್ಕಾರವು ಸಂಗ್ರಹಿಸಿದ ತೆರಿಗೆ ಮೊತ್ತದಲ್ಲಿ ಸ್ವಲ್ಪ ಇಳಿಕೆಯಾಗಿತ್ತು
- 2019-20ನೇ ಸಾಲಿಗೆ ಹೋಲಿಸಿದರೆ, 2020-21ನೇ ಸಾಲಿನಲ್ಲಿ ಸರ್ಕಾರವು ಸಂಗ್ರಹಿಸಿದ ತೆರಿಗೆ ಮೊತ್ತದಲ್ಲಿ ಭಾರಿ ಏರಿಕೆಯಾಗಿದೆ. ಒಂದೇ ವರ್ಷದಲ್ಲಿ ತೆರಿಗೆ ಮೊತ್ತವು ₹1.56 ಲಕ್ಷ ಕೋಟಿಯಷ್ಟು ಏರಿಕೆಯಾಗಿದೆ. ಇದು ಹಿಂದಿನ ಸಾಲಿಗೆ ಹೋಲಿಸಿದರೆ ಶೇ 80ರಷ್ಟು ಏರಿಕೆ. ಅಂದರೆ ಸರ್ಕಾರದ ಆದಾಯವು ಸರಿಸುಮಾರು ಒಂದು ಪಟ್ಟು ಏರಿಕೆಯಾಗಿದೆ
- 2020-21ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಒಂದು ಪಟ್ಟು ಏರಿಕೆ ಮಾಡಿತ್ತು. ಸರ್ಕಾರದ ಆದಾಯದಲ್ಲಿ ಭಾರಿ ಏರಿಕೆ ಆಗಲು ಇದು ಕಾರಣ
- 2021-22ನೇ ಸಾಲಿನ ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್‌ನಿಂದ ಜುಲೈ ಅಂತ್ಯದವರೆಗೆ) ₹1.01 ಲಕ್ಷ ಕೋಟಿಯಷ್ಟು ತೆರಿಗೆಯನ್ನು ಕೇಂದ್ರ ಸರ್ಕಾರವು ಸಂಗ್ರಹಿಸಿದೆ. 2020-21ನೇ ಸಾಲಿನಲ್ಲಿ ಇದೇ ಅವಧಿಯಲ್ಲಿ ₹66,570 ಕೋಟಿ ತೆರಿಗೆಯನ್ನಷ್ಟೇ ಸರ್ಕಾರ ಸಂಗ್ರಹಿಸಿತ್ತು. ಈಗ ಕಚ್ಚಾತೈಲದ ಬೆಲೆ ಏರಿಕೆಯಾಗಿದೆ. ಆದರೆ ಸರ್ಕಾರವು ತೆರಿಗೆ ಇಳಿಸದೇ ಇರುವ ಕಾರಣಕ್ಕೆ, ಸರ್ಕಾರಕ್ಕೆ ಸಂಗ್ರಹವಾಗುತ್ತಿರುವ ತೆರಿಗೆ ಮೊತ್ತವು ಹೆಚ್ಚುತ್ತಲೇ ಇದೆ
- 2021-22ನೇ ಸಾಲಿನ ಮೊದಲ ತ್ರೈಮಾಸಿಕದಲ್ಲಿ ₹1 ಲಕ್ಷ ಕೋಟಿ ತೆರಿಗೆ ಸಂಗ್ರಹವಾಗಿದೆ. ಈ ಆರ್ಥಿಕ ವರ್ಷದ ಅಂತ್ಯಕ್ಕೆ ₹4.10 ಲಕ್ಷ ಕೋಟಿ ತೆರಿಗೆ ಸಂಗ್ರಹವಾಗಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ



ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ.ನ ಮುಂಬೈಯ ತೈಲ ಸಂಸ್ಕರಣಾ ಘಟಕ (ಸಂಗ್ರಹ ಚಿತ್ರ)

ಪೆಟ್ರೋಲ್ (ಪ್ರತಿ ಲೀಟರ್‌ಗೆ, ₹ಗಳಲ್ಲಿ) (ಬೆಂಗಳೂರಿನಲ್ಲಿ ಅಕ್ಟೋಬರ್ 1ರ ದರ)



ಅಕ್ಟೋಬರ್ 1ರ ಮಾಹಿತಿಯಂತೆ ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ₹105ಕ್ಕೆ ಮಾರಾಟವಾಗಿದೆ. ಆದರೆ ಪೆಟ್ರೋಲ್ ಮೂಲ ಬೆಲೆ ₹41 ಮಾತ್ರ. ಕೇಂದ್ರ ಸರ್ಕಾರವು ₹32 ಹಾಗೂ ರಾಜ್ಯ ಸರ್ಕಾರವು ₹27 ಸುಂಕ ವಿಧಿಸಿದ್ದರಿಂದ ಪೆಟ್ರೋಲ್ ದರ 100ರ ಗಡಿ ದಾಟಿದೆ. ಎರಡೂ ಸರ್ಕಾರಗಳು ಸೇರಿ ಪ್ರತೀ ಲೀಟರ್ ಪೆಟ್ರೋಲ್‌ಗೆ ಸರಿಸುಮಾರು ₹60 ರೂಪಾಯಿ ಸುಂಕ ವಸೂಲಿ ಮಾಡುತ್ತಿವೆ. ಬೆಂಗಳೂರಿನಲ್ಲಿ ಅಕ್ಟೋಬರ್ 13 ಬುಧವಾರ ಪ್ರತೀ ಲೀಟರ್ ಪೆಟ್ರೋಲ್ ₹108.08ಕ್ಕೆ ಮಾರಾಟವಾಗಿದೆ.


ಡೀಸೆಲ್ (ಪ್ರತಿ ಲೀಟರ್‌ಗೆ, ₹ಗಳಲ್ಲಿ) (ಬೆಂಗಳೂರಿನಲ್ಲಿ ಅಕ್ಟೋಬರ್ 1ರ ದರ)



ಡೀಸೆಲ್ ಬೆಲೆ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ₹100 ಗಡಿ ದಾಟಿದೆ. ಸಾಗಣೆ ವೆಚ್ಚ ಸೇರಿ ಡೀಸೆಲ್‌ನ ಮೂಲ ಬೆಲೆ ₹42 ಮಾತ್ರ. ಇದಕ್ಕೆ ಕೇಂದ್ರ ಸರ್ಕಾರವು ₹31 ಹಾಗೂ ರಾಜ್ಯ ಸರ್ಕಾರವು ₹18 ಸುಂಕ ವಿಧಿಸುತ್ತಿದ್ದು, ಗ್ರಾಹಕನು ಮೂಲ ಬೆಲೆಯ ಮೇಲೆ ಹೆಚ್ಚುವರಿಯಾಗಿ ಸುಮಾರು ₹50 ತೆರಬೇಕಿದೆ. ಬೆಂಗಳೂರಿನಲ್ಲಿ ಅಕ್ಟೋಬರ್ 13 ಬುಧವಾರ ಪ್ರತೀ ಲೀಟರ್ ಡೀಸೆಲ್ ₹98.89ಕ್ಕೆ ಮಾರಾಟವಾಗಿದೆ.


ಡೀಸೆಲ್ ಮೇಲಿನ ಸುಂಕ ₹3ರಿಂದ ₹31ಕ್ಕೆ

2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗ ಪ್ರತಿ ಲೀಟರ್ ಡೀಸೆಲ್ ಮೇಲಿನ ಅಬಕಾರಿ ಸುಂಕ ಕೇವಲ ₹3.56 ಇತ್ತು. ನಂತರದ ವರ್ಷಗಳಲ್ಲಿ ಸರ್ಕಾರವು ಈ ಸುಂಕವನ್ನು ಹಲವು ಬಾರಿ ಏರಿಕೆ ಮಾಡಿದೆ. ಈಗ ಪ್ರತಿ ಲೀಟರ್ ಡೀಸೆಲ್‌ಗೆ ₹31.80ರಷ್ಟು ಅಬಕಾರಿ ಸುಂಕ ಪಾವತಿ ಮಾಡಬೇಕಿದೆ. ಪೆಟ್ರೋಲ್ ಮೇಲಿನ ಅಬಕಾರಿ ಸುಂಕವೂ 2014ರಲ್ಲಿ ₹9.48ರಷ್ಟು ಇತ್ತು. ಈಗ ಪ್ರತಿ ಲೀಟರ್ ಪೆಟ್ರೋಲ್‌ಗೆ ₹32.98 ಅಬಕಾರಿ ಸುಂಕ ಪಾವತಿ ಮಾಡಬೇಕಿದೆ.



ನೆರೆಯ ದೇಶಗಳಲ್ಲಿ ಇಂಧನ ಬೆಲೆ

ನೆರೆಯ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ನ ಚಿಲ್ಲರೆ ಮಾರಾಟ ಬೆಲೆ ಶೇ 40-ಶೇ 60ರಷ್ಟು ಹೆಚ್ಚು. ನೆರೆಯ ನೇಪಾಳ, ಶ್ರೀಲಂಕಾ ಮತ್ತು ಪಾಕಿಸ್ತಾನದಲ್ಲಿ ಭಾರತಕ್ಕಿಂತ ಕಡಿಮೆ ಬೆಲೆಯಲ್ಲಿ ಈ ಎರಡೂ ಇಂಧನಗಳು ಲಭ್ಯವಿವೆ




* ಅಕ್ಟೋಬರ್ 11ರ ಪ್ರತಿ ಲೀಟರ್ ಚಿಲ್ಲರೆ ಮಾರಾಟ ಬೆಲೆ
ಸೂಚನೆ: ಆವರಣದಲ್ಲಿ ಇರುವುದು ಆಯಾ ದೇಶಗಳ ರೂಪಾಯಿಯಲ್ಲಿನ ಬೆಲೆ

ಕಚ್ಚಾ ತೈಲ ದರ ಏರಿಳಿತ

ಕೋವಿಡ್ ಸಾಂಕ್ರಾಮಿಕದಿಂದ ಚೇತರಿಕೆ ಕಂಡು ಬಂದ ನಂತರ, ಜಾಗತಿಕ ಆರ್ಥಿಕತೆಯೂ ನಿಧಾನವಾಗಿ ಚೇತರಿಸಿಕೊಳ್ಳುತ್ತಿದೆ. ಅದರ ಪರಿಣಾಮವಾಗಿ ಕಚ್ಚಾತೈಲದ ಬೇಡಿಕೆ ಹೆಚ್ಚಿದ್ದು, ದರದಲ್ಲೂ ಹೆಚ್ಚಳ ಕಂಡುಬಂದಿದೆ. 2021ರ ಆಗಸ್ಟ್ ತಿಂಗಳ ಕೊನೆಯಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ದರದಲ್ಲಿ ನಿರಂತರ ಏರಿಕೆ ಕಂಡುಬಂದಿದೆ.

2018ರ ವರ್ಷಾಂತ್ಯಕ್ಕೆ ಪ್ರತಿ ಬ್ಯಾರಲ್‌ಗೆ 64.04 ಡಾಲರ್ ಇದ್ದ ಕಚ್ಚಾತೈಲದ ದರವು, 2019ರ ವರ್ಷಾಂತ್ಯಕ್ಕೆ 41.47 ಡಾಲರ್‌ಗೆ ಕುಸಿದಿತ್ತು. 2020ರ ವರ್ಷಾಂತ್ಯಕ್ಕೆ 67.36 ಡಾಲರ್ ಇದ್ದರೆ, ಅ.13, 2021ಕ್ಕೆ 82.37 ಡಾಲರ್‌ಗೆ ಏರಿಕೆ ಕಂಡಿದೆ.

ಆಗಸ್ಟ್– ಅಕ್ಟೋಬರ್ 2021ರಲ್ಲಿ ಕಚ್ಚಾತೈಲ ದರದ ಏರಿಳಿತ (ಡಾಲರ್‌ಗಳಲ್ಲಿ)



ಆಧಾರ: ಪೆಟ್ರೋಲ್ ಬೆಲೆ ವಿಶ್ಲೇಷಣಾ ಘಟಕ, ಒಪೆಕ್ — ಪ್ರವಾ ಗ್ರಾಫಿಕ್ಸ್: ಶಶಿಧರ ಹಳೇಮನಿ


ಗಡಿ ಸಂಘರ್ಷದ ಕಾರಣಕ್ಕೆ ಸೇನಾ ವಾಹನಗಳು ಜೂನ್‌ನಲ್ಲಿ ಲಡಾಖ್‌ನತ್ತ ಸಾಗಿದ್ದವು (ಸಂಗ್ರಹ ಚಿತ್ರ)

ಭಾರತ–ಚೀನಾ ಮಾತಿನ ಚಕಮಕಿ

ನವದೆಹಲಿ: ಅರುಣಾಚಲ ಪ್ರದೇಶ ರಾಜ್ಯವನ್ನು ಭಾರತವು ಅಕ್ರಮವಾಗಿ ಮತ್ತು ಏಕಪಕ್ಷೀಯವಾಗಿ ರಚಿಸಿದೆ ಎಂದು ಚೀನಾ ಬುಧವಾರ ಆರೋಪ ಮಾಡಿದೆ.

ಉಭಯ ದೇಶಗಳ ನಡುವೆ ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ನಡೆದ ತಿಕ್ಕಾಟದ ಕುರಿತು ಹಿರಿಯ ಸೇನಾ ಕಮಾಂಡರ್‌ಗಳ ಮಾತುಕತೆ ನಡೆಯುತ್ತಿರುವ ವೇಳೆಯೇ ಚೀನಾ ಈ ಹೇಳಿಕೆ ನೀಡಿದೆ.

ಇತ್ತೀಚೆಗೆ, ಅರುಣಾಚಲ ಪ್ರದೇಶಕ್ಕೆ ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ಭೇಟಿ ನೀಡಿದ್ದರು. ಈ ಕುರಿತು ಚೀನಾ ಪ್ರತಿಭಟನೆ ದಾಖಲಿಸಿತ್ತು. ಪ್ರತಿಭಟನೆಯನ್ನು ಪಕ್ಕಕ್ಕಿರಿಸಿ ಲಡಾಖ್‌ನ ಎಲ್‌ಎಸಿಯ ತಿಕ್ಕಾಟ ಬಗೆಹರಿಸುವ ಕುರಿತು ಕೆಲಸ ಮಾಡುವಂತೆ ಚೀನಾಕ್ಕೆ ಭಾರತ ಹೇಳಿತ್ತು.

ಚೀನಾ–ಭಾರತ ಗಡಿ ಕುರಿತು ಚೀನಾದ ಅಭಿಪ್ರಾಯ ಎಂದಿಗೂ ಬದಲಾಗುವುದಿಲ್ಲ. ಅರುಣಾಚಲ ಪ್ರದೇಶ ರಾಜ್ಯವನ್ನು ಭಾರತ ಅಕ್ರಮವಾಗಿ ಮತ್ತು ಏಕಪಕ್ಷೀಯವಾಗಿ ರಚಿಸಿದೆ ಎಂದೇ ಚೀನಾ ಪರಿಗಣಿಸುತ್ತದೆ. ಈ ಪ್ರದೇಶಕ್ಕೆ ಭಾರತೀಯ ನಾಯಕರು ಭೇಟಿ ನೀಡುವುದನ್ನೂ ವಿರೋಧಿಸುತ್ತದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಝಾವೊ ಲಿಜನ್ ಬೀಜಿಂಗ್‌ನಲ್ಲಿ ಹೇಳಿದ್ದಾರೆ.

ತನ್ನ ಪ್ರಮುಖ ಕಾಳಜಿಗಳನ್ನು ಗೌರವಿಸಬೇಕು ಎಂದು ಭಾರತಕ್ಕೆ ಚೀನಾ ಒತ್ತಾಯಿಸುತ್ತದೆ. ಗಡಿ ವಿವಾದವನ್ನು ಮತ್ತಷ್ಟು ಜಟಿಲಗೊಳಿಸುವಂಥ ಯಾವುದೇ ಕ್ರಮಗಳನ್ನು ಭಾರತ ತೆಗೆದುಕೊಳ್ಳಬಾರದು. ಎರಡೂ ರಾಷ್ಟ್ರಗಳ ನಡುವಿನ ಪರಸ್ಪರ ನಂಬಿಕೆ ಮತ್ತು ದ್ವಿಪಕ್ಷೀಯ ಸಂಬಂಧಗಳನ್ನು ಹಾಳುಮಾಡುವಂಥ ಕೆಲಸಗಳಿಂದ ಭಾರತ ದೂರ ಇರಬೇಕು ಎಂದಿದ್ದಾರೆ.

ಅರುಣಾಚಲ ಪ್ರದೇಶವು ದಕ್ಷಿಣ ಟಿಬೆಟ್‌ನ ಒಂದು ಭಾಗ ಎಂದು ಚೀನಾ ಪ್ರತಿಪಾದಿಸುತ್ತದೆ. ಭಾರತದ ಗಡಿ ಒಳಗೆ, ಅರುಣಾಚಲ ಪ್ರದೇಶದ 90,000 ಚದರ ಕಿಮೀ ಪ್ರದೇಶ ತನಗೆ ಸೇರಿದ್ದು ಎಂದು ಚೀನಾ ಹೇಳಿಕೊಳ್ಳುತ್ತದೆ. ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ಸುಮಾರು 200 ಸೈನಿಕರು ಅರುಣಾಚಲ ಪ್ರದೇಶದ ಗಡಿ ಒಳಗೆ ಅಕ್ರಮವಾಗಿ ನುಸುಳಲು ಇತ್ತೀಚೆಗೆ ಪ್ರಯತ್ನಿಸಿದ್ದರು. ವಾರದ ಹಿಂದಷ್ಟೇ ಇಂಥದ್ದೇ ಪ್ರಯತ್ನವನ್ನು ಅವರು ಉತ್ತರಾಖಂಡದ ಬರಹೋಟಿಯಲ್ಲಿ ಮಾಡಿದ್ದರು.

ಚೀನಾ ಸೈನಿಕರು ಮೇಲಿಂದ ಮೇಲೆ ಉತ್ತರಾಖಂಡ ಮತ್ತು ಅರುಣಾಚಲ ಪ್ರದೇಶದಲ್ಲಿ ಭಾರತದ ಗಡಿ ಒಳಗೆ ನುಸುಳಲು ಮಾಡುತ್ತಿರುವ ಪ್ರಯತ್ನವನ್ನು ಭಾರತ ಗಂಭೀರವಾಗಿ ಪರಿಗಣಿಸಿದೆ. ಚೀನಾದ ಈ ಪ್ರಯತ್ನಗಳು ಭಾರತ–ಚೀನಾ ಗಡಿಯಲ್ಲಿ ಉದ್ವಿಗ್ನತೆ ತಂದೊಡ್ಡುವ ಅಪಾಯವಿದೆ ಎಂಬುದನ್ನು ಭಾರತ ಅರಿತಿದೆ. ಭಾರತದ ಆತಂಕದ ಕುರಿತು ಭಾರತೀಯ ಸೇನೆಯ ಮುಖ್ಯಸ್ಥ ಜನರಲ್ ಎಂ. ಎಂ. ನರವಣೆ ಹಲವಾರು ಬಾರಿ ಮಾತನಾಡಿದ್ದಾರೆ.

ಚೀನಾದ ಹೇಳಿಕೆಯನ್ನು ತಿರಸ್ಕರಿಸುತ್ತೇವೆ: ಭಾರತ

ಅರುಣಾಚಲ ಪ್ರದೇಶವು ಭಾರತದ ಒಂದು ಅವಿಭಾಜ್ಯ ಭಾಗ. ಚೀನಾ ನೀಡಿರುವ ಹೇಳಿಕೆಗಳನ್ನು ನಾವು ತಿರಸ್ಕರಿಸುತ್ತೇವೆ. ಭಾರತದ ನಾಯಕರು ಅರುಣಾಚಲ ಪ್ರದೇಶಕ್ಕೆ ಎಂದಿನಂತೆ ಭೇಟಿ ನೀಡುತ್ತಾರೆ. ಭಾರತದ ನಾಯಕರು ಭಾರತದ ರಾಜ್ಯಕ್ಕೆ ಹೋಗುವುದನ್ನು ವಿರೋಧಿಸಿ ಚೀನಾ ಹೇಳಿಕೆ ನೀಡಿದರೆ ಅದಕ್ಕೆ ಭಾರತೀಯರು ಹೊಣೆಯಲ್ಲ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ. ಪೂರ್ವ ಲಡಾಖ್ ಗಡಿ ತಿಕ್ಕಾಟದ ಕುರಿತು 17 ತಿಂಗಳುಗಳಲ್ಲಿ ನಡೆದ 13ನೇ ಸಭೆ ಕೂಡಾ ಫಲಪ್ರದವಾಗದ ಸಮಯದಲ್ಲಿ ಚೀನಾ ಇಂಥ ಹೇಳಿಕೆ ನೀಡಿದೆ. ಭಾರತ–ಚೀನಾದ ಪಶ್ಚಿಮ ಗಡಿಯಲ್ಲೂ ದ್ವಿಪಕ್ಷೀಯ ಒಪ್ಪಂದ ಉಲ್ಲಂಘಿಸಲು ಚೀನಾ ಪ್ರಯತ್ನಿಸುತ್ತಿದೆ ಎಂದು ಬಾಗ್ಚಿ ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅರುಣಾಚಲ ಪ್ರದೇಶದಲ್ಲಿ ಕೆಲವು ದಿನಗಳ ಹಿಂದೆ ಭಾರತ ಹಾಗೂ ಚೀನಾ ಸೈನಿಕರ ನಡುವೆ ಸಣ್ಣಮಟ್ಟದ ಘರ್ಷಣೆ ನಡೆದಿತ್ತು. ಚೀನಾ ಸೈನಿಕರು ಗಡಿದಾಟಿ ಬಂದಿದ್ದರು ಎನ್ನಲಾಗಿತ್ತು. ಹೀಗೆ ಗಡಿ ದಾಟಿ ಬಂದ ಸುಮಾರು ನೂರು ಸೈನಿಕರನ್ನು ಭಾರತೀಯ ಸೇನೆ ವಶಕ್ಕೆ ಪಡೆದಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹಬ್ಬಿದೆ. ಗಾಜಿಯಾಬಾದ್‌ನ ಬಿಜೆಪಿ ಸಂಚಾಲಕ ಆನಂದ್ ಕಲ್ರಾ ಅವರು ಚೀನಾ ಸೈನಿಕರನ್ನು ಬಂಧಿಸಲಾಗಿದೆ ಎಂಬುದನ್ನು ಬಿಂಬಿಸುವ ಚಿತ್ರವನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ್ದಾರೆ. ಹಲವರು ಈ ಚಿತ್ರವನ್ನು ಶೇರ್ ಮಾಡಿದ್ದಾರೆ.



ರಿವರ್ಸ್ ಇಮೇಜ್ ಮೂಲಕ ಪರಿಶೀಲಿಸಿದಾಗ, ಈ ಚಿತ್ರವು ಡಿಸೆಂಬರ್ 2020ರಲ್ಲಿ ಪ್ರಕಟವಾಗಿದೆ ಎಂಬ ವಿಚಾರವನ್ನು ಆಲ್ಟ್ ನ್ಯೂಸ್ ವರದಿ ಮಾಡಿದೆ. ಗಾಲ್ವನ್ ಕಣಿವೆಯಲ್ಲಿ ನಡೆದ ಭಾರತ–ಚೀನಾ ಸಂಘರ್ಷವನ್ನು ನೆನಪಿಸುವ 'ಎಲ್‌ಎಸಿ' ಎಂಬ ಸಿನಿಮಾದ ಚಿತ್ರೀಕರಣದ ದೃಶ್ಯಗಳಿವು ಎಂಬುದು ದೃಢಪಟ್ಟಿದೆ. ಯೂಟ್ಯೂಬ್‌ನಲ್ಲಿ ಇದೇ ಚಿತ್ರದ ವಿಡಿಯೊ ಅಪ್‌ಲೋಡ್ ಆಗಿವೆ. ಡೈಲಿ ಎಕ್ಸೈಲ್‌ಸಿಯರ್ ತಾಣವು ಸಿನಿಮಾ ದೃಶ್ಯಗಳನ್ನು 2020ರ ನವೆಂಬರ್‌ನಲ್ಲಿ ಪ್ರಸಾರ ಮಾಡಿತ್ತು. ಚೀನಾ ಸೈನಿಕರನ್ನು ಭಾರತದ ಸೇನೆ ಬಂಧಿಸಿದೆ ಎಂಬುದು ಸುಳ್ಳು ಸುದ್ದಿ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಭಾವಬುದ್ಧಿಯ ಸೇವೆ

ಜೀವನೋದ್ಯಮವೆಲ್ಲ ತೋಟದುದ್ಯೋಗವೆನು|
ಭಾವಬುದ್ಧಿಗಳ ಕೃಷಿಯಿಂದೊಗೆದ ಫಲದಿಂ||
ತೀವುತಿರೆ ನಗೆ ಹೊಳಪು ಮೊಗಮೊಗದೊಳಂ ಜಗದಿ|
ಸೇವೆಯದು ಬೊಮ್ಮಂಗೆ – ಮಂಕುತಿಮ್ಮ ||476||

ಪದ-ಅರ್ಥ: ಜೀವನೋದ್ಯಮವೆಲ್ಲ = ಜೀವನ + ಉದ್ಯಮ + ಎಲ್ಲ, ತೋಟದುದ್ಯೋಗವೆನು = ತೋಟದ + ಉದ್ಯೋಗವೆ + ಎನು, ಕೃಷಿಯಿಂದೊಗೆದ = ಕೃಷಿಯಿಂದ + ಒಗೆದ (ಹೊರಟ), ತೀವುತಿರೆ = ಉಕ್ಕುತ್ತಿದ್ದರೆ, ಮೊಗಮೊಗದೊಳಂ = ಮುಖ, ಮುಖಗಳಲ್ಲಿ.

ವಾಚ್ಯಾರ್ಥ: ಜೀವನದ ಕಾರ್ಯಗಳೆಲ್ಲ ತೋಟದ ಕೆಲಸವೆಂದು ಭಾವಿಸು. ಭಾವಬುದ್ಧಿಗಳ ಪರಿಶ್ರಮದಿಂದ, ಮುಖಗಳಲ್ಲಿ ನಗೆ, ಸಂತೋಷ ಮಿನುಗುತ್ತಿದ್ದರೆ ಅದೇ ಭಗವಂತನ ಸೇವೆ.

ವಿವರಣೆ: ತೋಟದಲ್ಲಿ ರೈತ ಎಷ್ಟೊಂದು ಕೆಲಸಗಳನ್ನು ಮಾಡುತ್ತಾನೆ. ಮಣ್ಣು ಹದಮಾಡಿ, ಬೀಜವ ಬಿತ್ತಿ, ನೀರು ಹಾಯಿಸಿ, ಕಳೆ ತೆಗೆದು, ಬಂದ ರೋಗಗಳನ್ನೆಲ್ಲ ನಿವಾರಿಸಿ, ರಾಶಿ ಮಾಡಿದಾಗ ಫಲ ಬರುತ್ತದೆ. ಅಷ್ಟು ತಿಂಗಳುಗಳ ಶ್ರಮ ಮಾಯವಾಗಿ ಅವನ ಮುಖದಲ್ಲಿ ತೃಪ್ತಿಯ, ಸಂತೋಷದ ನಗೆ ಮಿನುಗುವುದು ಫಲವನ್ನು ಕಂಡಾಗ. ತಾಯಿ ಮಗುವಿಗಾಗಿ ನೂರೊಂದು ಕೆಲಸ ಮಾಡುತ್ತಾಳೆ. ಆ ಶ್ರಮವೆಲ್ಲ ಕ್ಷಣದಲ್ಲಿ ಕರಗಿ ನಗು ಮೂಡುವುದು ಮಗುವಿನ ಮುಖದಲ್ಲಿ ಕಂಡ ನಗುವಿನಿಂದ. ಅದೇ ಭಗವಂತನ ಸೇವೆ ಎನ್ನುತ್ತದೆ ಕಗ್ಗ. ನಮ್ಮ ದಿನನಿತ್ಯದ ಬದುಕೂ ಒಂದು ತೋಟದ ಸೇವೆಯಿದ್ದಂತೆ. ಆದರೆ ನಮ್ಮ ಸೇವೆ ನಡೆಯುವುದು ಭಾವದ, ಬುದ್ಧಿಯ ಕಾರ್ಯದಿಂದ. ಇಂದು ಪ್ರಪಂಚದಲ್ಲಿ ಕಾಣುವ ನವೀನತೆಗಳು, ಅನುಕೂಲತೆಗಳು ಬಂದದ್ದು ಯಾರೋ ಒಬ್ಬರ, ಅನೇಕರ ಪರಿಶ್ರಮದಿಂದ. ಎತ್ತಿನಗಾಡಿಯಿಂದ ಹಿಡಿದು ಇಂದಿನ ಜೆಟ್ ವಿಮಾನಗಳ ನಿರ್ಮಾಣದಲ್ಲಿ ಅದೆಷ್ಟು ಜನರ ಸೇವೆ ಸಂದಿದೆಯೋ! ಅದೆಷ್ಟು ಜನ ತಾವು ಏನೂ ಪಡೆಯದೆ, ಜಗಕ್ಕೆ ಎಲ್ಲವನ್ನೂ ನೀಡಿ ಮರೆಯಾದರೊ! ಬದುಕಿನುದ್ದಕ್ಕೂ ಪರಿಶ್ರಮ ಪಟ್ಟು 'ಭರವಸೆಯ ನಾಡು' ತೋರಿಸುತ್ತೇನೆಂದು ಸಹಸ್ರಾರು ಜನರಿಗೆ ಆ ನಾಡಿನ ದರ್ಶನ ಮಾಡಿದ ಮೋಸೆಸ್ ಕೊನೆಗೂ ತಾನು ಆ ನಾಡನ್ನು ನೋಡದೇ ಉಳಿದ. ಆದರೆ ಅಜರಾಮರನಾದ. ಮೂರು ದಶಕಗಳಿಗೂ ಕಾಲ ಅಹರ್ನಿಶಿ ದುಡಿದು ಭಾರತದ ಸ್ವಾತಂತ್ರ್ಯಕ್ಕೆ ನೆರವಾದ, ಗಾಂಧೀಜಿ ಸ್ವತಂತ್ರ ಭಾರತದಲ್ಲಿ ಒಂದು ವರ್ಷ ಕೂಡ ಬದುಕಲಿಲ್ಲ. ಆದರೆ ಮಹಾತ್ಮರಾದರು. ತಾರುಣ್ಯದಲ್ಲೇ, ದೇಶದ ಬಿಡುಗಡೆಗೆ ತಮ್ಮ ಬದುಕನ್ನೇ ಹೊಸಕಿ ಹಾಕಿ ಹೋದ ಭಗತ್ ಸಿಂಗ್, ರಾಜಗುರು, ಆಝಾದ್ ಅವರೆಲ್ಲ ಹುತಾತ್ಮರಾಗಿ ಮನದಲ್ಲಿ ನೆಲೆಸಿದರು.

ಹೀಗೆಯೇ ಕವಿಗಳು, ದಾರ್ಶನಿಕರು, ವಚನಕಾರರು, ಸಮಾಜ ಕಾರ್ಯಕರ್ತರು, ವಿಜ್ಞಾನಿಗಳು, ಆಟಗಾರರು, ನಿಸ್ವಾರ್ಥ ರಾಜಕಾರಣಿಗಳು, ಆಡಳಿತಗಾರರು, ಕಲೆಗಾರರು, ಕೃಷಿಕರು, ಗೃಹಿಣಿಯರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅವಿರತವಾಗಿ ಭಾವ, ಬುದ್ಧಿಗಳನ್ನು ಬಳಸಿಕೊಂಡು ಸಾಧಿಸಿದ ಜೀವನೋದ್ಯಮ ಇಂದು ಪ್ರಪಂಚವನ್ನು ಸುಂದರವಾಗಿಸಿದೆ. ಈ ಪ್ರಪಂಚ ಭಗವಂತನ ಸೃಷ್ಟಿಯೇ ಆದದ್ದರಿಂದ ಅವರೆಲ್ಲರ ಸೇವೆಯೂ ಭಗವಂತನ ಸೇವೆಯೇ. ❖

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಅಕ್ಟೋಬರ್ 14, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಚಿತ್ತಾ ನವಮೀ ಗಂ. 38-29 (ರಾ. 9-40) ಗುರುವಾರ ನಿತ್ಯ ನಕ್ಷತ್ರ ಉತ್ತರಾಷಾಢ ಗಂ. 17-47 (ಹ. 1-22) ಸುಕರ್ಮ ನಾಮ ಯೋಗ ಗಂ. 5-13 ಉಪರಿ ಧೃತಿ ನಾಮ ಯೋಗ ಗಂ. 53-44 ಬಾಲವ ಕರಣ ಗಂ. 10-49 ವಿಷ ಗಂ. 27-22 ಅಮೃತ ಗಂ 3-9 ಪುನರಮೃತ ಗಂ 50-24 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-13 ಸೂರ್ಯಾಸ್ತ: 6-00 ಅದೃಷ್ಟ ಸಂಖ್ಯೆ 14

ಮೇಷ: ಕೆಲಸ ಕಾರ್ಯಗಳಲ್ಲಿ ಹಿನ್ನಡೆಯಿಂದಾಗಿ ನಿರಾಸೆ ತಾಳುವುದು ಸರಿಯಲ್ಲ. ಇಂದಿನ ಮಟ್ಟಿಕೆ ಕೆಲವು ತೊಂದರೆ ತಾಪತ್ರಯಗಳನ್ನು ಎದುರಿಸಬೇಕಾದೀತು. ಧೈರ್ಯಗೆಡುವ ಅವಶ್ಯಕತೆ ಕಾಣದು.

ವೃಷಭ: ಸರ್ಕಾರಿ ಉದ್ಯೋಗಿಗಳಿಗೆ ಪದೋನ್ನತಿಯಿಂದಾಗಿ ವರ್ಗಾವಣೆ ಸಾಧ್ಯತೆ. ಸ್ವಯಂ ಉದ್ಯೋಗ ಕ್ಷೇತ್ರದಲ್ಲಿ ಉತ್ತಮವಾದ ಆದಾಯ. ಜೀವನಶೈಲಿಯನ್ನು ಬದಲಾಯಿಸಿಕೊಳ್ಳಲು ಕಾಲವು ಪಕ್ವವಾಗಿದೆ.

ಮಿಥುನ: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಉತ್ತಮವಾದ ಕಾಲವಾಗಿದ್ದು ಜನಾನುರಾಗಿಗಳಾಗಿ ಬಿಂಬಿಸುವ ಸಾಧ್ಯತೆ. ಸಮಾಜದಲ್ಲಿ ಗುರುತಿಸಿಕೊಂಡ ಮಹಿಳೆಯರಿಗೆ ಉನ್ನತ ಸ್ಥಾನ ಮಾನಗಳ ಸಾಧ್ಯತೆ.

ಕರ್ಕಾಟಕ: ಅಭಿವೃದ್ಧಿಗೆ ಅನುಕೂಲಕರ ವಾತಾವರಣ ಮೂಡಿಬರಲಿದೆ. ಅವುಗಳನ್ನು ಬಳಸಿಕೊಳ್ಳುವ ಬಗ್ಗೆ ಎಚ್ಚರಿಕೆಯ ಹೆಜ್ಜೆ ಇಡಿ. ಪ್ರಮಾಣಿಕ ಪ್ರಯತ್ನದಿಂದ ಕಾರ್ಯ ಸಾಫಲ್ಯವಾಗಲಿದೆ.

ಸಿಂಹ: ಮಕ್ಕಳ ನಡವಳಿಕೆಯ ವಿಷಯದಲ್ಲಿ ವಿಶೇಷ ಗಮನ ಅಗತ್ಯ. ಗೃಹ ನಿರ್ಮಾಣ ಕಾರ್ಯದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಉಂಟಾದರೂ ಪ್ರಗತಿ. ಶುಭ ಕಾರ್ಯಗಳಿಗಾಗಿ ಆಲೋಚನೆ.

ಕನ್ಯಾ: ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ತೊಂದರೆಗಳು ತಲೆದೋರುವ ಸಾಧ್ಯತೆ ಇದ್ದು ಚಿಂತಿಸುವ ಅವಶ್ಯಕತೆ ಇಲ್ಲ. ಚಿನ್ನಾಭರಣಗಳನ್ನು ಖರೀದಿಸಿ ನೆಮ್ಮದಿ ಹೊಂದುವಿರಿ.

ತುಲಾ: ವಿವಿಧ ಕ್ಷೇತ್ರದಲ್ಲಿನ ಪ್ರತಿಭಾವಂತರಿಗೆ ಉತ್ತಮ ಅವಕಾಶ ದೊರೆತು, ಗೌರವ ಪ್ರಾಪ್ತಿ. ವಿದ್ಯಾರ್ಥಿಗಳಿಗೆ ಹೊಸ ಉತ್ಸಾಹ ಮೂಡಿಸುವ ಸಾಧ್ಯತೆ. ಅವಿವಾಹಿತರಿಗೆ ಸಂಬಂಧ ಬರಲಿವೆ.

ವೃಶ್ಚಿಕ: ಅವಿವಾಹಿತರಿಗೆ ವಿವಾಹ ಭಾಗ್ಯ. ಸಮಾಜದ ಎದುರು ಮುಖಭಂಗವಾಗುವ ಸಾಧ್ಯತೆ. ಅಪೇಕ್ಷಿತರಿಗೆ ಸಂತಾನ ಪ್ರಾಪ್ತಿ ಯೋಗವಿದೆ.

ಧನು: ಹೊಸ ವಾಹನ ಖರೀದಿ ಯೋಗವು ಕಂಡುಬರುತ್ತಿದೆ. ಕೈಗೆತ್ತಿಕೊಂಡ ಕೆಲಸ ಕಾರ್ಯಗಳು ನಿಮ್ಮ ಪ್ರಯತ್ನದಿಂದಾಗಿ ಯಶಸ್ವಿಯಾಗಲಿವೆ. ಆದಾಯದಲ್ಲಿ ವೃದ್ಧಿ.

ಮಕರ: ವೃತ್ತಿರಂಗದಲ್ಲಿ ನಿರೀಕ್ಷಿತ ಯಶಸ್ಸು. ಉದ್ಯೋಗಸ್ಥರಿಗೆ, ಬರಹಗಾರರಿಗೆ ಬಡ್ತಿ. ವ್ಯಾಪಾರ ವ್ಯವಹಾರ ನಡೆಸುತ್ತಿರುವವರಿಗೆ ಹಣಕಾಸಿನ ಹರಿವು ಉತ್ತಮವಾಗಿರುವುದು.

ಕುಂಭ: ಸ್ವಲ್ಪಮಟ್ಟಿನ ಆರ್ಥಿಕ ತೊಂದರೆಗಳು ಎದುರಾಗುವ ಸಾಧ್ಯತೆ. ಯಾವುದೇ ಆತಂಕಕ್ಕೆ ಕಾರಣವಿರದು. ವಿವಿಧ ಮೂಲಗಳಿಂದ ಸಣ್ಣ ಪ್ರಮಾಣದ ಆದಾಯವು ನಿರಂತರ ಹರಿದುಬರಲಿದೆ.


ಮೀನ: ಇಂದಿನ ನಿಮ್ಮ ನಿರ್ಧಾರಗಳು ಸರಿಯಾಗಿದ್ದು ಪ್ರತಿಫಲ ನಿಮ್ಮದಾಗುವುದು. ಪ್ರೇಮ ಪ್ರಕರಣಗಳು ಸಿದ್ಧಿಸಲಿದ್ದು ಅನುಕೂಲಕರ ವಾರಾವರಣ.

ನಿಮ್ಮ ಜನ್ಮದಿನ 14-ಅಕ್ಟೋಬರ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಸ್ವಯಂ ಉದ್ಯೋಗದಲ್ಲಿ ತೊಡಗಿರುವವರಿಗೆ ಪರಿಶ್ರಮದ ಫಲವಾಗಿ ಹೆಚ್ಚಿನ ಗಳಿಕೆಯನ್ನು ಕಾಣಬಹುದು. ಸರ್ಕಾರದಿಂದ ಆಗಬೇಕಾದ ಹೆಚ್ಚಿನ ಕೆಲಸ ಕಾರ್ಯಗಳು ನಿಮ್ಮಿಚ್ಛೆಯಂತೆ ನಡೆಯಲಿವೆ.

ಪದಬಂಧ 4748 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಎಲ್ಲ ಕಡೆಗಳಲ್ಲಿಯೂ ಮುಖವುಳ್ಳವನು (5)
4.ಮಧುರವಾಗಿರುವ ತುಟಿ! (3)
5.ಗಮನವಿಡಿ! ಇದು ಸುಲಭಸಾಧ್ಯವಲ್ಲದುದು! (3)
9.ಮೂರರ ನಂತರದ ಸಂಖ್ಯೆ (2)
10.ಏಳು ದಿನಗಳ ಅವಧಿಯಲ್ಲಿ ಸಿಕ್ಕ ಒಡೆತನ! (3)
11.ಖರ್ಚು ಕಳೆದು ಉಳಿದುದು (2)
12.ಬಳ್ಳಿ ಇಲ್ಲಿ ಹಬ್ಬಿದೆ (3)
15.ಉತ್ತರದವರನ್ನು ಪುಳಕಗೊಳಿಸಿದ ಸ್ನಾನ (3)
16.ಮತ್ತೆ ಉದಯಿಸುವುದು (5)

ಮೇಲಿಂದ ಕೆಳಕ್ಕೆ
1.ಸಂತನು ನೀಡಿದ ಆನಂದ! (3)
2.ಉಲ್ಟಾ ಕಾಣಿಸುತ್ತಿರುವ ಸೂರ್ಯ (2)
3.ಖಂಡುಗ ಧಾನ್ಯ ಹೆಕ್ಕುತ್ತಿರುವ ಹಕ್ಕಿ! (2)
4.ಒಂದನ್ನೊಂದು ಅಗಲದೇ ಇರುವಿಕೆ (5)
6.ಮನುಷ್ಯರನ್ನು ತಿನ್ನುವ ಪ್ರಾಣಿ (5)
7.ಕಟ ಕಟ ಶಬ್ದ ಮಾಡುತ್ತಿರುವ ಬಾಗಿಲು! (3)
8.ತುಸು ಬೆಳಕಿರುವ ಬೆಳಗಿನ ಜಾವ (3)
13.ಪುರಿ ತಿನ್ನುತ್ತಿರುವ ಶತ್ರು (2)
14.ಹದ್ದಿನ ಜಾತಿಗೆ ಸೇರಿದ ಪಕ್ಷಿ (3)
15.ಜವಾನನ ಸುತ್ತ ನೆರೆದ ಮಂದಿ (2)



4747ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗುಂಪು 3.ತುರಗ 5.ಕಮಲ 7.ವನವಾಸ 9.ಬಸದಿ 10.ಪದ್ಧತಿ 11.ಗರಿಮುರಿ 13.ಚರಕ 15.ಕಮ್ಮಾರ 16.ಟಕ್ಕ

ಮೇಲಿಂದ ಕೆಳಕ್ಕೆ: 2.ಪುಳಕ 3.ತುಮುಲ 4.ಗಡವ 6.ಮಸೀದಿ 8.ಸದ್ಗತಿ 9.ಬಡಗ 10.ಪದರ 12.ರಿತ್ತಕ 13.ಚತುರ 14.ಕಮ್ಮಟ

ಸುಡೊಕು 5134

3				8		9		1
							6	
	4		9			3		8
6								9
	5		7	6	9		8	
8						6		
9			2			7		6
	6			9	7		3	
		7				4		5

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5133 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ನಟ ವಿಜಯ್ ಅಭಿಮಾನಿಗಳಿಗೆ ಜಯ



ಚೆನ್ನೈ: ತಮಿಳುನಾಡಿನ 9 ಜಿಲ್ಲೆಗಳ ಗ್ರಾಮೀಣ ಭಾಗದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ತಮಿಳು ನಟ ವಿಜಯ್ ಅವರ 100ಕ್ಕೂ ಹೆಚ್ಚು ಅಭಿಮಾನಿಗಳು ಗೆಲುವು ಸಾಧಿಸಿದ್ದಾರೆ.

ಈ ಬೆಳವಣಿಗೆಯು ತಮಿಳುನಾಡಿನಲ್ಲಿ ನಟ ವಿಜಯ್ ಅವರ ರಾಜಕೀಯ ಜೀವನದ ಕುರಿತು ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ತಳಪತಿ ವಿಜಯ್ ಮಕ್ಕಳ್ ಇಯಕ್ಕಂ (ಟಿವಿಎಂಐ) 169 ಸದಸ್ಯರು ಚುನಾವಣೆಯಲ್ಲಿ ವಿವಿಧ ಸ್ಥಾನಗಳಿಗೆ ಸ್ಪರ್ಧಿಸಿದ್ದರು. ಅ. 6ರಿಂದ 9ರವರೆಗೆ ನಡೆದ ವಿವಿಧ ಹಂತದ ಚುನಾವಣೆಯಲ್ಲಿ 115 ಮಂದಿ ಜಯ ಸಾಧಿಸಿದ್ದು, ಅದರಲ್ಲಿ 13 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಮಿಳುನಾಡಿನಲ್ಲಿ ನಟ ಕಮಲ್ ಹಾಸನ್ ಅವರ ನಾಮ್ ತಮಿಳರ್ ಕಟ್ಚಿ (ಎನ್‌ಟಿಕೆ) ಹಾಗೂ ಮಕ್ಕಳ್ ನೀದಿ ಮೈಯಮ್ (ಎಂಎನ್‌ಎಂ) ನಂಥ ಪಕ್ಷಗಳು ಈ ಚುನಾವಣೆಯಲ್ಲಿ ಮುನ್ನಡೆ ಸಾಧಿಸಿಲ್ಲ. ಈ ಹಿನ್ನೆಲೆಯಲ್ಲಿ ವಿಜಯ್ ಅಭಿಮಾನಿಗಳ ಗೆಲುವು ಗಮನ ಸೆಳೆದಿದೆ. ಎನ್‌ಟಿಕೆ 2016ರಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದು, ಎಂಎನ್‌ಎಂ 2019ರಲ್ಲಿ ರಾಜಕೀಯಕ್ಕೆ ಪದಾರ್ಪಣೆ ಮಾಡಿದೆ.

ವಿಜಯ್ ಮಕ್ಕಳ ಇಯಕ್ಕಂನ ಒಟ್ಟು ಸದಸ್ಯರು ವಿಲ್ಲುಪುರಂ ಜಿಲ್ಲೆಯ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅಭಿಮಾನಿಗಳು ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದರೂ, ನಟ ವಿಜಯ್ ತಮ್ಮ ಚಿತ್ರವನ್ನು ಮತ್ತು ಟಿವಿಎಂಐ ಧ್ವಜವನ್ನು ಪ್ರಚಾರದ ಸಮಯದಲ್ಲಿ ಬಳಸಲು ಅನುಮತಿ ನೀಡಿದ್ದರು.

ತಮಿಳುನಾಡು: ಸ್ಥಳೀಯ ಸಂಸ್ಥೆ ಚುನಾವಣೆ

ಡಿಎಂಕೆ ಮೈತ್ರಿಕೂಟಕ್ಕೆ ಗೆಲುವು

ಚೆನ್ನೈ: ತಮಿಳುನಾಡಿನಲ್ಲಿ ಒಂಬತ್ತು ಜಿಲ್ಲೆಗಳ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಡಿಎಂಕೆ ಮತ್ತು ಅದರ ಮೈತ್ರಿ ಪಕ್ಷಗಳು, ಎಐಎಡಿಎಂಕೆ- ಬಿಜೆಪಿ ಮೈತ್ರಿ ವಿರುದ್ಧ ಭರ್ಜರಿ ಗೆಲುವು ಸಾಧಿಸಿವೆ.

ಅ.6 ಮತ್ತು 9 ರಂದು ನಡೆದ ಚುನಾವಣೆಯಲ್ಲಿ ಆಡಳಿತ ಪಕ್ಷವು ಎಲ್ಲ ಒಂಬತ್ತು ಜಿಲ್ಲಾ ಪಂಚಾಯಿತಿಗಳನ್ನು ಮತ್ತು ಶೇ 90 ಕ್ಕಿಂತ ಹೆಚ್ಚಿನ ಯೂನಿಯನ್ ಪಂಚಾಯಿತಿಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

140 ಜಿಲ್ಲಾ ವಾರ್ಡ್‌ಗಳಲ್ಲಿ ಡಿಎಂಕೆ ಮೈತ್ರಿಕೂಟವು 138ರಲ್ಲಿ ಜಯ ಗಳಿಸಿದೆ. ಮುಖ್ಯ ವಿರೋಧ ಪಕ್ಷ ಎಐಎಡಿಎಂಕೆಗೆ



ಡಿಎಂಕೆ ಮತ್ತು ಮೈತ್ರಿ ಪಕ್ಷಗಳಿಗೆ ಒಲಿದ ಅದ್ಭುತ ಗೆಲುವು ನಮ್ಮ ಐದು ತಿಂಗಳ ಸರ್ಕಾರಕ್ಕೆ ಸಿಕ್ಕಿದ ಮಾನ್ಯತೆ

ಎಂ.ಕೆ. ಸ್ಟಾಲಿನ್, ಮುಖ್ಯಮಂತ್ರಿ

ಕೇವಲ ಎರಡು ಸ್ಥಾನಗಳನ್ನು ಗಳಿಸಿದೆ. ಚೆಂಗಲ್ಪಟ್ಟು ಮತ್ತು ವಿಲ್ಲುಪುರಂನಲ್ಲಿ ಒಂದೊಂದು ಜಿಲ್ಲಾ ವಾರ್ಡ್ ಅನ್ನು ಗೆದ್ದರೆ, ಕಾಂಚೀಪುರಂ, ರಾಣಿಪೇಟೆ, ತಿರುಪತ್ತೂರು, ತಿರುನೆಲ್ವೇಲಿ, ಕಲ್ಲಕುರಿಚಿ, ವೆಲ್ಲೂರು ಮತ್ತು ತೆಂಕಾಸಿಯಲ್ಲಿ ಎಐಎಡಿಎಂಕೆ ಶೂನ್ಯ ಸಂಪಾದಿಸಿದೆ.

ಯೂನಿಯನ್ ಪಂಚಾಯತ್ ಚುನಾವಣೆಗಳಲ್ಲಿ ಎಐಎಡಿಎಂಕೆ ಪಕ್ಷವು ಒಟ್ಟು 1,381 ಸ್ಥಾನಗಳ ಪೈಕಿ ಕೇವಲ 218ರಲ್ಲಿ ಮುನ್ನಡೆಯಲ್ಲಿದೆ. ಡಿಎಂಕೆ ಮೈತ್ರಿಕೂಟವು 1,000ಕ್ಕಿಂತಲೂ ಹೆಚ್ಚು ವಾರ್ಡ್‌ಗಳಲ್ಲಿ ಗೆದ್ದಿದೆ. ಎಐಎಡಿಎಂಕೆ ಮೈತ್ರಿಕೂಟದೊಂದಿಗೆ ಹೊರಬಂದ ಪಿಎಂಕೆ 44 ಸ್ಥಾನಗಳನ್ನು ಗೆದ್ದುಕೊಂಡಿದೆ. ಬಿಜೆಪಿಗೆ 8 ಯೂನಿಯನ್ ವಾರ್ಡ್‌ಗಳಲ್ಲಿ ಮಾತ್ರ ಗೆಲುವು ದಕ್ಕಿದೆ.

ಮನಮೋಹನ್ ಸಿಂಗ್ ಅಸ್ವಸ್ಥ: ಏಮ್ಸ್‌ಗೆ ದಾಖಲು

ನವದೆಹಲಿ (ಪಿಟಿಐ): ಅಸ್ವಸ್ಥರಾಗಿರುವ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಬುಧವಾರ ಸಂಜೆ ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಾಗಿದ್ದಾರೆ.



89 ವರ್ಷ ವಯಸ್ಸಿನ ಮನಮೋಹನ್ ಸಿಂಗ್ ಅವರಿಗೆ ಸೋಮವಾರ ಜ್ವರ ಕಾಣಿಸಿಕೊಂಡಿತ್ತು, ಜ್ವರದಿಂದ ಚೇತರಿಸಿಕೊಂಡರೂ ಅತಿಯಾದ ಆಯಾಸ ಅವರನ್ನು ಕಾಡಿತ್ತು, ಸದ್ಯ ಅವರು ದ್ರವ ರೂಪದ ಆಹಾರವನ್ನಷ್ಟೇ ಸೇವಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಯಸ್ಕ ಮಕ್ಕಳ ವೆಚ್ಚ ತಂದೆಯೂ ಭರಿಸಬೇಕು: ದೆಹಲಿ ಹೈಕೋರ್ಟ್

ನವದೆಹಲಿ: ವಿಚ್ಛೇದಿತ ಪತ್ನಿ ದುಡಿಯುತ್ತಿದ್ದಾಳೆ ಮತ್ತು ಮಕ್ಕಳು ವಯಸ್ಕರಾಗಿದ್ದಾರೆ ಎಂಬ ಕಾರಣಕ್ಕೆ, ಪತಿಯು ತನ್ನ ಆರ್ಥಿಕ ಜವಾಬ್ದಾರಿಗಳಿಂದ ನುಣುಚಿಕೊಳ್ಳುವಂತಿಲ್ಲ, ಮಕ್ಕಳ ವೆಚ್ಚವನ್ನು ಭರಿಸುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ವಿಚ್ಛೇದನ ಪ್ರಕರಣವೊಂದರಲ್ಲಿ, ಮಕ್ಕಳ ವಿದ್ಯಾಭ್ಯಾಸ ವೆಚ್ಚಕ್ಕೆ ₹15,000 ನೀಡಲು ಸೂಚಿಸಿದ್ದ ಹೈಕೋರ್ಟ್‌ನ ನಿರ್ದೇಶನವನ್ನು ಮರುಪರಿಶೀಲಿಸುವಂತೆ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್ ಈ ಆದೇಶ ನೀಡಿದೆ.

'ಪತ್ನಿಯು ಕೇಂದ್ರ ಸರ್ಕಾರದ ನೌಕರಳಾಗಿದ್ದು, ಪ್ರತಿ ತಿಂಗಳು ₹70,000 ವೇತನ ಪಡೆಯುತ್ತಾಳೆ. ಹಾಗಾಗಿ ಮಕ್ಕಳ ವಿದ್ಯಾಭ್ಯಾಸದ ಭತ್ಯೆಯನ್ನು ಪಡೆಯುತ್ತಾಳೆ. ನನ್ನ ಮಗ ಈಗ 18 ವರ್ಷದವನಾಗಿದ್ದಾನೆ. ಹೀಗಾಗಿ ಅವನ ವಿದ್ಯಾಭ್ಯಾಸದ ವೆಚ್ಚ ಭರಿಸುವ ಜವಾಬ್ದಾರಿಯಿಂದ ವಿಮುಕ್ತ ಮಾಡಬೇಕು' ಎಂದು ಅರ್ಜಿದಾರರು ಕೋರಿದ್ದರು.

ಪತ್ನಿಯು ಮಕ್ಕಳ ವಿದ್ಯಾಭ್ಯಾಸಕ್ಕೆ ವೆಚ್ಚ ಮಾಡಿದ ನಂತರ, ಆಕೆಯ ಬಳಿ ಏನೂ ಉಳಿಯದೇ ಇರಬಹುದು. ಅಂತಹ ಸಂದರ್ಭದಲ್ಲಿ ಪತಿಯು ಆರ್ಥಿಕ ನೆರವು ನೀಡುವ ಮೂಲಕ ತನ್ನ ಜವಾಬ್ದಾರಿ ನಿರ್ವಹಿಸಬೇಕು ಎಂದು ಸಿಆರ್‌ಪಿಸಿ 125ನೇ ಸೆಕ್ಷನ್ ಹೇಳುತ್ತದೆ. ಮಕ್ಕಳು ಸಮಾಜದಲ್ಲಿ ಉತ್ತಮ ಸ್ಥಾನ ಗಳಿಸುವವರೆಗೆ ಮತ್ತು ಅರ್ಹರಾಗುವವರೆಗೆ ಅವರ ಹಣಕಾಸಿನ ಜವಾಬ್ದಾರಿಯನ್ನು ಪತಿಯೂ ಹೊರಬೇಕು ಎಂದು ಹೈಕೋರ್ಟ್ ಹೇಳಿದೆ.

'ಮಗನಿಗೆ 18 ವರ್ಷವಾಗಿದೆ ಎಂಬ ಒಂದೇ ಕಾರಣಕ್ಕೆ, ಅವನ ವಿದ್ಯಾಭ್ಯಾಸದ ವೆಚ್ಚವನ್ನು ನಿರಾಕರಿಸುವಂತಿಲ್ಲ. ಆ ವೆಚ್ಚದ ಸಂಪೂರ್ಣ ಹೊರೆಯನ್ನು ತಾಯಿಯ ಮೇಲೆಯೇ ಹೇರುವಂತಿಲ್ಲ. ಮಗ ತನ್ನನ್ನು ತಾನು ಸಲಹಿಕೊಳ್ಳುವಷ್ಟು ಆರ್ಥಿಕವಾಗಿ ಸದೃಢನಾಗಿರದೇ ಇರಬಹುದು. ಈ ಕಾರಣದಿಂದ ಮಗನ ವೆಚ್ಚವನ್ನು ತಂದೆ ಭರಿಸಬೇಕು' ಎಂದು ಹೈಕೋರ್ಟ್ ಹೇಳಿದೆ.

ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿದೆ. ಪರಿಹಾರ ಮೊತ್ತವನ್ನು ಭರಿಸುವಂತೆ ಅರ್ಜಿದಾರರಿಗೆ ಸೂಚಿಸಿದೆ.

24 ವಾರಗಳ ಭ್ರೂಣದ ಗರ್ಭಪಾತಕ್ಕೆ ಅನುಮತಿ: ಪರಿಷ್ಕೃತ ನಿಯಮ

ನವದೆಹಲಿ: ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಗರ್ಭಧಾರಣೆ ಮೇಲಿನ ಮಿತಿಯನ್ನು 20ರಿಂದ 24 ವಾರಗಳ ಅವಧಿಗೆ ಹೆಚ್ಚಿಸಿ ಕೇಂದ್ರ ಸರ್ಕಾರ ಪರಿಷ್ಕೃತ ನಿಯಮವನ್ನು ರೂಪಿಸಿದೆ.

ಗರ್ಭಧಾರಣೆಯ ವೈದ್ಯಕೀಯ ತಿದ್ದುಪಡಿ ಕಾಯ್ದೆಯ (2021) ನಿಯಮಗಳ ಪ್ರಕಾರ, ಲೈಂಗಿಕ ದೌರ್ಜನ್ಯ, ಅತ್ಯಾಚಾರ ಪ್ರಕರಣದಲ್ಲಿ ಬದುಕುಳಿದವರು, ಅಪ್ರಾಪ್ತ ವಯಸ್ಕರು ಮತ್ತು ತಮ್ಮ ವೈವಾಹಿಕ ಸ್ಥಿತಿಯಲ್ಲಿ ಬದಲಾವಣೆ ಹೊಂದುತ್ತಿರುವ (ವಿಚ್ಛೇದನ ಪಡೆದವರು, ವಿಧವೆ) ಗರ್ಭಾವಸ್ಥೆಯಲ್ಲಿನ ಮಹಿಳೆಯರು ಹಾಗೂ ದೈಹಿಕ ನ್ಯೂನತೆ ಹೊಂದಿರುವ ಮಹಿಳೆಯರಿಗೆ ಗರ್ಭಧಾರಣೆಯ 24ನೇ ವಾರದವರೆಗೆ ಗರ್ಭಪಾತಕ್ಕೆ ಅವಕಾಶ ನೀಡಲಾಗಿದೆ.

ಈ ಹೊಸ ನಿಯಮವು ಮಾನಸಿಕ ಅಸ್ವಸ್ಥರಾಗಿರುವ ಮಹಿಳೆಯರು, ವಿರೂಪ ಹೊಂದಿರುವ ಭ್ರೂಣದಿಂದ ಗಣನೀಯ ಪ್ರಮಾಣದಲ್ಲಿ ಮಹಿಳೆಗೆ ಅಪಾಯವಿದೆ ಎನ್ನುವ ಸಂದರ್ಭ, ಒಂದು ವೇಳೆ ಜನಿಸಿದ ಮಗುವು ದೈಹಿಕ ಇಲ್ಲವೇ ಮಾನಸಿಕ ವೈಪರೀತ್ಯದಿಂದ ಗಂಭೀರ ಪ್ರಮಾಣದಲ್ಲಿ ವಿಕಲಚೇತನ ಹೊಂದುವ ಸಾಧ್ಯತೆ ಇದ್ದಲ್ಲಿ ಹಾಗೂ ಗರ್ಭಧರಿಸಿದ ಮಹಿಳೆಯ ಜೀವಕ್ಕೆ ಅಪಾಯವಿದೆ ಎನ್ನುವಂಥ ತುರ್ತುಪರಿಸ್ಥಿತಿಗೆ ಅನ್ವಯಿಸುತ್ತದೆ.

ಗರ್ಭಧಾರಣೆಯ ವೈದ್ಯಕೀಯ (ತಿದ್ದುಪಡಿ) ಕಾಯ್ದೆ-2021ಯ ಹೊಸ ನಿಯಮಗಳು ಮಾರ್ಚ್‌ನಲ್ಲಿ ಸಂಸತ್ತಿನಲ್ಲಿ ಅಂಗೀಕಾರವಾಗಿತ್ತು.

ಹಾವು ಕಚ್ಚಿಸಿ ಪತ್ನಿ ಕೊಲೆ, ಪತಿಗೆ ಜೀವಾವಧಿ ಶಿಕ್ಷೆ

ಕೊಲ್ಲಂ(ಕೇರಳ): ಹಾವಿನಿಂದ ಕಚ್ಚಿಸಿ ಪತ್ನಿ ಉತ್ರಾ ಅವರನ್ನು ಕೊಲೆ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕೇರಳದ ಸೆಷನ್ಸ್ ನ್ಯಾಯಾಲಯ ಬುಧವಾರ ಪತಿ ಸೂರಜ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಸೂರಜ್ ಎಸ್. ಕುಮಾರ್ ವಿರುದ್ಧ ಕೊಲೆ, ವಿಷ ಪ್ರಾಶನ, ಸಾಕ್ಷ್ಯ ನಾಶ ಪ್ರಕರಣ ದಾಖಲಾಗಿತ್ತು. ಅಲ್ಲದೆ 25 ವರ್ಷದ ಪತ್ನಿ ಉತ್ರಾ ಅವರನ್ನು ಹಾವಿನಿಂದ ಕಚ್ಚಿಸಿ ಸಾಯಿಸಲು ಯತ್ನಿಸಿದ್ದನ್ನೂ ಕೊಲೆ ಎಂದು ಪರಿಗಣಿಸಿದ ನ್ಯಾಯಾಲಯ, ಆತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಎಂ. ಮನೋಜ್ ಅವರು ಶಿಕ್ಷೆಯ ತೀರ್ಪನ್ನು ಪ್ರಕಟಿಸಿದ್ದಾರೆ. 'ಇದೊಂದು ಅಪರೂಪದ ಪ್ರಕರಣವಾಗಿದೆ. ಅಪರಾಧಿ ವಯಸ್ಸು 28 ವರ್ಷಗಳಾಗಿರುವುದರಿಂದ, ಮರಣದಂಡನೆಯ ಬದಲಿಗೆ ಜೀವಾವಧಿ ಶಿಕ್ಷೆ ನೀಡಲು ತೀರ್ಮಾನಿಸಿದರು' ಎಂದು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ (ಎಸ್‌ಪಿಪಿ) ಜಿ. ಮೋಹನರಾಜ್ ನ್ಯಾಯಾಲಯದ



ಹೊರಗೆ ಸುದ್ದಿಗಾರರಿಗೆ ತಿಳಿಸಿದರು.

ಕೊಲೆ ಆರೋಪ ಸಾಬೀತಾಗಿದ್ದಕ್ಕೆ ಕುಮಾರ್‌ಗೆ ಜೀವಾವಧಿ ಶಿಕ್ಷೆ ಹಾಗೂ ವಿಷ ಉಣಿಸಿದ್ದಕ್ಕೆ 10 ವರ್ಷ ಹಾಗೂ ಸಾಕ್ಷ್ಯ ನಾಶಕ್ಕಾಗಿ 7 ವರ್ಷಗಳ ಕಾಲ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದೆ ಎಂದು ಎಸ್‌ಪಿಪಿ ತಿಳಿಸಿದರು.

ವಿಷಪ್ರಾಶನ ಮತ್ತು ಸಾಕ್ಷ್ಯಾಧಾರಗಳ ನಾಶಕ್ಕಾಗಿ ವಿಧಿಸಿದ ಶಿಕ್ಷೆಯನ್ನು ಮೊದಲು ನೀಡಬೇಕು ಎಂದು ನ್ಯಾಯಾಲಯ ನಿರ್ದಿಷ್ಟವಾಗಿ ನಿರ್ದೇಶಿಸಿದೆ ಎಂದು ಅವರು ಹೇಳಿದರು. ಒಟ್ಟು 17 ವರ್ಷಗಳ ಸೆರೆವಾಸದ ನಂತರ ಆತನ ಜೀವಾವಧಿ ಶಿಕ್ಷೆ ಆರಂಭವಾಗುತ್ತದೆ.

ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಎ.ಕೆ.ಮನೋಜ್ ಅವರು ಈ ಆದೇಶವನ್ನು ದೃಢಪಡಿಸಿದರು. ಅಪರಾಧಿಗೆ ನ್ಯಾಯಾಲಯ ₹ 5.85 ಲಕ್ಷ ದಂಡ ವಿಧಿಸಿದೆ ಎಂದೂ ಅವರು ಹೇಳಿದರು.

ತಮಿಳುನಾಡು: ಭಕ್ತರು ನೀಡುವ ಚಿನ್ನ ನಗದೀಕರಣ ಯೋಜನೆ

ಚೆನ್ನೈ: ತಮಿಳುನಾಡಿನ ವಿವಿಧ ದೇವಸ್ಥಾನಗಳಿಗೆ ಭಕ್ತರು ನೀಡುವ ಚಿನ್ನದ ಸಣ್ಣ ಆಭರಣಗಳ ನಗದೀಕರಣ ಯೋಜನೆಗೆ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮರು ಚಾಲನೆ ನೀಡಿದರು.

ಸರ್ಕಾರದ ನಿಯಂತ್ರಣದಿಂದ ದೇವಸ್ಥಾನಗಳನ್ನು ಮುಕ್ತಗೊಳಿಸಲು ಹೋರಾಡುವುದಾಗಿ ಹಲವು ಸಂಘಟನೆಗಳು ಧ್ವನಿ ಎತ್ತಿರುವಾಗಲೇ, ಭಕ್ತರು ಹರಕೆಯ ಚಿನ್ನದ ಸಣ್ಣ ಆಭರಣಗಳನ್ನು ಗಟ್ಟಿಗಳಾಗಿ ಪರಿವರ್ತಿಸಿ, ನಂತರ ಚಿನ್ನದ ಗಟ್ಟಿಗಳನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟು, ದೇವಸ್ಥಾನಗಳಿಗೆ ಬಡ್ಡಿ ರೂಪದಲ್ಲಿ ಆದಾಯ ತಂದುಕೊಡುವ ಯೋಜನೆ ಇದಾಗಿದೆ.

ಚೆನ್ನೈನ ತಿರುವೇಕಾಡು, ತಿರುಚಿನಾಪಳ್ಳಿಯ ಸಮಯಪುರಂ, ವಿರುಧುನಗರ ಜಿಲ್ಲೆಯ ಇರುಕನಕುಡಿಗಳಲ್ಲಿನ ಮೂರು ದೇವಾಲಯಗಳಲ್ಲಿನ ಚಿನ್ನದ ಸಣ್ಣ ಆಭರಣಗಳ ನಗದೀಕರಣ ಯೋಜನೆಯನ್ನು ಸ್ಟಾಲಿನ್ ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು.

ಸರ್ಕಾರವು ರಾಜ್ಯವನ್ನು ಚೆನ್ನೈ, ಮಧುರೈ, ತಿರುಚಿನಾಪಳ್ಳಿ ಹೀಗೆ 3 ವಲಯಗಳಾಗಿ ವಿಂಗಡಿಸಿದ್ದು, ದೇವಸ್ಥಾನದ ಚಿನ್ನಾಭರಣಗಳ ನಗದೀಕರಣ ಪ್ರಕ್ರಿಯೆಯ ಮೇಲ್ವಿಚಾರಣೆಗೆ ನಿವೃತ್ತ ನ್ಯಾಯಾಧೀಶರನ್ನು ನೇಮಿಸಿದೆ. ಇಡೀ ಪ್ರಕ್ರಿಯೆಯನ್ನು ಸಂಪೂರ್ಣ ವಿಡಿಯೊ ಚಿತ್ರೀಕರಣ ಮಾಡಲಾಗುತ್ತದೆ ಎಂದು ಮಾನವ ಸಂಪನ್ಮೂಲ ಮತ್ತು ದತ್ತಿ ಇಲಾಖೆ ಹೇಳಿಕೆಯಲ್ಲಿ ತಿಳಿಸಿದೆ.

ಭಕ್ತರು ದಾನ ಮಾಡಿದ ಚಿನ್ನದ ಆಭರಣಗಳು ನಿಷ್ಪ್ರಯೋಜಕವಾಗಿವೆ. ಚಿನ್ನದ ಆಭರಣಗಳನ್ನು ನಗದೀಕರಣ ಮಾಡುವ ಮೂಲಕ ದೇವಾಲಯಕ್ಕೆ ಆದಾಯ ತಂದುಕೊಡಲಿದೆ ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ಹೇಳಿದೆ.

ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಅನ್ನು ಮರಳಿ ಹಳಿಗೆ ತರಲು ಹರಸಾಹಸ

ಪ್ರಿಯಾಂಕಾ ಚಾತುರ್ಯ: ವಿಪಕ್ಷ ತಳಮಳ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಅನ್ನು ಮರಳಿ ಹಳಿಗೆ ತರಲು ಹೊರಟಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು, ಈಚಿನ ದಿನಗಳಲ್ಲಿ ಪಕ್ಷವು ಸದಾ ಸುದ್ದಿಯಲ್ಲಿರುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಅದಕ್ಕಿಂತಲೂ ಮುಖ್ಯವಾಗಿ ವಿರೋಧ ಪಕ್ಷಗಳಲ್ಲೂ ನಡುಕ ಹುಟ್ಟಿಸಿದ್ದಾರೆ.

ರಾಜ್ಯದಲ್ಲಿ ಈಚಿನ ವರ್ಷಗಳಲ್ಲಿ ತಲೆದೋರಿದ ಎಲ್ಲಾ ಪ್ರಮುಖ ಘಟನೆಗಳು ಮತ್ತು ಸಮಸ್ಯೆಗಳಲ್ಲೂ ಇತರ ವಿರೋಧ ಪಕ್ಷಗಳನ್ನು ಹಿಂದಿಕ್ಕಿ, ಕಾಂಗ್ರೆಸ್ ಜನರ ಬಳಿಗೆ ತಲುಪುವಂತೆ ಮಾಡುವಲ್ಲಿ ಪ್ರಿಯಾಂಕಾ ಯಶಸ್ವಿಯಾಗಿದ್ದಾರೆ. ಆದರೆ ವಿರೋಧ ಪಕ್ಷಗಳಲ್ಲಿ ಈ ಚುರುಕುತನ ಕಾಣಿಸುತ್ತಿಲ್ಲ. ಬದಲಿಗೆ ಅವು ಕಾಂಗ್ರೆಸ್ ಮತ್ತು ಬಿಜೆಪಿ ಪರಸ್ಪರ ನೆರವಾಗುತ್ತಿವೆ ಎಂದು ಟೀಕಿಸುತ್ತಿವೆ.

2019ರಲ್ಲಿ ಸೋನೆಭದ್ರಾ ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದ 10 ಜನರ ಹತ್ಯೆಯಾದಾಗ, ಮೊದಲು ಅಲ್ಲಿಗೆ ತಲುಪಿದ ರಾಜಕೀಯ ನಾಯಕಿ ಎಂದರೆ ಪ್ರಿಯಾಂಕಾ ಗಾಂಧಿ. 2020ರಲ್ಲಿ ಹಾಥರಸ್‌ನಲ್ಲಿ ದಲಿತ ಬಾಲಕಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ನಂತರ, ಸಂತ್ರಸ್ತ ಕುಟುಂಬವನ್ನು ಮೊದಲು ಭೇಟಿ ಮಾಡಿದ್ದೂ ಪ್ರಿಯಾಂಕಾ ಗಾಂಧಿ. ಎರಡೂ ಘಟನೆಗಳಲ್ಲಿ ಅವರು ಸಂತ್ರಸ್ತ ಕುಟುಂಬವನ್ನು ಭೇಟಿ ಮಾಡದಂತೆ ಉತ್ತರ ಪ್ರದೇಶ ಪೊಲೀಸರು ತಡೆದಿದ್ದರು. ಅವೆಲ್ಲವನ್ನೂ ಮೀರಿ, ಪೊಲೀಸರೊಂದಿಗೆ ಜಟಾಪಟಿಗೆ ಇಳಿದು ಪ್ರಿಯಾಂಕಾ ಸಂತ್ರಸ್ತ ಕುಟುಂಬವನ್ನು ಭೇಟಿ ಮಾಡಿದ್ದರು.

ಈಗಲೂ ಲಖಿಂಪುರ-ಖೇರಿ ರೈತರ ಹತ್ಯೆ ಘಟನೆಯಲ್ಲೂ ಎಲ್ಲಾ ವಿರೋಧ ಪಕ್ಷಗಳನ್ನು ಹಿಂದಿಕ್ಕಿ, ಪ್ರಿಯಾಂಕಾ ಅವರು ಕಾಂಗ್ರೆಸ್ ಅನ್ನು ಮುನ್ನೆಲೆಗೆ ತಂದಿದ್ದಾರೆ. ಹಿಂಸಾಚಾರ ನಡೆದ ರಾತ್ರಿಯೇ ಲಖಿಂಪುರ-ಖೇರಿಗೆ ಭೇಟಿ ನೀಡಲು ಪ್ರಿಯಾಂಕಾ ಹೊರಟಿದ್ದರು. ಆದರೆ, ಲಖನೌನಲ್ಲೇ ಅವರನ್ನು ಪೊಲೀಸರು ತಡೆದರು. ಅದನ್ನು ಮೀರಿ, ಅವರು ಹತ್ಯೆ ನಡೆದ ಸ್ಥಳದವರೆಗೂ ತಲುಪಿದ್ದರು. ಸ್ಥಳದಿಂದ ಕೇವಲ 3 ಕಿ.ಮೀ. ದೂರದಲ್ಲಿದ್ದಾಗ ಪೊಲೀಸರು ಪ್ರಿಯಾಂಕಾ ಅವರನ್ನು ಬಂಧಿಸಿದರು. ತಮ್ಮ ಬಂಧನವನ್ನು ಪ್ರಶ್ನಿಸಿದ ಪ್ರಿಯಾಂಕಾ ಗಾಂಧಿ ಅವರ ವಿಡಿಯೊ ಸಹ ವೈರಲ್ ಆಗಿತ್ತು. ಬಿಡುಗಡೆಯಾದ ತಕ್ಷಣವೇ ಪ್ರಿಯಾಂಕಾ ಗಾಂಧಿ ಅವರು ಮೃತ ರೈತರ ಕುಟುಂಬದವರನ್ನು ಭೇಟಿಯಾದರು.

ಆದರೆ ಬೇರೆ ಯಾವುದೇ ವಿರೋಧ ಪಕ್ಷವು ಸಂತ್ರಸ್ತ ಕುಟುಂಬಗಳನ್ನು ಭೇಟಿ ಮಾಡಲು ಧೈರ್ಯ ತೋರಲಿಲ್ಲ. ಲಖಿಂಪುರ-ಖೇರಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ ಎಂದು ಪೊಲೀಸರು ನೋಟಿಸ್ ನೀಡಿದ ಕಾರಣ, ಬಿಎಸ್‌ಪಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಮಿಶ್ರಾ ಅವರು ಲಖಿಂಪುರ-ಖೇರಿ ಭೇಟಿಯನ್ನೇ ರದ್ದುಪಡಿಸಿದರು. ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ತಮ್ಮ ಮನೆಯಿಂದ ಹೊರಬರಲೂ ಸಾಧ್ಯವಾಗಲಿಲ್ಲ.

ಆದರೆ ಪ್ರಿಯಾಂಕಾ ಅವರು ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ರಾಜೀನಾಮೆಗೆ ಒತ್ತಾಯಿಸಿ ಲಖನೌನಲ್ಲಿ ಮೌನವ್ರತ ಆಚರಿಸಿದರು. ಮೃತ ರೈತರ ಅಂತಿಮ ಸಂಸ್ಕಾರದ ವೇಳೆಯೂ ಅವರ ಕುಟುಂದ ಜತೆಯಲ್ಲಿದ್ದರು.



ಲಖಿಂಪುರಖೇರಿ ರೈತರ ಹತ್ಯೆಯಲ್ಲಿ ಮೃತಪಟ್ಟ ರೈತರ ಅಂತಿಮ ಪ್ರಾರ್ಥನೆಯಲ್ಲಿ ಭಾಗಿಯಾಗಿದ್ದ ಪ್ರಿಯಾಂಕಾ ಗಾಂಧಿ ಅವರು, ಘಟನೆಯಲ್ಲಿ ಗಾಯಗೊಂಡ ರೈತನೊಂದಿಗೆ ಮಾತನಾಡಿದರು –ಪಿಟಿಐ ಚಿತ್ರ

ಬಿಜೆಪಿಗೆ ಅನುಕೂಲದ ಆರೋಪ

ಪ್ರಿಯಾಂಕಾ ಗಾಂಧಿ ಮತ್ತು ಕಾಂಗ್ರೆಸ್ ಹೆಚ್ಚು ಸುದ್ದಿಯಲ್ಲಿರುವಂತೆ ಬಿಜೆಪಿ ನೋಡಿಕೊಳ್ಳುತ್ತಿದೆ. ಈ ಮೂಲಕ ಬಿಜೆಪಿ ವಿರೋಧ ಮತಗಳು ಹಲವು ಪಕ್ಷಗಳಲ್ಲಿ ಹಂಚಿಹೋಗುವಂತೆ ಬಿಜೆಪಿ ತಂತ್ರ ರೂಪಿಸುತ್ತಿದೆ. ಅಂತಿಮವಾಗಿ ಇದರಿಂದ ಬಿಜೆಪಿಗೇ ಅನುಕೂಲವಾಗುತ್ತದೆ ಎಂದು ಸಮಾಜವಾದಿ ಪಕ್ಷದ ಹಲವು ನಾಯಕರು ಆರೋಪಿಸಿದ್ದಾರೆ.

ಆದರೆ ಇದನ್ನು ಕಾಂಗ್ರೆಸ್ ನಿರಾಕರಿಸಿದೆ. 'ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ವಿಚಾರದಲ್ಲಿ ಪ್ರಿಯಾಂಕಾ ಗಾಂಧಿ ಅವರು ಕಾಂಗ್ರೆಸ್ ಅನ್ನು ಮುನ್ನೆಲೆಗೆ ತಂದಿದ್ದಾರೆ. ಇದನ್ನು ನೋಡಿ ಬೇರೆ ವಿರೋಧ ಪಕ್ಷಗಳಲ್ಲಿ ತಳಮಳ ಶುರುವಾಗಿದೆ' ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ಹೇಳಿದ್ದಾರೆ.

ಬುಧವಾರ 2 ದಶಲಕ್ಷ ಟನ್ ಸಾಗಣೆ: ಜೋಶಿ ಮಾಹಿತಿ

'ಕಲ್ಲಿದ್ದಲು ಪೂರೈಕೆ ಪ್ರಮಾಣ ಹೆಚ್ಚಳ'

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲಿನ ಪೂರೈಕೆ ಪ್ರಮಾಣವನ್ನು ಹೆಚ್ಚಿಸಲಾಗಿದ್ದು, ಬುಧವಾರ 2 ದಶಲಕ್ಷ ಟನ್‌ಗಿಂತಲೂ ಅಧಿಕ ಪ್ರಮಾಣದ ಕಲ್ಲಿದ್ದಲು ಪೂರೈಸಲಾಗಿದೆ ಎಂದು ಕೇಂದ್ರದ ಕಲ್ಲಿದ್ದಲು ಮತ್ತು ಗಣಿ ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರಿ ಸ್ವಾಮ್ಯದ ಕೋಲ್ ಇಂಡಿಯಾ ಲಿಮಿಟೆಡ್‌ನ ಗಣಿಗಳೂ ಸೇರಿದಂತೆ ವಿವಿಧ ಮೂಲಗಳಿಂದ ಕಲ್ಲಿದ್ದಲು ಪೂರೈಸಲು ಕ್ರಮ ಕೈಗೊಳ್ಳಲಾಗಿದ್ದು, ಪೂರೈಕೆ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸಿ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಅಗತ್ಯ ಪ್ರಮಾಣದ ಸಂಗ್ರಹಕ್ಕೆ ಆದ್ಯತೆ ನೀಡಲಾಗಿದೆ ಎಂದು ಅವರು ಟ್ವೀಟ್ ಮೂಲಕ ತಿಳಿಸಿದ್ದಾರೆ.

ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಳೆದ ಎರಡು ದಿನಗಳಿಂದ ನಿತ್ಯವೂ 1.62 ಲಕ್ಷ ಟನ್ ಕಲ್ಲಿದ್ದಲು ಪೂರೈಸಲಾಗಿದ್ದು, ಮಾಸಿಕ ಸರಾಸರಿ 1.75 ಲಕ್ಷ ಟನ್‌ನಷ್ಟು ಪೂರೈಕೆ ಪ್ರಮಾಣ ಕಾಯ್ದುಕೊಳ್ಳಲಾಗಿದೆ ಎಂದು ಕೋಲ್ ಇಂಡಿಯಾದ ಅಧಿಕಾರಿಗಳು ಮಾಹಿತಿ ನೀಡಿದ್ದಾಗಿ ಅವರು ಹೇಳಿದ್ದಾರೆ.

ವಿದ್ಯುತ್ ಸ್ಥಾವರಗಳ ಅಗತ್ಯಕ್ಕೆ ಅನುಗುಣವಾಗಿ ಕಲ್ಲಿದ್ದಲು ಪೂರೈಸುವ ಭರವಸೆ ನೀಡಿರುವ ಅವರು, ಮಳೆಗಾಲ ಅಂತ್ಯಗೊಳ್ಳುತ್ತಿದ್ದಂತೆಯೇ ಕಲ್ಲಿದ್ದಲು ಉತ್ಪಾದನೆ ಪ್ರಮಾಣ ಹೆಚ್ಚಲಿದೆ. ಪೂರೈಕೆ ಪ್ರಮಾಣವೂ ದ್ವಿಗುಣಗೊಳ್ಳುವ ಮೂಲಕ ಕೊರತೆ ನೀಗಲಿದ್ದು, ವಿದ್ಯುತ್ ಉತ್ಪಾದನೆ ಸರಾಗವಾಗಲಿದೆ ಎಂಬ ಆಶಾಭಾವ ವ್ಯಕ್ತಪಡಿಸಿದ್ದಾರೆ.

ಇದೇ ತಿಂಗಳಲ್ಲಿ ಪೂರೈಕೆ ಸುಧಾರಣೆ?

ನವದೆಹಲಿ (ಪಿಟಿಐ): ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲಿನ ಪೂರೈಕೆ ಈ ತಿಂಗಳೊಳಗೆ ಸುಧಾರಿಸುವ ಸಾಧ್ಯತೆ ಇದೆ ಎಂದು ಬುಧವಾರ ಐಸಿಆರ್‌ಎ ತಿಳಿಸಿದೆ. 'ಕಲ್ಲಿದ್ದಲು ಉತ್ಪಾದನೆ ಮತ್ತು ಪೂರೈಕೆ ಮಟ್ಟವೂ ಶೀಘ್ರವೇ ವೃದ್ಧಿಸಲ್ಲಿದ್ದು, ನವೆಂಬರ್ ತಿಂಗಳಿಂದ ಅಗತ್ಯವಾದ ಇಂಧನ ಬೇಡಿಕೆಯ ಬಗ್ಗೆ ಸಮನ್ವಯತೆ ಸಾಧಿಸಲಾಗುವುದು' ಎಂದು ಐಸಿಆರ್‌ಎ ಹಿರಿಯ ಉಪಾಧ್ಯಕ್ಷ ಮತ್ತು ತಂಡದ ಮುಖ್ಯಸ್ಥ ಸವ್ಯಸಾಚಿ ಮಜುಂದಾರ್ ಹೇಳಿದ್ದಾರೆ.

ಕಳೆದ ಎರಡು ದಿನಗಳಲ್ಲಿ ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ತನ್ನ ಉತ್ಪಾದನೆಯನ್ನು ದಿನಕ್ಕೆ 1.6 ದಶಲಕ್ಷ ಟನ್‌ಗಳಷ್ಟು ಹೆಚ್ಚಿಸಿದ್ದು, ದಸರಾ ರಜೆ ಮುಗಿಸಿ ಕಾರ್ಮಿಕರು ಹಿಂದಿರುಗಿದ ನಂತರ ಉತ್ಪಾದನೆಯನ್ನು ಮತ್ತಷ್ಟು ಹೆಚ್ಚಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಲ್ಲಿದ್ದಲು ಬಿಕ್ಕಟ್ಟು ಇಲ್ಲ

ದೇಶದಲ್ಲಿ ಕಲ್ಲಿದ್ದಲು ಕೊರತೆಯಾಗಿದೆ ಎಂಬ ವರದಿಗಳು ಆಧಾರರಹಿತ ಎಂದಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ದೇಶದಲ್ಲಿ ಕಲ್ಲಿದ್ದಲು ಸಂಗ್ರಹ ಸಾಕಷ್ಟಿದೆ ಎಂದು ಮಂಗಳವಾರ ಸ್ಪಷ್ಟಪಡಿಸಿದ್ದಾರೆ.

ಸಂವಾದ ಕಾರ್ಯಕ್ರಮದಲ್ಲಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ದೇಶದಲ್ಲಿ ಕಲ್ಲಿದ್ದಲು ದಾಸ್ತಾನು ಕಡಿಮೆಯಾಗಿಲ್ಲ. ಬೇಡಿಕೆಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದು ಹೇಳಿದ್ದಾರೆ.

ಕಲ್ಲಿದ್ದಲಿನ ಕೊರತೆಯಾಗುವ ಸಾಧ್ಯತೆ ಬಗ್ಗೆ ಹರಿದಾಡುತ್ತಿರುವ ಮಾಹಿತಿಯು ಸಂಪೂರ್ಣ ಆಧಾರರಹಿತ ಎಂದು ಇಂಧನ ಸಚಿವ ಆರ್.ಕೆ.ಸಿಂಗ್ ಅವರು ಎರಡು ದಿನಗಳ ಹಿಂದಷ್ಟೇ ಸ್ಪಷ್ಟಪಡಿಸಿದ್ದಾರೆ. ಯಾವುದರ ಕೊರತೆಯೂ ಇಲ್ಲ. ಸಚಿವರ ಹೇಳಿಕೆಯಂತೆ, ಪ್ರತಿಯೊಂದು ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಮುಂದಿನ ನಾಲ್ಕು ದಿನಗಳಿಗೆ ಅಗತ್ಯವಾದಷ್ಟು ದಾಸ್ತಾನು ಲಭ್ಯವಿದೆ. ಪೂರೈಕೆ ಕೊಂಡಿ ಕಡಿತವಾಗಿಲ್ಲ ಎಂದು ಹೇಳಿದರು.

'ಪಿಎಂ ಗತಿ ಶಕ್ತಿ' ಯೋಜನೆಗೆ ಪ್ರಧಾನಿ ಚಾಲನೆ: 25 ವರ್ಷಗಳಲ್ಲಿ ₹100 ಲಕ್ಷ ಕೋಟಿ ಹೂಡಿಕೆ ಗುರಿ

ಮೂಲಸೌಕರ್ಯ 'ಗತಿ' ಬದಲಿಸುವ ಯೋಜನೆ

ನವದೆಹಲಿ (ಪಿಟಿಐ): ಬಹು ಮಾದರಿ ಸಂಪರ್ಕ ಏರ್ಪಡಿಸುವ ₹100 ಲಕ್ಷ ಕೋಟಿ ಮೌಲ್ಯದ 'ಪಿಎಂ ಗತಿ ಶಕ್ತಿ' ರಾಷ್ಟ್ರೀಯ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಚಾಲನೆ ಕೊಟ್ಟರು. ಸಾಗಣೆ ವೆಚ್ಚ ಕಡಿಮೆ ಮಾಡಿ, ಆರ್ಥಿಕತೆ ಉತ್ತೇಜಿಸುವ ಹಾಗೂ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಗುರಿಯನ್ನು ಇದು ಹೊಂದಿದೆ.

ಈ ಯೋಜನೆಯು ಎಲ್ಲ ಸಂಬಂಧಿತ ಇಲಾಖೆಗಳನ್ನು ಒಂದೇ ವೇದಿಕೆಯಲ್ಲಿ ಸಂಪರ್ಕಿಸುವ ಮೂಲಕ ಯೋಜನೆಗಳಿಗೆ ಹೆಚ್ಚಿನ ಶಕ್ತಿ ಮತ್ತು ವೇಗವನ್ನು ನೀಡುವ ಗುರಿ ಹೊಂದಿದೆ. ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳು ಮತ್ತು ರಾಜ್ಯ ಸರ್ಕಾರಗಳ ಮೂಲಸೌಕರ್ಯ ಯೋಜನೆಗಳನ್ನು ಒಂದೇ ದೃಷ್ಟಿಕೋನದಿಂದ ವಿನ್ಯಾಸಗೊಳಿಸಿ ಕಾರ್ಯಗತಗೊಳಿಸಲಾಗುವುದು ಎಂದು ಪ್ರಧಾನಿ ಹೇಳಿದರು.

'ಈ ಹಿಂದೆ ತೆರಿಗೆದಾರರ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಬಳಸುವಾಗ ಇಲಾಖೆಗಳ ನಡುವೆ ಯಾವುದೇ ಸಮನ್ವಯ ಇರಲಿಲ್ಲ. ಗುಣಮಟ್ಟದ ಮೂಲಸೌಕರ್ಯವಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ ಮತ್ತು ಸರ್ಕಾರ ಈಗ ಅದನ್ನು ಸಮಗ್ರ ರೀತಿಯಲ್ಲಿ ಅಭಿವೃದ್ಧಿಪಡಿಸಲು ತೀರ್ಮಾನಿಸಿದೆ' ಎಂದು ಅವರು ಹೇಳಿದರು.

ರಸ್ತೆ, ರೈಲ್ವೆ, ವಿಮಾನಯಾನ, ಕೃಷಿ ಹೀಗೆ ಸರ್ಕಾರದ ವಿವಿಧ ಕ್ಷೇತ್ರಗಳ ಯೋಜನೆಗಳನ್ನು ಸಂಘಟಿತ ರೀತಿಯಲ್ಲಿ ಅಭಿವೃದ್ಧಿಪಡಿಸಲು ಗತಿ ಶಕ್ತಿ ಯೋಜನೆಯು ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುತ್ತದೆ ಎಂದರು. ಗತಿಶಕ್ತಿ ರಾಷ್ಟ್ರೀಯ ಯೋಜನೆ ಸರಿಯಾದ ಮಾಹಿತಿ ಮತ್ತು ನಿರ್ದೇಶನವನ್ನು ನೀಡುತ್ತದೆ. ಇದರಿಂದ ನಿಗದಿತ ಸಮಯದ ಚೌಕಟ್ಟಿನೊಳಗೆ ಸರ್ಕಾರಿ ಯೋಜನೆಗಳು ಪೂರ್ಣಗೊಳ್ಳುತ್ತವೆ ಎಂದರು.

ಭಾರತದಲ್ಲಿ ಜಿಡಿಪಿಯ ಶೇ 13ರಷ್ಟು ವೆಚ್ಚವು ಸಾಗಣೆಗೆ ಹೋಗುತ್ತಿದೆ. ಈ ಯೋಜನೆಯು ಸಾಗಣೆ ವೆಚ್ಚದ ಜೊತೆಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಸಮಯವನ್ನು ಕಡಿತಗೊಳಿಸುವ ಗುರಿ ಹೊಂದಿದೆ ಎಂದ ಅವರು, ಇದು ಹೂಡಿಕೆ ತಾಣವಾಗಲು ಭಾರತಕ್ಕೆ ಉತ್ತೇಜನ ನೀಡುತ್ತದೆ ಎಂದು ಅಭಿಪ್ರಾಯಪಟ್ಟರು.



ಪಿಎಂ ಗತಿಶಕ್ತಿ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ಪ್ರಗತಿ ಮೈದಾನದಲ್ಲಿ ಬುಧವಾರ ಚಾಲನೆ ನೀಡಿದರು–ಪಿಟಿಐ ಚಿತ್ರ

> 'ಕೆಲಸ ಪ್ರಗತಿಯಲ್ಲಿದೆ' ಎಂಬ ಫಲಕವು ನಂಬಿಕೆ ಕೊರತೆಯ ಸಂಕೇತ. ಕಾಲಮಿತಿಗಿಂತ ಮುಂಚೆ ಕಾಮಗಾರಿ ಪೂರ್ಣಗೊಳಿಸುವ ಯತ್ನ ನಡೆಯುತ್ತಿದೆ
>
> **ನರೇಂದ್ರ ಮೋದಿ,** ಪ್ರಧಾನಿ

> ಗತಿಶಕ್ತಿಯು ಆಡಳಿತದಲ್ಲಿ ಮಾದರಿ ಬದಲಾವಣೆಯನ್ನು ಸೂಚಿಸುವ ಕೆಲವು ವಿಶಿಷ್ಟ ಲಕ್ಷಣಗಳನ್ನು ಒಳಗೊಂಡಿದೆ
>
> **ಕುಮಾರಮಂಗಳಂ ಬಿರ್ಲಾ,** ಉದ್ಯಮಿ

'ಹಿಂದೆಂದಿಗಿಂತ ವೇಗ'

ದೇಶದ 70 ವರ್ಷಗಳ ಇತಿಹಾಸದಲ್ಲಿ, ಈಗಿನ ಸರ್ಕಾರದ ಅವಧಿಯಲ್ಲಿ ಆಗಿರುವ ಕಾಮಗಾರಿಗಳ ವೇಗ ಮತ್ತು ಪ್ರಮಾಣವನ್ನು ಎಂದೂ ನೋಡಿಲ್ಲ ಎಂದು ಪ್ರಧಾನಿ ಹೇಳಿದರು. ಮೊದಲ ಅಂತರರಾಜ್ಯ ನೈಸರ್ಗಿಕ ಅನಿಲ ಪೈಪ್‌ಲೈನ್ ಅನ್ನು 1987ರಲ್ಲಿ ಆರಂಭಿಸಲಾಯಿತು. ಅಂದಿನಿಂದ 2014ರವರೆಗೆ 15,000 ಕಿ.ಮೀ. ನೈಸರ್ಗಿಕ ಅನಿಲ ಪೈಪ್‌ಲೈನ್ ನಿರ್ಮಿಸಲಾಗಿದೆ. ಪ್ರಸ್ತುತ, 16,000 ಕಿ.ಮೀ.ಗಿಂತ ಹೆಚ್ಚು ಹೊಸ ಗ್ಯಾಸ್ ಪೈಪ್‌ಲೈನ್ ನಿರ್ಮಿಸಲಾಗುತ್ತಿದೆ ಎಂದು ಪ್ರಧಾನಿ ಉದಾಹರಣೆ ಕೊಟ್ಟರು.

'27 ವರ್ಷಗಳಲ್ಲಿ ಏನು ಮಾಡಲಾಗಿದೆಯೋ, ನಾವು ಅದನ್ನು ಅರ್ಧಕ್ಕಿಂತ ಕಡಿಮೆ ಸಮಯದಲ್ಲಿ ಮಾಡುತ್ತಿದ್ದೇವೆ' ಎಂದು ಹೇಳಿದರು. 2014ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಐದು ವರ್ಷಗಳ ಮುನ್ನ, 1,900 ಕಿ.ಮೀ. ರೈಲು ಮಾರ್ಗವನ್ನು ದ್ವಿಪಥ ಮಾಡಲಾಗಿತ್ತು. ಕಳೆದ 7 ವರ್ಷಗಳಲ್ಲಿ 9,000 ಕಿ.ಮೀ. ರೈಲು ಮಾರ್ಗ ದ್ವಿಪಥವಾಗಿ ಪರಿವರ್ತನೆಯಾಗಿದೆ ಎಂದರು.

ಅದೇ ರೀತಿ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಐದು ವರ್ಷಗಳ ಮುನ್ನ 3,000 ಕಿ.ಮೀ. ರೈಲು ಮಾರ್ಗ ವಿದ್ಯುದೀಕರಣ ಮಾಡಲಾಗಿತ್ತು. ಕಳೆದ 7 ವರ್ಷಗಳಲ್ಲಿ 24,000 ಕಿ.ಮೀ. ರೈಲು ಮಾರ್ಗ ವಿದ್ಯುದೀಕರಣ ಮಾಡಲಾಗಿದೆ. 2015ರಲ್ಲಿ 250 ಕಿ.ಮೀ. ಇದ್ದ ಮೆಟ್ರೋ ರೈಲು ಜಾಲವು ಈಗ 700 ಕಿ.ಮೀ.ಗಳಿಗೆ ವಿಸ್ತರಿಸಲ್ಪಟ್ಟಿದ್ದು, ಇನ್ನೂ 1,000 ಕಿ.ಮೀ.ಗಳಷ್ಟು ಕೆಲಸ ನಡೆಯುತ್ತಿದೆ ಎಂದರು.

ಸಂಕ್ಷಿಪ್ತ ಸುದ್ದಿ

ಪುಲ್ವಾಮ: ಜೆಇಎಂ ಉಗ್ರ ಸಂಘಟನೆಯ ಕಮಾಂಡರ್ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯ ತ್ರಾಲ್ ಪ್ರದೇಶದಲ್ಲಿ ಬುಧವಾರ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಪಾಕಿಸ್ತಾನ ಮೂಲದ ಜೈಶ್- ಎ- ಮೊಹಮ್ಮದ್‌ನ (ಜೆಇಎಂ) ಉಗ್ರ ಸಂಘಟನೆಯ ಉನ್ನತ ಕಮಾಂಡರ್ ಶಾಮ್ ಸೋಫಿ ಹತ್ಯೆಗೀಡಾಗಿದ್ದಾನೆ.

'ತ್ರಾಲ್‌ನ ವಾಘಡ್‌ನ ತಿಲ್ವಾನಿ ಮೊಹಲ್ಲಾದಲ್ಲಿ ಸೇನೆಯ 42 ರಾಷ್ಟ್ರೀಯ ರೈಫಲ್ಸ್, ಸಿಆರ್‌ಪಿಎಫ್ ಅರೆಸೇನಾ ಪಡೆ ಹಾಗೂ ಜಮ್ಮು– ಕಾಶ್ಮೀರದ ಪೊಲೀಸರು ಕೈಗೊಂಡಿದ್ದ ಶೋಧ ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿ ನಡೆದಿತ್ತು. ಈ ವೇಳೆ ಉಗ್ರ ಹತ್ಯೆಗೀಡಾಗಿದ್ದಾನೆ' ಎಂದು ವರದಿಗಳು ತಿಳಿಸಿವೆ. 'ಜೆಇಎಂನ ಕಮಾಂಡರ್‌ನನ್ನು ಎನ್‌ಕೌಂಟರ್‌ನಲ್ಲಿ ಕೊಲ್ಲಲಾಗಿದೆ' ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಟ್ವೀಟ್ ಮಾಡಿದ್ದಾರೆ.

2019ರಿಂದ ಸಕ್ರಿಯವಾಗಿದ್ದ ಸೋಫಿ, ಈ ಪ್ರದೇಶದಲ್ಲಿ ಜೆಇಎಂ ಅನ್ನು ಪುನರುಜ್ಜೀವನಗೊಳಿಸುವಲ್ಲಿ ಕಾರ್ಯನಿರತನಾಗಿದ್ದ.

ಎನ್‌ಐಎ ದಾಳಿ: ಭಯೋತ್ಪಾದಕರ ಸಹಚರರ ಬಂಧನ

ಶ್ರೀನಗರ (ಪಿಟಿಐ): ವಿವಿಧ ಭಯೋತ್ಪಾದನಾ ಸಂಘಟನೆಗಳೊಂದಿಗೆ ನಂಟು ಹೊಂದಿದ್ದ ನಾಲ್ಕು ಮಂದಿಯನ್ನು ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಬಂಧಿಸಿದೆ.

'ಕೇಂದ್ರಾಡಳಿತ ಪ್ರದೇಶ ಮತ್ತು ದೇಶದ ಇತರ ಪ್ರಮುಖ ನಗರಗಳಲ್ಲಿ ದಾಳಿ ನಡೆಸಲು ವಿವಿಧ ಭಯೋತ್ಪಾದಕ ಗುಂಪುಗಳು ನಡೆಸಿದ ಸಂಚನ್ನು ಪತ್ತೆಹಚ್ಚಿದ್ದ ಎನ್‌ಐಎ, ಅ. 10ರಂದು ಪ್ರಕರಣವನ್ನು ದಾಖಲಿಸಿತ್ತು. ನಂತರ ಜಮ್ಮು ಮತ್ತು ಕಾಶ್ಮೀರದ 16 ಸ್ಥಳಗಳಲ್ಲಿ ಎನ್‌ಐಎ ಶೋಧ ನಡೆಸಿದಾಗ ಭಯೋತ್ಪಾದಕರ ನಾಲ್ವರು ಸಹಚರರನ್ನು ಬಂಧಿಸಿದೆ' ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಬಂಧಿತರನ್ನು ವಾಸೀಂ ಅಹ್ಮದ್ ಸೋಫಿ, ತಾರಿಖ್ ಅಹ್ಮದ್ ದರ್, ಬಿಲಾಲ್ ಅಹ್ಮದ್ ಮಿರ್ ಅಲಿಯಾಸ್ 'ಬಿಲಾಲ್ ಫಾಫು' ಎಂದು ಗುರುತಿಸಲಾಗಿದೆ. ಎಂದು ಎನ್‌ಐಎ ತಿಳಿಸಿದೆ.

'ಬ್ರಿಟನ್ ಪ್ರಯಾಣ ಕ್ವಾರಂಟೈನ್ ವಿನಾಯಿತಿ'

ನವದೆಹಲಿ (ಪಿಟಿಐ): ಎರಡು ಡೋಸ್ ಕೋವಿಶೀಲ್ಡ್ ಲಸಿಕೆ ಪಡೆದ ಭಾರತದ ಪ್ರಯಾಣಿಕರಿಗೆ ಕಡ್ಡಾಯ ಕ್ವಾರಂಟೈನ್‌ನಿಂದ ಬ್ರಿಟನ್ ಸರ್ಕಾರ ವಿನಾಯಿತಿ ನೀಡಿದ ಬೆನ್ನಲ್ಲೇ ಕೇಂದ್ರ ಸರ್ಕಾರ, ಬ್ರಿಟನ್‌ನಿಂದ ಬರುವವರಿಗೆ ಕೋವಿಡ್ 19ಕ್ಕೆ ಸಂಬಂಧಿಸಿ ವಿಧಿಸಿದ್ದ ಹೆಚ್ಚುವರಿ ತಪಾಸಣೆ ಮತ್ತು ಪ್ರಯಾಣ ನಿರ್ಬಂಧಗಳನ್ನು ಹಿಂಪಡೆದಿದೆ.

ಇದೇ ತಿಂಗಳ 11ರಂದು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರದಲ್ಲಿ ಆರೋಗ್ಯ ಸಚಿವಾಲಯವು, ಸದ್ಯದ ಸನ್ನಿವೇಶ ಆಧರಿಸಿ, ಪರಿಷ್ಕೃತ ಮಾರ್ಗಸೂಚಿಗಳನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಹೇಳಿದೆ.

ಲಖಿಂಪುರ ಹಿಂಸೆ: ನಿರ್ಮಲಾ ಸೀತಾರಾಮನ್ ಖಂಡನೆ



ನಿರ್ಮಲಾ ಸೀತಾರಾಮನ್

ಬೋಸ್ಟನ್ (ಪಿಟಿಐ): ನಾಲ್ವರು ರೈತರ ಸಾವಿಗೆ ಕಾರಣವಾದ, ಉತ್ತರ ಪ್ರದೇಶದ ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣವನ್ನು ಖಂಡಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಇಂಥ ಘಟನೆಗಳು ದೇಶದ ಎಲ್ಲಿಯೇ ನಡೆದರೂ ಅದರ ವಿರುದ್ಧ ದನಿ ಎತ್ತಬೇಕು ಎಂದಿದ್ದಾರೆ.

ಹಾರ್ವರ್ಡ್ ಕೆನಡಿ ಸ್ಕೂಲ್‌ನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದರು.

ಈ ಪ್ರಕರಣದ ಬಗ್ಗೆ ಪ್ರಧಾನಿಯಾಗಲೀ ಹಿರಿಯ ಸಚಿವರಾಗಲೀ ಚಕಾರ ಎತ್ತಿಲ್ಲವೇಕೆ? ಈ ವಿಷಯವಾಗಿ ಕೇಳಿದಾಗಲೆಲ್ಲ ಸರ್ಕಾರವು ರಕ್ಷಣಾತ್ಮಕ ಪ್ರತಿಕ್ರಿಯೆ ನೀಡುತ್ತಿರುವುದೇಕೆ ಎಂಬ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, 'ಈ ಘಟನೆಯು ಖಂಡಿತ ಖಂಡನಾರ್ಹವಾದುದು. ನಾವೆಲ್ಲರೂ ಅದನ್ನೇ ಹೇಳುತ್ತಿದ್ದೇವೆ. ಈ ಸ್ವರೂಪದ ಘಟನೆಗಳು ದೇಶದ ಇತರ ಭಾಗಗಳಲ್ಲಿಯೂ ನಡೆಯುತ್ತಿವೆ. ಇಂತಹ ಘಟನೆಗಳು ನಡೆದಾಗ ಅವುಗಳನ್ನು ಖಂಡಿಸಬೇಕೇ ಹೊರತು ಅವರವರ ಅನುಕೂಲಕ್ಕೆ ಬೇಕಾದಾಗ, ಉತ್ತರ ಪ್ರದೇಶದಲ್ಲಿ ಬಿಜೆಪಿ ಸರ್ಕಾರ ಇದೆ ಎಂಬ ಕಾರಣಕ್ಕಾಗಿ ಮಾತ್ರ ಖಂಡಿಸುವುದು ಅಲ್ಲ' ಎಂದರು.

'ಈ ಪ್ರಕರಣದಲ್ಲಿ ಸಚಿವ ಸಂಪುಟದ ನನ್ನ ಸಹೋದ್ಯೋಗಿಯ ಮಗ ಬಹುಶಃ ತೊಂದರೆಯಲ್ಲಿರಬಹುದು. ಘಟನೆಗೆ ಅವರೇ ಕಾರಣ ಎಂದು ಈಗ ನಾವು ಕಲ್ಪಿಸಿಕೊಂಡರೂ ಈ ಬಗ್ಗೆ ತನಿಖಾ ಪ್ರಕ್ರಿಯೆ ಮುಗಿದ ಬಳಿಕವಷ್ಟೇ ಸತ್ಯಾಂಶ ತಿಳಿಯಲಿದೆ' ಎಂದರು.

'ನಾನು ನನ್ನ ಪಕ್ಷವನ್ನಾಗಲೀ ಅಥವಾ ಪ್ರಧಾನಿಯನ್ನಾಗಲೀ ವಹಿಸಿಕೊಂಡು ಮಾತನಾಡುತ್ತಿಲ್ಲ. ನಾನು ದೇಶದ ಪರವಾಗಿ ಮಾತನಾಡುತ್ತಿದ್ದೇನೆ. ಬಡವರ ಪರ ನ್ಯಾಯಕ್ಕಾಗಿ ಮಾತನಾಡುತ್ತಿದ್ದೇನೆ. ಯಾರನ್ನೂ ಅಣಕಿಸುತ್ತಿಲ್ಲ' ಎಂದು ಹೇಳಿದರು.

ಆಶಿಶ್‌ಗೆ ಜಾಮೀನು ನಿರಾಕರಣೆ

ಲಖಿಂಪುರ ಖೇರಿ (ಪಿಟಿಐ): ಲಖಿಂಪುರ ಖೇರಿಯಲ್ಲಿನ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಹಾಗೂ ಅವರ ಸ್ನೇಹಿತ ಆಶಿಶ್ ಪಾಂಡೆಗೆ ಜಾಮೀನು ನೀಡಲು ನ್ಯಾಯಾಲಯ ಬುಧವಾರ ನಿರಾಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಮತ್ತಿಬ್ಬರನ್ನು ಬಂಧಿಸಲಾಗಿದೆ.

ವಿಚಾರಣೆಗೆ ಹಾಜರಾದ ಅಂಕಿತ್ ದಾಸ್, ಲತೀಫ್ ಅಲಿಯಾಸ್ ಕಾಳೆ ಎಂಬುವವರನ್ನು ವಶಕ್ಕೆ ಪಡೆದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು, ನಂತರ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಇಬ್ಬರನ್ನೂ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಹಿರಿಯ ತನಿಖಾಧಿಕಾರಿ ಎಸ್‌ಪಿ ಯಾದವ್ ತಿಳಿಸಿದ್ದಾರೆ.

ಅಂಕಿತ್ ಮತ್ತು ಕಾಳೆ ಇಬ್ಬರೂ ಆಶಿಶ್ ಮಿಶ್ರಾನ ಆಪ್ತ ಸ್ನೇಹಿತರು ಎನ್ನಲಾಗಿದೆ. ಹೆಚ್ಚಿನ ವಿಚಾರಣೆಗಾಗಿ, ಬಂಧಿತರನ್ನು ಪೊಲೀಸ್ ವಶಕ್ಕೆ ಒಪ್ಪಿಸುವ ಸಂಬಂಧದ ತೀರ್ಪನ್ನು ನ್ಯಾಯಾಲಯ ಕಾಯ್ದಿರಿಸಿದೆ.

ಇದರೊಂದಿಗೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಒಟ್ಟು ಆರು ಜನರ ಬಂಧನವಾಗಿದೆ.

'ಕೆಂಪು ಹಾಸಿನ ಬಂಧನ': ಆಶಿಶ್ ಬಂಧನವನ್ನು 'ಕೆಂಪು ಹಾಸಿನ ಬಂಧನ' ಎಂದು ಪರಿಗಣಿಸಬೇಕು ಎಂದು ರೈತ ನಾಯಕ ರಾಕೇಶ್ ಟಿಕಾಯತ್ ಹೇಳಿದ್ದಾರೆ. ತನಿಖೆ ಸಂದರ್ಭದಲ್ಲಿ ಆಶಿಶ್‌ಗೆ ಪೊಲೀಸರು ಹೂಗುಚ್ಛ ನೀಡಿದ್ದಾರೆ ಎಂದೂ ಆರೋಪಿಸಿದ್ದಾರೆ. ಆಶಿಶ್ ತಂದೆ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ವಜಾ ಮಾಡುವತನಕ ಹೋರಾಟ ಮುಂದುವರಿಯಲಿದೆ ಎಂದಿದ್ದಾರೆ.

ಆಶಿಶ್ ಸ್ನೇಹಿತನ ವಿಚಾರಣೆ

ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರ ಸ್ನೇಹಿತ ಅಂಕಿತ್ ದಾಸ್ ಅವರು ಇಲ್ಲಿನ ಅಪರಾಧ ವಿಭಾಗದ ಕಚೇರಿಯಲ್ಲಿ ಎಸ್‌ಐಟಿ ಎದುರು ಬುಧವಾರ ಹಾಜರಾದರು. ದಾಸ್ ಅವರಿಗೆ ಸಮನ್ಸ್ ನೀಡಲಾಗಿತ್ತು.

ವಕೀಲರ ತಂಡದೊಂದಿಗೆ ಅವರು ವಿಚಾರಣೆಗೆ ಹಾಜರಾದರು. ದಾಸ್ ಮತ್ತು ಲತೀಫ್ ಎಂಬ ವ್ಯಕ್ತಿಯು ನ್ಯಾಯಾಲಯದಲ್ಲಿ ಶರಣಾಗತಿಗಾಗಿ ಮಂಗಳವಾರ ಅರ್ಜಿ ಸಲ್ಲಿಸಿದ್ದರು.

ಸಂತ್ರಸ್ತರ ಭೇಟಿ ಮಾಡಿದ ಸಚಿವ: ಉತ್ತರ ಪ್ರದೇಶ ಕಾನೂನು ಸಚಿವ ಬ್ರಿಜೇಶ್ ಪಾಠಕ್ ಅವರು ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದಲ್ಲಿ ಮೃತಪಟ್ಟವರ ಸಂಬಂಧಿಕರನ್ನು ಬುಧವಾರ ಭೇಟಿಯಾದರು. ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ವಾಹನ ಚಾಲಕ ಮತ್ತು ಬಿಜೆಪಿ ಕಾರ್ಯಕರ್ತ ಘಟನೆಯಲ್ಲಿ ಮೃತಪಟ್ಟಿದ್ದರು.

ಲಖಿಂಪುರ ನಗರದ ಶಿವಪುರಿ ಪ್ರದೇಶದಲ್ಲಿರುವ ಬಿಜೆಪಿ ಕಾರ್ಯಕರ್ತ ಶುಭಂ ಮಿಶ್ರಾ ಅವರ ಕುಟುಂಬದವರು ಮತ್ತು ಪರ್ಸೆರಾ ಖುರ್ದ್ ಗ್ರಾಮದಲ್ಲಿರುವ ಚಾಲಕ ಹರಿಓಂ ಮಿಶ್ರಾ ಅವರ ಕುಟುಂಬದವರನ್ನು ಭೇಟಿ ಮಾಡಿದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಿಜೆಪಿ ಕಾರ್ಯಕರ್ತರಾದ ಶುಭಂ ಮಿಶ್ರಾ, ಶ್ಯಾಮ್ ಸುಂದರ್ ಮತ್ತು ಹರಿಓಂ ಮಿಶ್ರಾ ಅವರನ್ನು ರೈತರು ಥಳಿಸಿದ್ದರು ಎಂದು ಆರೋಪಿಸಲಾಗಿದೆ.

ಸಚಿವ ಮಿಶ್ರಾ ವಜಾಕ್ಕೆ ಕಾಂಗ್ರೆಸ್‌ನಿಂದ ಮನವಿ



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಕಾಂಗ್ರೆಸ್ ನಿಯೋಗ ರಾಷ್ಟ್ರಪತಿಯನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರೊಡನೆ ಮಾತನಾಡಿತು

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಕಾಂಗ್ರೆಸ್ ನಿಯೋಗವು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಬುಧವಾರ ಭೇಟಿ ಮಾಡಿ, ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರನ್ನು ಕೂಡಲೇ ವಜಾ ಮಾಡುವಂತೆ ಮನವಿ ಮಾಡಿತು.

ಲಖಿಂಪುರ–ಖೇರಿ ಪ್ರಕರಣವು ದೇಶದ ಆತ್ಮವನ್ನೇ ನಡುಗಿಸಿದೆ. ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್‌ನ ಇಬ್ಬರು ಹಾಲಿ ನ್ಯಾಯಮೂರ್ತಿಗಳಿಂದ ಪ್ರಕರಣದ ಸ್ವತಂತ್ರ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ನಿಯೋಗವು ಒತ್ತಾಯಿಸಿದೆ.

ಅ.3ರಂದು ಪ್ರತಿಭಟನೆ ನಿರತ ರೈತರ ಮೇಲೆ ವಾಹನ ಹರಿಸಿದ್ದು ಕೊಲೆ ಮಾಡುವ ಉದ್ದೇಶದಿಂದಲೇ. ಈ ಘಟನೆ ಕುರಿತು ಉತ್ತರ ಪ್ರದೇಶ ಸರ್ಕಾರ ಮತ್ತು ಕೇಂದ್ರ ಸರ್ಕಾರ ನೀಡಿದ್ದ ಉದ್ಧಟತನದ ಪ್ರತಿಕ್ರಿಯೆಗಳು ಜನರ ನಂಬಿಕೆಯನ್ನು ನೆಲಸಮ ಮಾಡಿವೆ ಎಂದು ನಿಯೋಗ ಕೋವಿಂದ್ ಅವರಿಗೆ ಹೇಳಿದೆ.

ಈ ಕೊಲೆ ಪ್ರಕರಣಗಳಲ್ಲಿ ಸಚಿವರ ಪಾತ್ರದ ಕುರಿತು ಇನ್ನೂ ತನಿಖೆ ಆಗಬೇಕಿದೆ. ಅಜಯ್ ಮಿಶ್ರಾ ಇನ್ನೂ ಸಚಿವ ಸ್ಥಾನದಲ್ಲಿ ಮುಂದುವರಿದರೆ ಪಾರದರ್ಶಕ ತನಿಖೆ ಸಾಧ್ಯವಿಲ್ಲ. ಅಲ್ಲದೇ, ತಂದೆ ಅಷ್ಟು ಪ್ರಭಾವಶಾಲಿ ಹುದ್ದೆಯಲ್ಲಿ ಇದ್ದರೆ ಅವರ ಮಗನ ವಿರುದ್ಧ ಪಾರದರ್ಶಕ ತನಿಖೆ ನಡೆಸಲು ಪೊಲೀಸರು ಧೈರ್ಯ ಮಾಡುವುದಿಲ್ಲ. ಜೊತೆಗೆ, ಅವರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಕೂಡಾ ಬೆಂಬಲ ದೊರಕುತ್ತಿದೆ ಎಂದು ನಿವೇದನೆ ಪತ್ರದಲ್ಲಿ ಹೇಳಲಾಗಿದೆ.

ರಾಷ್ಟ್ರಪತಿ ಭೇಟಿ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ರಾಹುಲ್, 'ಸಚಿವರನ್ನು ವಜಾಗೊಳಿಸುವ ವರೆಗೆ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ. ಇದು ಕೇವಲ ಲಖಿಂಪುರ–ಖೇರಿ ಹಿಂಸಾಚಾರದಲ್ಲಿ ಮಡಿದ ರೈತರ ಕುಟುಂಬಗಳ ಕೂಗಲ್ಲ, ಬದಲಾಗಿ ದೇಶದ ಎಲ್ಲಾ ರೈತರ ಕೂಗು. ಆದರೆ ಅವರ ಧ್ವನಿಯನ್ನು ಅಡಗಿಸಲಾಗುತ್ತಿದೆ' ಎಂದು ನಾವು ರಾಷ್ಟ್ರಪತಿ ಅವರಿಗೆ ಮನವಿ ಮಾಡಿದ್ದೇವೆ ಎಂದು ಹೇಳಿದರು.

'ಈ ವಿಷಯವಾಗಿ ಇಂದೇ ಸರ್ಕಾರದ ಜೊತೆ ಮಾತನಾಡುತ್ತೇನೆ ಎಂದು ರಾಷ್ಟ್ರಪತಿ ನಮಗೆ ಭರವಸೆ ನೀಡಿದ್ದಾರೆ' ಎಂದು ಪ್ರಿಯಾಂಕಾ ಹೇಳಿದರು.

ರಾಜ್ಯಸಭೆಯಲ್ಲಿ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಹಿರಿಯ ನಾಯಕರಾದ ಎ.ಕೆ. ಆ್ಯಂಟನಿ ಮತ್ತು ಗುಲಾಬ್ ನಬಿ ಆಜಾದ್ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರ ಕೂಡಾ ನಿಯೋಗದಲ್ಲಿ ಇದ್ದರು.



ಎರಡನೇ ಕ್ವಾಲಿಫೈಯರ್: ವೆಂಕಟೇಶ್ ಅಯ್ಯರ್ ಅರ್ಧಶತಕ; ವರುಣ್ ಚಕ್ರವರ್ತಿ ಸ್ಪಿನ್ ಮೋಡಿ

ಫೈನಲ್‌ಗೆ ಕೋಲ್ಕತ್ತ; ಡೆಲ್ಲಿಗೆ ನಿರಾಶೆ

ಶಾರ್ಜಾ (ಪಿಟಿಐ): ಬುಧವಾರ ರಾತ್ರಿ ಕ್ಷಣಕ್ಷಣಕ್ಕೂ ಕುತೂಹಲ ಕೆರಳಿಸಿದ್ದ ಪಂದ್ಯದ ಕೊನೆಯ ಓವರ್‌ನಲ್ಲಿ ರಾಹುಲ್ ತ್ರಿಪಾಠಿ ಎತ್ತಿದ ಸಿಕ್ಸರ್‌ನೊಂದಿಗೆ ಕೋಲ್ಕತ್ತ ನೈಟ್ ರೈಡರ್ಸ್ ಫೈನಲ್ ತಲುಪಿತು. ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕನಸು ಕಮರಿತು.

ಇಲ್ಲಿ ನಡೆದ ಎರಡನೇ ಕ್ವಾಲಿಫೈಯರ್‌ನಲ್ಲಿ 3 ವಿಕೆಟ್‌ಗಳಿಂದ ಗೆದ್ದ ಕೋಲ್ಕತ್ತ ತಂಡವು ಐಪಿಎಲ್ ಫೈನಲ್ ಪ್ರವೇಶಿಸಿತು.

ಶುಕ್ರವಾರ ನಡೆಯಲಿರುವ ಫೈನಲ್‌ನಲ್ಲಿ ಏಯಾನ್ ಮಾರ್ಗನ್ ಬಳಗವು ಚೆನ್ನೈ ಸೂಪರ್ ಕಿಂಗ್ಸ್ ಎದುರು ಸೆಣಸಲಿದೆ. ಟಾಸ್ ಗೆದ್ದ ಕೋಲ್ಕತ್ತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್ ಮಾಡಿದ ಡೆಲ್ಲಿ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 135 ರನ್ ಗಳಿಸಿತು. ಈ ಸಾಧಾರಣ ಮೊತ್ತವನ್ನು ಬೆನ್ನಟ್ಟಿದ ಕೋಲ್ಕತ್ತ ತಂಡವು 19.5 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 136 ರನ್ ಗಳಿಸಿತು.

ಕೋಲ್ಕತ್ತದ ಆರಂಭಿಕ ಜೋಡಿ ವೆಂಕಟೇಶ್ ಅಯ್ಯರ್ (55; 41ಎ) ಮತ್ತು ಶುಭಮನ್ ಗಿಲ್ (46) ಮೊದಲ ವಿಕೆಟ್‌ಗೆ 12. 2 ಓವರ್‌ಗಳಲ್ಲಿ 96 ರನ್‌ಗಳನ್ನು ಸೇರಿಸಿತು. ಈ ಅಡಿಪಾಯದ ಮೇಲೆ ಸುಲಭವಾಗಿ ಜಯದ ಸೌಧ ಕಟ್ಟುವ ಕೋಲ್ಕತ್ತ ಆಸೆಗೆ ಡೆಲ್ಲಿ ಬೌಲರ್‌ಗಳು ಸವಾಲೊಡ್ಡಿದರು.

ಅದರಲ್ಲೂ ಕೊನೆಯ ನಾಲ್ಕು ಓವರ್‌ಗಳಲ್ಲಿ ಹಲವು ನಾಟಕೀಯ ತಿರುವುಗಳಿಂದಾಗಿ ಪಂದ್ಯವು ರೋಚಕವಾಯಿತು. ಕೇವಲ ಏಳು ರನ್‌ಗಳ ಅಂತರದಲ್ಲಿ ಆರು ವಿಕೆಟ್‌ಗಳನ್ನು ಕೋಲ್ಕತ್ತ ಕಳೆದುಕೊಂಡಿತು. ಕೊನೆಯ ಓವರ್‌ನಲ್ಲಿ ಕೋಲ್ಕತ್ತ ಗೆಲುವಿಗೆ ಏಳು ರನ್‌ಗಳ ಅಗತ್ಯವಿತ್ತು. ಆ ಓವರ್ ಬೌಲಿಂಗ್ ಮಾಡಿದ ಆರ್. ಅಶ್ವಿನ್ ಡೆಲ್ಲಿ ತಂಡವನ್ನು ಗೆಲುವಿನಂಚಿಗೆ ತಂದರು. ಮೊದಲ ನಾಲ್ಕು ಎಸೆತಗಳಲ್ಲಿ ಕೇವಲ ಒಂದು ರನ್ ಕೊಟ್ಟಿದ್ದ ಅವರು, ಎರಡು ವಿಕೆಟ್ ಕೂಡ ಗಳಿಸಿದ್ದರು. ಆದರೆ, ಅವರ ಐದನೇ ಎಸೆತವನ್ನು ಸಿಕ್ಸರ್‌ಗೆ ಎತ್ತಿದ ರಾಹುಲ್ ತ್ರಿಪಾಠಿ ಕೋಲ್ಕತ್ತ ತಂಡಕ್ಕೆ ಫೈನಲ್ ರಹದಾರಿ ಕೊಡಿಸಿದರು. ಡೆಲ್ಲಿ ಬಳಗದಲ್ಲಿ ನಿರಾಶೆ ಕವಿಯಿತು.

ಲೀಗ್ ಹಂತದ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ್ದ ಡೆಲ್ಲಿ ತಂಡವು ಮೊದಲ ಕ್ವಾಲಿಫೈಯರ್‌ನಲ್ಲಿ ಚೆನ್ನೈ ಎದುರು ಸೋತಿತ್ತು. ಹೋದ ಬಾರಿ ರನ್ನರ್ಸ್ ಅಪ್ ಆಗಿದ್ದ ರಿಷಭ್ ಪಂತ್ ಬಳಗಕ್ಕೆ ಈ ಬಾರಿ ಫೈನಲ್ ತಲುಪುವ ಹಾದಿಯಲ್ಲಿ ಕೋಲ್ಕತ್ತ ತಡೆಯೊಡ್ಡಿತು.

ಇದಕ್ಕೆ ಕಾರಣವಾಗಿದ್ದು ಕೆಕೆಆರ್ ತಂಡದ ಬೌಲರ್‌ಗಳ ಬಿಗಿದಾಳಿ. ಡೆಲ್ಲಿ ತಂಡದ ಪ್ರಮುಖ ಬ್ಯಾಟ್ಸ್‌ಮನ್‌ಗಳು ಹೆಚ್ಚು ರನ್ ಗಳಿಸದೇ ಪರದಾಡಿದರು. ಶಿಖರ್ ಧವನ್ ಮತ್ತು ಶ್ರೇಯಸ್ ಅಯ್ಯರ್ ಬಿಟ್ಟರೆ ಉಳಿದ ಬ್ಯಾಟ್ಸ್‌ಮನ್‌ಗಳು ಆತ್ಮವಿಶ್ವಾಸದಿಂದ ಆಡುವಲ್ಲಿ ವಿಫಲರಾದರು. ಕೋಲ್ಕತ್ತ ಸ್ಪಿನ್ನರ್ ವರುಣ್ ಚಕ್ರವರ್ತಿ ಮತ್ತು ಉಳಿದ ಬೌಲರ್‌ಗಳು ಮೇಲುಗೈ ಸಾಧಿಸಿದರು.



ವೆಂಕಟೇಶ್ ಅಯ್ಯರ್ ಬ್ಯಾಟಿಂಗ್ ವೈಖರಿ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 5ಕ್ಕೆ 135 (20 ಓವರ್)
ಪೃಥ್ವಿ ಎಲ್‌ಬಿಡಬ್ಲ್ಯು ಬಿ ವರುಣ್ 18 (12 ಎ, 4x2, 6x1), ಶಿಖರ್ ಸಿ ಶಕೀಬ್ ಬಿ ವರುಣ್ 36 (39 ಎ, 4x1, 6x2), ಸ್ಟೋಯಿನಿಸ್ ಬಿ ಶಿವಂ 18 (23 ಎ, 4x1), ಶ್ರೇಯಸ್ ಔಟಾಗದೆ 30 (27 ಎ, 4x1, 6x1), ರಿಷಭ್ ಸಿ ತ್ರಿಪಾಠಿ ಬಿ ಫರ್ಗ್ಯುಸನ್ 6 (6 ಎ, 4x1), ಹೆಟ್ಮೆಯರ್ ರನೌಟ್ (ವೆಂಕಟೇಶ್/ಕಾರ್ತಿಕ್) 17 (10 ಎ, 6x2), ಅಕ್ಷರ್ ಔಟಾಗದೆ 4 (4 ಎ)
ಇತರೆ: (ಲೆಗ್ ಬೈ 1, ನೋ ಬಾಲ್ 1, ವೈಡ್ 4) 6
ವಿಕೆಟ್ ಪತನ: 1-32 (ಪೃಥ್ವಿ ಶಾ, 4.1), 2-71 (ಮಾರ್ಕಸ್ ಸ್ಟೋಯಿನಿಸ್, 11.3), 3-83 (ಶಿಖರ್ ಧವನ್, 14.1), 4-90 (ರಿಷಭ್ ಪಂತ್, 15.2), 5-117 (ಶಿಮ್ರಾನ್ ಹೆಟ್ಮೆಯರ್, 18.3))
ಬೌಲಿಂಗ್: ಶಕೀಬ್ ಅಲ್ ಹಸನ್ 4-0-28-0, ಲೋಕಿ ಫರ್ಗ್ಯುಸನ್ 4-0-26-1, ಸುನಿಲ್ ನಾರಾಯಣ್ 4-0-27-0, ವರುಣ್ ಚಕ್ರವರ್ತಿ 4-0-26-2, ಶಿವಂ ಮಾವಿ 4-0-27-1

ಕೋಲ್ಕತ್ತ ನೈಟ್ ರೈಡರ್ಸ್ 7ಕ್ಕೆ 136 (19.5 ಓವರ್)
ಶುಭಮನ್ ಸಿ ಪಂತ್ ಬಿ ಆವೇಶ್ 46 (46 ಎ, 4x1, 6x1), ವೆಂಕಟೇಶ್ ಸಿ ಸ್ಮಿತ್ (ಬದಲಿ) ಬಿ ರಬಾಡ 55 (41 ಎ, 4x4, 6x3), ನಿತೀಶ್ ಸಿ ಹೆಟ್ಮೆಯರ್ ಬಿ ನಾರ್ಕಿಯ 13 (12 ಎ, 6x1), ತ್ರಿಪಾಠಿ ಔಟಾಗದೆ 12 (11 ಎ, 6x1), ದಿನೇಶ್ ಬಿ ರಬಾಡ 0 (3 ಎ), ಮಾರ್ಗನ್ ಬಿ ನಾರ್ಕಿಯ 0 (3 ಎ), ಶಕೀಬ್ ಎಲ್‌ಬಿಡಬ್ಲ್ಯು ಅಶ್ವಿನ್ 0 (2 ಎ), ಸುನಿಲ್ ಸಿ ಅಕ್ಷರ್ ಬಿ ಅಶ್ವಿನ್ 0 (1 ಎ), ಲೋಕಿ ಫರ್ಗ್ಯುಸನ್ ಔಟಾಗದೆ 0 (0 ಎ))
ಇತರೆ: (ಲೆಗ್ ಬೈ 1, ವೈಡ್ 9) 10
ವಿಕೆಟ್ ಪತನ: 1-96 (ವೆಂಕಟೇಶ್ ಅಯ್ಯರ್, 12.2), 2-123 (ನಿತೀಶ್ ರಾಣಾ, 15.6), 3-125 (ಶುಭಮನ್ ಗಿಲ್, 16.4), 4-126 (ದಿನೇಶ್ ಕಾರ್ತಿಕ್, 17.6), 5-129 (ಏಯಾನ್ ಮಾರ್ಗನ್, 18.6), 6-130 (ಶಕೀಬ್ ಅಲ್ ಹಸನ್, 19.3), 7-130 (ಸುನಿಲ್ ನಾರಾಯಣ್, 19.4)
ಬೌಲಿಂಗ್: ಆ್ಯನ್ರಿಚ್ ನಾರ್ಕಿಯ 4-0-31-2, ರವಿಚಂದ್ರನ್ ಅಶ್ವಿನ್ 3.5-0-27-2, ಆವೇಶ್ ಖಾನ್ 4-0-22-1, ಅಕ್ಷರ್ ಪಟೇಲ್ 4-0-32-0, ಕಗಿಸೊ ರಬಾಡ 4-0-23-2

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 3 ವಿಕೆಟ್‌ಗಳ ಜಯ

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್ ಪಟೇಲ್	ಆರ್‌ಸಿಬಿ	32
ಆವೇಶ್ ಖಾನ್	ಡೆಲ್ಲಿ	24
ಬೂಮ್ರಾ	ಮುಂಬೈ	21

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	626
ಋತುರಾಜ್	ಚೆನ್ನೈ	603
ಶಿಖರ್ ಧವನ್	ಡೆಲ್ಲಿ	587

ಟೆಂಡರ್ ದಾಖಲೆ ಖರೀದಿ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಹೊಸ ತಂಡಗಳು ಟೆಂಡರ್‌ಗೆ ಸಂಬಂಧಿಸಿದ ದಾಖಲೆಗಳನ್ನು ಖರೀದಿಸಲು ನಿಗದಿ ಮಾಡಿರುವ ಅವಧಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಿಸ್ತರಿಸಿದೆ.

ಐಪಿಎಲ್ ಆಡಳಿತ ಸಮಿತಿಯು ಟೆಂಡರ್‌ಗೆ ಆಹ್ವಾನದ (ಐಟಿಟಿ) ದಾಖಲೆ ಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದು ₹ 10 ಮರುಪಾವತಿ ಇಲ್ಲದ ಮೊತ್ತವನ್ನು ಇದಕ್ಕಾಗಿ ನಿಗದಿ ಮಾಡಲಾಗಿತ್ತು. ದಾಖಲೆ ಖರೀದಿಗೆ ಆರಂಭದಲ್ಲಿ ಆಗಸ್ಟ್ 31 ಕೊನೆಯ ದಿನವಾಗಿತ್ತು. ನಂತರ ಅದನ್ನು ಅಕ್ಟೋಬರ್ 10ರ ವರೆಗೆ ವಿಸ್ತರಿಸಲಾಗಿತ್ತು. ಈಗ ಅವಧಿ ಇದೇ 20ರ ವರೆಗೆ ಮುಂದುವರಿಯಲಿದ್ದು ಹೊಸ ಎರಡು ಫ್ರಾಂಚೈಸ್‌ಗಳ ತಲಾ ವೆಚ್ಚ ₹ 3500 ಕೋಟಿಗೂ ಕಡಿಮೆ ಆಗುವುದಿಲ್ಲ. ಆಸಕ್ತ ಕಂಪನಿಗಳ ಮನವಿಯ ಮೇರೆಗೆ ಅವಧಿ ವಿಸ್ತರಣೆ ಮಾಡಲಾಗಿದೆ ಎಂದು ಹೇಳಲಾಗಿದೆ. 2022ರ ಐಪಿಎಲ್‌ನಲ್ಲಿ ಎರಡು ಹೊಸ ತಂಡಗಳನ್ನು ಸೇರಿಸಲು ಬಿಸಿಸಿಐ ನಿರ್ಧರಿಸಿದ್ದು ಅಹಮದಾಬಾದ್, ಲಖನೌ ಅಥವಾ ಪುಣೆಯ ಫ್ರಾಂಚೈಸ್‌ಗಳು ಇವುಗಳ ಮಾಲೀಕತ್ವ ಹೊಂದಿರಲಿವೆ.

ಹೊಸ ತಂಡಗಳನ್ನು ಸೇರಿಸುವ ಮೂಲಕ ಒಟ್ಟು ಕನಿಷ್ಠ ₹ 7000 ಕೋಟಿ ಮೊತ್ತ ಸಂಗ್ರಹಿಸುವುದು ಬಿಸಿಸಿಐ ಉದ್ದೇಶ.

ಮಿಂಚಿದ ಚೆಟ್ರಿ: ಭಾರತ ಜಯಭೇರಿ

ಮಾಲೆ(ಪಿಟಿಐ): ನಾಯಕ ಸುನಿಲ್ ಚೆಟ್ರಿ ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ಫುಟ್‌ಬಾಲ್ ತಂಡವು ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ಮಾಲ್ಡೀವ್ಸ್ ವಿರುದ್ಧ 3-1ರಿಂದ ಗೆದ್ದಿತು. ಇದರೊಂದಿಗೆ ಫೈನಲ್‌ಗೆ ಪ್ರವೇಶ ಪಡೆಯಿತು.

ಬುಧವಾರ ನಡೆದ ಪಂದ್ಯದಲ್ಲಿ ಚೆಟ್ರಿ 62 ಮತ್ತು 71ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ತಂಡದ ಇನ್ನೊಂದು ಗೋಲನ್ನು ಮನ್ವೀರ್ ಸಿಂಗ್ (33ನೇ ನಿ.) ಹೊಡೆದರು. 45ನೇ ನಿಮಿಷದಲ್ಲಿ ಕಾಲ್ಚಳಕ ತೋರಿದ ಅಲಿ ಅಶ್ಫಾಕ್ ಮಾಲ್ಡೀವ್ಸ್ ತಂಡದ ಹಿನ್ನಡೆಯನ್ನು ತಗ್ಗಿಸಿದರು ಚೆಟ್ರಿ ಖಾತೆಯಲ್ಲಿ ಈಗ 79 ಅಂತರರಾಷ್ಟ್ರೀಯ ಗೋಲುಗಳಿವೆ. ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ (80) ಸಾಧನೆ ಸರಿಗಟ್ಟಲು ಅವರಿಗೆ ಇನ್ನೊಂದು ಗೋಲು ಅಗತ್ಯವಿದೆ.

ಶುಕ್ರವಾರ ನಡೆಯುವ ಫೈನಲ್‌ನಲ್ಲಿ ಭಾರತವು ನೇಪಾಳ ತಂಡವನ್ನು ಎದುರಿಸಲಿದೆ.

ನಾಳೆ ಫೈನಲ್: ಚೆನ್ನೈ –ಕೋಲ್ಕತ್ತ ಮುಖಾಮುಖಿ

ಧೋನಿ ಬಳಗ– ಮಾರ್ಗನ್ ಪಡೆಯ ನಡುವೆ ಸೆಣಸು

ದುಬೈ: ಒಂಬತ್ತನೇ ಬಾರಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಈಗ ನಾಲ್ಕನೇ ಬಾರಿ ಪ್ರಶಸ್ತಿ ಜಯಿಸುವ ಛಲ.

ಹೋದ ವರ್ಷ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಟೂರ್ನಿ ನಡೆದ ಸಂದರ್ಭದಲ್ಲಿ ಚೆನ್ನೈ ತಂಡವು ಲೀಗ್ ಹಂತದಲ್ಲಿ ಸೋತು ಹೊರಬಿದ್ದ ಮೊದಲ ತಂಡವಾಗಿತ್ತು. ಈ ಬಾರಿ ಫೈನಲ್ ಪ್ರವೇಶಿಸಿದ ಮೊದಲ ತಂಡವಾಗಿದೆ. ಅಷ್ಟರ ಮಟ್ಟಿಗೆ ನಾಯಕ ಮಹೇಂದ್ರಸಿಂಗ್ ಧೋನಿ ತಮ್ಮ ಫ್ರಾಂಚೈಸ್‌ಗೆ ನೀಡಿದ್ದ ಮಾತು ಈಡೇರಿಸಿದ್ದಾರೆ. ಇನ್ನೇನು ಪ್ರಶಸ್ತಿ ಜಯಕ್ಕೆ ಒಂದು ಸವಾಲನ್ನು ಮೆಟ್ಟಿನಿಲ್ಲಬೇಕಷ್ಟೆ. ಚೆನ್ನೈ ತಂಡವು ಶುಕ್ರವಾರ ನಡೆಯಲಿರುವ ಫೈನಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸಲಿದೆ. ಕೋಲ್ಕತ್ತ ತಂಡವೂ 2012 ಮತ್ತು 2014ರಲ್ಲಿ ಪ್ರಶಸ್ತಿ ಗೆದ್ದಿತ್ತು.

'ಕ್ಯಾಪ್ಟನ್ ಕೂಲ್' ಧೋನಿ ತಮ್ಮ ತಂಡದಲ್ಲಿರುವ ಯುವ ಮತ್ತು ಅನುಭವಿಗಳನ್ನು ಸಮಪ್ರಮಾಣದಲ್ಲಿ ದುಡಿಸಿಕೊಂಡು ಯಶಸ್ವಿಯಾಗಿದ್ದಾರೆ.

ಇನ್ನೂ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಅವಕಾಶಕ್ಕಾಗಿ ಕಾದಿರುವ ಋತುರಾಜ್ ಗಾಯಕವಾಡ್ ಒಟ್ಟು 602 ರನ್‌ಗಳನ್ನು ಗಳಿಸಿದ್ದಾರೆ. ಫಫ್ ಡುಪ್ಲೆಸಿ ಜೊತೆಗೆ ಚೆನ್ನೈ ತಂಡದ ಇನಿಂಗ್ಸ್ ಆರಂಭಿಸುವ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಫಫ್ ಕೂಡ ಐದನೂರಕ್ಕೂ ಹೆಚ್ಚು ರನ್‌ಗಳನ್ನು ಪೇರಿಸಿದ್ದಾರೆ. ಅಂಬಟಿ ರಾಯುಡು, ಮೋಯಿನ್ ಅಲಿ ಕೂಡ ಉಪಯುಕ್ತ ಕಾಣಿಕೆ ನೀಡಿದ್ದಾರೆ. ಮೂರು ಪಂದ್ಯಗಳಲ್ಲಿ ಮಾತ್ರ ಆಡಿರುವ ಕನ್ನಡಿಗ ರಾಬಿನ್ ಉತ್ತಪ್ಪ ಕೂಡ ಮಿಂಚಿದ್ದಾರೆ. ಆಲ್‌ರೌಂಡರ್ ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್ ಮತ್ತು ವಿಂಡೀಸ್ ಆಟಗಾರ ಡ್ವೇನ್ ಬ್ರಾವೊ ಅವರೂ 'ಪಂದ್ಯವಿಜಯೀ' ಗಳಾಗಿದ್ದಾರೆ. ಮೊದಲ ಕ್ವಾಲಿಫೈಯರ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಜೋಶ್ ಹ್ಯಾಜಲ್‌ವುಡ್ ಬೌಲಿಂಗ್‌ನಲ್ಲಿ ಮಾಡಿದ ಮೋಡಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಬ್ಯಾಟಿಂಗ್‌ನಲ್ಲಿ ಕ್ರಮಾಂಕಗಳನ್ನು ದಿಢೀರ್ ಬದಲಾವಣೆ ಮಾಡಿದ ಧೋನಿ ಎದುರಾಳಿಗಳಿಗೆ ಬಿಸಿ ಮುಟ್ಟಿಸಿದ್ದರು. ನಾಲ್ಕನೇ ಕ್ರಮಾಂಕಕ್ಕೆ ಠಾಕೂರ್ ಬಡ್ತಿ ಪಡೆದಿದ್ದರು. ಅದರಿಂದಾಗಿ ಜಡೇಜ ಅವರನ್ನು ಎಂಟನೇ ಸ್ಥಾನಕ್ಕೆ ಹಾಕಿ, ತಾವೇ ಏಳನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ಧೋನಿ 'ಫಿನಿಷರ್' ಆಗಿ ಹೊರಹೊಮ್ಮಿದ್ದರು.

ಎರಡನೇ ಕ್ವಾಲಿಫೈಯರ್‌ನಲ್ಲಿ ರೋಚಕ ಜಯ ಸಾಧಿಸಿರುವ ಕೋಲ್ಕತ್ತ ತಂಡವು ಚೆನ್ನೈ ನ ಬಲಾಢ್ಯ ಪಡೆಯನ್ನು ಕಟ್ಟಿಹಾಕಲು ಯಶಸ್ವಿಯಾಗುವುದೇ ಎಂಬ ಕುತೂಹಲ ಈಗ ಗರಿಗೆದರಿದೆ. ಲೀಗ್ ಹಂತದಲ್ಲಿ ಎರಡು ಬಾರಿ ಮುಖಾಮುಖಿಯಾದಾಗಲೂ ಕೋಲ್ಕತ್ತ ತಂಡವು ಚೆನ್ನೈ ಎದುರು ಸೋತಿದೆ. ಆದರೆ ಎಲ್ಲ ಅಡೆತಡೆಗಳನ್ನೂ ಮೀರಿ ಫೈನಲ್ ಪ್ರವೇಶಿಸಿರುವ ಮಾರ್ಗನ್ ಬಳಗವು ಚೆನ್ನೈಗೆ ದಿಟ್ಟ ಸವಾಲೊಡ್ಡುವ ನಿರೀಕ್ಷೆ ಇದೆ.



ರಾಬಿನ್ ಉತ್ತಪ್ಪ

ಧೋನಿ ಸಾಧನೆ

ಪಂದ್ಯ	219
ರನ್	4,746
ಶ್ರೇಷ್ಠ	84
ಅರ್ಧಶತಕ	23
ಬೌಂಡರಿ	325
ಸಿಕ್ಸರ್	219

ಪಂದ್ಯಗಳು	195
ಜಯ	116
ಸೋಲು	77
ಫಲಿತಾಂಶವಿಲ್ಲ	2


ಚೆನ್ನೈ ತಂಡದ ಸಾಧನೆ

ವರ್ಷ	ಸ್ಥಾನ
2008	ರನ್ನರ್ಸ್ ಅಪ್
2009	ಸೆಮಿಫೈನಲ್
2010	ಚಾಂಪಿಯನ್
2011	ಚಾಂಪಿಯನ್
2012	ರನ್ನರ್ಸ್ ಅಪ್
2013	ರನ್ನರ್ಸ್ ಅಪ್
2014	ಪ್ಲೇ ಆಫ್
2015	ರನ್ನರ್ಸ್ ಅಪ್
2018	ಚಾಂಪಿಯನ್
2019	ರನ್ನರ್ಸ್ ಅಪ್
2020	ಲೀಗ್–ನಿರ್ಗಮನ
2021	ಫೈನಲ್*

* ಇನ್ನೂ ನಡೆಯಲಿದೆ.

#2016, 2017ರಲ್ಲಿ ಫ್ರಾಂಚೈಸಿ ಅಮಾನತು

ಷೇರುಪೇಟೆ ವಹಿವಾಟು 453



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,991
ಇಂದಿನ ಅಂತ್ಯ	18,161
▲	170
ದಿನದ ಗರಿಷ್ಠ	18,197

ವಿನಿಮಯ ದರ

$ ಡಾಲರ್	75.37
£ ಪೌಂಡ್	102.66
€ ಯುರೊ	87.02
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1490 (1495)
ಸೋಯಾ (ರಿಫೈನ್ಡ್)	₹1295 (1367)
ಸೂರ್ಯಕಾಂತಿ (ರಿಫೈನ್ಡ್)	₹1390(1415)
ಪಾಮೋಲಿನ್	₹1207 (1242)

ಬ್ಯಾಂಕ್ ಆಫ್ ಬರೋಡಾ ಗೃಹಸಾಲ ಅಗ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ, ಗೃಹಸಾಲದ ಮೇಲಿನ ಬಡ್ಡಿ ದರವನ್ನು ಶೇಕಡ 0.25ರಷ್ಟು ಇಳಿಕೆ ಮಾಡಿದೆ. ಅಕ್ಟೋಬರ್ 7ರಿಂದ ಜಾರಿಗೆ ಬರುವಂತೆ ಗೃಹಸಾಲದ ಮೇಲಿನ ಬಡ್ಡಿ ದರವು ಶೇಕಡ 6.50ರಷ್ಟು ಆಗಿದೆ.

ಹಬ್ಬಗಳ ಸಂದರ್ಭದಲ್ಲಿ ಮನೆ ಖರೀದಿಯು ಗ್ರಾಹಕರಿಗೆ ಅಗ್ಗವಾಗಬೇಕು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಈ ಕೊಡುಗೆಯು ಡಿಸೆಂಬರ್ 31ರವರೆಗೆ ಜಾರಿಯಲ್ಲಿ ಇರಲಿದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಹೊಸ ಸಾಲಕ್ಕೆ ಮಾತ್ರವಲ್ಲದೆ, ಸಾಲ ವರ್ಗಾವಣೆ ಮಾಡಿಕೊಳ್ಳುವವರು ಕೂಡ ಇದರ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಬ್ಯಾಂಕ್ ತಿಳಿಸಿದೆ.

ಸೆಪ್ಟೆಂಬರ್‌ಗೆ ಕೊನೆಗೊಂಡ ಎರಡನೇ ತ್ರೈಮಾಸಿಕದ ಆರ್ಥಿಕ ಸಾಧನೆ

ಇನ್ಫೊಸಿಸ್ ಲಾಭ ಶೇ 11.9ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಎರಡನೆಯ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಇನ್ಫೊಸಿಸ್‌ನ ಎರಡನೆಯ ತ್ರೈಮಾಸಿಕದ ಲಾಭದ ಪ್ರಮಾಣದಲ್ಲಿ ಶೇಕಡ 11.9ರಷ್ಟು ಹೆಚ್ಚಳವಾಗಿದೆ. ಸೆಪ್ಟೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕಂಪನಿಯು ₹ 5,421 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 4,845 ಕೋಟಿ ಲಾಭ ಗಳಿಸಿತ್ತು.

ಕಂಪನಿಯು 2021–22ನೇ ಸಾಲಿಗೆ ಷೇರುದಾರರಿಗೆ ಪ್ರತಿ ಷೇರಿಗೆ ₹ 15ರಷ್ಟು ಮಧ್ಯಂತರ ಡಿವಿಡೆಂಡ್ ಘೋಷಿಸಿದೆ. ಕಂಪನಿಯು ಒಟ್ಟು ಆದಾಯವು ₹ 29,602 ಕೋಟಿಗೆ ತಲುಪಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಒಟ್ಟು 45 ಸಾವಿರ ಜನ ಹೊಸಬರನ್ನು ನೇಮಕ ಮಾಡಿಕೊಳ್ಳುವುದಾಗಿ ಕಂಪನಿ ಹೇಳಿದೆ.

ತಾನು ಅಭಿವೃದ್ಧಿಪಡಿಸಿರುವ ಹೊಸ ಆದಾಯ ತೆರಿಗೆ ಪೋರ್ಟಲ್ ವಿಚಾರವಾಗಿ ಪ್ರತಿಕ್ರಿಯೆ ನೀಡಿರುವ ಕಂಪನಿಯು, 'ಪೋರ್ಟಲ್‌ನಲ್ಲಿ ಸ್ಥಿರವಾದ ಪ್ರಗತಿ ಕಂಡುಬಂದಿದೆ' ಎಂದು ಹೇಳಿದೆ. ಆದಾಯ ತೆರಿಗೆ ವಿವರ ಸಲ್ಲಿಸಲು ಹೊಸದಾಗಿ ಅಭಿವೃದ್ಧಿಪಡಿಸಿರುವ ಪೋರ್ಟಲ್ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬ ದೂರುಗಳು ವ್ಯಾಪಕವಾಗಿ ಬಂದಿವೆ.

'ಮಂಗಳವಾರದ ವೇಳೆಗೆ ಹೊಸ ಪೋರ್ಟಲ್ ಮೂಲಕ 1.9 ಕೋಟಿಗಿಂತ ಹೆಚ್ಚಿನ ಐ.ಟಿ. ವಿವರಗಳು ಸಲ್ಲಿಕೆಯಾಗಿವೆ. ಐ.ಟಿ. ವಿವರಕ್ಕೆ ಸಂಬಂಧಿಸಿದ ಒಂದರಿಂದ ಏಳರವರೆಗಿನ ಫಾರ್ಮ್‌ಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿವೆ. ಶಾಸನಾತ್ಮಕ ಫಾರ್ಮ್‌ಗಳ ಪೈಕಿ ಹೆಚ್ಚಿನವು ಪೋರ್ಟಲ್ ಮೂಲಕ ಲಭ್ಯವಿವೆ' ಎಂದು ಇನ್ಫೊಸಿಸ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸಲೀಲ್ ಪಾರೇಖ್ ಅವರು ಹೇಳಿದ್ದಾರೆ.

'ಬಳಕೆದಾರರು 18 ಕೋಟಿಗೂ ಹೆಚ್ಚು ಬಾರಿ ಈ ಪೋರ್ಟಲ್‌ನ ಮೂಲಕ ಲಾಗಿನ್ ಆಗಿದ್ದಾರೆ. ಪ್ರತಿದಿನ ಎರಡು ಲಕ್ಷದಿಂದ ಮೂರು ಲಕ್ಷದಷ್ಟು ವಿವರಗಳನ್ನು ಸಲ್ಲಿಸಲಾಗುತ್ತಿದೆ' ಎಂದು ಪಾರೇಖ್ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಪ್ರತಿ ಷೇರಿಗೆ ₹ 15ರಷ್ಟು ಮಧ್ಯಂತರ ಲಾಭಾಂಶ ಘೋಷಣೆ
- ಐ.ಟಿ. ಪೋರ್ಟಲ್‌ನಲ್ಲಿ ಸ್ಥಿರವಾದ ಪ್ರಗತಿ: ಸಿಇಒ ಪಾರೇಖ್

ವಿಪ್ರೊ ಲಾಭ ಶೇ 17ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ವಿಪ್ರೊ ಕಂಪನಿಯ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಶೇಕಡ 17ರಷ್ಟು ಹೆಚ್ಚಾಗಿ ₹ 2,930 ಕೋಟಿಗಳಿಗೆ ಏರಿಕೆ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ನಿವ್ವಳ ಲಾಭ ₹ 2,484 ಕೋಟಿ ಇತ್ತು.

ಎರಡನೇ ತ್ರೈಮಾಸಿಕದಲ್ಲಿ ಕಂಪನಿಯ ಒಟ್ಟಾರೆ ವರಮಾನವು ₹ 15,114 ಕೋಟಿಗಳಿಂದ ₹ 19,667 ಕೋಟಿಗಳಿಗೆ ಏರಿಕೆ ಆಗಿದೆ.

'ನಮ್ಮ ವಹಿವಾಟು ಕಾರ್ಯಯೋಜನೆಯು ಉತ್ತಮವಾಗಿ ಕೆಲಸ ಮಾಡುತ್ತಿದೆ. ಇದರಿಂದಾಗಿ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಶೇ 28ರಷ್ಟು ಬೆಳವಣಿಗೆ ಸಾಧ್ಯವಾಗಿದೆ. ನಮ್ಮ ವಾರ್ಷಿಕ ವರಮಾನ ₹ 75,300 ಕೋಟಿಯನ್ನು ದಾಟಿರುವುದಕ್ಕೆ ಗ್ರಾಹಕರು, ಪಾಲುದಾರರು ಮತ್ತು ಸಹೋದ್ಯೋಗಿಗಳಿಗೆ ಧನ್ಯವಾದ ಹೇಳುತ್ತೇನೆ' ಎಂದು ಕಂಪನಿಯ ಸಿಇಒ ಥೆರ್ರಿ ಡೆಲಾಪೋರ್ಟ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎರಡಂಕಿ ಪ್ರಗತಿ: ನಿರ್ಮಲಾ ವಿಶ್ವಾಸ

ಬಾಸ್ಟನ್ (ಪಿಟಿಐ): ಭಾರತದ ಜಿಡಿಪಿ ಬೆಳವಣಿಗೆ ದರ ಪ್ರಸಕ್ತ ಹಣಕಾಸು ವರ್ಷದಲ್ಲಿ ಎರಡಂಕಿಯ ಮಟ್ಟವನ್ನು ಸಮೀಪಿಸಲಿದೆ. ಜಗತ್ತಿನ ಇತರ ದೇಶಗಳ ಜಿಡಿಪಿ ಬೆಳವಣಿಗೆ ಪ್ರಮಾಣಕ್ಕೆ ಹೋಲಿಸಿದರೆ ಇದು ಅತಿಹೆಚ್ಚಿನದಾಗಿರಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮುಂದಿನ ವರ್ಷ ಜಿಡಿಪಿ ಬೆಳವಣಿಗೆ ದರ ಶೇ 7.5ರಿಂದ ಶೇ 8.5ರಷ್ಟು ಇರಲಿದೆ. ಇದು ಮುಂದಿನ ಒಂದು ದಶಕದವರೆಗೆ ಸ್ಥಿರವಾಗಿರಲಿದೆ ಎಂದು ಹಾರ್ವರ್ಡ್ ಕೆನಡಿ ಸ್ಕೂಲ್‌ನಲ್ಲಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	415
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಕುಮಟ	
ಚಿಪ್ಪು	44119-44529
ಕೋಕ	20109-30019
ಫ್ಯಾಕ್ಟರಿ	14609-20989
ಹೊಸಚಾಲಿ	42199-45309
ಪುತ್ತೂರು	
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	33899-40019
ಚಾಲಿ	41608-46009
ಕೋಕ	21669-37800
ಕೆಂಪುಗೋಟು	26009-30889
ರಾಶಿ	44099-45209
ತಟ್ಟಿಬೆಟ್ಟೆ	33689-43809
ಶಿರಸಿ	
ಬೆಟ್ಟೆ	35529-41119
ಬಿಳಿಗೋಟು	18629-41688
ಚಾಲಿ	40899-46609
ರಾಶಿ	41899-47399

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13650	13350	13600	213.15 ಸೆಂಟ್ಸ್
ಎಸಿ	6325	5000	5550	
ಆರ್‌ಪಿ	6150	6000	6300	ಲಂಡನ್
ಆರ್‌ಸಿ	3560	3500	3665	2144 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

13-10-2021

ಜಾವಾ 70/80(ಹೊಸ)	11500-11550
ಜಾವಾ 80/90(ಹೊಸ)	11200-11250
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1505)
ಒಂದು ವಾರದ ಡೆಲಿವರಿ	1495 (1500)
ಸೋಯಾ ಕಚ್ಚಾ	1265 (1332)
ಪಾಮ್ ವಾರದ ಡೆಲಿವರಿ	1205 (1240)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1365)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,400 (47,200)
ಬೆಳ್ಳಿ ಕೆ.ಜಿ 62,200 (61,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪರಿಷ್ಕೃತ ದರಗಳು ಇಂದಿನಿಂದಲೇ ಜಾರಿಗೆ: ಸಿಬಿಐಸಿ

ಅಡುಗೆ ಎಣ್ಣೆ: ಕಸ್ಟಮ್ಸ್ ಸುಂಕ ರದ್ದು, ಕೃಷಿ ಸೆಸ್ ಇಳಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕಚ್ಚಾ ತಾಳೆ ಎಣ್ಣೆ, ಕಚ್ಚಾ ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಮಾರ್ಚ್ 31ರವರೆಗೆ ರದ್ದುಗೊಳಿಸಿದೆ. ಜೊತೆಗೆ ಕೃಷಿ ಸೆಸ್ ಪ್ರಮಾಣವನ್ನು ಕಡಿಮೆ ಮಾಡಿದೆ.

ಪರಿಷ್ಕೃತ ದರಗಳು ಗುರುವಾರದಿಂದ ಜಾರಿಗೆ ಬರಲಿವೆ ಎಂದು ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಪ್ರಕಟಣೆಯಲ್ಲಿ ತಿಳಿಸಿದೆ. ಈ ನಿರ್ಧಾರದಿಂದಾಗಿ ಅಡುಗೆಗೆ ಬಳಸುವ ಈ ಎಣ್ಣೆಗಳ ಬೆಲೆ ಇಳಿಕೆ ಆಗಿ, ಹಬ್ಬದ ಋತುವಿನಲ್ಲಿ ದೇಶಿ ಮಾರುಕಟ್ಟೆಯಲ್ಲಿ ಲಭ್ಯತೆ ಜಾಸ್ತಿ ಆಗುವ ನಿರೀಕ್ಷೆ ಇದೆ.

ಕಚ್ಚಾ ತಾಳೆ ಎಣ್ಣೆಯ ಮೇಲಿನ ಕೃಷಿ ಮೂಲಸೌಕರ್ಯ ಅಭಿವೃದ್ಧಿ ಸೆಸ್ (ಎಐಡಿಸಿ) ಈಗ ಶೇ 7.5ರಷ್ಟಾಗಿದೆ. ಕಚ್ಚಾ ಸೋಯಾ ಮತ್ತು ಕಚ್ಚಾ ಸೂರ್ಯಕಾಂತಿ ಎಣ್ಣೆಗಳ ಮೇಲಿನ ಸೆಸ್ ತಲಾ ಶೇ 5ರಷ್ಟಾಗಿದೆ. ಈ ಮೊದಲು ಸೆಸ್ ಶೇ 20ರಷ್ಟಿತ್ತು.

ಮೂಲ ಕಸ್ಟಮ್ಸ್ ಸುಂಕ ಇಳಿಕೆಯಿಂದಾಗಿ ಕಸ್ಟಮ್ಸ್ ಸುಂಕವು ಕಚ್ಚಾ ತಾಳೆ ಎಣ್ಣೆಗೆ ಶೇ 8.25ರಷ್ಟು, ಕಚ್ಚಾ ಸೋಯಾ ಎಣ್ಣೆಗೆ ಶೇ 5.5ರಷ್ಟು ಹಾಗೂ ಕಚ್ಚಾ ಸೂರ್ಯಕಾಂತಿ ಎಣ್ಣೆಗೆ ಶೇ 5.5ರಷ್ಟಕ್ಕೆ ಇಳಿಕೆ ಆಗಿದೆ. ಈ ಮೊದಲು ಈ ಮೂರರ ಮೇಲಿನ ಕಸ್ಟಮ್ಸ್ ಸುಂಕ ಶೇ 24.75ರಷ್ಟು ಇತ್ತು.

ಅಡುಗೆ ಎಣ್ಣೆ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ಆಮದು ಸೆಪ್ಟೆಂಬರ್‌ನಲ್ಲಿ ಶೇಕಡ 63ರಷ್ಟು ಹೆಚ್ಚಾಗಿ ದಾಖಲೆಯ 16.98 ಲಕ್ಷ ಟನ್‌ಗೆ ಏರಿಕೆ ಆಗಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎ) ತಿಳಿಸಿದೆ.

ತಾಳೆ ಎಣ್ಣೆ ಆಮದು ಪ್ರಮಾಣ ಹೆಚ್ಚಾಗಿರುವುದರಿಂದ ಸೆಪ್ಟೆಂಬರ್ ತಿಂಗಳ ಒಟ್ಟಾರೆ ಆಮದು ದಾಖಲೆ ಮಟ್ಟಕ್ಕೆ ತಲುಪಿದೆ ಎಂದು ಅದು ಹೇಳಿದೆ. ಈ ಹಿಂದೆ 2015ರ ಅಕ್ಟೋಬರ್‌ನಲ್ಲಿ ಅಡುಗೆ ಎಣ್ಣೆ ಆಮದು 16.51 ಲಕ್ಷ ಟನ್ ಆಗಿದ್ದು ಗರಿಷ್ಠ ಮಟ್ಟವಾಗಿತ್ತು.

ತಾಳೆ ಎಣ್ಣೆ ಆಮದು ಸೆಪ್ಟೆಂಬರ್‌ನಲ್ಲಿ 12.62 ಲಕ್ಷ ಟನ್‌ಗಳಷ್ಟು ಆಗಿದೆ. 1996ರಿಂದ ಭಾರತವು ತಾಳೆ ಎಣ್ಣೆ ಆಮದು ಮಾಡಿಕೊಳ್ಳಲು ಆರಂಭಿಸಿದ ಬಳಿಕ ತಿಂಗಳೊಂದರಲ್ಲಿ ಆಗಿರುವ ಗರಿಷ್ಠ ಪ್ರಮಾಣದ ಆಮದು ಇದಾಗಿದೆ ಎಂದು ಒಕ್ಕೂಟದ ಕಾರ್ಯನಿರ್ವಾಹಕ ನಿರ್ದೇಶಕ ಬಿ.ವಿ. ಮೆಹ್ತಾ ಹೇಳಿದ್ದಾರೆ.

ಖಾದ್ಯ ತೈಲವಲ್ಲದ, ಇತರ ಎಣ್ಣೆಗಳ ಆಮದು 17,702 ಟನ್‌ಗಳಿಂದ 63,608 ಟನ್‌ಗಳಿಗೆ ಏರಿಕೆ ಆಗಿದೆ. 2020ರ ನವೆಂಬರ್‌ನಿಂದ 2021ರ ಸೆಪ್ಟೆಂಬರ್ ಅವಧಿಯಲ್ಲಿ ಅಡುಗೆ ಎಣ್ಣೆ ಆಮದು 1.19 ಕೋಟಿ ಟನ್‌ಗಳಿಂದ 1.20 ಕೋಟಿ ಟನ್‌ಗಳಿಗೆ ಏರಿಕೆ ಆಗಿದೆ.

₹ 270 ಲಕ್ಷ ಕೋಟಿಗೆ ತಲುಪಿದ ಮಾರುಕಟ್ಟೆ ಬಂಡವಾಳ ಮೌಲ್ಯ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ಬುಧವಾರದ ವಹಿವಾಟಿನಲ್ಲಿ ₹ 270 ಲಕ್ಷ ಕೋಟಿಗೆ ತಲುಪಿದೆ. ಇದು ಸಾರ್ವಕಾಲಿಕ ದಾಖಲೆಯ ಮಟ್ಟ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಬುಧವಾರ 452 ಅಂಶ ಏರಿಕೆ ಕಂಡಿತು. 60,737 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ಐದು ದಿನಗಳಲ್ಲಿ ಸೆನ್ಸೆಕ್ಸ್ ಒಟ್ಟು 1,547 ಅಂಶ ಏರಿಕೆ ಕಂಡಿದೆ. ಐದು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 8.52 ಲಕ್ಷ ಕೋಟಿ ಹೆಚ್ಚಳವಾಗಿದೆ.

ಹಬ್ಬದ ಋತು ಶುರುವಾಗಿರುವ ಕಾರಣ ದೇಶದ ಷೇರು ಪೇಟೆಗಳಲ್ಲಿ ಉತ್ಸಾಹದ ವಹಿವಾಟು ನಡೆದಿದೆ. ಆಟೊಮೊಬೈಲ್, ಲೋಹ, ಇಂಧನ ವಲಯದ ಷೇರುಗಳ ಖರೀದಿಗೆ ಜೋರಾಗಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 169 ಅಂಶ ಏರಿಕೆ ಕಂಡಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 15 ಪೈಸೆಯಷ್ಟು ಹೆಚ್ಚಾಗಿದೆ.

ಟೊಮೆಟೊ ಕೆ.ಜಿ.ಗೆ ₹ 72ವರೆಗೆ ಏರಿಕೆ

ನವದೆಹಲಿ (ಪಿಟಿಐ): ಮಹಾನಗರಗಳ ಚಿಲ್ಲರೆ ಮಾರುಕಟ್ಟೆಗಳಲ್ಲಿ ಟೊಮೆಟೊ ದರವು ಕೆ.ಜಿ.ಗೆ ₹ 72ರವರೆಗೂ ಏರಿಕೆ ಆಗಿದೆ. ಕೋಲ್ಕತ್ತದಲ್ಲಿ ಮಂಗಳವಾರ ಕೆ.ಜಿ ಟೊಮೆಟೊ ಬೆಲೆ ₹ 72ರಷ್ಟು ಇತ್ತು. ಕಳೆದ ತಿಂಗಳ ಇದೇ ಅವಧಿಯಲ್ಲಿ ಕೆ.ಜಿ.ಗೆ ₹ 38ರಂತೆ ಮಾರಾಟ ಆಗಿತ್ತು. ದೆಹಲಿ ಮತ್ತು ಚೆನ್ನೈನಲ್ಲಿ ಕೆ.ಜಿ.ಗೆ ₹ 57ಕ್ಕೆ ಏರಿಕೆ ಆಗಿದೆ ಎಂದು ಗ್ರಾಹಕ ವ್ಯವಹಾರಗಳ ಸಚಿವಾಲಯದ ಅಂಕಿ–ಅಂಶವು ತಿಳಿಸಿದೆ.

ಮುಂಬೈನಲ್ಲಿ ಚಿಲ್ಲರೆ ಮಾರಾಟ ದರ ಕೆ.ಜಿಗೆ ₹ 15 ರಷ್ಟು ಇದ್ದಿದ್ದು ₹ 53ಕ್ಕೆ ಏರಿಕೆ ಆಗಿದೆ.

19 ಜಿಲ್ಲೆಗಳಲ್ಲಿ ಸಾಲ ಸಂಪರ್ಕ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ನಿರ್ದೇಶನ ಮೇರೆಗೆ ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯು ರಾಜ್ಯದಲ್ಲಿ ಬುಧವಾರದಿಂದ 19 ಜಿಲ್ಲೆಗಳಲ್ಲಿ ಸಾಲ ಸಂಪರ್ಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕೆನರಾ ಬ್ಯಾಂಕ್ ಈ ಸಮಿತಿಯ ಸಂಚಾಲಕ ಆಗಿದೆ.

ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಸ್ವಾಮ್ಯದ ಎಲ್ಲ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಡಿಸಿಸಿಬಿಗಳು, ಎಂಎಫ್‌ಐಗಳು, ಎನ್‌ಬಿಎಫ್‌ಸಿಗಳು ಮತ್ತು ಖಾಸಗಿ ವಲಯದ ಬ್ಯಾಂಕುಗಳು, ನಬಾರ್ಡ್ ಮತ್ತು ಕೆವಿಐಸಿ, ಕೆವಿಐಬಿ ಮತ್ತು ಡಿಐಸಿ ಯಂತಹ ಇತರ ಸರ್ಕಾರಿ ಇಲಾಖೆಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿವೆ ಎಂದು ಸಮಿತಿಯು ಹೇಳಿದೆ.

ವಿವಿಧ ಸಾಲ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು ಮತ್ತು ಸಾಲದ ಅರ್ಜಿಗಳನ್ನು ಸ್ವೀಕರಿಸಲು, ಮಂಜೂರಾತಿ ಪತ್ರಗಳನ್ನು ವಿತರಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ.

ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿ: ತಾಹಿತಿ ವಿರುದ್ಧ ಜಯಭೇರಿ

ಎಂಟರಘಟ್ಟಕ್ಕೆ ಭಾರತ ತಂಡ

ಆಹಸ್, ಡೆನ್ಮಾರ್ಕ್ (ಪಿಟಿಐ): ಭಾರತ ಪುರುಷರ ತಂಡವು ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದೆ. 2010ರ ಬಳಿಕ ತಂಡದಿಂದ ಈ ಸಾಧನೆ ಹೊರಹೊಮ್ಮಿದೆ.

ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಭಾರತ ತಂಡವು 5–0ಯಿಂದ ದುರ್ಬಲ ತಾಹಿತಿ ಎದುರು ಜಯಭೇರಿ ಮೊಳಗಿಸಿತು. ಮಂಗಳವಾರ ನೆದರ್ಲೆಂಡ್ಸ್ ತಂಡವನ್ನು ಇಷ್ಟೇ ಅಂತರದಿಂದ ಮಣಿಸಿತ್ತು.

2010ರಲ್ಲಿ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದ ಭಾರತ ತಂಡವು ಇಂಡೊನೇಷ್ಯಾ ಎದುರು ಮುಗ್ಗರಿಸಿತ್ತು.



ಬಿ.ಸಾಯಿ ಪ್ರಣೀತ್– ಎಎಫ್‌ಪಿ ಚಿತ್ರ

ತಾಹಿತಿ ಎದುರಿನ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಕಣಕ್ಕಿಳಿದಿದ್ದ ಬಿ.ಸಾಯಿ ಪ್ರಣೀತ್ 21-5, 21-6ರಿಂದ ಲೂಯಿಸ್ ಬೀಬೊಯಿಸ್ ಅವರನ್ನು ಮಣಿಸಿದರು. ಇನ್ನೊಂದು ಹಣಾಹಣಿಯಲ್ಲಿ ಸಮೀರ್ ವರ್ಮಾ 21-12, 21-12ರಿಂದ ರೆಮಿ ರೊಸ್ಸಿ ಎದುರು ಜಯಿಸಿದರು. ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನಲ್ಲಿ ಕಿರಣ್ ಜಾರ್ಜ್ 21-4, 21-2ರಿಂದ ಇಲಿಯಾಸ್ ಮೌಬ್ಲಾಂಕ್ ವಿರುದ್ಧ ಮೇಲುಗೈ ಸಾಧಿಸಿದರು.

ಔಪಚಾರಿಕ ಎನಿಸಿದ್ದ ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿಯು 21-5, 21-3ರಿಂದ ಮೌಬ್ಲಾಂಕ್ – ಹೈವಾ ಯೊನೆಟ್ ಎದುರು ಜಯ ಸಾಧಿಸಿದರು. ಇನ್ನೊಂದು ಸುತ್ತಿನಲ್ಲಿ ಕೃಷ್ಣಪ್ರಸಾದ್–ವಿಷ್ಣುವರ್ಧನ್ ಜೋಡಿಯೂ ಗೆಲುವಿನ ಹಾದಿ ತುಳಿಯಿತು.

ತಾಹಿತಿ ಎದುರಿನ ಜಯದೊಂದಿಗೆ ಭಾರತ 'ಸಿ' ಗುಂಪಿನಲ್ಲಿ ಅಗ್ರ ಎರಡು ತಂಡಗಳಲ್ಲಿ ಸ್ಥಾನ ಪಡೆಯುವುದನ್ನು ಖಚಿತಪಡಿಸಿಕೊಂಡಿದೆ. ಗುರುವಾರ ನಡೆಯುವ ಪಂದ್ಯದಲ್ಲಿ ತಂಡಕ್ಕೆ ಬಲಿಷ್ಠ ಚೀನಾ ಸವಾಲು ಎದುರಾಗಿದೆ.

ಥಾಯ್ಲೆಂಡ್‌ಗೆ ಮಣಿದ ಮಹಿಳಾ ತಂಡ

ಊಬರ್ ಕಪ್ ಟೂರ್ನಿಯ 'ಬಿ' ಗುಂಪಿನ ಕೊನೆಯ ಪಂದ್ಯದಲ್ಲಿ ಥಾಯ್ಲೆಂಡ್ ಎದುರು ಕಣಕ್ಕಿಳಿದಿದ್ದ ಭಾರತ ಮಹಿಳಾ ತಂಡವು 0–5ರಿಂದ ನಿರಾಸೆ ಅನುಭವಿಸಿತು. ತಂಡಕ್ಕೆ ಇದು ಮೊದಲ ಸೋಲು. ಈ ಮೊದಲು ಸ್ಪೇನ್ (3–2) ಹಾಗೂ ಸ್ಕಾಟ್ಲೆಂಡ್ (4–1) ತಂಡಗಳನ್ನು ಮಣಿಸಿತ್ತು.

ಥಾಯ್ಲೆಂಡ್ ಎದುರಿನ ಪಂದ್ಯದ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಮಾಳವಿಕಾ ಬಾನ್ಸೋದ್ 15-21, 11-21ರಿಂದ ಪಾರ್ನ್‌ಪವೀ ಚೋಚುವಾಂಗ್ ಎದುರು ಸೋತರು. ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ–ಎನ್.ಸಿಕ್ಕಿರೆಡ್ಡಿ 16-21, 12-21ರಿಂದ ಜಾಂಗ್‌ಕೊಲ್ಪನ್ ಕಿತಿತಾರ್ಕುಲ್–ರವಿಂದಾ ಪ್ರಜೊಂಗ್‌ಜಾಯ್ ಎದುರು ಎಡವಿದರು.

ಗೆಲ್ಲಲೇಬೇಕಿದ್ದ ಸಿಂಗಲ್ಸ್ ಹಣಾಹಣಿಯಲ್ಲಿ ಅದಿತಿ ಭಟ್ ಅವರು ಜಿದ್ದಾಜಿದ್ದಿನ ಪೈಪೋಟಿಯಲ್ಲಿ 16-21, 21-18, 15-21ರಿಂದ ಬುಸಾನನ್ ಒಂಗ್‌ಬಮ್ರುಂಗ್‌ಪನ್ ಎದುರು ಸೋತರು. ಡಬಲ್ಸ್‌ನಲ್ಲಿ ತ್ರೀಶಾ ಜೋಲಿ– ಗಾಯತ್ರಿ ಗೋಪಿಚಂದ್ ಮತ್ತು ಇನ್ನೊಂದು ಸಿಂಗಲ್ಸ್ ಸೆಣಸಾಟದಲ್ಲಿ ತಸ್ನಿಮ್ ಮೀರ್ ಕೂಡ ನಿರಾಸೆ ಅನುಭವಿಸಿದರು.

ಹಿಮಾ ದಾಸ್‌ಗೆ ಕೋವಿಡ್

ನವದೆಹಲಿ (ಪಿಟಿಐ): ಭಾರತದ ಸ್ಪ್ರಿಂಟ್ ತಾರೆ ಹಿಮಾ ದಾಸ್ ಅವರಿಗೆ ಕೋವಿಡ್–19 ಸೋಂಕು ತಗುಲಿದೆ. ಟ್ವೀಟ್ ಮೂಲಕ ಅವರು ಸ್ವತಃ ಈ ವಿಷಯ ತಿಳಿಸಿದ್ದು ಸದ್ಯ ಪ್ರತ್ಯೇಕವಾಸದಲ್ಲಿದ್ದು ಯಾವುದೇ ಸಮಸ್ಯೆಗಳಿಲ್ಲ ಎಂದು ಹೇಳಿದ್ದಾರೆ.

21 ವರ್ಷದ ಹಿಮಾ ಪಟಿಯಾಲದ ರಾಷ್ಟ್ರೀಯ ಕ್ರೀಡಾ ಸಂಸ್ಥೆಯಲ್ಲಿ ಇಚೆಗೆ ಆರಂಭಗೊಂಡಿರುವ ರಾಷ್ಟ್ರೀಯ ಶಿಬಿರದಲ್ಲಿ ಪಾಲ್ಗೊಂಡಿದ್ದರು. 'ಪ್ರತ್ಯೇಕವಾಸದ ಸಂದರ್ಭವನ್ನು ವಿಶ್ರಾಂತಿಗಾಗಿ ಬಳಸಿಕೊಳ್ಳಲಿದ್ದೇನೆ. ಇನ್ನಷ್ಟು ಬಲಶಾಲಿಯಾಗಿ ಟ್ರ್ಯಾಕ್‌ಗೆ ಇಳಿಯಲು ಇದು ನೆರವಾಗಲಿದೆ. ಎಲ್ಲರೂ ಮಾಸ್ಕ್ ಧರಿಸಿ, ಸುರಕ್ಷಿತವಾಗಿರಿ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಟಿಟಿ: ಸಹನಾ, ಸಮರ್ಥ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹನಾ ಎಚ್. ಮೂರ್ತಿ, ಸಮರ್ಥ್ ಕುರಡಿಕೇರಿ ಮತ್ತು ಆಯುಷ್ ಕೆ. ಅವರು ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಜೂನಿಯರ್ ಬಾಲಕಿಯರ, ಪುರುಷರ ಮತ್ತು ನಾನ್ ಮೆಡಲಿಸ್ಟ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.



ಪ್ರಶಸ್ತಿಗಳೊಂದಿಗೆ ಸಮರ್ಥ್ ಕುರಡಿಕೇರಿ, ಸಹನಾ ಎಚ್. ಮೂರ್ತಿ ಮತ್ತು ಆಯುಷ್ ಕೆ.

ಮಲ್ಲೇಶ್ವರ ಸಂಸ್ಥೆಯ ಆಶ್ರಯದಲ್ಲಿ ನಡೆದ ಟೂರ್ನಿಯ ಬಾಲಕಿಯರ ಫೈನಲ್‌ನಲ್ಲಿ ಸಹನಾ 11–7, 11–7, 11–5, 9–11, 11–8ರಿಂದ ತೃಪ್ತಿ ಪುರೋಹಿತ್ ಸವಾಲು ಮೀರಿದರು.

ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಸಹನಾ 11–9, 11–3, 11–5, 11–8ರಿಂದ ಕರುಣಾ ಗಜೇಂದ್ರನ್ ಎದುರೂ, ತೃಪ್ತಿ 11–13, 7–11, 11–3, 11–3, 11–4, 11–7ರಿಂದ ಪರ್ಣವಿ ಎದುರು ಜಯ ಸಾಧಿಸಿದ್ದರು.

ಪುರುಷರ ಸಿಂಗಲ್ಸ್‌ನ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಸಮರ್ಥ್ ಕುರಡಿಕೇರಿ 11–9, 8–11, 11–7, 12–10, 11–7ರಿಂದ ಶ್ರೇಯಸ್ ತೆಲಂಗ ಅವರನ್ನು ಮಣಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ಸಮರ್ಥ್ 11–7, 13–11, 11–7, 11–1ರಿಂದ ಆಕಾಶ್ ಕೆ.ಜೆ. ಎದುರು, ಶ್ರೇಯಸ್ 11–8, 11–8, 11–13, 9–11, 11–9, 7–11, 11–9ರಿಂದ ರಕ್ಷಿತ್ ಬಾರಿಗಿಡದ ವಿರುದ್ಧ ಜಯಭೇರಿ ಮೊಳಗಿಸಿದರು.ನಾನ್ ಮೆಡಲಿಸ್ಟ್ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಆಯುಷ್ ಕೆ. 11–7, 11–6, 12–14, 11–7ರಿಂದ ದಿವಿತ್ ಯಕ್ಕುಂಡಿ ಅವರನ್ನು ಮಣಿಸಿ ಪ್ರಶಸ್ತಿ ಜಯಿಸಿದರು. ಸೆಮಿಫೈನಲ್‌ನಲ್ಲಿ ಆಯುಷ್ 12–10, 11–9, 12–10ರಿಂದ ಹೃಷಿಕ್ ಅರಸ್ ಎದುರು ಗೆದ್ದಿದ್ದರು.

ಕ್ರಿಕೆಟ್: ಸೆಮಿಗೆ ಕರ್ನಾಟಕ ಮಹಿಳೆಯರು

ಬೆಂಗಳೂರು: ನಾಯಕಿ ಚಾಂದಸಿ ಕೃಷ್ಣಮೂರ್ತಿ (28ಕ್ಕೆ 3), ಮಿಥಿಲಾ ವಿನೋದ್ (18ಕ್ಕೆ 3) ಅವರ ಬೌಲಿಂಗ್ ಹಾಗೂ ರೋಶಿನಿ ಕಿರಣ್ (ಔಟಾಗದೆ 81) ಅವರ ಭರ್ಜರಿ ಬ್ಯಾಟಿಂಗ್ ಬಲದಿಂದ ಕರ್ನಾಟಕ 19 ವರ್ಷದೊಳಗಿನ ಮಹಿಳಾ ತಂಡದವರು ಬಿಸಿಸಿಐ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ್ದಾರೆ.



ರೋಶಿನಿ ಕಿರಣ್

ಬುಧವಾರ ಜೈಪುರದ ಆರ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕ ಮಹಿಳೆಯರು ಎಂಟು ವಿಕೆಟ್‌ಗಳಿಂದ ದೆಹಲಿ ತಂಡವನ್ನು ಮಣಿಸಿದರು. ಮೊದಲ ಬ್ಯಾಟಿಂಗ್ ಮಾಡಿದ ದೆಹಲಿ 46.1 ಓವರ್‌ಗಳಲ್ಲಿ 134 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ಚಾಂದಸಿ, ಮಿಥಿಲಾ ಅಲ್ಲದೆ ರೀಮಾ ಫರೀದ್ (33ಕ್ಕೆ 2) ಕೂಡ ಎದುರಾಳಿ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ದೆಹಲಿ ಪರ ಕೃತಿಕಾ ಗಾಗ್ದಾ (35) ಗರಿಷ್ಠ ರನ್ ದಾಖಲಿಸಿದರು. ಸಾಧಾರಣ ಗುರಿ ಬೆನ್ನತ್ತಿದ ರಾಜ್ಯ ತಂಡದವರು 39.2 ಓವರ್‌ಗಳಲ್ಲಿ ಎರಡು ವಿಕೆಟ್ ಕಳೆದುಕೊಂಡು ಜಯ ಸಾಧಿಸಿದರು. ರೋಶಿನಿ ಹಾಗೂ ರಕ್ಷಿತಾ ನಾಯಕ್ (29) ಗೆಲುವು ಸುಲಭಗೊಳಿಸಿದರು.

ಕರ್ನಾಟಕ ಮಹಿಳೆಯರು ಇದೇ 16ರಂದು ನಡೆಯುವ ಸೆಮಿಫೈನಲ್‌ನಲ್ಲಿ ಮಧ್ಯಪ್ರದೇಶ ಅಥವಾ ಮುಂಬೈ ತಂಡವನ್ನು ಎದುರಿಸಲಿದ್ದಾರೆ.

ಪುರುಷರ ತಂಡಕ್ಕೆ ಸೋಲು: ವಿನೂ ಮಂಕಡ್ ಟ್ರೋಫಿಗಾಗಿ ನಡೆದ 19 ವರ್ಷದೊಳಗಿನ ಪುರುಷರ ಏಕದಿನ ಟ್ರೋಫಿ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ತಂಡವು 70 ರನ್‌ಗಳಿಂದ ಮಹಾರಾಷ್ಟ್ರಕ್ಕೆ ಮಣಿಯಿತು.

ಅಹಮದಾಬಾದ್‌ನ ಮೊಟೇರಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲ ಬ್ಯಾಟ್ ಮಾಡಿದ ಮಹಾರಾಷ್ಟ್ರ 48.3 ಓವರ್‌ಗಳಲ್ಲಿ 185 ರನ್ ಕಲೆಹಾಕಿತು. ಕರ್ನಾಟಕ ತಂಡದವರು 37.1 ಓವರ್‌ಗಳಲ್ಲಿ 115 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿದರು.



ಪೋರ್ಚುಗಲ್ ತಂಡದ ಕ್ರಿಸ್ಟಿಯಾನೊ ರೊನಾಲ್ಡೊ (ಎಡ) ಮತ್ತು ಲೂಕ್ಸೆಂಬರ್ಗ್ ತಂಡದ ಗೋಲ್‌ಕೀಪರ್ ಆ್ಯಂಟನಿ ಮೊರಿಸ್ ನಡುವೆ ಚೆಂಡಿಗಾಗಿ ಪೈಪೋಟಿ– ಎಎಫ್‌ಪಿ ಚಿತ್ರ

ರೊನಾಲ್ಡೊ ಹ್ಯಾಟ್ರಿಕ್

ಫರೊ, ಪೋರ್ಚುಗಲ್ (ರಾಯಿಟರ್ಸ್/ಎಪಿ): ತಮ್ಮ ವೃತ್ತಿಜೀವನದ 58ನೇ ಹ್ಯಾಟ್ರಿಕ್ ದಾಖಲಿಸಿದ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಪೋರ್ಚುಗಲ್ ತಂಡಕ್ಕೆ ಭರ್ಜರಿ ಜಯ ದೊರಕಿಸಿಕೊಟ್ಟರು. ಮಂಗಳವಾರ ರಾತ್ರಿ ನಡೆದ ವಿಶ್ವಕಪ್ ಅರ್ಹತಾ ಟೂರ್ನಿಯಲ್ಲಿ ಆ ತಂಡವು 5–0ಯಿಂದ ಲೂಕ್ಸೆಂಬರ್ಗ್ ತಂಡವನ್ನು ಪರಾಭವಗೊಳಿಸಿತು.

ಇಲ್ಲಿ ನಡೆದ 'ಎ' ಗುಂಪಿನ ಪಂದ್ಯದ ಮೂಲಕ ರೊನಾಲ್ಡೊ ಒಟ್ಟು 115 ಅಂತರರಾಷ್ಟ್ರೀಯ ಗೋಲುಗಳ ಸರದಾರನಾದರು. 182ನೇ ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದರು. ರೊನಾಲ್ಡೊ 8 ಮತ್ತು 13ನೇ ನಿಮಿಷಗಳಲ್ಲಿ ಪೆನಾಲ್ಟಿ ಅವಕಾಶಗಳನ್ನು ಗೋಲಾಗಿಸಿದರೆ, 87ನೇ ನಿಮಿಷದಲ್ಲಿ ಫೀಲ್ಡ್ ಗೋಲು ದಾಖಲಿಸಿದರು. ತಂಡದ ಪರ ಇನ್ನೆರಡು ಗೋಲುಗಳು ಬ್ರೂನಿ ಮಿಗ್ವೆಲ್ ಫರ್ನಾಂಡೀಸ್ (18ನೇ ನಿ.) ಮತ್ತು ಜೋವಾ ಪಲ್ಹಿನಾ ಗೊಂಜಾಲೆಜ್ (69ನೇ ನಿ.) ಮೂಲಕ ಬಂದವು.

ಡೆನ್ಮಾರ್ಕ್‌ಗೆ ಅರ್ಹತೆ: 'ಎಫ್' ಗುಂಪಿನ ಪಂದ್ಯದಲ್ಲಿ ಆಸ್ಟ್ರಿಯಾ ವಿರುದ್ಧ 1–0ಯಿಂದ ಜಯಿಸಿದ ಡೆನ್ಮಾರ್ಕ್ ವಿಶ್ವಕಪ್‌ಗೆ ಅರ್ಹತೆ ಗಳಿಸಿದ ಯೂರೋಪಿನ ಎರಡನೇ ತಂಡ ಎನಿಸಿಕೊಂಡಿತು. ತಂಡದ ಪರ ಜೋಕಿಮ್ ಮೆಹಲೆ ಕಾಲ್ಚಳಕ ತೋರಿದರು.

ಬೆಲ್ಜಿಯಂ ಹೇಳಿಕೆಗಳಿಗೆ ಹಾಕಿ ಇಂಡಿಯಾ ಆಕ್ರೋಶ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಆಟಗಾರರು ಈ ಬಾರಿ ಎಫ್‌ಐಎಚ್ ಪ್ರಶಸ್ತಿಗಳಲ್ಲಿ ಸಿಂಹಪಾಲು ಪಡೆದಿರುವ ಕುರಿತು ಬೆಲ್ಜಿಯಂ ವ್ಯಕ್ತಪಡಿಸಿರುವ ಸಾರ್ವಜನಿಕ ಅಭಿಪ್ರಾಯಗಳು ಜನಾಂಗೀಯ ತಾರತಮ್ಯವನ್ನು ಬಿಂಬಿಸುತ್ತವೆ ಎಂದು ಹಾಕಿ ಇಂಡಿಯಾ ಖಂಡಿಸಿದೆ.

'ಭಾರತದ ಪ್ರಶಸ್ತಿ ವಿಜೇತರ ಕುರಿತು ಬೆಲ್ಜಿಯಂ ಅಸಮಾಧಾನ ವ್ಯಕ್ತಪಡಿಸಿದೆ. ಇದು ಕ್ರೀಡಾ ಸ್ಫೂರ್ತಿಗೆ ವಿರುದ್ಧವಾಗಿದೆ. ಪ್ರಶಸ್ತಿ ವಿಜೇತರನ್ನು ಅವಮಾನಿಸಲಾಗಿದೆ. ಅಲ್ಲದೇ ಹಾಕಿ ಕ್ರೀಡೆಗೂ ಇದು ಅವಮಾನಿಸಿದಂತಾಗಿದೆ' ಎಂದು ಹಾಕಿ ಇಂಡಿಯಾ ಅಧ್ಯಕ್ಷ ಗ್ಯಾನೆಂದ್ರೊ ನಿಂಗೊಂಬಮ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅಥ್ಲೀಟ್ ಆಗ್ನೇಸ್ ಹತ್ಯೆ

ನೈರೋಬಿ, ಕೆನ್ಯಾ (ರಾಯಿಟರ್ಸ್): ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿ ಕಂಚಿನ ಪದಕ ವಿಜೇತ ಅಥ್ಲೀಟ್ ಅಗ್ನೇಸ್ ಟಿರೊಪ್ ಅವರನ್ನು ಕೊಲೆ ಮಾಡಲಾಗಿದೆ.

ಅಗ್ನೇಸ್ ಅವರ ಮನೆಯಲ್ಲಿಯೇ ದುರ್ಘಟನೆ ನಡೆದಿದೆ. 25 ವರ್ಷದ ಆಗ್ನೇಸ್ ಅವರನ್ನು ಚಾಕುವಿನಿಂದ ಇರಿದು ಕೊಲ್ಲಲಾಗಿದೆ. ಅವರ ಪತಿಯೇ ಈ ಹತ್ಯೆ ಮಾಡಿರುವ ಶಂಕೆ ಇದೆ ಎಂದು ಅಥ್ಲೆಟಿಕ್ಸ್ ಕೆನ್ಯಾ ಬುಧವಾರ ತಿಳಿಸಿದೆ.

ಆಗ್ನೇಸ್ ಅವರು ಈಚೆಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 5000 ಮೀಟರ್ಸ್ ಓಟದಲ್ಲಿ ಕೆನ್ಯಾ ದೇಶವನ್ನು ಪ್ರತಿನಿಧಿಸಿದ್ದರು. ನಾಲ್ಕನೇ ಸ್ಥಾನ ಪಡೆದಿದ್ದರು.

ಟಿ20 ವಿಶ್ವಕಪ್: ಅಕ್ಷರ್ ಬದಲಿಗೆ ಶಾರ್ದೂಲ್

ನವದೆಹಲಿ (ಪಿಟಿಐ): ಮಧ್ಯಮ ವೇಗದ ಬೌಲರ್ ಹಾಗೂ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಅವರಿಗೆ ಟಿ20 ವಿಶ್ವಕಪ್‌ನಲ್ಲಿ ಆಡಲಿರುವ ಭಾರತ ತಂಡದಲ್ಲಿ ಅವಕಾಶ ಲಭಿಸಿದೆ. ಅವರನ್ನು ಅಕ್ಷರ್ ಪಟೇಲ್ ಬದಲಿಗೆ ಸೇರಿಸಿಕೊಳ್ಳಲಾಗಿದೆ. ಅಕ್ಷರ್ ಕಾಯ್ದಿರಿಸಿದ ಆಟಗಾರರ ಪಟ್ಟಿಯಲ್ಲಿದ್ದಾರೆ.



ಶಾರ್ದೂಲ್ –ಎಎಫ್‌ಪಿ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡುತ್ತಿರುವ 29 ವರ್ಷದ ಶಾರ್ದೂಲ್ ಈ ಆವೃತ್ತಿಯಲ್ಲಿ 18 ವಿಕೆಟ್‌ಗಳನ್ನು ಉರುಳಿಸಿದ್ದಾರೆ. ಶಾರ್ದೂಲ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳುವುದರೊಂದಿಗೆ ಭಾರತದ ವಿಶ್ವಕಪ್ ಬಳಗದ ಆಯ್ಕೆ ಪೂರ್ಣಗೊಂಡಿದೆ. ಟೂರ್ನಿಗಾಗಿ ಘೋಷಿಸಿರುವ ತಂಡಗಳಲ್ಲಿ ಬದಲಾವಣೆ ಮಾಡಲು ಈ ತಿಂಗಳ 15ರ ವರೆಗೆ ಆಯೋಜಕರು ಅವಕಾಶ ನೀಡಿದ್ದಾರೆ.

‘ತಂಡದ ಆಡಳಿತದ ಜೊತೆ ನಡೆಸಿದ ಚರ್ಚೆಯ ನಂತರ ಶಾರ್ದೂಲ್ ಠಾಕೂರ್ ಅವರಿಗೆ ಮುಖ್ಯ ತಂಡದಲ್ಲಿ ಸ್ಥಾನ ನೀಡಲು ಆಯ್ಕೆ ಸಮಿತಿ ನಿರ್ಧರಿಸಿದೆ. 15 ಮಂದಿಯ ತಂಡದಲ್ಲಿದ್ದ ಅಕ್ಷರ್ ಪಟೇಲ್ ಅವರನ್ನು ಕಾಯ್ದಿರಿಸಿದ ಆಟಗಾರರ ಪಟ್ಟಿಗೆ ಸೇರಿಸಲಾಗಿದೆ’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ ಶಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಧ್ಯಮವೇಗಿ ಹಾರ್ದಿಕ್ ಪಾಂಡ್ಯ ಅವರು ಫಿಟ್‌ನೆಸ್ ಸಮಸ್ಯೆಯಿಂದಾಗಿ ಐಪಿಎಲ್‌ನಲ್ಲಿ ಬೌಲಿಂಗ್ ಮಾಡಿರಲಿಲ್ಲ. ಮುಂಬೈ ಇಂಡಿಯನ್ಸ್ ತಂಡದಲ್ಲಿ ಆಡುತ್ತಿರುವ ಅವರ ಒತ್ತಡ ನಿರ್ವಹಣೆ ಮಾಡುವುದು ಬಿಸಿಸಿಐ ಆಯ್ಕೆ ಸಮಿತಿಗೆ ಸವಾಲಾಗಿದೆ.

‘ಅಕ್ಷರ್ ಪಟೇಲ್ ಅವರು ಕಾಯ್ದಿರಿಸಿದ ಆಟಗಾರರ ಪಟ್ಟಿಯಲ್ಲಿ ಇರುತ್ತಾರೆ. ರವೀಂದ್ರ ಜಡೇಜ ಅವರಿಗೆ ಆಡಲು ಸಾಧ್ಯವಾಗದ ಪರಿಸ್ಥಿತಿ ಎದುರಾದರೆ ಅಕ್ಷರ್ ಅವರಿಗೆ ಅವಕಾಶ ನೀಡಲಾಗುವುದು. ಜಡೇಜ ಆಡುತ್ತಿದ್ದರೆ ಅಕ್ಷರ್‌ಗೆ ಅವಕಾಶ ಸಿಗುವ ಸಾಧ್ಯತೆ ಇಲ್ಲ’ ಎಂದು ತಿಳಿಸಲಾಗಿದೆ. ರೈಲ್ವೆ ತಂಡದ ಲೆಗ್ ಸ್ಪಿನ್ನರ್ ಕರ್ಣ ಶರ್ಮಾ ಅವರನ್ನು ಕಾಯ್ದಿರಿಸಿದ ಆಟಗಾರರ ಪಟ್ಟಿಯಲ್ಲಿ ಸೇರಿಸಿ ಬಿಸಿಸಿಐ ಅಚ್ಚರಿ ಮೂಡಿಸಿದೆ. ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರಿಗೆ ಅವಕಾಶ ಸಿಗಲಿಲ್ಲ.

ಹರ್ಷಲ್ ಪಟೇಲ್ ಅವರನ್ನು ನೆಟ್‌ಬೌಲರ್‌ಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಆವೇಶ್ ಖಾನ್, ಉಮ್ರಾನ್ ಮಲಿಕ್, ಹರ್ಷಲ್ ಪಟೇಲ್, ಲುಕ್ಮನ್ ಮೆರಿವಾಲ, ವೆಂಕಟೇಶ್ ಅಯ್ಯರ್, ಕರ್ಣ ಶರ್ಮಾ, ಶಹಬಾಜ್ ಅಹಮ್ಮದ್ ಮತ್ತು ಕೆ.ಗೌತಮ್ ಅವರು ತಂಡದ ಬಯೊಬಬಲ್ ಪ್ರವೇಶಿಸಲಿದ್ದು ವಿಶ್ವಕಪ್ ಸಿದ್ಧತೆಯಲ್ಲಿ ನೆರವಾಗಲಿದ್ದಾರೆ.

ಅಕ್ಟೋಬರ್ 17ರಂದು ವಿಶ್ವಕಪ್ ಟೂರ್ನಿ ಆರಂಭವಾಗಲಿದ್ದು ಭಾರತದ ಮೊದಲ ಪಂದ್ಯ ಪಾಕಿಸ್ತಾನ ಎದುರು 24ರಂದು ನಡೆಯಲಿದೆ.


ಭಾರತ ತಂಡ

ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್ ಕೀಪರ್), ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ರಾಹುಲ್ ಚಾಹರ್, ರವಿಚಂದ್ರನ್ ಅಶ್ವಿನ್, ಶಾರ್ದೂಲ್ ಠಾಕೂರ್, ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬೂಮ್ರಾ, ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ.
ಕಾಯ್ದಿರಿಸಿದ ಆಟಗಾರರು: ಶ್ರೇಯಸ್ ಅಯ್ಯರ್, ದೀಪಕ್ ಚಾಹರ್, ಅಕ್ಷರ್ ಪಟೇಲ್.

ಪ್ರತಿಭಟನೆಗೆ ಇಂಗ್ಲೆಂಡ್ ಚಿಂತನೆ

ಲಂಡನ್ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯ ತನ್ನ ಮೊದಲ ಪಂದ್ಯದ ಆರಂಭಕ್ಕೂ ಮುನ್ನ ಜನಾಂಗೀಯ ನಿಂದನೆ ವಿರುದ್ಧದ ಹೋರಾಟಕ್ಕೆ ಬೆಂಬಲ ಸೂಚಿಸುವ ಸಲುವಾಗಿ ಮೊಣಕಾಲೂರುವ ಚಿಂತನೆ ಇದೆ ಎಂದು ಇಂಗ್ಲೆಂಡ್ ತಂಡದ ಮಧ್ಯಮ ವೇಗಿ ಕ್ರಿಸ್ ಜೋರ್ಡಾನ್ ತಿಳಿಸಿದ್ದಾರೆ.

ಇಂಗ್ಲೆಂಡ್ ತನ್ನ ಮೊದಲ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಎದುರು ಸೆಣಸಲಿದೆ. ಕೊನೆಯದಾಗಿ ಇಂಗ್ಲೆಂಡ್ 2020ರ ಆಗಸ್ಟ್‌ನಲ್ಲಿ ಐರ್ಲೆಂಡ್ ಎದುರಿನ ಏಕದಿನ ಪಂದ್ಯದ ಸಂದರ್ಭದಲ್ಲಿ ಮೊಣಕಾಲೂರಿ ಜನಾಂಗೀಯ ನಿಂದನೆ ವಿರುದ್ಧದ ಆಂದೋಲನಕ್ಕೆ ಬೆಂಬಲ ಸೂಚಿಸಿತ್ತು. ಇದನ್ನು ಮುಂದುವರಿಸದೇ ಇದ್ದುದಕ್ಕೆ ವೆಸ್ಟ್ ಇಂಡೀಸ್‌ನ ಖ್ಯಾತ ಆಟಗಾರ ಮತ್ತು ಜನಾಂಗೀಯ ನಿಂದನೆ ವಿರುದ್ಧದ ಆಂದೋಲನದಲ್ಲಿ ಭಾಗಿಯಾಗಿರುವ ಮೈಕೆಲ್ ಹೋಲ್ಡಿಂಗ್ ಬೇಸರ ವ್ಯಕ್ತಪಡಿಸಿದ್ದರು.



ಜೋರ್ಡಾನ್ –ಎಎಫ್‌ಪಿ ಚಿತ್ರ

ವೆಸ್ಟ್ ಇಂಡೀಸ್ ಪ್ರತಿಭಟನೆ: ವಿಶ್ವಕಪ್ ಟೂರ್ನಿಯ ಪ್ರತಿ ಪಂದ್ಯದ ಸಂದರ್ಭದಲ್ಲೂ ಜನಾಂಗೀಯ ನಿಂದನೆ ವಿರುದ್ಧದ ಪ್ರತಿಭಟನೆ ದಾಖಲಿಸುವ ಸಲುವಾಗಿ ಮೊಣಕಾಲೂರಲಾಗುವುದು ಎಂದು ವೆಸ್ಟ್ ಇಂಡೀಸ್ ತಂಡದ ನಾಯಕ ಕೀರನ್ ಪೊಲಾರ್ಡ್ ತಿಳಿಸಿದ್ದಾರೆ.



ಹೊಸ ಜೆರ್ಸಿಯಲ್ಲಿ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ, ರವೀಂದ್ರ ಜಡೇಜ ಮತ್ತು ರೋಹಿತ್ ಶರ್ಮಾ –ಟ್ವಿಟರ್ ಚಿತ್ರ

ಭಾರತ ತಂಡದ ಜೆರ್ಸಿ ಬಿಡುಗಡೆ

ನವದೆಹಲಿ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಗಾಗಿ ಭಾರತ ತಂಡದ ಜೆರ್ಸಿಯನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. ಆಟಗಾರರು ಧರಿಸಲಿರುವ ಶರ್ಟ್‌ಗೆ ‘ಬಿಲಿಯನ್ ಚಿಯರ್ಸ್ ಜೆರ್ಸಿ’ ಎಂದು ಹೆಸರು ನೀಡಲಾಗಿದೆ. ಭಾರತ ಪುರುಷ, ಮಹಿಳಾ ಮತ್ತು 19 ವರ್ಷದೊಳಗಿನವರ ತಂಡದ ಉಡುಪಿನ ಅಧಿಕೃತ ಪ್ರಾಯೋಜಕತ್ವ ವಹಿಸಿರುವ ಎಂಪಿಎಲ್ ಇದನ್ನು ಬಿಡುಗಡೆ ಮಾಡಿದೆ. ಪರ್ಷಿಯನ್ ಬ್ಲೂ ಮತ್ತು ರಾಯಲ್ ಬ್ಲೂ ಬಣ್ಣವನ್ನು ಹೊಂದಿದೆ.

‘ಭಾರತ ಕ್ರಿಕೆಟ್‌ನ ಇತಿಹಾಸದಲ್ಲಿ ಇದೇ ಮೊದಲ ಬಾರಿ ಆಟಗಾರರ ಜೆರ್ಸಿಯಲ್ಲಿ ಅಭಿಮಾನಿಗಳ ಭಾವನೆಗಳನ್ನು ಬಿಂಬಿಸಲಾಗಿದೆ. ವಿಶಿಷ್ಟ ಧ್ವನಿತರಂಗ ಮಾದರಿ ಬಳಸಿ ಹಿಂದಿನ ಪ್ರಮುಖ ಪಂದ್ಯಗಳಿಗೆ ಸಂಬಂಧಿಸಿ ಅಭಿಮಾನಿಗಳ ಘೋಷಣೆಯ ಪರಿ, ಸಂಭ್ರಮದ ಅಲೆಯನ್ನು ಅಳವಡಿಸಲಾಗಿದೆ’ ಎಂದು ಎಂಪಿಎಲ್ ತಿಳಿಸಿದೆ.

ಜೆರ್ಸಿಗಳು ₹ 1,799 ಮೊತ್ತಕ್ಕೆ ಖರೀದಿಗೆ ಲಭ್ಯವಿದ್ದು ಆಟಗಾರರ ಆವೃತ್ತಿ ಮತ್ತು ವಿರಾಟ್ ಕೊಹ್ಲಿ ಅವರ 18ನೇ ಸಂಖ್ಯೆಯ ಜೆರ್ಸಿಗಳನ್ನೂ ಬಿಡುಗಡೆ ಮಾಡಲಾಗಿದೆ.



ಅಡುಗೆಮನೆ ಅಂದ ನಿಮ್ಮ ಕೈಯಲ್ಲೇ ಇದೆ!

ಗೃಹಾಲಂಕಾರ

ಅಡುಗೆ ಮಾಡುವುದೂ ಒಂದು ಕಲೆ; ಹಾಗೆಯೇ ಅಡುಗೆಕೋಣೆಯನ್ನು ಸ್ವಚ್ಛವಾಗಿ, ಸುಂದರವಾಗಿ ಕಾಣುವಂತೆ ಇರಿಸುವುದು ಕೂಡ ಒಂದು ಕಲೆ. ಅಡುಗೆಮನೆ ಎಂದ ಮೇಲೆ ಪಾತ್ರೆ, ಪರಿಕರಗಳು ಇರುವುದು ಸಾಮಾನ್ಯ. ಆದರೆ ಇತ್ತೀಚೆಗೆ ಚಿಕ್ಕ ಅಡುಗೆಕೋಣೆ ಕಟ್ಟಿಸುವ ಕಾರಣ ಅದರ ಅಂದ ಕೆಡುತ್ತಿದೆ. ಅಲ್ಲದೇ ಅಲ್ಲಲ್ಲಿ ಹರಡಿಕೊಂಡಿರುವ ಪಾತ್ರೆ, ಅಡುಗೆ ಸಾಮಗ್ರಿಗಳು ಕಿರಿಕಿರಿ ಉಂಟು ಮಾಡುತ್ತವೆ. ಹಾಗಾಗಿ ಒಂದಿಷ್ಟು ಚೆನ್ನಾಗಿ ಕಾಣಿಸುವ ಹಾಗೂ ಅನುಕೂಲ ಒದಗಿಸುವ ಸಲಕರಣೆಗಳನ್ನು ಜೋಡಿಸಿಡುವ ಮೂಲಕ ಕಡಿಮೆ ಜಾಗವನ್ನೂ ಸುಂದರವಾಗಿ ಕಾಣುವಂತೆ ಮಾಡಬಹುದು.

> ಅಡುಗೆಗೆ ಅನುಕೂಲಕರವಾದ ಸಲಕರಣೆಗಳನ್ನು ನೀಟಾಗಿ ಜೋಡಿಸಿ ಇಟ್ಟುಕೊಂಡರೆ ಅಡುಗೆಮನೆ ಅಂದವಾಗಿಯೂ ಕಾಣುತ್ತದೆ; ಜಾಗದ ಕೊರತೆಯನ್ನೂ ನೀಗಿಸಬಹುದು.



ಪ್ಲಾಸ್ಟಿಕ್ ಡಬ್ಬಿಗಳು

ಒಂದೇ ಗಾತ್ರ ಹಾಗೂ ಆಕಾರವಿರುವ ಚೆಂದದ ವಿನ್ಯಾಸದ ಪ್ಲಾಸ್ಟಿಕ್ ಡಬ್ಬಿ(ಫುಡ್ ಗ್ರೇಡ್)ಗಳು ಇತ್ತೀಚೆಗೆ ಮಾರುಕಟ್ಟೆಯಲ್ಲಿ ಲಭ್ಯ. ಇವನ್ನು ಅಂದವಾಗಿ ಜೋಡಿಸಿ ಇಡಬಹುದು. ಜೊತೆಗೆ ಇವುಗಳಿಗೆ ಕಡಿಮೆ ಜಾಗವೂ ಸಾಕು. ಅಲ್ಲದೇ ಒಂದರ ಮೇಲೆ ಒಂದರಂತೆ ನೀಟಾಗಿ ಜೋಡಿಸುವುದರಿಂದ ಜಾಗವನ್ನೂ ಉಳಿತಾಯ ಮಾಡಬಹುದು.



ಕಾಟನ್ ಟವೆಲ್‌ಗಳು

ಇಡೀ ಮನೆಯಲ್ಲಿ ಹೆಚ್ಚು ಗಲೀಜಾಗುವ ಜಾಗವೆಂದರೆ ಅಡುಗೆಮನೆ. ಹಾಗಾಗಿ ಪದೇ ಪದೇ ಅಡುಗೆಮನೆಯನ್ನು ಒರೆಸುತ್ತಲೇ ಇರಬೇಕು. ಅಡುಗೆಕಟ್ಟೆ ಒರೆಸಲು ಯಾವ ಬಟ್ಟೆಯಾದರೇನು ಎಂಬ ಮನೋಭಾವ ಹಲವರದ್ದು. ಹಾಗಾಗಿ ಹಳೆಯ, ಬಳಸಿ ಬಿಸಾಡಿದ ಬಟ್ಟೆಗಳನ್ನು ಒರೆಸಲು ಬಳಸುವುದು ಸಾಮಾನ್ಯ. ಇದು ಅಡುಗೆಮನೆಯ ಅಂದು ಕೆಡಿಸುತ್ತದೆ. ಅಡುಗೆಮನೆ ಸ್ವಚ್ಛ ಮಾಡಲು ಹತ್ತಿಯ ಟವೆಲ್‌ಗಳನ್ನು ಬಳಸಬಹುದು. ಇದರಿಂದ ಸ್ವಚ್ಛತೆ ಕಾಪಾಡಿಕೊಳ್ಳುವುದರ ಜೊತೆಗೆ ಅಡುಗೆಕೋಣೆಯ ಅಂದ ಕೆಡದಂತೆ ನೋಡಿಕೊಳ್ಳಬಹುದು.

ಸ್ಟೀಲ್ ಕಿಚನ್ ರ‍್ಯಾಕ್

ಹಲವರು ಅಡುಗೆಮನೆಯಲ್ಲಿ ಪಾತ್ರೆ, ಪಗಡೆಗಳನ್ನು ಸಿಕ್ಕ ಸಿಕ್ಕಲ್ಲಿ ಎಸೆದಿರುತ್ತಾರೆ. ಲೋಟ, ತಟ್ಟೆ ಒಂದು ಕಡೆಯಾದರೆ, ತಿಂಡಿ ತಿನ್ನುವ ಪ್ಲೇಟ್ ಇನ್ನೊಂದೆಡೆ. ಹೀಗೆ ಎಲ್ಲೆಂದರಲ್ಲಿ ಇರಿಸಿಕೊಂಡು ಹುಡುಕಲು ಪರದಾಡುವುದರಿಂದ ಅಡುಗೆಮನೆಯ ಅಂದವೇ ಕೆಟ್ಟು ಹೋಗುತ್ತದೆ. ಅದರ ಬದಲು ಸ್ಟೀಲ್ ರ‍್ಯಾಕ್ ಹೋಲ್ಡರ್ ಅನ್ನು ಅಳವಡಿಸಿಕೊಳ್ಳಬಹುದು. ಅದರಲ್ಲಿ ಲೋಟ, ತಟ್ಟೆ, ಬಟ್ಟಲು ಹೀಗೆ ಎಲ್ಲವನ್ನೂ ವಿಂಗಡಿಸಿ ಇರಿಸಬಹುದು. ಇದು ಅಡುಗೆಮನೆಯ ನೋಟವನ್ನು ಬದಲಿಸುವುದರಲ್ಲಿ ಸಂಶಯವಿಲ್ಲ.

ಮರದ ಸೌಟು, ಚಮಚಗಳು

ಈ ಹಿಂದೆ ಅಡುಗೆ ಮಾಡಲು ಮರದ ಸಲಕರಣೆಗಳನ್ನು ಬಳಸುತ್ತಿದ್ದರು. ಅಂತಹ ಕಾಲ ಮತ್ತೆ ಬಂದಿದೆ. ಈಗ ಅಡುಗೆ ಮಾಡಲು ಮರದ ಪರಿಕರಗಳನ್ನು ಬಳಸುವುದು ಟ್ರೆಂಡ್ ಆಗಿದೆ. ಇವು ಅಡುಗೆಮನೆ ಹಾಗೂ ಊಟದ ಟೇಬಲ್‌ನ ಅಂದವನ್ನು ಹೆಚ್ಚಿಸುತ್ತವೆ. ಅಲ್ಲದೇ ಇವುಗಳನ್ನು ಎಲ್ಲೆಂದರಲ್ಲಿ ಇಡುವ ಬದಲು ಗೋಡೆಯಲ್ಲಿ ನೀಟಾಗಿ ನೇತು ಹಾಕಬಹುದು. ಇದರಿಂದ ಜಾಗ ಉಳಿತಾಯವಾಗುತ್ತದೆ.

ಏಪ್ರನ್ ಸೆಟ್

ಅಡುಗೆ ಮಾಡುವಾಗ ಉಡುಪು ಗಲೀಜಾಗುವುದನ್ನು ತಡೆಯಲು ಏಪ್ರನ್ ಕಟ್ಟಿಕೊಳ್ಳುತ್ತಾರೆ. ಇದರೊಂದಿಗೆ ಕೈಯ ಅಂದವನ್ನು ಕಾಪಾಡಲು ಕೈಗವಸು ಬಳಸಬಹುದು. ಒಂದೇ ಬಣ್ಣದ ಏಪ್ರನ್ ಹಾಗೂ ಕೈಗವಸು ಬಳಸಬಹುದು.

ಹಬ್ಬಕ್ಕೆ ಮನೆಯಲ್ಲಿರಲಿ ಪರಿಮಳ ಸೂಸುವ ದೀಪಗಳು

ಕೋವಿಡ್ ಕಾರಣದಿಂದ ಕಳೆದ ವರ್ಷ ಹಬ್ಬಗಳನ್ನು ಸಂಭ್ರಮದಿಂದ ಆಚರಿಸಲು ಸಾಧ್ಯವಾಗಿರಲಿಲ್ಲ. ಅಲ್ಲದೇ ಹಬ್ಬದ ಆಚರಣೆಯ ಕ್ರಮವೂ ಬದಲಾಗಿತ್ತು. ಆದರೆ ಈಗ ಕೋವಿಡ್ ಕಡಿಮೆಯಾಗಿರುವುದರಿಂದ ಮತ್ತೆ ಹಬ್ಬಗಳು ಕಳೆಗಟ್ಟುತ್ತಿವೆ. ಹಬ್ಬಗಳೆಂದರೆ ಕೇವಲ ದೇವರ ಪೂಜೆ ಮಾತ್ರವಲ್ಲ, ಮನೆಯನ್ನೂ ಕೂಡ ಸುಂದರವಾಗಿ ಅಲಂಕರಿಸಿಕೊಳ್ಳಬಹುದು. ಹಬ್ಬದಲ್ಲಿ ಮನೆಯೊಳಗೆ ದೈವಿಕ ಕಳೆ ಮೂಡುವಂತೆ ಮಾಡುವುದಲ್ಲದೇ ಪರಿಮಳ ಹೊರ ಸೂಸುವ ಸಾಧನಗಳನ್ನು ಇರಿಸುವ ಮೂಲಕ ಇನ್ನಷ್ಟು ಕಳೆ ಹೆಚ್ಚುವಂತೆ ಅಲಂಕರಿಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಪರಿಮಳ ಹೊರ ಸೂಸುವ ಸಾಧನಗಳನ್ನು ಮನೆಯೊಳಗಿಟ್ಟರೆ ಮನಸ್ಸಿನ ಉಲ್ಲಾಸವೂ ಹೆಚ್ಚಾಗುತ್ತದೆ.

ಸುವಾಸನೆ ಬೀರುವ ಡಿಫ್ಯೂಸರ್

ಮನೆಯ ಒಳಗೆ ಕಾಲಿರಿಸಿದ ತಕ್ಷಣ ನಾಸಿಕಕ್ಕೆ ಒಳ್ಳೆಯ ಪರಿಮಳ ತಾಕಿದರೆ ಮನಸ್ಸು ಖುಷಿಯಿಂದ ಕುಣಿದಾಡುತ್ತದೆ. ಕಚೇರಿಯಲ್ಲಿ ಬೆಳಿಗ್ಗೆಯಿಂದ ಕೆಲಸ ಮಾಡಿ ದಣಿದು ಬರುವ ಜೀವಕ್ಕೆ ಮನೆಗೆ ಬಂದಾಕ್ಷಣ ಆಹ್ಲಾದವೆನ್ನಿಸುವ ಪರಿಮಳ ಮನಸ್ಸಿಗೆ ಹಾಯ್ ಎನ್ನಿಸುವುದಲ್ಲದೇ ಕೊಂಚ ವಿಶ್ರಾಂತಿ ಸಿಕ್ಕಂತಾಗುತ್ತದೆ. ನೀವು ಸೌಮ್ಯವಾದ ಹಾಗೂ ಮೃದುವಾದ ಸುಗಂಧವನ್ನು ಇಷ್ಟಪಡುತ್ತೀರಾ, ಹಣ್ಣು ಅಥವಾ ಹೂವಿನ ಸುಗಂಧ ನಿಮಗೆ ಸಹ್ಯವಾಗುವುದೋ ಹೀಗೆ ನಿಮ್ಮ ಆಯ್ಕೆಯ ಡಿಫ್ಯೂಸರ್ ಅನ್ನು ಮನೆಯಲ್ಲಿ ಇರಿಸಬಹುದು. ಹಬ್ಬದ ಸಮಯದಲ್ಲಿ ಭಕ್ತಿ ಭಾವಕ್ಕೆ ಪೂರಕವಾಗುವಂತೆ ಇವುಗಳನ್ನು ಬಳಸಬಹುದು.

ಪರಿಮಳಯುಕ್ತ ದೀಪಗಳು


ಪರಿಮಳ ಹೊರ ಸೂಸುವ ದೀಪಗಳು ನಿಮ್ಮ ಮನೆಯ ಅಲಂಕಾರಕ್ಕೆ ಇನ್ನಷ್ಟು ಕಳೆ ತುಂಬುತ್ತವೆ. ಪರಿಮಳಯುಕ್ತ ದೀಪಗಳು ಸುವಾಸನೆ ಹೊರ ಸೂಸುವ ಜೊತೆಗೆ ಮನೆಯ ಒಳಗೆ ಬೆಳಕಿನ ಕಿರಣಗಳನ್ನು ಹರಡುತ್ತವೆ. ಇದರ ವಿನ್ಯಾಸಗಳು ಮನೆಯ ಅಂದವನ್ನೂ ಹೆಚ್ಚಿಸುವುದರಲ್ಲಿ ಸಂಶಯವಿಲ್ಲ. ಪರಿಮಳಯುಕ್ತ ಮೇಣದಬತ್ತಿಯಿಂದ ಹಿಡಿದು ಎಲೆಕ್ಟ್ರಿಕ್ ದೀಪದವರೆಗೂ ಈಗ ಮಾರುಕಟ್ಟೆಯಲ್ಲಿ ಲಭ್ಯ. ನಿಮ್ಮ ಆಯ್ಕೆಯ ದೀಪವನ್ನು ಮನೆಗೆ ತಂದು ಹಬ್ಬಕ್ಕೆ ಇನ್ನಷ್ಟು ಮೆರಗು ತುಂಬಬಹುದು.

ಪರಿಮಳಯುಕ್ತ ಆರ್ದ್ರಕಗಳು

ಸರಳವಾದ ಹಾಗೂ ಇತ್ತೀಚಿನ ತಂತ್ರಜ್ಞಾನಗಳನ್ನು ಬಳಸಿ ಸುವಾಸನೆ ಸೂಸುವಂತೆ ಮಾಡುವ ಆರ್ದ್ರಕಗಳು (ಹ್ಯುಮಿಡಿಫೈರ್) ಈ ಗೃಹಾಲಂಕಾರ ಮಾರುಕಟ್ಟೆಯಲ್ಲಿ ಸದ್ದು ಮಾಡುತ್ತಿವೆ. ಮನೆಯೊಳಗೆ ಪರಿಮಳ ಹರಡುವಂತೆ ಮಾಡುವ ಸುಲಭ ಹಾಗೂ ಉತ್ತಮ ವಿಧಾನ ಇದಾಗಿದೆ. ಇವು ಸಿಲಿಕಾನ್ ಮ್ಯಾಟ್ ರೂಪದಲ್ಲಿ ಸಿಗುತ್ತವೆ. ಜೊತೆಗೆ ಇವುಗಳಿಗೆ ತುಕ್ಕು ಹಿಡಿಯುವುದೂ ಕಡಿಮೆ. ಇದನ್ನು ಸುಂದರವಾಗಿ ಹಾಗೂ ಕಣ್ಣಿಗೆ ಹಿತ ಎನ್ನಿಸುವ ರೀತಿಯಲ್ಲಿ ವಿನ್ಯಾಸ ಮಾಡಿರುತ್ತಾರೆ. ಇದು ಕಾಂಪ್ಯಾಕ್ಟ್ ಮತ್ತು ಪೋರ್ಟಬಲ್ ಆಗಿದ್ದು ಮನೆಯಲ್ಲಿ ಬೇಕೆನ್ನಿಸಿದ ಕಡೆ ಇರಿಸಬಹುದು.

ಸೆಟ್ಟೇರಿತು 'ಲವ್ ಬರ್ಡ್ಸ್'

ಸಿನಿಮಾ



'ಲವ್ ಬರ್ಡ್ಸ್' ಚಿತ್ರ ಸೆಟ್ಟೇರಿದೆ. ಇತ್ತೀಚೆಗೆ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಚಿತ್ರೀಕರಣಕ್ಕೆ ಚಾಲನೆ ನೀಡಿದರು. ಬನಶಂಕರಿ ಚಿತ್ರಾಲಯ ಲಾಂಛನದಲ್ಲಿ ಚಂದ್ರು ಕಡ್ಡಿಪುಡಿ ಈ ಚಿತ್ರ ನಿರ್ಮಿಸುತ್ತಿದ್ದಾರೆ.

ಪಿ.ಸಿ.ಶೇಖರ್ ನಿರ್ದೇಶನವಿದೆ. ಡಾರ್ಲಿಂಗ್ ಕೃಷ್ಣ ನಾಯಕ. ಅವರದ್ದು ಸಾಫ್ಟ್‌ವೇರ್ ಎಂಜಿನಿಯರ್ ಪಾತ್ರ. ಆಶಿಕಾ ರಂಗನಾಥ್ ನಾಯಕಿಯಾಗಿದ್ದಾರೆ.

ಇದೊಂದು ಕಾರ್ಪೊರೇಟ್ ಶೈಲಿಯ ಚಿತ್ರ. ಅರ್ಜುನ್ ಜನ್ಯ ಅವರ ರಾಗ ಸಂಯೋಜನೆಯಲ್ಲಿ ಉತ್ತಮ ಹಾಡುಗಳು ಮೂಡಿಬರಲಿವೆ. ಎರಡು, ಮೂರು ಹಂತಗಳಲ್ಲಿ ಚಿತ್ರೀಕರಣ ನಡೆಯಲಿದೆ. ಮೊದಲ ಹಂತ ಬೆಂಗಳೂರಿನಲ್ಲಿ, ಮುಂದಿನ ಹಂತ ಮಂಡ್ಯ ಭಾಗದಲ್ಲಿ ನಡೆಯಲಿದೆ ಎಂದು ಚಿತ್ರತಂಡ ತಿಳಿಸಿದೆ. ರಂಗಾಯಣ ರಘು ತಾರಾಗಣದಲ್ಲಿದ್ದಾರೆ.



ಹಬ್ಬದ ಸಂದರ್ಭಕ್ಕೆ ಹೊಸ ಲುಕ್

ಫ್ಯಾಷನ್

ಮನಸ್ವಿ

ಹಬ್ಬ ಎಂದರೆ ಸಂಭ್ರಮ. ಸಂಭ್ರಮವಿದ್ದಾಗ ಹೊಸ ಬಟ್ಟೆ ಧರಿಸುವುದು ಭಾರತೀಯ ಸಂಪ್ರದಾಯವೂ ಹೌದು. ಈ ಬಾರಿಯ ಹಬ್ಬಕ್ಕೆ ಸರಳವಾಗಿ ಆದರೆ ಸುಂದರವಾಗಿ ಕಾಣಲು ಇಚ್ಛಿಸುವವರು ಈ ಫ್ಯಾಷನ್ ಟ್ರೆಂಡ್‌ನ ಮೊರೆ ಹೋಗಬಹುದು. ಈ ಉಡುಪುಗಳು ನಿಮ್ಮ ಅಂದವನ್ನು ಹೆಚ್ಚಿಸುವುದಲ್ಲದೇ ಹೊಸ ಟ್ರೆಂಡ್‌ಗೂ ತೆರೆದುಕೊಳ್ಳುವಂತೆ ಮಾಡುತ್ತವೆ.

ಫ್ಲೇರ್ಡ್ ಸ್ಕರ್ಟ್

ಹಿಂದೆಲ್ಲಾ ಸಿನಿಮಾ ನಟಿಯರು ಹೆಚ್ಚಾಗಿ ಫ್ಲೇರ್ಡ್ ಸ್ಕರ್ಟ್ ಧರಿಸುತ್ತಿದ್ದರು. ಮೊಣಕಾಲಿನವರೆಗೂ ಇರುತ್ತಿದ್ದ ಈ ಸ್ಕರ್ಟ್ ಅಂದು ಹೆಚ್ಚು ಚಾಲ್ತಿಯಲ್ಲಿತ್ತು. ಈಗ ಈ ಟ್ರೆಂಡ್ ಹೊಸ ರೂಪದಲ್ಲಿ ಫ್ಯಾಷನ್ ಮಾರುಕಟ್ಟೆಯನ್ನು ಪ್ರವೇಶಿಸಿದೆ. ಒಂದೇ ಬಣ್ಣದ ಶ್ರಿಂಕ್ ಮಾಡಿದಂತೆ ಕಾಣುವ ಫ್ಲೇರ್ಡ್ ಸ್ಕರ್ಟ್ ಮೇಲೆ ಟೀ ಶರ್ಟ್, ಟಾಪ್ ಹಾಗೂ ಶರ್ಟ್‌ಗಳನ್ನು ಧರಿಸಬಹುದು.

ಶಾರ್ಟ್, ಲಾಂಗ್ ಅಥವಾ ಮೊಣಕಾಲಿನ ಉದ್ದದವರೆಗೆ ಬರುವ ಈ ಸ್ಕರ್ಟ್ ಅನ್ನು ಹಬ್ಬಗಳ ಸಮಯದಲ್ಲಿ ಧರಿಸಬಹುದು. ಇದನ್ನು ಧರಿಸಿದಾಗ ಸಾಂಪ್ರದಾಯಿಕ ನೋಟದೊಂದಿಗೆ ಟ್ರೆಂಡಿ ಆಗಿ ಕೂಡ ಕಾಣಬಹುದು.



ಸಿಂಗಲ್ ಟಾಪ್

ಈ ಹಿಂದೆ ಹಬ್ಬ, ಮದುವೆ-ಮುಂಜಿಯಂತಹ ಸಮಾರಂಭಗಳಲ್ಲಿ ಕುರ್ತಾ ಟಾಪ್ ಹೆಚ್ಚು ಸದ್ದು ಮಾಡುತ್ತಿತ್ತು. ಜೆಗ್ಗಿಂಗ್, ಲೆಗ್ಗಿಂಗ್, ಪೆನ್ಸಿಲ್ ಪ್ಯಾಂಟ್ ಜೊತೆ ಹೊಂದುವ ಕುರ್ತಾ ಟಾಪ್‌ಗಳು ಪುರುಷರು ಹಾಗೂ ಮಹಿಳೆಯರು ಇಬ್ಬರಿಗೂ ಇಷ್ಟವಾಗುತ್ತಿತ್ತು. ಆದರೆ ಈಗ ಹೆಣ್ಣುಮಕ್ಕಳು ಕತ್ತಿನಿಂದ ಕಾಲಿನವರೆಗೆ ಇರುವ ಸಿಂಗಲ್ ಪೀಸ್ ಡ್ರೆಸ್ ಅಥವಾ ಸಿಂಗಲ್ ಟಾಪ್ ಧರಿಸಲು ಹೆಚ್ಚು ಇಷ್ಟಪಡುತ್ತಿದ್ದಾರೆ. ಕತ್ತಿನಿಂದ ಎದೆಭಾಗದವರೆಗೆ ಸಂಪೂರ್ಣ ವಿನ್ಯಾಸವಿದ್ದು ಎದೆಭಾಗದಿಂದ ಕೆಳಗಿನವರೆಗೆ ಪ್ಲೇನ್ ಆಗಿರುವ ಟಾಪ್‌ಗಳು ಈಗ ಫ್ಯಾಷನ್ ಯುಗದಲ್ಲಿ ಹೆಚ್ಚು ಬೇಡಿಕೆ ಪಡೆದುಕೊಂಡಿವೆ. ಹಬ್ಬಗಳ ಸಂದರ್ಭದಲ್ಲಿ ಇದನ್ನು ಧರಿಸುವುದರಿಂದ ಸಾಂಪ್ರದಾಯಿಕ ನೋಟ ಸಿಗುತ್ತದೆ.

ಶರಾರ ಸೆಟ್

ಫ್ಯಾಷನ್ ಕ್ಷೇತ್ರದಲ್ಲಿ ಇತ್ತೀಚೆಗೆ ಹೆಚ್ಚು ಮಂಚೂಣಿಯಲ್ಲಿರುವುದು ಶರಾರ. ವಿವಿಧ ವಿನ್ಯಾಸದ ಶರಾರ ಡ್ರೆಸ್‌ಗಳು ಫ್ಯಾಷನ್ ಪ್ರಿಯರಿಗೆ ಅಚ್ಚುಮೆಚ್ಚು ಎನ್ನಿಸಿವೆ. ಇದರೊಂದಿಗೆ ಸೆಲೆಬ್ರೆಟಿಗಳೂ ಶರಾರ ಧರಿಸಿ ಸಮಾರಂಭಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸರಳ ವಿನ್ಯಾಸದಿಂದ ಹಿಡಿದು ಭರ್ಜರಿ ವಿನ್ಯಾಸದವರೆಗಿನ ಶರಾರಗಳು ಲಭ್ಯ. ಟಾಪ್ ಬಣ್ಣದ್ದೇ ಹೆಚ್ಚು ವಿನ್ಯಾಸ, ಕಸೂತಿ, ಜರಿ ಇರುವ ದುಪಟ್ಟಾ ಧರಿಸುವುದು ಈಗಿನ ಟ್ರೆಂಡ್. ಇದು ಗ್ರ್ಯಾಂಡ್ ಲುಕ್ ಸಿಗುವಂತೆ ಮಾಡುತ್ತದೆ.

ಪಲಾಜೊ ಮತ್ತು ಶಾರ್ಟ್ ಟಾಪ್

ಪಲಾಜೊದೊಂದಿಗೆ ಶಾರ್ಟ್‌ಟಾಪ್ ಧರಿಸುವುದು ಈಗಿನ ಟ್ರೆಂಡ್. ಕಸೂತಿ, ಜರಿ ವಿನ್ಯಾಸ ಸೇರಿದಂತೆ ಹೆಚ್ಚು ಆಡಂಬರದ ವಿನ್ಯಾಸವಿರುವ ಟಾಪ್‌ಗಳು ಪಲಾಜೊಗೆ ಹೆಚ್ಚು ಹೊಂದಿಕೆಯಾಗುತ್ತವೆ. ಗಾಢ ಬಣ್ಣಕ್ಕಿಂತ ತಿಳಿ ಬಣ್ಣದ ಪಲಾಜೊ ಹಾಗೂ ಶಾರ್ಟ್ ಟಾಪ್‌ಗಳು ಹಬ್ಬದ ಸಮಯದಲ್ಲಿ ಹೆಚ್ಚು ಹೊಂದುತ್ತವೆ. ❖

ಪಾಸ್ತಾ ಸ್ವಾದ ಯಾರಿಗೆ ಇಷ್ಟವಾಗಲ್ಲ ಹೇಳಿ..

ರೆಸಿಪಿ

ಅಮೃತ



ಪಾಸ್ತಾ ರುಚಿ ಯಾರಿಗೆ ಸೇರೋದಿಲ್ಲ ಹೇಳಿ. ಈ ಇಟಾಲಿಯನ್ ಆಹಾರ ಭಾರತದೊಳಗೆ ಬಂದು ಬಹಳಷ್ಟು ವರ್ಷಗಳೇ ಕಳೆದಿವೆ. ಇದರ ಸ್ವಾದಕ್ಕೆ ಭಾರತದ ಮಸಾಲೆಗಳೂ ಒಂದಿಷ್ಟು ಸೇರಿಕೊಂಡು ಭಾರತದ್ದೇ ತಿನಿಸು ಎಂಬಂತಾಗಿಬಿಟ್ಟಿದೆ. ಈ ಸರಳವಾದ ಆಹಾರದಲ್ಲಿ ಎರಡೋ ಮೂರೋ ಸಾಮಗ್ರಿಗಳಷ್ಟೇ ಸೇರಿಕೊಂಡಿರುವುದು. ನೀರು ಮತ್ತು ಗೋಧಿ ಹಿಟ್ಟು, ಕೆಲವೊಮ್ಮೆ ಮೊಟ್ಟೆ. ಈ ಮೊಟ್ಟೆಯನ್ನು ಸೇರಿಸಿದರೆ ಪಾಸ್ತಾಗೆ ಅದರದ್ದೇ ಆದ ಸ್ವಾದ ಸೇರಿಕೊಂಡು ಇನ್ನಷ್ಟು ಕಬಳಸಿಬಹುದು. ರೆಸಿಪಿಯನ್ನು ಮಾಡೋದು ಕೂಡ ಸುಲಭವೇ. ಆದರೆ ಇನ್ನಷ್ಟು ರುಚಿ ಬರಬೇಕು ಎಂದರೆ, ಬಿಡುವಿದ್ದರೆ ಹೆಚ್ಚುವರಿ ಸಾಮಗ್ರಿಗಳನ್ನೆಲ್ಲ ಸೇರಿಸಿ ಮಾಡಬಹುದು.

ಬೆಂಗಳೂರಿನ ಉಪಾಹಾರಗೃಹಗಳನ್ನೇ ತೆಗೆದುಕೊಂಡರೆ ಇಟಾಲಿಯನ್ ಪಾಸ್ತಾ ಮತ್ತು ಸಾಸ್ ಬೇರೆ ಬೇರೆ ಕಡೆ ಬೇರೆ ಬೇರೆ ರುಚಿ ಕೊಡುತ್ತದೆ. ಆದರೆ ಪಾಸ್ತಾ ತೆಳುವಾಗಿದ್ದರೆ, ಸಾಸ್ ಕೂಡ ತೆಳುವಾಗಿದ್ದರೆ ಸೂಕ್ತ. ಪಾಸ್ತಾ ಹೆಚ್ಚು ದಪ್ಪವಾಗಿದ್ದರೆ, ಮಂದವಾದ ಸಾಸ್ ಆಯ್ಕೆ ಮಾಡಿಕೊಳ್ಳಿ. ಹಾಗೆಯೇ ಪಾಸ್ತಾ ಆಕಾರ ಕೂಡ. ನೀವು ಯಾವ ರೀತಿಯ ತರಕಾರಿ ಬಳಕೆ ಮಾಡುತ್ತೀರೋ, ಅದಕ್ಕೆ ಅನುಗುಣವಾಗಿ ಪಾಸ್ತಾ ಆಕಾರವನ್ನು ಆಯ್ಕೆ ಮಾಡಬಹುದು.

ಸುಮಾರು 500- 600 ಬಗೆಯ ಆಕಾರದ ಪಾಸ್ತಾ ಜಗತ್ತಿನಾದ್ಯಂತ ಲಭ್ಯ. ಭಾರತದ ಮಳಿಗೆಗಳಲ್ಲೇ 30-40 ಬಗೆಯವು ಸಿಗುತ್ತವೆ. ಇಟಲಿಯ ಜನಪ್ರಿಯ ಪಾಸ್ತಾ ತಯಾರಕರಾದ ಬರಿಲ್ಲಾ ಕಂಪನಿಯೇ 150ಕ್ಕೂ ಅಧಿಕ ಆಕಾರಗಳಲ್ಲಿ ಈ ಪಾಸ್ತಾವನ್ನು ಮಾರಾಟ ಮಾಡುತ್ತದೆ.

ಪಾಸ್ತಾ ಮೇಲ್ಮೈ ಜಾಸ್ತಿಯಿದ್ದು, ಅಂಚುಗಳು ಚೂಪಾಗಿದ್ದರೆ ಸಾಸ್ ಹೆಚ್ಚು ಅಂಟಿಕೊಳ್ಳುತ್ತದೆ. ಹಾಗೆಯೇ ಟೇಪ್ ತರಹ, ಕೆಲವೊಮ್ಮೆ ಸ್ಪಾಗೆಟ್ಟಿ ಆಕಾರದ ಪಾಸ್ತಾ ಕೂಡ ಹೆಚ್ಚು ಬಳಕೆಯಾಗುತ್ತದೆ. ಇದಕ್ಕೆ ಟೊಮೆಟೊ, ಬೆಳ್ಳುಳ್ಳಿ ಹಾಗೂ ಚೀಸ್ ಸೇರಿಸಿದರೆ ಹೆಚ್ಚು ರುಚಿಕರ.

ಸಾಸ್ ಕೂಡ ಹಾಗೆಯೇ. ಟೊಮೆಟೊ, ಕ್ಯಾರೆಟ್, ಕೊತ್ತಂಬರಿ ಸೊಪ್ಪು ಬಳಸಿ ಮಾಡುವ ಸಾಸ್ ಅತ್ಯಂತ ಜನಪ್ರಿಯ.



ಇನ್ನು ಪಾಸ್ತಾಗೆ ಬಿಳಿ ಬಣ್ಣದ ಸಾಸ್ ಕೂಡ ಸೇರಿಸಬಹುದು. ಸೋಯಾ ಸಾಸ್, ಕಾರ್ನ್‌ಫ್ಲೋರ್‌ನಿಂದ ಮಾಡಿದ ಸಾಸ್ ಇದಕ್ಕೆ ಬೆರೆಸಬಹುದು. ಇದರ ಜೊತೆಗೆ ಹುರಿದ ಅಣಬೆ ಒಳ್ಳೆಯ ಕಾಂಬಿನೇಶನ್. ಕ್ರೀಂ, ವಿನೆಗರ್ ಅನ್ನು ಈ ತರಹದ ಪಾಸ್ತಾಗೆ ಸುರಿದು ಹುರಿಯಬಹುದು.

ಸರಳವಾಗಿ ಪಾಸ್ತಾ ಮಾಡುವ ಬಗೆ

ಬೇಕಾಗುವ ಸಾಮಗ್ರಿ: ಒಂದು ಪ್ಯಾಕ್ ಪಾಸ್ತಾ, ಒಂದು ಕಪ್ ಸಣ್ಣಗೆ ಹೆಚ್ಚಿದ ಕ್ಯಾರೆಟ್, ಬೀನ್ಸ್. ಸಣ್ಣಗೆ ಹೆಚ್ಚಿದ ಬೆಳ್ಳುಳ್ಳಿ ಒಂದು ಟೀ ಚಮಚ, ಮೆಣಸಿನಕಾಯಿ ಬೀಜ ಅರ್ಧ ಟೀ ಚಮಚ, ಟೊಮೆಟೊ ಸಾಸ್ ಮೂರು ಟೀ ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಕೊತ್ತಂಬರಿ ಸೊಪ್ಪು ಸ್ವಲ್ಪ, ಎಣ್ಣೆ ಸ್ವಲ್ಪ.

ಮಾಡುವ ವಿಧಾನ: ಪಾಸ್ತಾವನ್ನು ಕುದಿಯುವ ನೀರಿಗೆ ಹಾಕಿ ಬಸಿದಿಟ್ಟುಕೊಳ್ಳಿ. ಒಂದು ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿ ಬಿಸಿ ಮಾಡಿ. ಇದಕ್ಕೆ ಜಜ್ಜಿದ ಬೆಳ್ಳುಳ್ಳಿ, ಮೆಣಸಿನಕಾಯಿ ಬೀಜ ಹಾಕಿ ಹುರಿಯಿರಿ. ಕ್ಯಾರೆಟ್, ಬೀನ್ಸ್ ಚೂರು ಹಾಕಿ ಬೇಯಿಸಿ. ನಂತರ ಬೇಯಿಸಿದ ಪಾಸ್ತಾ ಹಾಕಿ ಹುರಿದು ಉಪ್ಪು ಸೇರಿಸಿ. ಮೇಲೆ ಟೊಮೆಟೊ ಸಾಸ್ ಹಾಕಿ ಮಿಕ್ಸ್ ಮಾಡಿ, ಸ್ಟವ್ ಬಂದ್ ಮಾಡಿ. ಇದಕ್ಕೆ ಹೆಚ್ಚಿದ ಕೊತ್ತಂಬರಿ ಸೊಪ್ಪು ಸೇರಿಸಿ. ರುಚಿಕರ ಪಾಸ್ತಾ ತಿನ್ನಲು ಸಿದ್ಧ. ❖

ಒಡವೆಗಳನ್ನು ಒಪ್ಪವಾಗಿ ಇಡುವುದೂ ಒಂದು ಕಲೆ!

ಸುಕೃತ ಎಸ್.



ಹುಡುಗಿಯರು ಅಂದ ಮೇಲೆ ಯಾರಿಗೆ ಒಡವೆ ಇಷ್ಟ ಆಗುವುದಿಲ್ಲ ಹೇಳಿ! ಹೊಸ ಬಟ್ಟೆ ಬೀರು ಸೇರಿದರೆ, ಅದಕ್ಕೆ ಹೊಂದುವ ಆಭರಣಗಳೂ ಕೋಣೆ ಸೇರುತ್ತವೆ, ಅದಕ್ಕೆ ಹೊಂದಿಕೆಯಾಗುವ ಸರ, ಬಳೆ, ಕಿವಿಯೋಲೆ ಮುಂತಾದವು. ಹೀಗೆ ಕೋಣೆ ಸೇರಿದ ಒಡವೆಗಳನ್ನು ಸರಿಯಾಗಿ ಇಡುವುದೇ ಒಂದು ದೊಡ್ಡ ಕೆಲಸ.

ಸರ, ಕಿವಿಯೋಲೆ ಒಂದರೊಳಗೆ ಒಂದು ಸೇರಿ, ಅದನ್ನು ಬಿಡಿಸುವುದು ಒಂದೊಪ್ಪತ್ತಿನ ಕೆಲಸವಾಗಿ ಬಿಡುತ್ತದೆ. ಎಲ್ಲವನ್ನೂ ಒಂದೆಡೆ ಇಟ್ಟು ಇಟ್ಟು ಬೇಕಾಗಿದ್ದು, ಬೇಡದ್ದು ಸೇರಿ, ಬೇಕಾದ ತಕ್ಷಣ ಕೈಗೇ ಸಿಗುವುದಿಲ್ಲ ಎನ್ನುವಂಥ ಪರಿಸ್ಥಿತಿ. ಹಾಗಾದರೆ, ಹೇಗೆ ಇವನೆಲ್ಲಾ ಪೇರಿಸಿ, ಅಂದವಾಗಿ ಜೋಡಿಸುವುದು? ಇಲ್ಲಿವೆ ಕೆಲವು ಸಲಹೆಗಳು...

ಮೊದಲ ಹಂತ: ನಮ್ಮ ಹತ್ತಿರ ಇರುವ ಸರ, ಬ್ರೇಸ್ಲೆಟ್ಸ್, ಕಿವಿಯೋಲೆ, ಉಂಗುರಗಳು ಹೀಗೆ ಎಲ್ಲವನ್ನು ಬೇರೆ ಬೇರೆ ಮಾಡಿ ಇಟ್ಟುಕೊಳ್ಳಬೇಕು. ಇವುಗಳಲ್ಲೂ ಮತ್ತೊಂದು ವಿಭಾಗ ಮಾಡಿಕೊಳ್ಳಬಹುದು. ಉದಾಹರಣೆಗೆ- ಕಿವಿಯ ಸ್ಟಡ್‌ಗಳು ಒಂದೆಡೆ, ತೂಗುವ ಕಿವಿಯಾಭರಣಗಳು ಇನ್ನೊಂದೆಡೆ.

ಎರಡನೇ ಹಂತ: ನಿಮ್ಮ ಒಡವೆಗಳಲ್ಲಿ ಯಾವುದು ಸುಸ್ಥಿತಿಯಲ್ಲಿ ಇದೆಯೊ ಅದನ್ನು ಒಂದೆಡೆ, ದುರಸ್ತಿ ಆಗಬೇಕಿರುವುದನ್ನು ಇನ್ನೊಂದು ಕಡೆ ಇಡಿ. ಜೊತೆಗೆ ಯಾವುದನ್ನು ಪದೇ ಪದೇ ಬಳಸುತ್ತೇವೆ, ಕೆಲವು ಸಂದರ್ಭದಲ್ಲಿ ಮಾತ್ರ ಬಳಸುತ್ತೇವೆ ಎನ್ನುವುದನ್ನು ಬೇರೆಯದೇ ವಿಭಾಗ ಮಾಡಿಕೊಳ್ಳಿ. ಯಾವುದನ್ನಾದರೂ ಪಾಲಿಷ್ ಮಾಡಿಸಬೇಕು, ರಿಪೇರಿ ಮಾಡಿಸಬೇಕು ಎಂದಿದ್ದರೆ ಜೋಡಿಸಿ ಇಡುವ ಮೊದಲೇ ಅದನ್ನು ಮಾಡಿಸಿಕೊಂಡೇ ಸೇರಿಸಿ ಇಡುವುದು ಉತ್ತಮ.

ಮೂರನೇ ಹಂತ: ಇಷ್ಟೆಲ್ಲಾ ವಿಭಾಗ ಮಾಡಿಕೊಂಡ ಬಳಿಕ ಅವನ್ನು ಹೇಗೆ ಪೇರಿಸಿ ಇಡಬೇಕು ಎನ್ನುವುದು ವ್ಯಕ್ತಿಯ ಅಭಿರುಚಿಗೆ ಬಿಟ್ಟದ್ದು. ಜೊತೆಗೆ, ನಮ್ಮ ಬಳಿ ಎಷ್ಟೆಲ್ಲಾ ಆಭರಣಗಳು ಇವೆ, ಅದನ್ನು ಹೇಗೆ ನಮ್ಮ ಅನುಕೂಲಕ್ಕೆ ತಕ್ಕ ಹಾಗೆ ಜೋಡಿಸಿಕೊಳ್ಳಬೇಕು ಎನ್ನುವುದು ನಮ್ಮ ಆಯ್ಕೆ.





ಇಷ್ಟೆಲ್ಲಾ ಜೋಡಿಸಿಕೊಂಡ ಮೇಲೆ ಅವುಗಳನ್ನು ಎಲ್ಲಿಡಬೇಕು ಎನ್ನುವುದು ಮುಂದಿರುವ ಪ್ರಶ್ನೆ.

ಡ್ರಾವರ್‌ನಲ್ಲಿ ಅಥವಾ ಟೇಬಲ್ ಮೇಲೆ ಎಲ್ಲಾದರೂ ಜೋಡಿಸಿ ಇರಿಸಿಕೊಳ್ಳಬಹುದು. ಡ್ರಾವರ್‌ನಲ್ಲಿ ವಿಭಾಗಗಳು ಇರುವ ವೆಲ್ವೆಟ್ ಬಟ್ಟೆ ಹೊಂದಿಸಿದ ಟ್ರೇಗಳಲ್ಲಿ ಒಡವೆಗಳನ್ನು ಇಡಬಹುದು. ಈ ಟ್ರೇಗಳು ವಿವಿಧ ಮಾದರಿಯಲ್ಲಿ ಸಿಗುತ್ತವೆ. ಬೇರೆ ಬೇರೆ ಅಳತೆಗಳಲ್ಲೂ ಸಿಗುತ್ತವೆ.

ಇಂಥ ಟ್ರೇ ಇಲ್ಲವೇ ಪ್ಲಾಸ್ಟಿಕ್ ಟ್ರೇಗಳಲ್ಲೂ ಒಡವೆಗಳನ್ನು ಇಡಬಹುದು. ಆದರೆ, ತುಂಬಾ ಸೂಕ್ಷ್ಮವಾದ ಆಭರಣಗಳನ್ನು ಇರಿಸುವುದು ಸೂಕ್ತವಲ್ಲ.

ಡ್ರಾವರ್ ಇಲ್ಲದಿದ್ದರೆ, ಟೇಬಲ್ ಅಥವಾ ಕೌಂಟರ್‌ನ ಮೇಲೆ ಒಡವೆಗಳನ್ನು ಸೇರಿಸಿಡಬೇಕು ಎಂದುಕೊಂಡಿದ್ದರೆ ಲಂಬವಾಗಿ ಇಡಬೇಕಾಗುತ್ತದೆ. ಕಡಿಮೆ ಎತ್ತರವಿರುವ ಸ್ಟ್ಯಾಂಡ್‌ಗಳನ್ನು ಉಪಯೋಗಿಸಬೇಕಾಗುತ್ತದೆ. ನಾನಾ ವಿನ್ಯಾಸದ ಈ ರೀತಿಯ ಸ್ಟ್ಯಾಂಡ್‌ಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಅನುಕೂಲಕ್ಕೆ ತಕ್ಕ ಹಾಗೆ, ನಮ್ಮ ಇಷ್ಟಕ್ಕೆ ತಕ್ಕ ಹಾಗೆ ಬಣ್ಣ, ಅಳತೆಯ ರ್‍ಯಾಕ್‌ಗಳನ್ನು ಕೊಳ್ಳಬಹುದು. ❖

ನಿಂಬೆಯಲ್ಲಿದೆ ಸನ್ ಟ್ಯಾನ್‌ಗೆ ಮದ್ದು

ಸೌಂದರ್ಯ



ಕಳೆದ ಕೆಲ ತಿಂಗಳಿನಿಂದ ಒಂದೇ ಸಮನೆ ಮಳೆ ಸುರಿದು ಈಗಷ್ಟೇ ಬಿಸಿಲು ಬರಲು ಆರಂಭವಾಗಿದೆ. ಬಿಸಿಲು ಆರಂಭವಾದ ಕೂಡಲೇ ಬೇಡವೆಂದರೂ ಚರ್ಮದ ಸಮಸ್ಯೆಗಳು ಒಂದರ ಹಿಂದೆ ಕಾಣಿಸಿಕೊಳ್ಳುತ್ತವೆ. ಇನ್ನು ಬಿಸಿಲಿನೊಂದಿಗೆ ಚಳಿಗಾಲವೂ ಆರಂಭವಾಗುವುದರಿಂದ ಚರ್ಮದ ಕುರಿತು ವಿಶೇಷ ಕಾಳಜಿ ವಹಿಸುವುದು ಅತ್ಯಗತ್ಯ. ಬೇಸಿಗೆ ಬಿಸಿಲು ಮಾತ್ರವಲ್ಲ ಚಳಿಗಾಲದ ಬಿಸಿಲಿಗೂ ತ್ವಚೆಯಲ್ಲಿ ಟ್ಯಾನ್ ಆಗುತ್ತದೆ. ಸನ್‌ಸ್ಕ್ರೀನ್ ಲೋಷನ್ ಹಚ್ಚಿಕೊಳ್ಳುವುದು ಅಥವಾ ಸೂರ್ಯನ ಬಿಸಿಲಿಗೆ ಮೈಯೊಡ್ಡದೇ ಇದ್ದರೂ ಟ್ಯಾನ್ ಆಗುವುದು ಸಾಮಾನ್ಯ. ಟ್ಯಾನ್ ನಿವಾರಣೆಗೆ ಮಾರುಕಟ್ಟೆಯಲ್ಲಿ ಹಲವು ಬಗೆಯ ಉತ್ಪನ್ನಗಳು ಸಿಗುತ್ತವೆ. ಆದರೆ ಅಡುಗೆಮನೆಯಲ್ಲಿ ಸಿಗುವ ಉತ್ಪನ್ನಗಳಿಂದ ಸುಲಭವಾಗಿ ಟ್ಯಾನ್ ನಿವಾರಣೆ ಮಾಡಬಹುದು. ಅದರಲ್ಲೂ ನಿಂಬೆಹಣ್ಣು ಟ್ಯಾನ್ ನಿವಾರಣೆಗೆ ಉತ್ತಮ ಔಷಧಿ. ಇದರಿಂದ ಸೌಂದರ್ಯ ಹೆಚ್ಚಿಸಿಕೊಳ್ಳಬಹುದು ಮಾತ್ರವಲ್ಲದೇ ಟ್ಯಾನ್ ನಿವಾರಿಸಬಹುದು.

ನಿಂಬೆರಸ

ನಿಂಬೆಹಣ್ಣನ್ನು ಕತ್ತರಿಸಿ, ಅರ್ಧ ಹಣ್ಣಿನ ರಸ ತೆಗೆಯಿರಿ. ಅದಕ್ಕೆ ಸಮ ಪ್ರಮಾಣದಲ್ಲಿ ನೀರು ಸೇರಿಸಿ ಕಲೆಸಿ. ಅದರಲ್ಲಿ ಹತ್ತಿ ಉಂಡೆಯನ್ನು ಅದ್ದಿ ಮುಖಕ್ಕೆ ಹಚ್ಚಿಕೊಳ್ಳಿ. ಇಡೀ ಮುಖಕ್ಕೆ ಹಚ್ಚಿಕೊಂಡಾಗ ಕಿರಿಕಿರಿ ಅನ್ನಿಸಿದರೆ ಪಿಗ್ಮೆಂಟೇಷನ್ ಆಗಿರುವ ಜಾಗಕ್ಕಷ್ಟೇ ಹಚ್ಚಿ. ಇದನ್ನು 15 ರಿಂದ 20 ನಿಮಿಷಗಳ ಕಾಲ ಒಣಗಲು ಬಿಡಿ. ನಂತರ ಉಗುರು ಬೆಚ್ಚಗಿನ ನೀರಿನಿಂದ ತೊಳೆಯಿರಿ. ಇದನ್ನು ದಿನ ಬಿಟ್ಟು ದಿನ ಮಾಡುವುದರಿಂದ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು. ನಿಂಬೆರಸವನ್ನು ಹಚ್ಚಿಕೊಂಡಾಗ ಬಿಸಿಲಿನಲ್ಲಿ ಓಡಾಡಬೇಡಿ, ಇದರಿಂದ ಅಲರ್ಜಿಯಾಗುವ ಸಾಧ್ಯತೆಯೂ ಇದೆ.

ನಿಂಬೆಸಿಪ್ಪೆಯ ಸ್ಕ್ರಬ್

ನಿಂಬೆಸಿಪ್ಪೆಯನ್ನು ಸ್ಕ್ರಬ್‌ನಂತೆ ಉಪಯೋಗಿಸುವುದರಿಂದ ಇದು ಒಣ ಹಾಗೂ ಸತ್ತ ಚರ್ಮವನ್ನು ಕಿತ್ತು ಹಾಕುತ್ತದೆ. ನಿಂಬೆಸಿಪ್ಪೆಯನ್ನು ತರಿತರಿಯಾಗಿ ಹೆರೆದುಕೊಳ್ಳಿ. ಅದಕ್ಕೆ ಮೂರ್ನಾಲ್ಕು ಹನಿ ನಿಂಬೆರಸ ಹಾಗೂ ನೀರು ಸೇರಿಸಿ. ಅದನ್ನು ಫೇಶಿಯಲ್ ಸ್ಕ್ರಬ್‌ನಂತೆ ಬಳಸಿ. ಇದರಿಂದ ಚರ್ಮದ ಕಾಂತಿ ಹೆಚ್ಚುತ್ತದೆ. ಅಲ್ಲದೇ ಟ್ಯಾನ್ ಕೂಡ ನಿವಾರಣೆಯಾಗುತ್ತದೆ.

ಮೊಸರು, ನಿಂಬೆರಸ ಹಾಗೂ ಅರಿಸಿನದ ಫೇಸ್‌ಮಾಸ್ಕ್

ಮೊಸರು ಮುಖದ ಮೇಲಿನ ಕಪ್ಪುಕಲೆಗಳನ್ನು ನಿವಾರಿಸುತ್ತದೆ. ಅರಿಸಿನವು ಬುಡದಿಂದಲೇ ಕಪ್ಪುಕಲೆಯನ್ನು ನಿವಾರಿಸುತ್ತದೆ. ನಿಂಬೆರಸದಲ್ಲಿ ನೈಸರ್ಗಿಕ ಬ್ಲೀಚಿಂಗ್ ಅಂಶವಿದೆ. ಈ ಮೂರರ ಮಿಶ್ರಣ ತ್ವಚೆಯ ಹೊಳಪು ಹೆಚ್ಚುವಂತೆ ಮಾಡುತ್ತವೆ. ಒಂದು ಚಮಚ ಮೊಸರಿಗೆ ಅರ್ಧ ನಿಂಬೆರಸ ಹಾಗೂ ಚಿಟಿಕೆ ಅರಿಸಿನ ಸೇರಿಸಿ. ಮುಖವನ್ನು ಚೆನ್ನಾಗಿ ತೊಳೆದು ಈ ಫೇಸ್‌ಮಾಸ್ಕ್ ಹಚ್ಚಿಕೊಳ್ಳಿ. ಇದನ್ನು 15 ನಿಮಿಷಗಳ ಕಾಲ ಹಾಗೇ ಬಿಡಿ. ನಂತರ ಬಿಸಿನೀರಿನಲ್ಲಿ ಬಟ್ಟೆಯನ್ನು ಅದ್ದಿ ಚೆನ್ನಾಗಿ ಒರೆಸಿ. ನಂತರ ತಣ್ಣೀರಿನಿಂದ ಮುಖ ತೊಳೆದುಕೊಳ್ಳಿ.

ಸಕ್ಕರೆ, ಜೇನುತುಪ್ಪ ಹಾಗೂ ನಿಂಬೆರಸ

ಈ ಮೇಲಿನ ಮಿಶ್ರಣವು ತ್ವಚೆಯ ಕಾಂತಿ ಹೆಚ್ಚಲು ಸಹಕಾರಿ. ಸಕ್ಕರೆ ಸತ್ತ ಚರ್ಮದ ತೆಗೆದು ಹಾಕಲು ಸಹಾಯ ಮಾಡುತ್ತದೆ. ಬೌಲ್‌ನಲ್ಲಿ ಒಂದು ಚಮಚ ಸಕ್ಕರೆ, ಅರ್ಧ ನಿಂಬೆಹಣ್ಣಿನ ರಸ ಹಾಗೂ ಅರ್ಧ ಚಮಚ ಜೇನುತುಪ್ಪ ಸೇರಿಸಿ. ಚರ್ಮವನ್ನು ತೇವವಾಗಿಸಿಕೊಂಡು ಈ ಪೇಸ್ಟ್‌ನಿಂದ ಮುಖಕ್ಕೆ ಸ್ಕ್ರಬ್ ಮಾಡಿ. ಇದನ್ನು 5 ನಿಮಿಷಗಳ ಕಾಲ ಹಾಗೇ ಬಿಡಿ. ನಂತರ ಬಿಸಿನೀರಿನಿಂದ ಮುಖ ತೊಳೆದುಕೊಳ್ಳಿ. ಇದನ್ನು ವಾರದಲ್ಲಿ ಎರಡು ಬಾರಿ ಮಾಡುವುದರಿಂದ ಚರ್ಮದ ಹೊಳಪು ಹೆಚ್ಚುತ್ತದೆ.

ಶ್ರೀಗಂಧ ಹಾಗೂ ನಿಂಬೆರಸ

ಒಂದು ಚಮಚ ಶ್ರೀಗಂಧಕ್ಕೆ ಕೆಲವು ಹನಿ ನಿಂಬೆರಸ ಹಾಗೂ ಸೌತೆಕಾಯಿ ರಸ ಸೇರಿಸಿ. ಮೊದಲು ರಾಸಾಯನಿಕವಲ್ಲದ ಫೇಸ್‌ವಾಷ್‌ನಿಂದ ಮುಖ ತೊಳೆದುಕೊಳ್ಳಿ. ನಂತರ ತಯಾರಿಸಿಕೊಂಡ ಪೇಸ್ಟ್ ಹಚ್ಚಿಕೊಳ್ಳಿ. 15 ನಿಮಿಷಗಳ ಕಾಲ ಇದನ್ನು ಒಣಗಲು ಬಿಡಿ. ತಣ್ಣೀರಿನಿಂದ ಮುಖ ತೊಳೆದುಕೊಳ್ಳಿ.

ನಿಂಬೆರಸ ಹಾಗೂ ಗುಲಾಬಿ ಜಲ

5 ಚಮಚ ಗುಲಾಬಿ ಜಲಕ್ಕೆ ಒಂದು ಚಮಚ ನಿಂಬೆರಸ ಸೇರಿಸಿ ಮಿಶ್ರಣ ಮಾಡಿ. ಮಲಗುವ ವೇಳೆ ಮುಖಕ್ಕೆ ಹಚ್ಚಿಕೊಂಡು ಮಲಗಿ. ಮರುದಿನ ಬೆಳಿಗ್ಗೆ ಶುದ್ಧನೀರಿನಿಂದ ಮುಖ ತೊಳೆಯಿರಿ. ನಿಂಬೆರಸ ಚರ್ಮದ ಹೊಳಪು ಹೆಚ್ಚಿಸಿದರೆ, ಗುಲಾಬಿ ಜಲ ಚರ್ಮದ ಕಿರಿಕಿರಿಯನ್ನು ನಿವಾರಿಸುತ್ತದೆ. ❖

ಚರ್ಮದ ಶೂ, ಸ್ನೀಕರ್ಸ್ ಕಾಳಜಿ ಹೇಗಿರಬೇಕು?

ಆಲಾಪ

ಬಹುಶಃ ಲಾಕ್‌ಡೌನ್ ದಿನಗಳಲ್ಲಿ ನಮ್ಮ ಬಟ್ಟೆಗಳು ಮಾತ್ರ ಕಪಾಟು ಸೇರಲಿಲ್ಲ, ಸಾವಿರಾರು ರೂಪಾಯಿ ಕೊಟ್ಟು ಕೊಂಡ ಚರ್ಮದ ಶೂಗಳು, ಸ್ನೀಕರ್ಸ್‌ಗಳು ಮೂಲೆ ಸೇರಿದ್ದವು. ಎಷ್ಟು ಸಾವಿರ ಕೊಟ್ಟರೆ ಏನಂತೆ ಹಾಕಿಕೊಳ್ಳುವ ಅವಕಾಶ ಇಲ್ಲದಿದ್ದರೆ! ಹೀಗಾಗಿ ಅದರ ಕುರಿತ ಗಮನ ಕಡಿಮೆ ಆಗಿ, ಹಲವರು ತಮ್ಮ ಬೆಲೆಬಾಳುವ ಶೂಗಳನ್ನು ಹಾಳು ಮಾಡಿಕೊಂಡಿದ್ದಾರೆ.



ನಮ್ಮ ಶೂಗಳ ಬಗ್ಗೆಯೂ ಸ್ವಲ್ಪ ಗಮನ ಇಟ್ಟುಕೊಂಡಿದ್ದರೆ, ಅವು ಈಗ ಬಿಸಾಕುವ ಸ್ಥಿತಿಗೆ ಬರುತ್ತಿರಲಿಲ್ಲ. ಮುಂದೆ ಹೀಗಾಗದಂತೆ ನೋಡಿಕೊಳ್ಳಲು ಕೆಲವು ಟಿಪ್ಸ್‌ಗಳು ಇಲ್ಲಿವೆ.

ಟಿಪ್ಸ್

- ಖರೀದಿ ಮಾಡಿ ತಂದ ಶೂಗಳನ್ನು ಬಳಸುವ ಮೊದಲು ಎರಡು ಕೆಲಸಗಳನ್ನು ಮಾಡಬೇಕು. ಒಂದು– ಶೂಗಳಿಗೆ ರಕ್ಷಣಾ ಕವಚವಾಗಿ ಸೋಲ್‌ಗಳನ್ನು ಹಾಕಬೇಕು. ಇದರಿಂದ ಶೂಗಳು ಹೆಚ್ಚು ಬಾಳಿಕೆ ಬರುತ್ತವೆ. ಎರಡನೆಯದು ದೂಳು, ನೀರು ಬಿದ್ದರೂ ಹಾನಿಯಾಗದಂತೆ ತಡೆಯಲು ಸ್ಪ್ರೇ ಬಳಸಬೇಕು. ಚರ್ಮದ ಶೂಗಳಿಗೆ ಕನಿಷ್ಠ ಮೂರು ಬಾರಿಯಾದರೂ ಸ್ಪ್ರೇ ಮಾಡಬೇಕು. ಆರು ತಿಂಗಳು ಉಪಯೋಗಿಸಿದ ಬಳಿಕ ಮತ್ತೊಮ್ಮೆ ಸ್ಪ್ರೇ ಸಿಂಪಡಿಸಬೇಕು.
- ಸ್ನೀಕರ್ಸ್‌ಗಳಿಗೂ ಈ ರೀತಿಯ ಸ್ಪ್ರೇ ಬಳಸುವುದರಿಂದ ಹೆಚ್ಚು ಬಾಳಿಕೆ ಬರುತ್ತವೆ. ಇಂಥ ಸ್ಪ್ರೇಗಳು ದೂಳು ಮತ್ತು ಶೂಗಳ ಮೇಲ್ಮೈಗಳ ಮಧ್ಯೆ ಒಂದು ಪದರ ಆಗುವುದರಿಂದ ಶೂಗಳು ಅಥವಾ ಸ್ನೀಕರ್ಸ್‌ಗಳು ಹಾಳಾಗುವುದಿಲ್ಲ.
- ಚರ್ಮದ ಶೂಗಳನ್ನು ವಾರಕ್ಕೆ ಒಮ್ಮೆಯಾದರೂ ಪಾಲಿಷ್ ಮಾಡಬೇಕು. ಅದರಲ್ಲಿರುವ ಮೇಣವು ಶೂಗಳು ದೂಳಿನಿಂದ ಹಾಳಾಗುವುದನ್ನು ತಡೆಯುತ್ತದೆ.
- ಶೂಗಳನ್ನು ಕಳಸಿ ಇಡುವಾಗ ಶೂಲೇಸ್‌ಗಳನ್ನು ಕಳಚುವುದು ಉತ್ತಮ.
- ಲೆದರ್ ಶೂಗಳನ್ನು ದಿನಾ ಬಳಸುವುದರಿಂದ ಅದು ಹೆಚ್ಚು ದಿನ ಬಾಳಿಕೆ ಬರುವುದಿಲ್ಲ. ಬೆವರಿನಿಂದ ಶೂಗಳು ಒದ್ದೆ ಆಗುತ್ತವೆ. ಇದು ಒಣಗಲು ಸಮಯಾವಾಕಾಶ ಬೇಕು. ಅವುಗಳನ್ನು ಒತ್ತಾಯಪೂರ್ವಕವಾಗಿ ಒಣಗುವಂತೆ ಮಾಡಬಾರದು.



- ಸ್ನೀಕರ್ಸ್‌ಗಳನ್ನು ಕೈಯಲ್ಲಿ ತೊಳೆಯಬಹುದು. ಬ್ರಷ್ ಬಳಸಿ ಕೊಳೆಯನ್ನು ತೆಗೆಯಬಹುದಾಗಿದೆ. ಸ್ನೀಕರ್ಸ್‌ಗಳನ್ನು ವಾಷಿಂಗ್ ಮೆಷಿನ್‌ಗೆ ಹಾಕಬೇಡಿ. ಕೊಳೆ ಹಿಡಿದಿರುವ ಸ್ನೀಕರ್ಸ್‌ಗಳನ್ನು ತಿಂಗಳುಗಳ ಕಾಲ ಹಾಗೇ ಇಡಬೇಡಿ, ತಕ್ಷಣದಲ್ಲಿ ತೊಳೆದು ಬಿಡಿ. ಶೂಗಳು ಒದ್ದೆ ಆಗಿದ್ದರೆ, ಮೊದಲು ಅವುಗಳ ಮೇಲಿನ ಗಲೀಜನ್ನು ಒರೆಸಿ ನಂತರ ಒಣಗಲು ಬಿಡಿ.
- ಚರ್ಮದ ಶೂಗಳನ್ನು ಒಣಗಿಸಲು ಹೀಟರ್‌ಗಳನ್ನು ಬಳಸಬಾರದು. ನೇರವಾಗಿ ಸೂರ್ಯನ ಕಿರಣ ಇರುವಲ್ಲಿಯೂ ಅವುಗಳನ್ನು ಇಡಬಾರದು. ನೆರಳಿರುವಲ್ಲಿ ಶೂಗಳನ್ನು ಒಣಗಲು ಬಿಡಿ, ನಂತರ ಯಾವುದಾದರೂ ಶೂಗಳಿಗೆ ಬಳಸುವ ಕ್ರೀಮ್ ಅನ್ನು ಲೇಪಿಸಿ.
- ಸ್ನೀಕರ್ಸ್‌ಗಳನ್ನು ನೇರವಾಗಿ ಸೂರ್ಯನ ಕಿರಣಗಳಿಗೆ ಒಡ್ಡಿ ಒಣಗಿಸಬಹುದು. ಹೀಗೆ ಮಾಡುವ ಮೊದಲು ಒಳಗಿರುವ ಸೋಲ್‌ಗಳನ್ನು ಬೇರ್ಪಡಿಸಿ.
- ಮನೆಯಲ್ಲಿ ಶೂಗಳನ್ನು ಮತ್ತು ಸ್ನೀಕರ್ಸ್‌ಗಳನ್ನು ಇಡಲು ಮರದ ಸ್ಟ್ಯಾಂಡ್‌ಗಳನ್ನೇ ಬಳಸಿ. ❖





ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

FORM NO. URC.2

Advertisement giving notice about registration under Part I of Chapter XXI [Pursuant to section 374(b) of the companies Act, 2013 and rule 4(1) of the companies (Authorised to Register) Rules, 2014]

1. Notice is hereby given that in pursuance of sub-section (2) of section 366 of the Companies Act, 2013, an application has been made to the Registrar at Bangalore that **Spec Innovations LLP (AAU-4994)** may be registered under Part I of Chapter XXI of the Companies Act 2013, as a company limited by shares,

2. The principal objects of the company are as follows:
To carry on business of Specialized distributor of Electronic, Electro-Mechanic and Electro-Optic Components, Systems, Sub-Systems and Solutions for various markets like Aerospace, Defence, Space, Telecom, Industrial and Medical, etc and shall act as Value Added Reseller of Electronic, Electro-Mechanic and Electro-Optic Components, Systems, Sub-Systems, Solutions for all the said markets. Further to engage and indulge in providing technical, sales, support, business development, and other specialized services incidental to above markets.
To develop, structure, establish, maintain, market, buy, import, export, sell, provide, license, implement and set up support service business and units. Support centres, Business centres, software / computer businesses, centres and units of information technology Enabled services and units and information technology businesses, centres and units in India or anywhere in world.
A copy of the draft memorandum and articles of association of the proposed company may be inspected at the office at. NO 558, 4th Block, Koramangala, 8th Main Road. Bangalore - 560034.
Notice is hereby given that any person objecting to this application may communicate their objection in writing to the Central Registration Centre at Plot No. 6, 7, 8, Sector 5, IMT Manesar, District Gurgaon Haryana, Pin Code-122050. within twenty one days from the date of publication of this notice, with a copy to the company at its registered office.

Dated this 14 day of October 2021
Name(s) of Applicant
1. Phani Pavan Kumar Tadigadapa
2. Venkatesan Balakrishnan

RENTAL PROPERTIES

Accommodation Available

Commercial

1500 SQFT Ground floor, 3000 sqft Ground floor Or together 4500 sqft suitable for retail, office Next to Indian oil petrol bunk R.V. Main Road contact owner: 9740854716.

REAL ESTATE SELLING

Flat

Doddabalapur

SALE 3 BHK fully furnished flat
with car park at Provident Welworth City, Doddaballapur
Road 40 lakhs negotiable
Sharad 9900103336

SOCIAL SERVICES

Orphanage

AVAILABLE FOR Boys above 10 years and Elders with Education, Food, and Accommodation Contact: 9611785161, 9901290021

BUSINESS

Business to Business

Business

INVEST IN World's Largest Forex trading platform Steady option. Get everyday Fixed Income Return & withdraw daily on your investment - Rs. 500 to Rs. 10,000. Personally i have invested. For more details, Contact: 6361333375.

Business Offers

Finance

NRI'S INVESTMENT
And Finance Available
On Low Interest
Against Properties,
Land & Building, Sites,
Flats, Converted &
Agriculture Lands Call:
7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

JOB OPPORTUNITIES

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

PERSONAL

Change of Name

I, B. S.Venkatesh, S/o. B.V. Srinivasa Udupa, aged about 54 yrs, residing at #3519, 3rd Cross, 9th Main Road, Kaverinagar, BSK 2nd Stage Bangalore - 560070 have changed my name to B. S. Venkatesh Udupa vide affidavit dated 05.10.2021 before notary K.M.Basavaraju, Bangalore

I, ABHISHEK .V residing at No.458, 10th 'A' Cross, 12th 'A' Main Road, 'A' Sector Yelahanka NewTown, Bangalore-560064 have changed my name to ABHISHEK.V BHARADWAJ vide affidavit dated 12.10.2021 sworn before notary G.R.Ravindra Reddy, Bangalore

I ANJANA Raju Parambath changed my name to Anjana R vide Affidavit dated 13/10/2021 Sworn before Advcocate & Notary Aravind Patil. G.G , Bangalore.

I, SREEJITH JANARDHAN, aged about 38 years, S/o KG JANARDHAN, residing at E2-1203, SNN Raj Serenity, Begur Koppa Main Road, Yelenahalli, Bangalore-560 068, have changed my minor daughter's name from SHARAYU to SHARAYU SREEJITH vide affidavit dated: 12/10/2021 before notary BM CHANDRASHEKAR, Bangalore.

I, ABHILASH Muktedar aged 24 years S/o. Amrutayya residing at No.2-4-53, Asar Mohalla, Ward No.10 Near Bhagamma Temple, Chittapur Taluk, Gulbarga-585211. Have changed my name from ABHILASH to ABHILASH MUKTEDAR vide affidavit dated 12/10/2021 before notary C. Srinivas, Bangalore

I, SRINIVASA. K aged 32 years residing at #3457, 68th cross, Kumaraswamy Layout, 1st stage, J.P. Nagar, Bengaluru- 560078 have changed my name to SRINIVAS KEMPANNA vide affidavit dated 13/10/2021 before notary S.I. Balaguru., Bangalore.

I, SWATHY residing at No. 6, 4th Cross,Shaneshwara Temple Street, Subbanapalya, Bangalore-33 have changed my name to U SWATHI vide affidavit dated 12.10.2021 before Notary Uday Kumar.K., Bangalore

I, AYESHA Sultana W/o. G. Abdul Karim aged 57 residing at No. K-31, Siddegowda Street, Dodda Mavalli, Bangalore- 560004, Have changed my name to AYESHA SULTHANA vide affidavit dated 13/10/2021 before notary K.G. Rajpal., Bangalore.

I B.K. Mokitha Varsa, D/o Bapujee. B & Kavitha. B, residing at no.533/25, 13th Cross, 10th Main Road, Vyalikaval, Bangalore 560003. with the name as B.K. Mokitha Varsha in my Passport (No.N5771596.) are one and the same person as executed vide affidavit dated 13.10.2021 sworn before Notary B.R. Shashikala, Bangalore, and my correct spelling is B.K. Mokitha Varsa

I, SAROJA H.A @ Saroja Heche. A W/o. P.S. Krishna Reddy resident of #20, near Panathur Bus Stop, Panathur, Bengaluru-560103, have changed my name to PUSHPA DEVI vide affidavit dated 13/10/2021 before notary Gangaraju B.N., Bangalore.

I, RAMA W/o. H.S. Madhava Rao residing at #664, 1st floor, 19th main, Opp. SBI atm, Padmanabhanagar, Banashankari 2nd stage, Bangalore- 560070 have changed my name from RAMA R.L to RAMA vide affidavit 11/10/2021 before notary H.G.Padmanabha Rao, Bangalore.

Lost

I AM HM Shankar Nag, I would like to inform general Public that i have lost the original Absoulte sale Deed doc bearing reg no.7228/1997-98,if anyone finds it, contact me at 9980536059 within 5daysfrom the date of this AD



ಸಾಧನೆಯ ಬೆನ್ನೇರಿ... ಉದ್ಯಾನ ನಗರಿಯಲಿ

ಭಾರತದ ಪುರುಷರ ಮತ್ತು ಮಹಿಳೆಯರ ಹಾಕಿ ತಂಡಗಳು ಉದ್ಯಾನ ನಗರಿಯಲ್ಲಿವೆ. ಮಹಿಳಾ ತಂಡದ ಅಭ್ಯಾಸ ಈಗಾಗಲೇ ಆರಂಭಗೊಂಡಿದ್ದು ಪುರಷರ ಶಿಬಿರ ಅಕ್ಟೋಬರ್ ನಾಲ್ಕರಿಂದ ನಡೆಯಲಿದೆ. ಹೊಸ ನಿರೀಕ್ಷೆಯಲ್ಲಿದ್ದಾರೆ ಎರಡೂ ತಂಡಗಳ ಪ್ರತಿಭೆಗಳು.

ಸಾಯ್ ಆವರಣದಲ್ಲಿ ತರಬೇತಿ

ಸಾಯ್ ಆವರಣದಲ್ಲಿ ಶಂಶೇರ್ ಸಿಂಗ್ ಅಭ್ಯಾಸ

ಕ್ರೀಡೆ

ವಿಕ್ರಂ ಕಾಂತಿಕೆರೆ

'ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಾಡಿದ ಸಾಧನೆಗೆ ಸಂಭ್ರಮಪಟ್ಟು ಆಗಿದೆ. ಈಗ ಹೊಸ ಅಧ್ಯಾಯ ಆರಂಭಿಸುವ ಕಾಲ. ಮುಂದಿನ ವರ್ಷ ಮಹತ್ವದ ಟೂರ್ನಿಗಳು ನಡೆಯಲಿದ್ದು ಅದಕ್ಕೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಸಜ್ಜಾಗಬೇಕಾಗಿದೆ...'

ಭಾರತ ಹಾಕಿ ತಂಡದ ಮುಖ್ಯ ಕೋಚ್ ಗ್ರಹಾಂ ರೀಡ್ ಅವರ ಮಾತಿದು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕು ದಶಕಗಳ ನಂತರ ಪದಕ ಗೆದ್ದ ಹಾಕಿ ತಂಡ ಸಂಭ್ರಮದ ಅಲೆಯಲ್ಲಿ ತೇಲಿತ್ತು. ಇದೀಗ ಸಾಧನೆಯ ಕನಸು ಹೊತ್ತು ಹೊಸ ಭರವಸೆಯೊಂದಿಗೆ ಮತ್ತೊಂದು ಅಧ್ಯಾಯಕ್ಕೆ ಸಜ್ಜಾಗಿದೆ. ಪದಕ ಗೆಲ್ಲಲಾಗದೇ ಇದ್ದರೂ ಅಮೋಘ ಸಾಧನೆಯ ಮೂಲಕ ಹಾಕಿ ಪ್ರಿಯರ ಮನಗೆದ್ದಿರುವ ಮಹಿಳಾ ತಂಡ ಕೂಡ ನಿರೀಕ್ಷೆಯೊಂದಿಗೆ 'ಕಣಕ್ಕೆ' ಇಳಿದಿದೆ. ಈ ಎರಡೂ ತಂಡಗಳು ಉದ್ಯಾನ ನಗರಿಯಲ್ಲಿವೆ. ಪುರುಷ ಮತ್ತು ಮಹಿಳಾ ತಂಡಗಳ ಅಭ್ಯಾಸ ಶಿಬಿರ ಬೆಂಗಳೂರಿನಲ್ಲಿ ನಡೆಯುತ್ತಿದೆ.

ಭಾರತ ಹಾಕಿಗೂ ಬೆಂಗಳೂರಿಗೆ ಬಹುಕಾಲದ ನಂಟು ಇದೆ. ಪುರುಷರ ಮತ್ತು ಮಹಿಳಾ ತಂಡಗಳ ಎಲ್ಲ ಸಾಧನೆಗಳಿಗೂ ವೇದಿಕೆ ಸಜ್ಜಾಗುವುದು ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರದ ಪ್ರಾದೇಶಿಕ ಕೇಂದ್ರದಲ್ಲಿ. ಟೋಕಿಯೊ ಒಲಿಂಪಿಕ್ಸ್‌ಗೂ ತರಬೇತಿ ನಡೆದದ್ದು ಇಲ್ಲಿಯೇ. ಒಲಿಂಪಿಕ್ಸ್‌ಗೆ ತಂಡಗಳು ಹೊರಟದ್ದು ಕೂಡ ಇಲ್ಲಿಂದಲೇ. ಒಲಿಂಪಿಕ್ಸ್‌ನಲ್ಲಿ ಸಾಧನೆ ಮಾಡಿದ ನಂತರ ಇದೇ ಮೊದಲ ಬಾರಿ ಆಟಗಾರರು ಉದ್ಯಾನ ನಗರಿಯ ಅಂಗಣಕ್ಕೆ ಇಳಿದಿದ್ದಾರೆ.

ಒಲಿಂಪಿಕ್ಸ್‌ಗೆ ಸಜ್ಜಾಗುತ್ತಿದ್ದಾಗ ಎರಡೂ ತಂಡಗಳಿಗೆ ಬಹಳಷ್ಟು ಸವಾಲುಗಳು ಕಾಡಿವೆ. ಕೋವಿಡ್ ಆತಂಕವನ್ನು ಜನರ ಮನಸ್ಸಿನಿಂದ ಹೊಡೆದೋಡಿಸಲು ಪ್ರಯತ್ನಿಸಿದ ಸರ್ಕಾರದ ಕಾರ್ಯಕ್ರಮಗಳಿಗೆ ಬೆಂಬಲ ನೀಡಿದ್ದ ತಂಡಗಳಲ್ಲೇ ವೈರಸ್ ಹಾವಳಿ ಆರಂಭವಾಗಿತ್ತು. ಇದು, ಭಾರಿ ಆತಂಕ ಸೃಷ್ಟಿಸಿತ್ತು. ಅಡುಗೆ ಮನೆಯ ಮೂಲಕ ಬಂದ ಸೋಂಕನ್ನು ತಡೆಗಟ್ಟುವಲ್ಲಿ ಕೇಂದ್ರದ ಅಧಿಕಾರಿಗಳು ಯಶಸ್ವಿಯಾದರು. ಆದರೆ ನಂತರವೂ ಸೋಂಕು ಕಾಡಿತ್ತು. ರಜೆಯ ಮೇಲೆ ಆಟಗಾರರನ್ನು ಅವರವರ ಊರಿಗೆ ಕಳುಹಿಸಲಾಯಿತು. ವಾಪಸ್ ಬಂದ ಮೇಲೆಯೂ ಆತಂಕ ಇದ್ದೇ ಇತ್ತು.

ಇದೆಲ್ಲದರ ನಡುವೆ ಕಠಿಣ ಅಭ್ಯಾಸ ಮುಂದುವರಿಯಿತು. ಕೋವಿಡ್ ಸೋಂಕು ಕಡಿಮೆ ಇದ್ದ ರಾಷ್ಟ್ರಗಳಲ್ಲಿ ಅಭ್ಯಾಸ ಮತ್ತು ತರಬೇತಿ ನಿರಾತಂಕವಾಗಿ ನಡೆಯುವಾಗ ಭಾರತ ತಂಡಗಳಿಗೆ ಕೆಲವು ದಿನಗಳು ನಷ್ಟವಾದವು. ಆದರೂ ತಂಡಗಳ ಸದಸ್ಯರು ಮಾನಸಿಕ ಸ್ಥೈರ್ಯ ಕಳೆದುಕೊಳ್ಳಲಿಲ್ಲ. ಛಲದಿಂದ ಸಾಧಿಸಿದ ಬಲ ಒಲಿಂಪಿಕ್ಸ್‌ನಲ್ಲಿ ಪ್ರತಿಫಲಿಸಿತು. ಪುರುಷರ ತಂಡ ಕಂಚಿನ ಪದಕ ಗೆದ್ದುಕೊಂಡರೆ ಮಹಿಳೆಯರು ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸಿದ ಸಾಧನೆ ಮಾಡಿದರು. ಪದಕ ಗೆಲ್ಲುವ ಅವಕಾಶವನ್ನು ಸ್ವಲ್ಪದರಲ್ಲೇ ಕಳೆದುಕೊಂಡರು.

ಅನುಭವಿಗಳ ಅನುಪಸ್ಥಿತಿ; ಹೊಸಬರಿಗೆ ನಿರೀಕ್ಷೆ

ಒಲಿಂಪಿಕ್ಸ್ ನಂತರ ಹಾಕಿ ಪುರುಷರ ತಂಡದಲ್ಲಿ ಸಂಚಲನವೂ ಆಗಿದೆ. ಅನುಭವಿ ಆಟಗಾರರಾದ ರೂಪಿಂದರ್ ಪಾಲ್ ಸಿಂಗ್ ಮತ್ತು ಬೀರೇಂದ್ರ ಲಾಕ್ರ ದಿಢೀರ್ ಆಗಿ ನಿವೃತ್ತಿ ಘೋಷಿಸಿದ್ದಾರೆ. ರೂಪಿಂದರ್ ಪಾಲ್ ಅವರ ಅನುಪಸ್ಥಿತಿಯಿಂದ ತಂಡ ಪ್ರಬಲ ಡ್ರ್ಯಾಗ್ ಫ್ಲಿಕ್ಕರ್ ಒಬ್ಬರನ್ನು ಕಳೆದುಕೊಂಡಿದೆ. ಬೀರೇಂದ್ರ ಇಲ್ಲದೆ ಡಿಫೆನ್ಸ್ ವಿಭಾಗಕ್ಕೂ ಪೆಟ್ಟಾಗಿದೆ. ಈ ನಡುವೆ ಫಾರ್ವರ್ಡ್ ಆಟಗಾರ ಕರ್ನಾಟಕದ ಎಸ್.ವಿ.ಸುನಿಲ್ 'ವಿರಾಮ' ಬಯಸಿದ್ದಾರೆ. 'ಫೈವ್ ಎ ಸೈಡ್‌ನತ್ತ ಹೆಚ್ಚು ಗಮನ ಕೊಡುತ್ತಿದ್ದೇನೆ. ರಾಷ್ಟ್ರೀಯ ತಂಡದ ಸೇವೆಗೆ ಸದಾ ಸಿದ್ಧ' ಎಂದು ಅವರು ಹೇಳಿದ್ದರೂ ರಾಷ್ಟ್ರೀಯ ಶಿಬಿರಕ್ಕೆ ಆಯ್ಕೆಯಾಗದ ಕಾರಣ ಅವರ ಭವಿಷ್ಯದ ಬಗ್ಗೆ ಸ್ಪಷ್ಟತೆ ಇಲ್ಲ.

ಪಿ.ಆರ್.ಶ್ರೀಜೇಶ್, ಮನ್‌ಪ್ರೀತ್ ಸಿಂಗ್, ಹರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್ ಮುಂತಾದ ಅನುಭವಿಗಳ ಜೊತೆ ಯುವ ಆಟಗಾರರನ್ನು ಶಿಬಿರಕ್ಕೆ ಕರೆಸಿಕೊಳ್ಳಲಾಗಿದೆ. 30 ಮಂದಿಯಲ್ಲಿ ಅತ್ಯುತ್ತಮ ಆಟಗಾರರನ್ನು ಆಯ್ಕೆ ಮಾಡಿ 'ಹೊಸ' ತಂಡ ಕಟ್ಟುವುದು ಹಾಕಿ ಇಂಡಿಯಾದ ಉದ್ದೇಶ.

ಮಹಿಳಾ ತಂಡವನ್ನೂ ಬಲಿಷ್ಠಗೊಳಿಸಲು ಆಡಳಿತ ನಿರ್ಧರಿಸಿದ್ದು 25 ಮಂದಿಯ ತಂಡದಲ್ಲಿ ಗಗನದೀಪ್ ಕೌರ್, ಮರಿಯಾನಾ ಕುಜುರ್, ಸುಮನ್ ದೇವಿ ತೌಡಮ್ ಮತ್ತು ಚೌಧರಿ ಅವರನ್ನು ಜೂನಿಯರ್ ಹಂತದಿಂದ ಬಡ್ತಿ ನೀಡಿ ಕರೆಸಿಕೊಳ್ಳಲಾಗಿದೆ. ಅನುಭವಿಗಳಾದ ಲಿಲಿಮಾ ಮಿನ್ಜ್, ರಶ್ಮಿತಾ ಮಿನ್ಜ್, ಜ್ಯೋತಿ, ರಾಜ್ವಿಂದರ್ ಕೌರ್ ಮತ್ತು ಮನ್‌ಪ್ರೀತ್ ಕೌರ್ ಅವರೂ ಶಿಬಿರದಲ್ಲಿದ್ದಾರೆ.

ಒಲಿಂಪಿಕ್ಸ್ ನಂತರ ಪುರುಷರ ತಂಡಕ್ಕೆ ಮೊದಲ ಸವಾಲು ಇರುವುದು ಡಿಸೆಂಬರ್‌ನಲ್ಲಿ. ಢಾಕಾದಲ್ಲಿ ಡಿಸೆಂಬರ್ 14ರಿಂದ ನಡೆಯಲಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ತಂಡ ಆಡಲಿದೆ. ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್‌ಗೂ ತಂಡ ಸಜ್ಜಾಗಬೇಕಿದೆ. ಬೆಂಗಳೂರಿನಲ್ಲಿ ಲಭಿಸುವ ತರಬೇತಿ ತಂಡಗಳಿಗೆ ಯಾವ ರೀತಿಯಲ್ಲಿ ಪ್ರಯೋಜನಕಾರಿಯಾಗಲಿದೆ ಎಂಬುದು ಕುತೂಹಲದ ವಿಷಯ. ❖

ಕಾಡಿನೊಳಗಿನ ಸಾಹಸಿ ದೇವಗನ್



ಕಾಡಿನೊಳಗೆ ಸಾಹಸಿಯಾಗಿ ಕಾಣಿಸಿಕೊಳ್ಳಲಿದ್ದಾರೆ ಅಜಯ್ ದೇವಗನ್. ಡಿಸ್ಕವರಿ ಚಾನೆಲ್‌ಗಾಗಿ ನಿರ್ಮಿಸಲಾದ 'ಮ್ಯಾನ್ ವರ್ಸಸ್ ವೈಲ್ಡ್' ಸಾಕ್ಷ್ಯಚಿತ್ರದಲ್ಲಿ ಅಜಯ್ ದೇವಗನ್ ಅವರು ಖ್ಯಾತ ಬ್ರಿಟಿಷ್ ಸಾಹಸಿಗ, ನಿಸರ್ಗ ಸಾಹಸ ಕಾರ್ಯಕ್ರಮಗಳ ನಿರೂಪಕ ಬೇರ್ ಗ್ರಿಲ್ಸ್ ಅವರೊಂದಿಗೆ ಕಾಣಿಸಿಕೊಳ್ಳಲಿದ್ದಾರೆ. ಹಿಂದೂಮಹಾಸಾಗರದಲ್ಲಿ ಈ ಚಿತ್ರೀಕರಣ ನಡೆದಿದೆ.

'ಅ. 22ರಂದು ಡಿಸ್ಕವರಿ ಪ್ಲಸ್‌ನಲ್ಲಿ (ಒಟಿಟಿ), ಅ. 25ರಂದು ಡಿಸ್ಕವರಿ ಚಾನೆಲ್‌ನಲ್ಲಿ ಈ ಸಂಚಿಕೆ ಪ್ರಸಾರವಾಗಲಿದೆ. ಒಟ್ಟು 142 ದೇಶಗಳಲ್ಲಿ ಈ ಕಾರ್ಯಕ್ರಮ ಪ್ರಸಾರವಾಗಲಿದೆ' ಎಂದು ಡಿಸ್ಕವರಿ ಇಂಕ್‌ನ ದಕ್ಷಿಣ ಏಷ್ಯಾದ ಆಡಳಿತ ನಿರ್ದೇಶಕಿ ಮೇಘಾ ಟಾಟಾ ಆನ್‌ಲೈನ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಚಿಕೆಯ ಚಿತ್ರೀಕರಣದ ಅನುಭವ ತೆರೆದಿಟ್ಟ ಅಜಯ್ ದೇವಗನ್, 'ದಟ್ಟ ಕಾಡು, ಸಮುದ್ರ, ನೀರು ತುಂಬಿದ ಪ್ರದೇಶ ಎಲ್ಲವೂ ಹೊಸತು. ಇಲ್ಲಿ ಎಲ್ಲವೂ ಅನಿರೀಕ್ಷಿತವೇ ಆಗಿವೆ. ನಾನು ಬರಿಗೈಲಿ ಹೋಗಿದ್ದೆ. ಪ್ರತಿ ಕ್ಷಣವೂ ಅಚ್ಚರಿ ಮತ್ತು ಖುಷಿಯೇ ಸಿಕ್ಕಿತು' ಎಂದರು.

'ಇಲ್ಲಿ ರಿಟೇಕ್‌ಗೆ ಅವಕಾಶವಿಲ್ಲ. ಏನಿದ್ದರೂ ಸಹಜವಾಗಿಯೇ ಚಿತ್ರೀಕರಿಸಬೇಕು. ಕೆಲವೊಮ್ಮೆ ಭಯವಾದದ್ದೂ ಇದೆ. ಇಂಥ ಹೊಸ ಜಾಗಗಳಿಗೆ ಹೋಗಿ ಹೊಸ ವಿಷಯ ತಿಳಿದುಕೊಳ್ಳುವುದೂ ಇಷ್ಟ' ಎಂದು ಅನುಭವ ಹಂಚಿಕೊಂಡರು.

ಬೇರ್ ಗ್ರಿಲ್ಸ್ ಮಾತನಾಡಿ, 'ಭಾರತ ಎಲ್ಲ ದೃಷ್ಟಿಯಿಂದಲೂ ವೈವಿಧ್ಯಮಯವಾದ ದೇಶ. ಹವಾಮಾನ, ಆಹಾರ, ಸಂಸ್ಕೃತಿ ಇಲ್ಲಿ ಭಿನ್ನವಾದದ್ದ. ಹೀಗಾಗಿ ನನ್ನ ಅನುಭವದಲ್ಲಿ ಭಾರತ ತುಂಬಾ ಗುರುತಿಟ್ಟುಕೊಳ್ಳುವ ಅದ್ಭುತ ದೇಶ. ಹಾಗೆ ನೋಡಿದರೆ ನಾನು ಕಾಡಿನೊಳಗೆ ಬಾಳುವುದಕ್ಕಿಂತ ನಗರದಲ್ಲಿಯೇ ಹೆಚ್ಚು ಕಷ್ಟ, ಸವಾಲುಗಳನ್ನು ಎದುರಿಸುತ್ತೇನೆ' ಎಂದರು.

ಅಜಯ್ ದೇವಗನ್ ಒಡನಾಟದ ಕುರಿತೂ ಶ್ಲಾಘಿಸಿದ ಬೇರ್, 'ಅಜಯ್ ಮಿತಭಾಷಿ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಅವರು ಒಂದು ಗೌರವ ಎಂದು ಭಾವಿಸಿ ತಮ್ಮ ಬದ್ಧತೆ ಹಾಗೂ ಪ್ರಾಮಾಣಿಕತೆ ಮೆರೆದಿದ್ದಾರೆ' ಎಂದರು. ❖



ಪ್ರಿಯಾಂಕಾ ಈಗ ನಂದಿನಿ ಟೀಚರ್

ಸಿನಿಮಾ

ಸರ್ಕಾರಿ ಶಾಲೆ ಯಾವುದಕ್ಕೂ ಕಡಿಮೆ ಇಲ್ಲ ಎನ್ನುತ್ತಿದ್ದಾರೆ 'ಮಿಸ್ ನಂದಿನಿ'. ಹೌದು, ಪ್ರಿಯಾಂಕಾ ಉಪೇಂದ್ರ 'ಮಿಸ್ ನಂದಿನಿ'ಯಾಗಿ ಕಾಣಿಸಿಕೊಂಡಿದ್ದಾರೆ.

'ಸರ್ಕಾರಿ ಶಾಲೆಯ ಸುತ್ತ ಹೆಣೆದ ಕಥೆ 'ಮಿಸ್ ನಂದಿನಿ'. 'ಸರ್ಕಾರಿ ಶಾಲೆಗಳ ಬಗ್ಗೆ ತಾತ್ಸಾರ ಮನೋಭಾವ ಸಲ್ಲದು. ಅಲ್ಲಿನ ಮಕ್ಕಳು ಯಾವುದಕ್ಕೂ ಕಡಿಮೆ ಇಲ್ಲ. ಈ ಸಂದೇಶ ಸಾರಲು ಈ ಚಿತ್ರ ಮುಂದಾಗಿದೆ' ಎಂದರು ಪ್ರಿಯಾಂಕಾ.

'ಶಿಕ್ಷಕಿಯ ಪಾತ್ರದ ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ. ಈ ಚಿತ್ರದಿಂದ ಶಿಕ್ಷಣ ಕ್ಷೇತ್ರದಲ್ಲಿ ಒಂದಿಷ್ಟು ಬದಲಾವಣೆ ಮೂಡಿಸಲು ಪ್ರಯತ್ನಿಸುತ್ತೇನೆ. ಮಕ್ಕಳ ಒಡನಾಟ, ಕಲಿಕೆ ನನಗೆ ಮೊದಲಿನಿಂದಲೂ ಇಷ್ಟ. ಇದೀಗ ಪಾತ್ರವಾಗಿ ನನ್ನ ಆಸೆಗೆ ರೆಕ್ಕೆ ಮೂಡಿದೆ. ಲಘು ಹಾಸ್ಯ ಸೇರಿದ್ದು, ಮನರಂಜನಾತ್ಮಕ ಅಂಶಗಳನ್ನು ಈ ಚಿತ್ರ ಹೊಂದಿದೆ' ಎಂದರು.

ದಸರಾ ಬಳಿಕ ಚಿತ್ರೀಕರಣ ಆರಂಭವಾಗಲಿದೆ ಎಂದು ಚಿತ್ರತಂಡ ಹೇಳಿದೆ. ❖